ಸಂಶೋಧನೆ ಮತ್ತು ಅಭಿವೃದ್ಧಿ ವಿದ್ಯುತ್ ಪ್ರಸರಣ ಇಲಾಖೆಯಲ್ಲಿ ಅತಿ ಪ್ರಮುಖ ಪಾತ್ರವಹಿಸಿದ್ದು, ಈ ವಿಭಾಗಗಳು ಅಧೀಕ್ಷಕ ಇಂಜಿನಿಯರ್ (ವಿ), ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಇವರ ಮುಖ್ಯಸ್ಥಿಕೆ ಹಾಗೂ ತಾಂತ್ರಿಕ ನಿಯಂತ್ರಣದಲ್ಲಿದ್ದು, ಮುಖ್ಯ ಇಂಜಿನಿಯರ್ (ವಿ) (ಆರ್‌ಟಿ & ಆರ್ & ಡಿ) ರವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

**ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಚಟುವಟಿಕೆಗಳು :**

ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಚಟುವಟಿಕೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದೆ.

| ಒಳಾಂಗಣ ಪರೀಕ್ಷೆ (In house) | ಹೊರ ವಲಯ ಪರೀಕ್ಷೆ (Field testing). |
|---|---|
| 1. ಪರಿವರ್ತಕಗಳ ತೈಲ ಮಾದರಿಗಳನ್ನು ಭಾರತೀಯ ಮಾನ ಹಾಗೂ ಅಂತರಾಷ್ಟ್ರೀಯ ಮಾನ ದಂಡಗಳನ್ವಯ ಪರೀಕ್ಷಿಸಲಾಗುತ್ತಿದೆ.<br>ಅಸಿಡಿಟಿ ರೆಸಿಸ್ಟಿವಿಟಿ<br>ಟ್ಯಾನ್ ಡೆಲ್ಟಾ ಐ.ಎಫ್.ಟಿ<br>ಬಿಡಿವಿ ವಾಟರ್ ಕನ್‌ಟೆಂಟ್<br>ಡೆನ್ಸಿಟಿ ವಿಸ್ಕಾಸಿಟಿ<br>ಫ್ಲ್ಯಾಶ್‌ಪಾಯಿಂಟ್ ಇನ್‌ಬಿಟರ್ ಕಂಟೆಂಟ್<br>ಅಪಿಯರೆನ್ಸ್<br>2. ಕರಗಿದ ಅನಿಲದ ವಿಶ್ಲೇಷಣೆ ಪರೀಕ್ಷೆ (DGA)<br>3. ಫ್ಯೂರಾನ್ ವಿಶ್ಲೇಷಣೆ ಪರೀಕ್ಷೆ<br>4. ಸೋಡಿಯಂ ಬೆಂಟೋನೈಟ್ ಮಣ್ಣಿನ ಪರೀಕ್ಷೆ. | 1. ಟ್ಯಾನ್ ಡೆಲ್ಟಾ ಮತ್ತು ಕೆಪಸಿಟೆನ್ಸ್ ಪರೀಕ್ಷೆ.<br>2. ಎಸ್‌ಎಫ್‌ಆರ್‌ಎ (SFRA):– ಸ್ವೀಪ್‌ಫ್ರೀಕ್ವೆನ್ಸಿ ರೆಸ್ಪಾನ್ಸ್ ಅನಾಲಿಸಿಸ್<br>3. ಐಡಾಕ್ಸ್ (IDAX) : ಇನ್ಸುಲೇಷನ್ ಡಯಾಗ್ನಾಸ್ಟಿಕ್ ಅನಾಲಿಸಿಸ್<br>4. ಭೂ ಸಂಪರ್ಕ ಸಮಗ್ರತೆ ಪರಿಶೀಲನೆ.<br>5. ಮಣ್ಣಿನ ನಿರೋಧಕತೆ ಪರೀಕ್ಷೆ. |

## ತೈಲ ಮಾದರಿಗಳ ಪರೀಕ್ಷೆಗಳು:

ಪರಿವರ್ತಕಗಳ ತೈಲ ಪರೀಕ್ಷೆಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಎಲ್ಲಾ ಪರಿವರ್ತಕಗಳ ಮೇಲೆ ಭಾರತೀಯ ಹಾಗೂ ಅಂತರಾಷ್ಟ್ರೀಯ ಮಾನದಂಡಗಳನ್ವಯ ನಿಗದಿಪಡಿಸಿದ ವೇಳಾಪಟ್ಟಿಯಂತೆ ವರ್ಷಕ್ಕೊಮ್ಮೆ ಮಾಡಲಾಗುವುದು, ಇದು ಪರಿವರ್ತಕಗಳ ತೈಲ ಸ್ಥಿತಿ ತಿಳಿಸುತ್ತದೆ.

**i. ಪರಿವರ್ತಕ ತೈಲ ಪರೀಕ್ಷೆಗಳು ಐಎಸ್ ಹಾಗೂ ಐಇಸಿ ಶೆಡ್ಯೂಲ್ ಪ್ರಕಾರ**

1. **ಆಮ್ಲ:–** ಈ ಪರೀಕ್ಷೆಯನ್ನು ತೈಲ ಮಾದರಿಗಳಲ್ಲಿರುವ ಆಮ್ಲೀಯ ಸಂಯುಕ್ತಗಳನ್ನು ಅಳೆಯಲು ಮಾಡಲಾಗುತ್ತದೆ.

2. **ಐಎಫ್‌ಟಿ:–** ಈ ಪರೀಕ್ಷೆಯನ್ನು ತೈಲ ಮಾದರಿಗಳಲ್ಲಿರುವ ಪೋಲಾರ್ ಕಲ್ಮಶಗಳನ್ನು ಮತ್ತು ಅವಾಹಕ ಹಳತಿನಿಂದಾದ ಉಪ ಉತ್ಪನ್ನಗಳನ್ನು ಅಳೆಯಲು ಮಾಡಲಾಗುತ್ತದೆ.

3. **ನಿರೋಧಕತೆ:–** ಈ ಪರೀಕ್ಷೆಯನ್ನು ತೈಲ ಮಾದರಿಗಳಲ್ಲಿರುವ ಅವಾಹಕ ಗುಣಗಳನ್ನು ಅಳೆಯಲು ಮಾಡಲಾಗುತ್ತದೆ.

4. **ಟ್ಯಾನ್ ಡೆಲ್ಟಾ:–** ಈ ಪರೀಕ್ಷೆಯನ್ನು ತೈಲದಿಂದ ಉಂಟಾದ ದ್ವಿವಿದ್ಯುತ್ ನಷ್ಟಗಳನ್ನು ಅಳೆಯಲು ಮಾಡಲಾಗುತ್ತದೆ.

5. **ಫ್ಲ್ಯಾಶ್ ಪಾಯಿಂಟ್:–** ಹೆಚ್ಚಿನ ಉಷ್ಣಾಂಶದಲ್ಲಿ ತೈಲದ ಅಗ್ನಿ ಆಕರ್ಷಕ ಶಕ್ತಿಯನ್ನು ಅಳೆಯಲಾಗುವುದು.

6. **ಬ್ರೇಕ್ ಡೌನ್ ವೋಲ್ಟೇಜ್:–** ವಿದ್ಯುತ್ ಒತ್ತಡದಲ್ಲಿ ತೈಲದ ಸಹನಶೀಲತೆ ಶಕ್ತಿಯ ಪರೀಕ್ಷೆ.

7. **ನೀರಿನ ಅಂಶ:–** ಒಟ್ಟು ನೀರಿನ ಅಂಶದ ಸೋರಿಕೆ ಅಥವಾ ಸೆಲ್ಲುಲೋಸಿಕ್ ಡಿಟೆರಿಯೋರೇಷನ್.

8. **ಸಿಗ್ದತೆ:–** ಈ ಪರೀಕ್ಷೆಯನ್ನ ತೈಲವು ಸರಾಗವಾಗಿ ಹರಿಯುವ ಗುಣವನ್ನು ಅಳೆಯಲು ಮಾಡಲಾಗುತ್ತದೆ.

9. **ಸಾಂದ್ರತೆ:–** ಈ ಪರೀಕ್ಷೆಯನ್ನು ತೈಲದ ಭಾರವನ್ನು ಅಳೆಯಲು ಮಾಡಲಾಗುತ್ತದೆ.

- **ಕರಗಿದ ಅನಿಲದ ವಿಶ್ಲೇಷಣೆ ಪರೀಕ್ಷೆ (ಡಿಜಿಎ):–** ಈ ಪರೀಕ್ಷೆಯನ್ನು ಭಾರತೀಯಮಾನ 9434–1992 ಅನ್ವಯ ಪರಿವರ್ತಕಗಳ ಆಂತರಿಕ ಸ್ಥಿತಿ ತಿಳಿಯಲು ಮಾಡಲಾಗುತ್ತದೆ. ಈ ಪರೀಕ್ಷೆಯಿಂದ ಪರಿವರ್ತಕದ ಆಂತರಿಕ ದೋಷಗಳಾದ ಕಿಡಿ, ಪರಿವರ್ತಕಗಳ ಒಳಗೆ ಉಂಟಾಗುವ ಬಿಸಿಸ್ಥಳಗಳನ್ನು ಮತ್ತು ವಿದ್ಯುತ್ ಹೊರ ಸೂಸುವಿಕೆಯನ್ನು ಪ್ರಾರಂಭಿಕ ಹಂತದಲ್ಲಿ ಕಂಡುಹಿಡಿಯಬಹುದಾಗಿದೆ. ಈ ಪರೀಕ್ಷೆಯನ್ನು 20 ಎಂವಿಎ ಸಾಮರ್ಥ್ಯ ಮತ್ತು ಅದಕ್ಕಿಂತ ಮೇಲ್ಪಟ್ಟ ಸಾಮಾರ್ಥ್ಯದ ಎಲ್ಲಾ ಪರಿವರ್ತಕಗಳಿಗೆ ಪ್ರತಿವರ್ಷ ಮಾಡಲಾಗುತ್ತಿದೆ. 20 ಎಂವಿಎಗಿಂತ ಕೆಳಗಿರುವ ಪರಿವರ್ತಕಗಳಿಗೆ ಅವಶ್ಯಕತೆಯಿದ್ದಾಗ ಮಾಡಲಾಗುತ್ತದೆ.

- **ಫ್ಯೂರಾನ್ ವಿಶ್ಲೇಷಣೆ ಪರೀಕ್ಷೆ:–** ಈ ಪರೀಕ್ಷೆಯಿಂದ ಪರಿವರ್ತಕಗಳಲ್ಲಿರುವ ಕಾಗದ ಅವಾಹಕಗಳ ಸ್ಥಿತಿಯನ್ನು ತಿಳಿಯಬಹುದಾಗಿದೆ. ಈ ಪರೀಕ್ಷೆಯನ್ನು ಎಲ್ಲಾ ಹಳೆ ಪರಿವರ್ತಕಗಳಿಗೆ ಮಾಡಲಾಗುತ್ತದೆ.

- **ಸೋಡಿಯಂ ಬೆಂಟೋನೈಟ್ ಮಣ್ಣಿನ ಪರೀಕ್ಷೆ:–** ಸೋಡಿಯಂ ಬೆಂಟೋನೈಟ್ ಜೇಡಿಮಣ್ಣು ತೇವಾಂಶವನ್ನು ಉಳಿಸಿಕೊಳ್ಳುವ ರಾಸಾಯನಿಕ ಉತ್ಪನ್ನವಾಗಿದ್ದು ಭೂಮಿಯ ವಿದ್ಯುದ್ವಾರವಾಗಿ ಬಳಸಲಾಗುತ್ತದೆ ಅಥವಾ ಮಣ್ಣಿನ ಪ್ರತಿರೋಧವನ್ನು ಕಡಿಮೆ ಮಾಡಲು ಸಹಾಯ ಮಾಡಲಾಗುತ್ತದೆ. ಕೇಂದ್ರವು ಸೋಡಿಯಂ ಬೆಂಟೋನೈಟ್ ಮಣ್ಣಿನ ಮಾದರಿಗಳ ಮೇಲೆ ಮಣ್ಣಿನ ನಿರೋಧಕತೆಯನ್ನು 10 ohnm ಮೀಟರ್‌ಗಳ ಪಿ.ಹೆಚ್ ಮೌಲ್ಯ 8–10 ಮತ್ತು ವಾಲ್ಯೂಮ್ ಆಧಾರಿತ ಸ್ವೆಲ್ ಇಂಡೆಕ್ಸ್ 8 ಕ್ಕಿಂತ ಹೆಚ್ಚಿರುವಂತೆ ಪರೀಕ್ಷೆಗಳನ್ನು ಮಾಡುತ್ತದೆ.

## II. ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ವತಿಯಿಂದ ನಡೆಸುವ ಇತರೆ ಪರೀಕ್ಷೆಗಳು ಮತ್ತು ಕಾರ್ಯಗಳು

**1. ಮಣ್ಣಿನ ನಿರೋಧಕತೆ ಪರೀಕ್ಷೆ:–** ಈ ಪರೀಕ್ಷೆಯನ್ನು ಉದ್ದೇಶಿತ ಹೊಸ ವಿದ್ಯುತ್‌ಕೇಂದ್ರ ಮತ್ತು ಉಪ ಕೇಂದ್ರಗಳನ್ನು ಕಟ್ಟಲು ನಿಗಧಿಪಡಿಸಿದ ಜಾಗಗಳಲ್ಲಿ ಮಾಡಲಾಗುತ್ತದೆ. ಈ ಪರೀಕ್ಷೆಯು ಭೂ ಚಾಪೆ ತಯಾರಿಸಲು ಬೇಕಾಗಿರುವ ಮೂಲಭೂತ ಪರೀಕ್ಷೆಯಾಗಿದೆ. ಮಣ್ಣಿನ ನಿರೋಧಕತೆಯು ಮಣ್ಣಿನ ಸ್ವಭಾವದ ಮೇಲೆ ಅವಲಂಭಿಸಿರುತ್ತದೆ.

**2. ಭೂ ಛಾಪೆ ವಿನ್ಯಾಸ:–** ಉದ್ದೇಶಿತ ಕೇಂದ್ರದ ತಾಂತ್ರಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವಿನ್ಯಾಸ ಮಾಡಲಾಗುತ್ತದೆ. ಭೂ ಚಾಪೆಯನ್ನು ಅಂತರಾಷ್ಟ್ರೀಯ ಮಾನ ಎಲ್‌ಇಇ–80/2000 ರ ಅನ್ವಯ, ವಿದ್ಯುತ್ ಕೇಂದ್ರದ ಅತ್ಯಂತ ಹೆಚ್ಚಿನ ಪ್ರಮಾಣದ ನಿರೀಕ್ಷಿಸಿದ ದೋಷಯುಕ್ತ ವಿದ್ಯುತ್‌ನ್ನು ಅತ್ಯುತ್ತಮ ಕ್ರಮದಲ್ಲಿ ಸಮರ್ಥವಾಗಿ ಚದುರಿಸುವಂತೆ ವಿನ್ಯಾಸ ಮಾಡಲಾಗುತ್ತದೆ. ಇದರಿಂದ ಉಪಕರಣಗಳ, ಉದ್ಯೋಗಿಗಳ ಮತ್ತು ದೂರವಾಣಿ ಕಚೇರಿಗಳ ಸುರಕ್ಷತೆಯನ್ನು ನಿಶ್ಚಿತಗೊಳಿಸಬಹುದಾಗಿದೆ.

ಸಂಶೋಧನೆ ಮತ್ತು ಅಭಿವೃದ್ಧಿ ವಿಸ್ತರಣೆ/ಉನ್ನತೀಕರಣಗೊಳಿಸಲು ಉದ್ದೇಶಿಸಿರುವ ಕೇಂದ್ರದ ಭೂ ಚಾಪೆಯನ್ನು ಸಹ ಪರಿಶೀಲಿಸುತ್ತದೆ. ಅಗತ್ಯವಿದ್ದಾಗ ಭೂ ಚಾಪೆಯ ಬದಲಾವಣೆ/ವಿಸ್ತರಣೆಯನ್ನು ಒದಗಿಸಲಾಗುತ್ತದೆ.

**3. ಭೂ ಸಂಪರ್ಕ ಸಮಗ್ರತೆ ಪರಿಶೀಲನೆ:–** ಈ ಪರೀಕ್ಷೆಯನ್ನು ವಿದ್ಯುತ್ ಕೇಂದ್ರ ಮತ್ತು ಉಪಕೇಂದ್ರಗಳ ಎಲ್ಲಾ ಉಪಕರಣಗಳು ಸರಿಯಾಗಿ ಭೂ ಚಾಪೆಗೆ ಜೋಡಿಸಲ್ಪಟ್ಟಿದೆಯೇ ಎಂದು ಕಂಡುಹಿಡಿಯಲು ಮಾಡಲಾಗುತ್ತದೆ. ಇದು ದೋಷಗಳ ಸಂದರ್ಭದಲ್ಲಿ ದೋಷಯುಕ್ತ ವಿದ್ಯುತ್ ಸುರಕ್ಷಿತವಾಗಿ ಭೂ ಚಾಪೆ ತಲುಪುವುದನ್ನು ಖಾತ್ರಿಪಡಿಸಿಸುತ್ತದೆ. ಅಗತ್ಯಬಿದ್ದಲ್ಲಿ ಸತ್ತುಲೇಪಿತ ಕಬ್ಬಿಣದ ಪೈಪು ಬದಲಾಗಿ ಸಿ.ಐ. ಪೈಪನ್ನು, ಸತ್ತುಲೇಪಿತ ಕಬ್ಬಿಣದ ವೈರ್ ಅಥವಾ ತಾಮ್ರದ ವೈರ್ ಬದಲಾಗಿ ಸತುಲೇಪಿತ ಕಬ್ಬಿಣದ ಪಟ್ಟಿಗಳನ್ನು ಉಪಯೋಗಿಸಲು ಮತ್ತು ಬೋಲ್ಟ್ ಹಾಗೂ ನೆಟ್ ಸಂಪರ್ಕವಿರುವ ಕಡೆ ಬೆಸುಗೆ ಹಾಕಲು ಹೇಳಲಾಗುತ್ತದೆ, ಹೀಗೆ ಭೂ ಸಂಪರ್ಕ ಬಲಪಡಿಸಲು ಶಿಫಾರಸ್ಸು ಮಾಡಲಾಗುತ್ತದೆ.

## III. ಕೇಂದ್ರ ವಿದ್ಯುತ್ ಪ್ರಾಧಿಕಾರದ ಮಾರ್ಗಸೂಚಿ ಅನ್ವಯ ಪರಿವರ್ತಕದ ಸ್ಥಿತಿ ಮೇಲ್ವಿಚಾರಣೆ ಮಾಡುವ ಪರೀಕ್ಷೆಗಳು

### I. ಹೊರವಲಯ ಪರೀಕ್ಷೆ:

1. **ಟ್ಯಾನ್–ಡೆಲ್ಟಾ ಮತ್ತು ಕೆಪಸಿಟೆನ್ಸ್:–** ಈ ಪರೀಕ್ಷೆಯನ್ನು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದಲ್ಲಿ ಎಲ್ಲಾ 31.5 ಎಂ.ವಿ.ಎ ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪರಿವರ್ತಕಗಳ ಮೇಲೆ ಘನ ಅವಾಹಕದ (ಬುಷಿಂಗ್ ಮತ್ತು ವೈಂಡಿಂಗ್) ಸ್ಥಿತಿ ತಿಳಿಯಲು ಮಾಡಲಾಗುತ್ತದೆ. (ಸಿಟಿ ಮತ್ತು ಪಿಟಿ ಒಳಗೊಂಡಂತೆ).

2. **ಎಸ್‌ಎಫ್‌ಆರ್‌ಎ (ಸ್ವೀಪ್ ಫ್ರೀಕ್ವೆನ್ಸಿ ರೆಸ್ಪಾನ್ಸ್ ಅನಾಲಿಸಿಸ್) :–** ಈ ಪರೀಕ್ಷೆಯನ್ನು ಪರಿವರ್ತಕದ ಯಾಂತ್ರಿಕ ಸಮಗ್ರತೆ ನಿರ್ಧರಿಸಲು ಮಾಡಲಾಗುತ್ತದೆ. ಈ ಪರೀಕ್ಷೆಯು ಮುಖ್ಯ ಮಾಹಿತಿಯಾದ ಪರಿವರ್ತಕದ ಆಂತರಿಕ ಸ್ಥಿತಿಯನ್ನು ತಿಳಿಸುತ್ತದೆ.

3. **ಇನ್ಸುಲೇಷನ್ ಡಯಾಗ್ನಾಸ್ಟಿಕ್ ವಿಶ್ಲೇಷಣೆ :–** ಈ ಪರೀಕ್ಷೆಯನ್ನು ಪರಿವರ್ತಕದ ಘನ ಅವಾಹಕದಲ್ಲಿರುವ ತೇವಾಂಶ ತಿಳಿಯಲು ಮಾಡಲಾಗುತ್ತದೆ.

4. **ಕಂದಾಯ ಸಂಗ್ರಹಣೆ:** ಅರ್ತ್ ಮ್ಯಾಟ್ ವಿನ್ಯಾಸವನ್ನು ಕೆಪಿಟಿಸಿಎಲ್‌ಗೆ ಮಾತ್ರವಲ್ಲದೆ, ಕೇಂದ್ರವು ಅರ್ತ್ ಮ್ಯಾಟ್ ವಿನ್ಯಾಸವನ್ನು ಎಸ್ಕಾಂ/ಇತರೆ ನಿಗಮಗಳು ಸ್ಥಾಪಿಸಿರುವ ಉಪ ಕೇಂದ್ರಗಳಿಗೂ, ಖಾಸಗಿ ಸಂಸ್ಥೆಗಳಿಗೂ ಕೋರಿಕೆ ಆಧಾರದ ಮೇಲೆ ಶುಲ್ಕ ವಿಧಿಸುವ ರೀತ್ಯಾ ಮಾಡುತ್ತಿದೆ. ಈ ಚಟುವಟಿಕೆಗಳ ಪರಿಣಾಮವಾಗಿ, ಕೇಂದ್ರವು ಮಣ್ಣು ಸಹನಾಶಕ್ತಿ ಪರೀಕ್ಷೆಯನ್ನು ಕೆಪಿಟಿಸಿಎಲ್ ಅಲ್ಲದೆ ಇತರೆ ಉಪಕೇಂದ್ರಗಳ ಸ್ಥಳದಲ್ಲಿ ಮಾಡಿದೆ ಮತ್ತು 2020–21 ರಲ್ಲಿ ಎಸ್ಕಾಂಗಳಿಗೆ/ಖಾಸಗಿ ಏಜೆನ್ಸಿಗಳಿಗೆ ಸೇವೆ

ನೀಡಲು ರೂ. 1,17,55.411/– ಕನ್ಸಲ್ಟೆನ್ಸಿ/ಪರೀಕ್ಷಾ ಶುಲ್ಕವನ್ನು ಅರ್ಥ್ ಮ್ಯಾಟ್ ವಿನ್ಯಾಸಕ್ಕೆ ಮತ್ತು ವಿದ್ಯುತ್ ಪರಿವರ್ತಕ ಪರೀಕ್ಷೆಗೆ ಸಂಗ್ರಹಿಸಿದೆ.

## 2020–21 ನೇ ಸಾಲಿನ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಪ್ರಗತಿ

| ಕ್ರ.ಸಂ. | ಕೆಲಸದ ಹೆಸರು | ವೋಲ್ಟೇಜ್ ಕ್ಲಾಸ್ | 2020–21 | ಒಟ್ಟು |
|---|---|---|---|---|
| 1 | ಮಣ್ಣಿನ ನಿರೋಧಕ ಪರೀಕ್ಷೆ (ಎಸ್.ಆರ್) | 400 ಕೆವಿ | 4 | **147** |
| | | 220 ಕೆವಿ | 16 | |
| | | 110 ಕೆವಿ | 59 | |
| | | 66 ಕೆವಿ | 54 | |
| | | 33 ಕೆವಿ | 14 | |
| | | **ಒಟ್ಟು** | **147** | |
| 2 | ಭೂ ಚಾಪೆ ವಿನ್ಯಾಸ (ಇ.ಎಂ.ಡಿ) | 400 ಕೆವಿ | 2 | **101** |
| | | 220 ಕೆವಿ | 16 | |
| | | 110ಕೆವಿ | 44 | |
| | | 66ಕೆವಿ | 31 | |
| | | 33 ಕೆವಿ | 8 | |
| | | **ಒಟ್ಟು** | 101 | |
| 3 | ಭೂ ಸಂಪರ್ಕ ಪರಿಶೀಲನೆ/ಭೂ ಸಂಪರ್ಕ ನಿರೋಧಕತೆ ಮಾಪನ/ಭೂ ಚಾಪೆ ನಿರೋಧಕತೆ/ಟವರ್ ಫುಟ್ ನಿರೋಧಕ ಪರೀಕ್ಷೆ | 400 ಕೆವಿ | 4 | **53** |
| | | 220 ಕೆವಿ | 14 | |
| | | 110ಕೆವಿ | 4 | |
| | | 66ಕೆವಿ | 31 | |
| | | 33 ಕೆವಿ | – | |
| | | **ಒಟ್ಟು** | **53** | |
| 4 | ವಿದ್ಯುತ್ ಪರಿವರ್ತಕಗಳ ಟ್ಯಾನ್–ಡೆಲ್ಟಾ ಮತ್ತು ಕೆಪಸಿಟೆನ್ಸ್ ಪರೀಕ್ಷೆ | 315ಎಂ.ವಿ.ಎ | – | **204** |
| | | 167ಎಂ.ವಿ.ಎ/ಐಸಿಟಿ | 7 | |
| | | 150ಎಂ.ವಿ.ಎ | 19 | |
| | | 100 ಎಂ.ವಿ.ಎ | 33 | |
| | | 67.5 ಎಂ.ವಿ.ಎ | 1 | |
| | | 31.5ಎಂ.ವಿ.ಎ | 50 | |
| | | 50ಎಂ.ವಿ.ಎ | – | |
| | | ರಿಯಾಕ್ಟರ್ | 4 | |
| 5 | ವಿದ್ಯುತ್ ಪರಿವರ್ತಕಗಳ ಬುಷಿಂಗ್ ಮತ್ತು ವಿದ್ಯುತ್ ಕೇಂದ್ರ ಸಿಟಿ ಮತ್ತು ಸಿವಿಟಿಗಳ ಟ್ಯಾನ್ ಡೆಲ್ಟಾ ಮತ್ತು ಕ್ಯಾಪಸಿಟೆನ್ಸ್ ಪರೀಕ್ಷೆ | ಪರಿವರ್ತಕಗಳ ಬುಷಿಂಗ್ | 2 | |
| | | ಸಿಟಿಗಳು/ಸಿವಿಟಿ | 88 | |
| | | **ಒಟ್ಟು** | **204** | **204** |

| | | | | |
|---|---|---|---|---|
| 6 | ಸೋಡಿಯಂ ಬೆಂಟೋನೈಟ್ ಮಾದರಿ | | 8 | 8 |
| 7 | 220ಕೆವಿ ವಿದ್ಯುತ್ ಕೇಂದ್ರದ ಭೂ ಚಾಪೆ ವಿನ್ಯಾಸದ ಅನುಮೋದನೆ | 400/220ಕೆವಿ | 12 | 12 |
| | | 110 ಕೆವಿ | 2 | 2 |
| | | 66ಕೆವಿ | 1 | 1 |
| 8 | 220ಕೆವಿ ವಿದ್ಯುತ್ ಕೇಂದ್ರದ ಭೂ ಚಾಪೆ ವಿನ್ಯಾಸದ ಅನುಮೋದನೆ | | 179 | 179 |
| 9 | ಹೆಚ್ಚುವರಿ ಭೂ ಚಾಪೆ | | 49 | 49 |
| 10 | ವಿದ್ಯುತ್ ಪರಿವರ್ತಕಗಳಿಗೆ ಎಸ್ಎಫ್ಆರ್ಎ ಪರೀಕ್ಷೆ | | 21 | 21 |
| 11 | ವಿದ್ಯುತ್ ಪರಿವರ್ತಕಗಳಿಗೆ ಐಡಾಕ್ಸ್ ಪರೀಕ್ಷೆ | | 112 | 112 |
| 12 | ತೈಲ ಮಾದರಿ ಪರೀಕ್ಷೆ | | 3830 | 3830 |
| 13 | ಕರಗಿದ ಅನಿಲದ ವಿಶ್ಲೇಷಣೆ (ಡಿಜಿಎ) | | 1146 | 1146 |
| 14 | ಪ್ಯೂರಾನ್ ವಿಶ್ಲೇಷಣೆ | | 557 | 557 |
| | **ಒಟ್ಟು** | | **6414** | **6414** |

**12)ಹಾಟ್ ಲೈನ್ ಶಾಖೆಯ ತಾಂತ್ರಿಕ ಕಾರ್ಯಗಳು:**

ಹಾಟ್ ಲೈನ್ ವಿಭಾಗವು, 400ಕೆ.ವಿ ಯ ವರೆಗಿನ ಪ್ರಸರಣ ಮಾರ್ಗ ಮತ್ತು ಸ್ಟೇಷನ್ ಗಳ ತುರ್ತುಸ್ಥಿತಿ ನಿರ್ವಹಣೆ ಮತ್ತು ಮುನ್ಸೂಚನೆಯ/ ತಡೆಗಟ್ಟುವ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದ್ದು, ಲೈವ್ ಲೈನ್ ನಿರ್ವಹಣೆ ತಂತ್ರವನ್ನು 220 ಕೆ.ವಿ ವರಗಿನ ಪ್ರಸರಣ ಮಾರ್ಗ ಮತ್ತು ಸ್ಟೇಷನ್‌ಗಳಲ್ಲಿ ಹಾಟ್ ಸ್ಟಿಕ್ ತಂತ್ರಗಾರಿಕೆಯ ಹಾಗೂ 400ಕೆ.ವಿ ಮತ್ತು 220ಕೆ.ವಿಯ ಪ್ರಸರಣ ಮಾರ್ಗ ಮತ್ತು ಸ್ಟೇಷನ್‌ಗಳಲ್ಲಿ ಇನ್ಸುಲೇಟೆಡ್ ಏರಿಯಲ್ ಪ್ಲಾಟ್‌ಫಾರಂ ಬಳಸಿ ಬೇರ್ ಹ್ಯಾಂಡ್ ತಂತ್ರಗಾರಿಕೆಯ ವಿಧಾನ ಅಳವಡಿಸಿಕೊಳ್ಳುವ ಮೂಲಕ ನಿರ್ವಹಿಸಲಾಗುತ್ತಿದೆ. ಈ ತಂತ್ರಜ್ಞಾನವನ್ನು ಬಳಸಿ ಯಾವುದೇ ವಿದ್ಯುತ್ ಮಾರ್ಗ ಮುಕ್ತತೆಯನ್ನು ತೆಗೆದುಕೊಳ್ಳದೆಯೇ, ಪ್ರಸರಣಾ ಮಾರ್ಗಗಳ ಮತ್ತು ವಿದ್ಯುತ್ ಉಪಕೇಂದ್ರಗಳ ನಿರ್ವಹಣೆಯನ್ನು ಮಾಡಲಾಗುತ್ತದೆ. ಹೀಗಾಗಿ ಅಂತಿಮ ಬಳಕೆದಾರರಿಗೆ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ಅಡೆತಡೆಯಾಗದಂತೆ ನಿರಂತರತೆಯನ್ನು ಒದಗಿಸುತ್ತದೆ. ಹಾಟ್ ಲೈನ್ ವಿಭಾಗದ ಸಿಬ್ಬಂದಿಗಳು ಹಾಟ್ ಲೈನ್ ತರಬೇತಿ ಕೇಂದ್ರ, ರಾಷ್ಟ್ರೀಯ ತರಬೇತಿ ಕೆಂದ್ರ, ಭಾರತ ಸರ್ಕಾರ, ಸೋಮನಹಳ್ಳಿಯಲ್ಲಿ ಹಾಟ್ ಲೈನ್ ತಂತ್ರಗಳಲ್ಲಿ ಪರಿಣತಿ ಪಡೆದು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಹಾಟ್ ಲೈನ್ ಶಾಖೆಯ ಚಟುವಟಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

- ಪ್ರಸರಣ ಮಾರ್ಗಗಳಲ್ಲಿ ದೋಷಯುಕ್ತ ಇನ್ಸುಲೇಟರುಗಳನ್ನು ಪರೀಕ್ಷಿಸುವುದು ಮತ್ತು ಪತ್ತೆಹಚ್ಚುವಿಕೆ.
- ದೋಷಯುಕ್ತ ಇನ್ಸುಲೇಟರ್/ಸ್ಟ್ರಿಂಗ್‌ಗಳನ್ನು ಬದಲಿಸುವುದು.
- ಬೈ–ಪಾಸ್ ಜಂಪುಗಳನ್ನು ಒದಗಿಸುವ ಮೂಲಕ ಪ್ರಸರಣ ಮಾರ್ಗಗಳನ್ನು ಬಲಪಡಿಸುವುದು.
- ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ಉಷ್ಣಾಂಶವನ್ನು(ಹಾಟ್ ಸ್ಪಾಟ್) ಗುರುತಿಸಲು ಥರ್ಮೋವಿಶನ್ ಸ್ಕ್ಯಾನಿಂಗ್ ಬಳಸುವುದು.
- ಇ.ಹೆಚ್.ವಿ.ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಗಳ ಹಾನಿ ತಡುಗಟ್ಟುವ ನಿರ್ವಹಣೆ.
- ತುರ್ತು ಹಾಟ್ ಲೈನ್ ಕೆಲಸಗಳ ನಿರ್ವಹಣೆ.

**ಆರ್ಥಿಕ ವರ್ಷ 2020–2021ರ ಅವಧಿಯಲ್ಲಿ ಹಾಟ್ ಲೈನ್ ವಿಂಗ್ ನಡೆಸಿದ ಚಟುವಟಿಕೆಗಳನ್ನು ಕೆಳಗೆ ನಮೂದಿಸಲಾಗಿದೆ.**

| ಕ್ರ. ಸಂ | ವಿವರಗಳು | ವೋಲ್ಟೇಜ್ ವರ್ಗ ಕೆವಿ.ಯಲ್ಲಿ | | | | ಒಟ್ಟು |
|---|---|---|---|---|---|---|
| | | 400 | 220 | 110 | 66 | |
| 1 | ಪರೀಕ್ಷೆ ನಡೆಸಿದ ನಿರೋಧಕಗಳ ಸರಗಳ (ಇನ್ಸುಲೇಟರ್ ಸ್ಟ್ರಿಂಗ್‌ಗಳ) ಸಂಖ್ಯೆ | ----- | 3629 | 8439 | 7878 | 19946 |
| 2 | ದೋಷಯುಕ್ತ ಇನ್ಸುಲೇಟರ್ ಸ್ಟ್ರಿಂಗ್‌ಗಳನ್ನು ಬದಲಿಸಿದ ಸಂಖ್ಯೆ | ----- | 36 | 22 | 01 | 58 |
| 3 | ಹಾಟ್ ಸ್ಪಾಟ್ ಗಳನ್ನು ಗುರುತಿಸುವುದಕ್ಕಾಗಿ ಥರ್ಮೊವಿಶನ್ ಸ್ಕ್ಯಾನಿಂಗ್ ಮೂಲಕ ಪರೀಕ್ಷಿಸಲ್ಪಟ್ಟ ಉಪಕೇಂದ್ರಗಳು/ಇನ್ಸುಲೇಟರ್ ಸ್ಟ್ರಿಂಗ್‌ಗಳ ಸಂಖ್ಯೆ. (ಈ ಸಂಖ್ಯೆಯು ಒಂದಕ್ಕಿಂತ ಹೆಚ್ಚು ಬಾರಿ ವಿದ್ಯುತ್ ಉಪಕೇಂದ್ರಗಳ ಪರಿವೀಕ್ಷಣೆಗೆ ಒಳಪಟ್ಟಿರುತ್ತದೆ) | 15 | 247 | 350 | 732 | 1344 |
| 4 | ಪರೀಕ್ಷೆ ನಡೆಸಿದ ಜಂಪರುಗಳ ಸಂಖ್ಯೆ | ----- | 5388 | 935 | 3576 | 9899 |
| 5 | ಸಬ್ ಸ್ಟೇಷನ್ ಸ್ವಿಚ್ ಯಾರ್ಡ್‌ಗಳಲ್ಲಿ ತಡೆಗಟ್ಟುವ ನಿರ್ವಹಣೆ (ಪ್ರಿವೆಂಟೀವ್ ಮೆಂಟೆನೆನ್ಸ್) ಸಂಖ್ಯೆ. (ಈ ಸಂಖ್ಯೆಯು ಒಂದಕ್ಕಿಂತ ಹೆಚ್ಚು ಬಾರಿ ವಿದ್ಯುತ್ ಉಪಕೇಂದ್ರಗಳ ಪರಿವೀಕ್ಷಣೆಗೆ ಒಳಪಟ್ಟಿರುತ್ತದೆ) | 06 | 257 | 368 | 716 | 347 |
| 6 | ತಡೆಗಟ್ಟುವ ನಿರ್ವಹಣೆ (ಪ್ರಿವೆಂಟೀವ್ ಮೆಂಟೆನೆನ್ಸ್) ನಡೆಸಿದ ಪ್ರಸರಣ ಮಾರ್ಗಗಳ ಸಂಖ್ಯೆ. | --- | 1853 | -- | 06 | 1859 |
| 7 | ಇ.ಹೆಚ್.ವಿ ಉಪ ಕೇಂದ್ರಗಳಲ್ಲಿ ಒದಗಿಸಿರುವ ಬೈ ಪಾಸ್ ಜಂಪರುಗಳ ಸಂಖ್ಯೆ. | --- | | 06 | | 06 |
| 8 | ತುರ್ತು ಸ್ಥಿತಿಗಳ ಸಮಯದಲ್ಲಿ ತುರ್ತು ಸ್ಥಿತಿಗಳನ್ನು ನಿರ್ವಹಿಸಿದ ಮಾರ್ಗಗಳು ಮತ್ತು ಉಪಕೇಂದ್ರಗಳ ಸಂಖ್ಯೆ. | --- | | 158 | | 158 |
| 9 | ಪ್ರಸರಣಾ ಮಾರ್ಗಗಳಿಂದ ಕಟ್ಟಡಗಳಿಗೆ ಇರುವ ಲಂಬ್ (ವರ್ಟಿಕಲ್) ಮತ್ತು ಅಡ್ಡ (ಹಾರಿಜಂಟಲ್) ಕ್ಲಿಯರೆನ್ಸ್‌ಗಳ ಮಾಪನ. | --- | | 373 | | 373 |
| 10 | ವಿವಿಧ ಪ್ರಸರಣ ಮಾರ್ಗಗಳಲ್ಲಿ ಅಳವಡಿಸಿದ ವೈಬ್ರೇಶನ್ ಡ್ಯಾಂಪರುಗಳ ಸಂಖ್ಯೆ. | --- | --- | 96 | --- | 96 |

**(13) ತಾಂತ್ರಿಕ ಪರಿಶೋಧನೆ ಮತ್ತು ಗುಣಮಟ್ಟ ನಿಯಂತ್ರಣ :–**

ಮುಖ್ಯ ಇಂಜಿನಿಯರ್ (ವಿದ್ಯುತ್) ತಾಂತ್ರಿಕ ಪರಿಶೋಧನೆ ಮತ್ತು ಗುಣಮಟ್ಟ ನಿಯಂತ್ರಣ ಬೆಂಗಳೂರು ರವರು ತಾಂತ್ರಿಕ ಪರಿಶೋಧನೆ ಮತ್ತು ಗುಣ ನಿಯಂತ್ರಣ ವಿಭಾಗದ ಮುಖ್ಯಸ್ಥರಾಗಿರುತ್ತಾರೆ.

**ತಾ.ಪ. ಮತ್ತು ಗು.ನಿ. ಘಟಕದ ಮುಖ್ಯ ಕಾರ್ಯಕ್ರಮಗಳು :**

➢ ಈ ಕೆಳಕಂಡ ಕಾಮಗಾರಿಗಳಲ್ಲಿ ಬಳಸುವ ಪದಾರ್ಥಗಳ ಪರಿವೀಕ್ಷಣೆ.

- ಚಾಲ್ತಿಯಲ್ಲಿರುವ ಟಿಟಿಕೆ/ಪಿಟಿಕೆ ಉಪಕೇಂದ್ರಗಳ ಕಾಮಗಾರಿ, ಮಾರ್ಗ ಕಾಮಗಾರಿ, ಸಾಮರ್ಥ್ಯ ವರ್ಧನೆಯ ಕಾಮಗಾರಿಗಳು.
- ಸ್ವಂತಂತ್ರ ವಿದ್ಯುತ್ ಉತ್ಪಾದಕರ ಕಾಮಗಾರಿಗಳು.
- ಸ್ವಯಂ ಕಾರ್ಯಗಳ ಕಾಮಗಾರಿ.
- ಮಾರ್ಗದ ಸ್ಥಳಾಂತರದ ಕಾಮಗಾರಿಗಳು.

➢ ಪ್ರಗತಿಯಲ್ಲಿರುವ ವಿದ್ಯುತ್ ಉಪಕೇಂದ್ರ/ಮಾರ್ಗಗಳ ನಿಯತಕಾಲಿಕ ಪರಿವೀಕ್ಷಣೆ.

➢ ಬೃಹತ್ ಕಾಮಗಾರಿ/ಟಿ.ಎಲ್.ಎಸ್.ಎಸ್ ಉಗ್ರಾಣಗಳಲ್ಲಿ ಸಾಮಗ್ರಿ ಮತ್ತು ಉಪಕರಣಗಳ ಪರಿವೀಕ್ಷಣೆ.

➢ ಕಾರ್ಖಾನೆಗಳಲ್ಲಿರುವ ಸಾಮಗ್ರಿಗಳ ಪರಿವೀಕ್ಷಣೆ.

➢ ಕ್ಷೇತ್ರಗಳಲ್ಲಿರುವ ಸಾಮಗ್ರಿಗಳ ಪರಿವೀಕ್ಷಣೆ.

➢ ಪೂರ್ಣಗೊಂಡ ಕಾಮಗಾರಿಗಳ ವಿದ್ಯುತ್ ಉಪಕೇಂದ್ರಗಳ/ಮಾರ್ಗ ಕಾಮಗಾರಿಗಳ ತಾಂತ್ರಿಕ ಪರಿಶೋಧನೆ.

➢ ಉತ್ಪಾದಕರ ವಿಶ್ಲೇಷಣೆಗಾಗಿ ಉತ್ಪಾದಕರ ಕಾರ್ಖಾನೆಗಳ ಪರಿವೀಕ್ಷಣೆ.

➢ ದೂರುಗಳು/ಮನವಿಗಳ ಬಗ್ಗೆ ತನಿಖೆ ಮಾಡುವುದು.

➢ ವಿದ್ಯುತ್ ಉಪಕೇಂದ್ರ/ಮಾರ್ಗಗಳಿಗೆ ಸಂಬಂಧಿಸಿದ ಸಿವಿಲ್ ಕಾಮಗಾರಿಗಳ ಪರಿವೀಕ್ಷಣೆ.

➢ ನಿಗಮದಿಂದ ನಿರ್ದೇಶಿಸಿರುವ ಇತರೆ ಕೆಲಸ ಕಾರ್ಯಗಳನ್ನು ಕೈಗೊಳ್ಳುವುದು.

| ಕ್ರ.ಸಂ | ಕಾರ್ಯಸಾಧ್ಯದ ಕಾರ್ಯಕ್ರಮಗಳು | 01.04.2020ರ ಪ್ರಾರಂಭಕ್ಕೆ ಒಟ್ಟು ಪ್ರಗತಿಯಲ್ಲಿರುವ/ ಚಾಲ್ತಿಯಲ್ಲಿರುವ ಉಪಕೇಂದ್ರಗಳು/ ಕಾಮಗಾರಿಗಳು | 2020–21 ರವರೆಗೆ ಭೇಟಿ ಮಾಡಿ ಪರಿವೀಕ್ಷಣೆ ಮಾಡಿರುವುದು (ಸಂಖ್ಯೆ) |
|---|---|---|---|
| 1 | **ಪ್ರಗತಿಯಲ್ಲಿರುವ ಕೆಲಸಗಳು** | | |
| ಅ | ಉಪಕೇಂದ್ರಗಳು | 66 | 336 |
| ಆ | ಮಾರ್ಗಗಳು | 66 | 295 |
| ಈ | ಎಕ್ಸ್‌ಕ್ಲೂಸಿವ್ ಮಾರ್ಗಗಳು | 126 | 221 |
| ಇ | ಅಧಿಕ ಗೊಳಿಸುವಿಕೆ | 112 | 379 |

| | | | |
|---|---|---|---|
| **2** | **ಅಸ್ಥಿತ್ವದಲ್ಲಿರುವ ಉಪಕೇಂದ್ರಗಳ ಮತ್ತು ಮಾರ್ಗಗಳ ಪರಿವೀಕ್ಷಣೆ** | | |
| **A)** | ಉಪಕೇಂದ್ರಗಳು | **1222** | **857** |
| **B)** | ಮಾರ್ಗಗಳು | 1609 | 581 |
| 3 | ಬೃಹತ್ ಕಾಮಗಾರಿ ಸ್ಟೋರ್/ ಟಿಎಲ್ಎಸ್ಎಸ್ ಸ್ಟೋರ್ | 18 | 21 |
| 4 | ಸಾಮಗ್ರಿಗಳ ಪರಿವೀಕ್ಷಣೆ | | |
| ಎ | ಕಾರ್ಖಾನೆಗಳಲ್ಲಿ | | |
| ಅ) | ಕವಿಪ್ರನಿನಿ ಕೆಲಸಗಳು | ** | 1916 |
| ಆ) | ಐ.ಪಿ.ಪಿ. ಕೆಲಸಗಳು | ** | 0 |
| ಇ) | ಸೆಲ್ಫ್ ಎಕ್ಸಿಕ್ಯೂಷನ್ ಕೆಲಸಗಳು | ** | 165 |
| **ಬಿ)** | **ಸಾಮಗ್ರಿಗಳ ಪರಿವೀಕ್ಷಣೆ** | – | |
| ಅ) | ಕವಿಪ್ರನಿನಿ ಕೆಲಸಗಳು | ** | 581 |
| ಆ) | ಐ.ಪಿ.ಪಿ. ಕೆಲಸಗಳು | ** | 5 |
| ಇ) | ಸೆಲ್ಫ್ ಎಕ್ಸಿಕ್ಯೂಷನ್ ಕೆಲಸಗಳು | ** | 51 |
| ಸಿ) | ಉಗ್ರಾಣ ಪರಿವೀಕ್ಷಣೆ | ** | 1347 |
| **5** | **ಮುಕ್ತಾಯಗೊಂಡ ಕಾಮಗಾರಿಗಳ ಲೆಕ್ಕ ಪರಿಶೋಧನೆ–** | | |
| ಅ) | ಉಪಕೇಂದ್ರಗಳು | ** | 30 |
| ಆ) | ಮಾರ್ಗಗಳು | ** | 30 |
| ಇ) | ಅಧಿಕ ಗೊಳಿಸುವಿಕೆ | ** | 41 |
| **6** | ವಿತರಕರ ವಿಶ್ಲೇಷಣೆಯ ಪರಿವೀಕ್ಷಣೆ | ** | 15 |
| **7** | ದೂರುಗಳ/ಮನವಿಗಳ ಪರಿಶೀಲನೆ | ** | 1 |
| **8** | ಇತರೆ | ** | 0 |
| | **ಸಿವಿಲ್ ಕಾಮಗಾರಿಗಳ ತಪಾಸಣೆ** | | |
| **1** | **ಪ್ರಗತಿಯಲ್ಲಿರುವ ಕೆಲಸಗಳ ಪರಿವೀಕ್ಷಣೆ** | | |
| ಅ) | ಉಪಕೇಂದ್ರಗಳು | **66** | **82** |
| **2** | **ಅಸ್ಥಿತ್ವದಲ್ಲಿರುವ ಉಪಕೇಂದ್ರಗಳ ಪರಿವೀಕ್ಷಣೆ** | – | |
| ಅ) | ಉಪಕೇಂದ್ರಗಳು | – | **29** |
| **3** | **ಮುಕ್ತಾಯಗೊಂಡ ಕಾಮಗಾರಿಗಳ ಲೆಕ್ಕ ಪರಿಶೋಧನೆ** | – | |
| ಅ) | ಉಪಕೇಂದ್ರಗಳು | – | **30** |
| ಆ) | ಅಧಿಕ ಗೊಳಿಸುವಿಕೆ | | **19** |
| **4** | **ದೂರು/ಮನವಿಗಳ ಪರಿಶೀಲನೆ** | – | **3** |
| 5 | ಇತರೆ | – | **21** |

ಟಿಪ್ಪಣಿ:–

- ❖ ಊಹಿಸಲಾದ ವಾರ್ಷಿಕ ಗರಿಯು ಉಪಕೇಂದ್ರಗಳ/ಮಾರ್ಗದ ಪೂರ್ಣಗೊಳಿಸುವಿಕೆಯ ಅನುಸಾರವಾಗಿ ಮಾರ್ಪಾಡಾಗಬಹುದು.
- ❖ ಎಲ್ಲಾ ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಪ್ರತಿ 3 ತಿಂಗಳಿಗೊಮ್ಮೆ ಪರಿವೀಕ್ಷಿಸಬೇಕು.

❖ ಎಲ್ಲಾ ಚಾಲ್ತಿಯಲ್ಲಿರುವ ಉಪಕೇಂದ್ರಗಳನ್ನು ವರ್ಷಕ್ಕೊಮ್ಮೆ ಪರಿವೀಕ್ಷಣೆ

❖ ಎಲ್ಲಾ ಚಾಲ್ತಿಯಲ್ಲಿರುವ ಮಾರ್ಗಗಳನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಪರಿವೀಕ್ಷಿಸಬೇಕು.

**(14) ಮಾಹಿತಿ ತಂತ್ರಜ್ಞಾನ ಮತ್ತು ಆಡಳಿತ ಮಾಹಿತಿ ವ್ಯವಸ್ಥೆ:**

ಮಾಹಿತಿ ತಂತ್ರಜ್ಞಾನ ಶಾಖೆಯು ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಕವಿಪ್ರನಿನಿಯ ಅಧಿಕೃತ ವೆಬ್‌ಸೈಟ್, ಅಂತರ್ಜಾಲ (ಇಂಟರ್‌ನೆಟ್) ಇಂಟರ್‌ನೆಟ್ ಪೋರ್ಟಲ್, ಇ–ಪ್ರಸರಣ, ಡಾಟಾ ಸೆಂಟರ್, ಕಾವೇರಿ ಭವನದಲ್ಲಿರುವ ಕಛೇರಿಗಳ ನೆಟ್‌ವರ್ಕ್, ಯಂತ್ರಾಂಶ(ಹಾರ್ಡ್‌ವೇರ್) ಹಾಗೂ ಸಿಸ್ಟಮ್ ಅಡ್ಮಿನಿಸ್ಟ್ರೇಷನ್, ದತ್ತಾಂಶ ನಿರ್ವಹಣೆ, ತಂತ್ರಾಂಶ ಅಭಿವೃದ್ಧಿಪಡಿಸುವುದು, ಯಂತ್ರಾಂಶ ಮತ್ತು ತಂತ್ರಾಂಶ ಖರೀದಿ ಮೊದಲಾದ ಕೆಲಸಗಳನ್ನು ನಿರ್ವಹಿಸುತ್ತದೆ.

ಆರ್ಥಿಕ ವರ್ಷ 2020–21 ನೇ ಸಾಲಿನಲ್ಲಿ ಈ ಕೆಳಗೆ ನಮೂದಿಸಿರುವ ಮಾಹಿತಿ ತಂತ್ರಜ್ಞಾನ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗಿದೆ.

**1. ತಂತ್ರಾಂಶದ ಅಭಿವೃದ್ಧಿಪಡಿಸಿರುವುದು ಮತ್ತು ನಿರ್ವಹಣೆ**

- ಪೇ ರೋಲ್
- ಪಿಂಚಣಿ, ಕುಟುಂಬ ಪಿಂಚಣಿ ಮತ್ತು ಗ್ರಾಚ್ಯುಟಿ
- ಇಲಾಖಾ ಪರೀಕ್ಷೆ
- ಎ ಮತ್ತು ಬಿ ಶ್ರೇಣಿ ಅಧಿಕಾರಿಗಳ ವಿವರ
- ಕವಿಪ್ರನಿನಿ ಯೋಜನೆಗಳ ಭಾವಚಿತ್ರಗಳ ಅಪ್ಲೋಡ್
- ಲೋಡ್ ಕರ್ವ್ ವಿವರಗಳ ಅಪ್ಲೋಡ್
- ಬಂಡವಾಳ ಕಾಮಗಾರಿ ಹುಂಡಿಗಳ ನಿರೂಪಣಾ ವ್ಯವಸ್ಥೆ
- ಕಡತ ನಿರೂಪಣಾ ವ್ಯವಸ್ಥೆ(ನಿಗಮ ಕಾರ್ಯಾಲಯ)
- ಅಂತರ ಘಟಕ ಲೆಕ್ಕಗಳ ವಹಿವಾಟು
- ಎನ್.ಡಿ.ಸಿ.ಪಿ.ಎಸ್ – ನೌಕರರ ಮಾಸಿಕ ಕೊಡುಗೆಯ ವಿವರ
- 31.03.2021 ರಂತೆ ಕವಿಪ್ರನಿನಿ ಮತ್ತು ವಿಸಕಂಗಳ ಹುದ್ದೆಗಳ ವಿವರಗಳು ಮತ್ತು ಸಿಬ್ಬಂದಿಯ ದತ್ತಾಂಶ
- ಸ್ಟೇಷನ್ ಇ–ಲಾಗ್
- ಉಪಕೇಂದ್ರ ಮತ್ತು ವಿದ್ಯುತ್ ಪರಿವರ್ತಕಗಳ ವಿವರಗಳು
- ಜಿ.ಎಸ್.ಟಿ ಸಾಫ್ಟ್‌ವೇರ್
- ಬಡತಿ/ವರ್ಗಾವಣೆಗಾಗಿ ಜಾಲತಾಣಗಳ ಮೂಲಕ ವಿನಂತಿ ಅರ್ಜಿ
- ದಾಸ್ತಾನು ನಿರ್ವಹಣಾ ವ್ಯವಸ್ಥೆ
- ಬ್ಯಾಂಕ್ ಸಮನ್ವಯ ವ್ಯವಸ್ಥೆ
- ಎಸ್ಕಾಂಗಳ ಕಾರ್ಯಕ್ಷಮತೆ ನಿರ್ವಹಣಾ ವ್ಯವಸ್ಥೆ

2. ಕವಿಪ್ರನಿನಿಗೆ ಸಂಬಂಧಿಸಿದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಬಳಸುವ ಅಧಿಕಾರಿಗಳಿಗೆ ಯೂಸರ್ ಐಡಿ ರಚನೆ, ನವೀಕರಣ, ಮ್ಯಾಪಿಂಗ್ ಮತ್ತು ಅಧಿಕಾರಿಗಳಿಗೆ ಹೊಣೆಗಾರಿಕೆ ನೀಡುವುದು.

3. ಬಯೋಮೆಟ್ರಿಕ್ ಹಾಜರಾತಿ ಉಸ್ತುವಾರಿ ವ್ಯವಸ್ಥೆ.

4. ಮಾರಾಟಗಾರರಿಗೆ ಅನುಮೋದನೆ, ಓಪನ್ ಆಕ್ಸೆಸ್‌ನಲ್ಲಿ ಕವಿಪ್ರನಿನಿಗೆ ಅನ್ವಯವಾಗುವ ಹೆಚ್.ಟಿ ಗ್ರಾಹಕರು ವಿದ್ಯುತ್ ಸಂಪರ್ಕ ಪಡೆಯಲು ಅನುವುಮಾಡಲು, ಆನ್‌ಲೈನ್ ಸರ್ವಿಸ್ ತಂತ್ರಾಂಶದ ಅಭಿವೃದ್ಧಿಪಡಿಸುವ ಏಜೆನ್ಸಿಯೊಂದಿಗೆ ಸಮನ್ವಯತೆ, ಹೆಚ್.ಟಿ. ಗ್ರಾಹಕರಿಂದ ಸ್ವೀಕರಿಸಿದ ಅರ್ಜಿಗಳನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಅಭಿವೃದ್ಧಿಪಡಿಸಿದ ಅಪ್ಲಿಕೇಷನ್ ಸಾಫ್ಟ್‌ವೇರ್‌ನೊಂದಿಗೆ ಸಮನ್ವಯ ಮಾಡುವುದು.

5. ಬೆಂಗಳೂರು ಪ್ರಸರಣಾ ವಲಯದಲ್ಲಿ ಜಿಐಎಸ್ ಸಮೀಕ್ಷೆಯ ಮಾಹಿತಿಯನ್ನು ಸಂಯೋಜಿಸುವ ಮೂಲಕ ಪ್ರಸರಣಾ ಮಾರ್ಗಗಳು, ಇ.ಹೆಚ್.ವಿ ಕೇಬಲ್‌ಗಳು, ವಿದ್ಯುತ್ ಗೋಪುರಗಳು ಮತ್ತು ಕವಿಪ್ರನಿನಿ ನಿಗಮಕ್ಕೆ ಸಂಬಂಧಿಸಿದ ವಿದ್ಯುತ್ ಉಪಕೇಂದ್ರಗಳಿಗಾಗಿ ಜಿಐಎಸ್ ಸಾಫ್ಟ್‌ವೇರ್ ವಿನ್ಯಾಸ, ಅಭಿವೃದ್ಧಿ ಮತ್ತು ಮಾರ್ಪಾಡಾಗಿ ಏಜೆನ್ಸಿಯೊಂದಿಗೆ ಸಮನ್ವಯತೆ ಮಾಡುವುದು.

6. ಕವಿಪ್ರನಿನಿಯ ನಿಗಮ ಕಾರ್ಯಾಲಯದಲ್ಲಿ ಇ–ಕಛೇರಿ ತಂತ್ರಾಂಶವನ್ನು ಅನುಷ್ಠಾನಗೊಳಿಸಿ, ಸದರಿ ತಂತ್ರಾಂಶದ ಮೂಲಕ ಕಡತಗಳ ಸಂಪೂರ್ಣ ನಿರ್ವಹಣೆ ಮತ್ತು ವಿಲೇವಾರಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ.

7. ಕಾವೇರಿ ಭವನ ಉಪಯೋಗಕ್ಕಾಗಿ ಈ ಕೆಳಕಂಡ ಖರೀದಿಗಳನ್ನು ಮಾಹಿತಿ ತಂತ್ರಜ್ಞಾನ ಶಾಖೆಯಿಂದ ನಿರ್ವಹಿಸಲಾಗುತ್ತಿದೆ.

| ಕ್ರ.ಸಂ | ವಿವರ | ಸಂಖ್ಯೆ |
|---|---|---|
| 1 | ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು | 57 |
| 2 | ಲ್ಯಾಪ್‌ಟಾಪ್‌ಗಳು | 10 |
| 3 | ಪ್ರಿಂಟರ್ ಮತ್ತು ಸ್ಕ್ಯಾನರ್‌ಗಳು | 8 |
| 4 | ಪ್ರಿಂಟರ್‌ಗಳು | 26 |
| 5 | ಯು.ಪಿ.ಎಸ್‌ಗಳು | 3 |

8. ಮಾಹಿತಿ ಹಕ್ಕು ಅಧಿನಿಯಮ 2005 ರ ಅಡಿಯಲ್ಲಿ ಕವಿಪ್ರನಿನಿ ಆಡಳಿತ ಕಛೇರಿ ಮತ್ತು ಇತರೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಒದಗಿಸಿರುವ ಮಾಹಿತಿ ದತ್ತಾಂಶವನ್ನು ನಿರ್ವಹಿಸಲಾಗುತ್ತಿದೆ. ಆರ್ಥಿಕ ವರ್ಷ 2020–21 ರಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಮತ್ತು ವಿಲೇವಾರಿಯಾಗಿರುವ ಅರ್ಜಿಗಳ ಸಂಖ್ಯೆಯ ವಿವರಗಳು ಈ ಕೆಳಗೆ ನಮೂದಿಸಲಾಗಿದೆ.

| ಒಟ್ಟು ಸಾರ್ವಜನಿಕ ಅಧಿಕಾರಿಗಳ ಸಂಖ್ಯೆ | ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ | 2020–21 ನೇ ಸಾಲಿನಲ್ಲಿ ವಿಲೇವಾರಿ ಮಾಡಿರುವ ಅರ್ಜಿಗಳ ಸಂಖ್ಯೆ |
|---|---|---|
| ಎಲ್ಲಾ ಪ್ರಸರಣ ವಲಯಗಳಿಂದ ಆರ್‌ಟಿಐ ವಿವರಗಳಿಗೆ ಸಂಬಂಧಿಸಿದ ಮಾಹಿತಿಯು ಇನ್ನೂ ಸ್ವೀಕೃತವಾಗಿರುವುದಿಲ್ಲ. (ಲಾಕ್‌ಡೌನ್ ಕಾರಣ ವಿಳಂಬವಾಗಿದೆ) | | |

**(15) ವಾರ್ಷಿಕ ಕಾರ್ಯಕ್ಷಮತೆಯ ಪರಿಶೀಲನೆ ಮತ್ತು ಪ್ರಸರಣ ಜಕಾತಿಯ ನಿಯಂತ್ರಣ ವ್ಯವಹಾರಗಳು:–**

1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ರವರ ಆದೇಶ ದಿನಾಂಕ 19.10.2020 ರಲ್ಲಿ ಗೌರವಾನ್ವಿತ ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಾಧೀಕರಣದ ಆದೇಶ ದಿನಾಂಕ 05.10.2020 ರ ಅಪೀಲು ಸಂಖ್ಯೆ 97/2020 ರಲ್ಲಿ ತಿಳಿಸಿರುವಂತೆ ಕವಿಪ್ರನಿನಿಗೆ ನಿಯಂತ್ರಣ ಆಸ್ತಿಯನ್ನು ಅನುಷ್ಠಾನಗೊಳಿಸಲು ಹಾಗೂ ರೂ.1657.07 ಕೋಟಿಯನ್ನು ಮುಂದಿನ ಐದು ವರ್ಷಗಳ ಅವಧಿಗೆ (ನಿಯಂತ್ರಣ ಆಸ್ತಿಯನ್ನು) ಭೋಗ್ಯ ಮಾಡಲು ನಿರ್ದೇಶಿಸಿದೆ. ಮುಂದುವರೆದು, ರೂ.331.34 ಕೋಟಿಯನ್ನು ಪ್ರತಿ ವರ್ಷ ನಿವ್ವಳ ವಾರ್ಷಿಕ ಕಂದಾಯ ಅವಶ್ಯಕತೆಯ ಜೊತೆಗೆ ಭೋಗ್ಯ ನಿಯಂತ್ರಣ ಆಸ್ತಿಯ ಮೊತ್ತವನ್ನು ಮುಂದಿನ ಐದು ವರ್ಷಗಳ ಅವಧಿಯ ಮಾಹಿತಿಯನ್ನು ವಾರ್ಷಿಕ ಕಾರ್ಯ ಸಾಧನೆ ಪರಿಶೀಲನೆ ಅರ್ಜಿಯಲ್ಲಿ ಸೇರಿಸಲು ಕೆಇಆರ್‌ಸಿಯು ಅನುಮೋದಿಸಿದೆ.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ಕವಿಪ್ರನಿನಿಯ ಪ್ರಸರಣ ದರ ಆದೇಶ 2020, ದಿನಾಂಕ 04.11.2020 ರಲ್ಲಿ ಆರ್ಥಿಕ ವರ್ಷ 2020–2021 ರ ವಾರ್ಷಿಕ ಆದಾಯದ ಅವಶ್ಯಕತೆ ರೂ.4292.87 ಕೋಟಿಗಳಿಗೆ ಮತ್ತು ಪರಿಷ್ಕೃತ ಪ್ರಸರಣ ದರ ಮಾಹೆಯಾನ ರೂ.1,55,114 ಪ್ರತಿ ಮೆಗಾವ್ಯಾಟ್‌ಗಳಿಗೆ ಪರಿಷ್ಕರಿಸಿದೆ. ಆರ್ಥಿಕ ವರ್ಷ 2019 ಕ್ಕೆ ಕವಿಪ್ರನಿನಿಯು ತನ್ನ ಪ್ರಸರಣ ಜಾಲದ ಲಭ್ಯತೆ (ಸಿಸ್ಟಮ್ ಅವೇಲಿಬಿಲಿಟಿ) ಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಗದಿತ ಗುರಿಯನ್ನು ಮೀರಿ ಶೇಕಡ 99.48 ಲಭ್ಯತೆ ಸಾಧಿಸಿರುವುದರಿಂದ ಒಟ್ಟು ರೂ.23.21 ಕೋಟಿಗಳನ್ನು ಪ್ರೋತ್ಸಾಹ ಧನವನ್ನಾಗಿ (ಇನ್ಸೆಂಟೀವ್) ಪಡೆದಿದೆ.

**3. ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ (ಎ.ಪಿ.ಆರ್) ಅರ್ಜಿ:**

ಆರ್ಥಿಕ ವರ್ಷ 2020 ಕ್ಕೆ ಸಂಬಂಧಿಸಿದಂತೆ, ಕವಿಪ್ರನಿನಿಯ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಅರ್ಜಿಯನ್ನು ತಾತ್ಕಾಲಿಕ ವಾರ್ಷಿಕ ಲೆಕ್ಕ ಪತ್ರಗಳ ಹಾಗೂ ಆರ್ಥಿಕ ವರ್ಷ 2022ರ ಪ್ರಸರಣ ಜಕಾತಿಯ ಪರಿಷ್ಕರಣೆ ಆಧಾರದ ಮೇಲೆ ದಿನಾಂಕ: 30.11.2020 ರಂದು ಕೆಇಆರ್‌ಸಿಗೆ ಸಲ್ಲಿಸಿದೆ.

4. ಕವಿಪ್ರನಿನಿಯು, ಆರ್ಥಿಕ ವರ್ಷ 2020 ರ ತಾತ್ಕಾಲಿಕ ವಾರ್ಷಿಕ ಲೆಕ್ಕ ಪತ್ರಗಳ ಆಧಾರದ ಮೇಲೆ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ (ಎ.ಪಿ.ಆರ್) ಅರ್ಜಿಯಲ್ಲಿ ಕವಿಪ್ರನಿನಿಯು ವಾರ್ಷಿಕ ಆದಾಯದ ಅವಶ್ಯಕತೆ (ಎಆರ್‌ಆರ್) ರೂ.4,157.39 ಕೋಟಿಗಳನ್ನು ಅನುಮೋದಿಸಲು ಕೆಇಆರ್‌ಸಿಯನ್ನು ಮನವಿ ಮಾಡಿದೆ.

5. ವಿದ್ಯುತ್ ಸರಬರಾಜು ಕಂಪನಿಗಳಿಂದಾದ ಕಂದಾಯ ವಸೂಲಾತಿ ಕೊರತೆ ರೂ. 932.38 ಕೋಟಿಗಳನ್ನು (ಆಯೋಗದ ದಿನಾಂಕ:19.10.2020 ರ ಆದೇಶದಂತೆ ನಿಯಂತ್ರಣ ಆಸ್ತಿಯ ಕಡೆಗಿನ ಭೋಗ್ಯ ಮೊತ್ತ ರೂ.331.41 ಕೋಟಿ ಮತ್ತು ಮೆ॥ ತಣ್ಣೀರು ಬಾವಿ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ ವಿದ್ಯುತ್ ಖರೀದಿ ವೆಚ್ಚದ ಮೇಲೆ ಏಪ್ರಿಲ್ 2020 ರಿಂದ ಅಕ್ಟೋಬರ್ 2020 ರ ಅವಧಿಗೆ ವಿಧಿಸಿರುವ ಬಡ್ಡಿ ಮೊತ್ತ ರೂ.37.37 ಕೋಟಿ ಒಳಗೊಂಡಂತೆ) ಜೊತೆಗೆ ಆರ್ಥಿಕ ವರ್ಷ 2020 ರ ವಾರ್ಷಿಕ ಆದಾಯದ ಅವಶ್ಯಕತೆ ರೂ.563.60 ಕೋಟಿಗಳನ್ನು ವಿಸಕಂಗಳಿಂದ ದಿನಾಂಕ 01.04.2021 ರಿಂದ ವಸೂಲಿ ಮಾಡಿಕೊಳ್ಳಲು ಅನುಮೋದನೆ ಕೋರಿದೆ.

6. ಕವಿಪ್ರನಿನಿಯು ತನ್ನ ಪ್ರಸರಣ ಜಾಲದ ಲಭ್ಯತೆ (ಸಿಸ್ಟಮ್ ಅವ್ಯೆಲೆಬಿಲಿಟಿ) ಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಗದಿತ ಗುರಿ ಶೇಕಡ 98 ನ್ನು ಮೀರಿ ಶೇಕಡ 99.42 ಲಭ್ಯತೆ ಸಾಧಿಸಿರುವುದರಿಂದ ಪ್ರೋತ್ಸಾಹ ಧನವನ್ನು ಮಂಜೂರು ಮಾಡುವಂತೆ ಕೋರಿದೆ.

7. ಕವಿಪ್ರನಿನಿಯ ನಿಯಂತ್ರಣ ವ್ಯವಹಾರಗಳಿಗೆ ಸಂಬಂಧಿಸಿದ ವಿವಿಧ ಕಾನೂನು ಪ್ರಕರಣಗಳನ್ನು ನಿಯಂತ್ರಣ ವ್ಯವಹಾರಗಳು ಕಚೇರಿಯು ನಿರ್ವಹಿಸುತ್ತಿದ್ದು ಸದರಿ ಪ್ರಕರಣಗಳ ಆರ್ಥಿಕ ವರ್ಷ 2020–21 ರ ಅಂಕಿ ಅಂಶಗಳು ಈ ಕೆಳಕಂಡಂತಿದೆ.

| ನ್ಯಾಯಾಲಯಗಳು | ದಿ: 01.04.2020 ರಲ್ಲಿನ ಆರಂಭಿಕ ಪ್ರಕರಣಗಳ ಸಂಖ್ಯೆ | ಆರ್ಥಿಕ ವರ್ಷ 2020–21ರಲ್ಲಿ ಸೇರ್ಪಡೆಗೊಂಡ ಒಟ್ಟು ಪ್ರಕರಣಗಳು | ಆರ್ಥಿಕ ವರ್ಷ 202–21ರಲ್ಲಿ ವಿಲೇವಾರಿಗೊಂಡ ಒಟ್ಟು ಪ್ರಕರಣಗಳು | ದಿನಾಂಕ:31.03.2021 ರಂತೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|
| ಕೆ.ಇ.ಆರ್.ಸಿ | 52 | 19 | 23 | 48 |
| ಸಿ.ಇ.ಆರ್.ಸಿ | 13 | 1 | 5 | 9 |
| ಅಪ್ಪೇಲ್ | 42 | 6 | 9 | 39 |
| ಹೈ ಕೋರ್ಟ್ | 25 | 37 | 4 | 58 |
| ಸುಪ್ರೀಂ ಕೋರ್ಟ್ | 25 | 1 | 1 | 25 |
| | **157** | **64** | **42** | **179** |

### (16) ಮಾನವ ಸಂಪನ್ಮೂಲ ಅಭಿವೃದ್ಧಿ

ಕವಿಪ್ರನಿನಿ ಅಗತ್ಯ ಸೇವೆಗಳ ಸಂಸ್ಥೆಯಾಗಿರುವುದರಿಂದ ವಿದ್ಯುತ್ ಕ್ಷೇತ್ರದ ತಾಂತ್ರಿಕ ಮತ್ತು ಆರ್ಥಿಕ ಅಂಶಗಳಲ್ಲಿ ವೃತ್ತಿಪರ ಕೆಲಸವನ್ನು ನಿರಂತರವಾಗಿ ಜಾಗೃತಿವಹಿಸುವುದು ಮತ್ತು ನವೀಕರಿಸುವುದು ಅತ್ಯವಶ್ಯಕವಾಗಿರುತ್ತದೆ. ಕವಿಪ್ರನಿನಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿಯಲ್ಲಿ ಅಧಿಕಾರಿ/ ನೌಕರರುಗಳಿಗೆ ವಿದ್ಯುತ್ ಪ್ರಸರಣಾ ಮತ್ತು ವಿತರಣಾ ತರಬೇತಿಯ ಜೊತೆಗೆ ಪ್ರತಿಯೊಬ್ಬರ ಒಟ್ಟಾರೆ ಬೆಳವಣಿಗೆಗೂ ಅನುಕೂಲವಾಗುವಂತೆ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಹೂಡಿಯಲ್ಲಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವು ಸುಮಾರು 12 ಎಕರೆ ಪ್ರದೇಶದಲ್ಲಿ 9807 ಚದರ ಮೀಟರ್ ವಿಸ್ತೀರ್ಣ ಕಟ್ಟಡವನ್ನು ಹೊಂದಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವು ಬೆಂಗಳೂರಿನ ಐಟಿ ಹಬ್‌ನಿಂದ ಸುತ್ತುವರಿದು ವೈಟ್ ಫೀಲ್ಡ್ ರಸ್ತೆಯ ಹೂಡಿ ರೈಲ್ವೇ ನಿಲ್ದಾಣದ ಬಳಿಯಿದೆ. ಕೇಂದ್ರವು ಶೀಘ್ರದಲ್ಲೇ ಮೆಟ್ರೋ ಸಂಪರ್ಕವನ್ನು ಹೊಂದಲಿದ್ದು, ನಗರದ ಮೂಲೆ ಮೂಲೆಗಳಿಗೆ ಪ್ರಯಾಣಿಸಲು ಅನುಕೂಲವಾಗುತ್ತದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವು ಈ ಕೆಳಗಿನ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

- ➢ 6 ತರಬೇತಿ ಕೊಠಡಿಗಳಿದ್ದು, ಪ್ರತಿ ಕೊಠಡಿಯಲ್ಲಿ 50 ಶಿಕ್ಷಣಾರ್ಥಿಗಳಿಗೆ ಸ್ಥಳಾವಕಾಶವಿರುತ್ತದೆ.
- ➢ 2 ವಸತಿ ಸಂಕೀರ್ಣಗಳಿದ್ದು, ಪ್ರತಿ ಸಂಕೀರ್ಣದಲ್ಲಿ 50 ಶಿಕ್ಷಣಾರ್ಥಿಗಳಿಗೆ ಸ್ಥಳಾವಕಾಶವಿರುತ್ತದೆ.
- ➢ ಒಳಾಂಗಣ ಉಪಹಾರ ಗೃಹದ ಸೌಕರ್ಯ
- ➢ ಯೋಗ ಮಂದಿರ
- ➢ ಒಳಾಂಗಣ ಕ್ರೀಡಾ ಕೊಠಡಿಗಳು
- ➢ ಒಳಾಂಗಣ ಷಟಲ್ ಬ್ಯಾಡ್ಮಿಂಟನ್ ಆವರಣ
- ➢ ದೊಡ್ಡ ಹೊರಾಂಗಣ ಕ್ರೀಡಾ ಪ್ರದೇಶ
- ➢ ಗ್ರಂಥಾಲಯ

## ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ನಡೆಸಲಾಗುತ್ತಿರುವ ಕಾರ್ಯಕ್ರಮಗಳು

### 1. ಪ್ರವೇಶ (ಇಂಡಕ್ಷನ್) ತರಬೇತಿ/ ಉದ್ಯೋಗ ಪೂರ್ವ ತರಬೇತಿ ಕಾರ್ಯಕ್ರಮಗಳು:

ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಹೊಸದಾಗಿ ನೇಮಕಗೊಂಡ ಸಹಾಯಕ ಇಂಜಿನಿಯರ್/ ಸಹಾಯಕ ಲೆಕ್ಕಾಧಿಕಾರಿ/ ಕಿರಿಯ ಇಂಜಿನಿಯರ್/ ಸಹಾಯಕ/ ಕಿರಿಯ ಸಹಾಯಕರುಗಳಿಗೆ ಪ್ರವೇಶ (ಇಂಡಕ್ಷನ್)/ ಉದ್ಯೋಗ ಪೂರ್ವ ತರಬೇತಿಯನ್ನು ನಡೆಸಲಾಗುವುದು.

### 2. ಸೇವೆಯಲ್ಲಿರುವ ಕವಿಪ್ರನಿನಿ ನೌಕರರಿಗೆ ಪುನಶ್ಚೇತನಾ ತರಬೇತಿ ಕಾರ್ಯಕ್ರಮಗಳು:

- ಕವಿಪ್ರನಿನಿ ಮತ್ತು ಎಸ್ಕಾಂಗಳ ಎಲ್ಲಾ ವೃಂದದ ನೌಕರರಿಗೆ ನಿವೃತ್ತಿ ಪೂರ್ವ ತರಬೇತಿ ಕಾರ್ಯಕ್ರಮ.
- ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ಪುನಶ್ಚೇತನಾ ತರಬೇತಿ ಕಾರ್ಯಕ್ರಮ.
- ಸುರಕ್ಷತಾ ತರಬೇತಿ ಕಾರ್ಯಕ್ರಮಗಳು.
- ಮಹಿಳೆಯರಿಗೆ ಪ್ರತ್ಯೇಕ ತರಬೇತಿ ಕಾರ್ಯಕ್ರಮಗಳು.
- ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಗಳು.
- ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ರವರುಗಳಿಗೆ ಹೋಮ್ ಗಾರ್ಡ್ಸ್ ಹಲಸೂರು ರವರು ನಡೆಸಿಕೊಡುವ ಪ್ರಥಮ ಚಿಕಿತ್ಸಾ ಮತ್ತು ಅಗ್ನಿ ಶಮನ ತರಬೇತಿಗಳಿಗೆ ನಿಯೋಜನೆ.
- ಹೊಸದಾಗಿ ಬಡ್ತಿ ಹೊಂದಿದ ಸಹಾಯಕ ಇಂಜಿನಿಯರ್ ಮತ್ತು ಸಹಾಯಕ ಲೆಕ್ಕಾಧಿಕಾರಿ ರವರುಗಳಿಗೆ ಓರಿಯೆಂಟೇಷನ್ ತರಬೇತಿ ಕಾರ್ಯಕ್ರಮಗಳು.
- ಎಸ್.ಎ.ಎಸ್ ಪರೀಕ್ಷೆ ಬರೆಯುವ ನೌಕರರಿಗೆ ತರಬೇತಿ.
- ಲೆಕ್ಕ ಸಂಕಲನದ ಬಗ್ಗೆ ಲೆಕ್ಕ ತರಬೇತಿ ಕಾರ್ಯಕ್ರಮಗಳು.

### 3. ಕವಿಪ್ರನಿನಿಯ ಇನ್‌ಸರ್ವೀಸ್ ಅಧಿಕಾರಿ/ ನೌಕರರಿಗೆ ಬಾಹ್ಯ ತರಬೇತಿ:

ಭಾರತದ ಅತ್ಯುನ್ನತ ತರಬೇತಿ ಸಂಸ್ಥೆಗಳಾದ CPRI, ESCI, ASCI & CIRE (REC) ಹೈದರಾಬಾದ್, PMI(NTCP) ನೋಯಡಾ, PSTI, ಹಾಟ್ ಲೈನ್ ತರಬೇತಿ ಸಂಸ್ಥೆ, PRDCL & IIM ಬೆಂಗಳೂರು ರವರುಗಳು ಆಯೋಜಿಸುವ ಬಾಹ್ಯ ತರಬೇತಿಗಳಿಗೆ ಕವಿಪ್ರನಿನಿಯ ಇನ್‌ಸರ್ವೀಸ್ ಅಧಿಕಾರಿ/ ನೌಕರರನ್ನು ತೈನಾತಿಸಲಾಗುವುದು.

4. ಬಾಹ್ಯ ಎಂಜಿನಿಯರಿಂಗ್ ಪದವೀಧರರು/ ಡಿಪ್ಲೊಮೊ ಹೊಂದಿದ ವಿದ್ಯಾರ್ಥಿಗಳಿಗೆ/ ಪದವಿ/ ಸ್ನಾತಕೋತ್ತರ ಪದವೀಧರರಿಗೆ ತರಬೇತಿಗಳ:–

- ಅಪ್ರೆಂಟಿಸ್ ಕಾಯ್ದೆ ಪ್ರಕಾರ ಇಂಜಿನಿಯರಿಂಗ್ ನಲ್ಲಿ ಪದವಿ/ ಡಿಪ್ಲೊಮಾ ಹೊಂದಿದ ಅಭ್ಯರ್ಥಿಗಳನ್ನು BOATರವರ ಸಹಯೋಗದೊಡನೆ ಅರ್ಹತೆಗನುಸಾರ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಶಿಶುಕ್ಷು (Apprentice) ತರಬೇತಿಯನ್ನು ಕವಿಪ್ರನಿನಿ ವಿವಿಧ ಘಟಕಗಳಲ್ಲಿ ನೀಡಲಾಗುವುದು.

• ನಿಗಮದ ಆದೇಶದನ್ವಯ ಬಿ.ಇ (ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್) ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ಮ್ಯಾನೇಜ್‌ಮೆಂಟ್, ಫೈನಾನ್ಸ್, ಮಾರ್ಕೆಟಿಂಗ್ ಯಾವುದೇ ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳ ಕಾಲೇಜುಗಳಿಂದ ಇಂಟರ್ನ್‌ಶಿಪ್ ಮತ್ತು ಪ್ರಾಜೆಕ್ಟ್‌ಗಳಿಗೆ ಕೋರಿಕೆಗಳು ಬಂದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಕವಿಪ್ರನಿನಿಯ ಅಧಿಕಾರಿಗಳನ್ನು ಮಾರ್ಗದರ್ಶಕರನ್ನಾಗಿ ಗುರುತಿಸಿ ತರಬೇತಿಯನ್ನು ಪಡೆಯಲು ಅನುಮೋದನೆ ನೀಡಲಾಗುವುದು

## 5. 2020–21 ನೇ ಹಣಕಾಸು ವರ್ಷದಲ್ಲಿ ನಡೆಸಿದ ತರಬೇತಿ ಕಾರ್ಯಕ್ರಮಗಳು

| ಕ್ರ. ಸಂ | ತರಬೇತಿ ಕಾರ್ಯಕ್ರಮಗಳು | ತರಬೇತಿ ಪಡೆದ ತರಬೇತುದಾರರ ಸಂಖ್ಯೆ | ತರಬೇತಿ ನಡೆದ ದಿನಗಳು | ಷರಾ |
|---|---|---|---|---|
| 1 | ಹೊಸದಾಗಿ ನೇಮಕಗೊಂಡ ಕಿರಿಯ ಇಂಜಿನಿಯರ್‌ರವರುಗಳಿಗೆ ಉದ್ಯೋಗ ಪೂರ್ವ ತರಬೇತಿ | 48 | 60 | ಪಥ್ಯ ತರಬೇತಿ–30 ದಿನಗಳು<br>ಕ್ಷೇತ್ರ ತರಬೇತಿ–29 ದಿನಗಳು<br>ಅಂತಿಮ ಪರೀಕ್ಷೆ–1 ದಿನ |
| 2 | ಹೊಸದಾಗಿ ನೇಮಕಗೊಂಡ ಕಿರಿಯ ಸಹಾಯಕ ರವರುಗಳಿಗೆ ಉದ್ಯೋಗ ಪೂರ್ವ ತರಬೇತಿ | 148 | 28 | ಪಥ್ಯ ತರಬೇತಿ–28 ದಿನಗಳು |
| 3 | ಬಡ್ತಿ ಹೊಂದಿದ ಸಹಾಯಕ ಲೆಕ್ಕಾಧಿಕಾರಿ ರವರುಗಳಿಗೆ ಓರಿಯೆಂಟೇಷನ್ ತರಬೇತಿ | 36 | 05 | ಪಥ್ಯ ತರಬೇತಿ–5 ದಿನಗಳು |
| 4 | ಬಾಹ್ಯ ತರಬೇತಿಗಳಿಗೆ ನಿಯೋಜನೆ | *342 | 3–5 ದಿನಗಳು | ಪಥ್ಯ ತರಬೇತಿ–3–5 ದಿನಗಳು ವೇಳಾಪಟ್ಟಿಯಂತೆ |
| ಒಟ್ಟು | | **574** | | |

ಟಿಪ್ಪಣಿ: *342 ಬಾಹ್ಯ ತರಬೇತಿ ನಿಯೋಜಿತ ತರಬೇತುದಾರರಲ್ಲಿ, 309 ತರಬೇತುದಾರರನ್ನು ಆನ್‌ಲೈನ್ ತರಬೇತಿಗೆ ನಿಯೋಜಿಸಲಾಗಿದೆ.

## 6. 2021–22 ನೇ ಸಾಲಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ನಡೆಯುತ್ತಿರುವ ಮತ್ತು ಪ್ರಸ್ತಾವಿತ ತರಬೇತಿಗಳು

| ಕ್ರ. ಸಂ | ಹುದ್ದೆ | ತಂಡ | ನಿಯುಕ್ತಿಗೊ–ಳಿಸಿದ ಶಿಕ್ಷಣಾ–ರ್ಥಿಗಳು | ತರಬೇತಿಯ ಅವಧಿ | ಪ್ರಾರಂಭದ ದಿನ | ಪಥ್ಯ ತರಬೇತಿಯ ಅಂತ್ಯ | ಕ್ಷೇತ್ರ ತರಬೇತಿಯ ಅಂತ್ಯ |
|---|---|---|---|---|---|---|---|
| 1 | ಸಹಾಯಕ ಇಂಜಿನಿಯರ್(ವಿ)/ ಕಿರಿಯ ಇಂಜಿನಿಯರ್(ವಿ) | ತಂಡ–1 | 60 | 60 | 12.07.2021 | 18.08.2021 (ಆನ್ ಲೈನ್) | 28.09.2021 |
| | | ತಂಡ–2 | 51 | 60 | 23.08.2021 | 30.09.2021 | 18.11.2021 |
| 2 | ಸಹಾಯಕರು | ತಂಡ–1 | 49 | 42 | 04.10.2021 | 26.11.2021 | – |
| | | ತಂಡ–2 | 66 | 42 | 13.12.2021 | 04.02.2022 | – |
| | | ತಂಡ–3 | 66 | 42 | 13.12.2021 | 04.02.2022 | – |
| | | ತಂಡ–4 | 67 | 42 | 13.12.2021 | 04.02.2022 | – |

| | | | | | | | |
|---|---|---|---|---|---|---|---|
| | | ತಂಡ–5 | 67 | 42 | 13.12.2021 | 04.02.2022 | – |
| | | ತಂಡ–6 | 66 | 42 | 14.02.2022 | 06.04.2022 | – |
| 3 | ಕಿರಿಯ ಸಹಾಯಕರು/ ದಫ್ತರಿ | ತಂಡ–1 | 50 | 28 | 12.07.2021 | 16.08.2021 | ಮುಕ್ತಾಯಗೊಂಡಿದೆ (ಆನ್ ಲೈನ್) |
| | | ತಂಡ–2 | 48 | 28 | 23.08.2021 | 28.09.2021 | – |
| | | ತಂಡ–3 | 50 | 28 | 11.04.2022 | 13.05.2022 | – |

**7. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕೈಗೊಳ್ಳಬೇಕಾದ ಹೊಸ ತಂತ್ರಜ್ಞಾನ/ ಆವಿಷ್ಕಾರದ ವಿವರಗಳು:–**

➢ ಕವಿಪ್ರನಿನಿ ಮತ್ತು ಎಸ್ಕಾಂಗಳ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನಕ್ಕಾಗಿ, ಕವಿಪ್ರನಿನಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಹಿರಿಯ ಅಧಿಕಾರಿಗಳನ್ನೊಳಗೊಂಡ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ ರಚನೆಗೆ ಕವಿಪ್ರನಿನಿ ಮಂಡಳಿಯು ಅನುಮೋದನೆ ನೀಡಿದೆ.

➢ ರಾಷ್ಟ್ರೀಯ ತರಬೇತಿ ನೀತಿಗೆ ಅನುಗುಣವಾಗಿ ಪ್ರತಿ ಉದ್ಯೋಗಿಗೆ ವರ್ಷಕ್ಕೆ ಕನಿಷ್ಠ 48 ಗಂಟೆಗಳ ತರಬೇತಿಯನ್ನು ನೀಡಲು, ಪ್ರತಿ ಉದ್ಯೋಗಿಯ ಗ್ರಹಿಕೆ ಮತ್ತು ಸಾಮರ್ಥ್ಯದ ಮಟ್ಟಕ್ಕೆ ಅನುಗುಣವಾಗಿ ವಿವಿಧ ತರಬೇತಿಗಳನ್ನು ನೀಡಲು ಮತ್ತು ಅಂತಹ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಲು ಈ ಕೆಳಗಿನ ವಿಧಾನವನ್ನು ಅಳವಡಿಸಿಕೊಳ್ಳಲು ಯೋಜಿಸಲಾಗಿದೆ.

a. ತಾಂತ್ರಿಕ, ಹಣಕಾಸು ಮತ್ತು ಆಡಳಿತ ತಜ್ಞರಾದ ಮೆ॥ ಸಿಪಿಆರ್ಐ, ಮೆ॥ ಐಐಎಸ್‌ಸಿ, ಮೆ॥ಸಿಇಎಸ್‌ಸಿ, ಮೆ॥ಪಿಎಸ್‌ಟಿಐಮೆ॥ IIM ಬೆಂಗಳೂರು, ಮೆ॥ ಹಣಕಾಸು ನೀತಿ ಸಂಸ್ಥೆ & ಮೆ॥. ಐಸಿಎಐ, ಬೆಂಗಳೂರು ಮುಂತಾದರವರುಗಳ ಜೊತೆ MOU ಮಾಡಿಕೊಳ್ಳಲು.

b. ಈ ಕೆಳಗಿನ ಪ್ರಯೋಗಾಲಯಗಳನ್ನು ಪರಿಕಲ್ಪನೆ ಮಾಡಲು ಯೋಜನೆಯನ್ನು ರೂಪಿಸಲಾಗಿದೆ

- ಪ್ರದರ್ಶನ ಲ್ಯಾಬ್
- ಪ್ರಾಯೋಗಿಕ ಪ್ರದರ್ಶನ ಪ್ರಯೋಗಾಲಯ
- ಡಿಜಿಟಲ್ ಲೈಬ್ರರಿ

**8. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕೆಳಗಿನ ಮೂಲಸೌಕರ್ಯ ಕೆಲಸಗಳು ಪ್ರಸ್ತುತ ಕಾರ್ಯರೂಪದಲ್ಲಿದೆ.**

- ಹೊಸದಾಗಿ 400 ರಿಂದ 500 ಜನ ಕುಳಿತುಕೊಳ್ಳಲು ಸ್ಥಳಾವಕಾಶವಿರುವ ವಿವಿದೊದ್ದೇಶ ಸಭಾಂಗಣ.
- 200 ಶಿಕ್ಷಣಾರ್ಥಿಗಳು ಇರಲು ಅಧಿಕ ವಸತಿ ಗೃಹ ಮತ್ತು ಇದರಲ್ಲಿ 20–25 ಅಧಿಕಾರಿಗಳಿಗೆ ಎಕ್ಸಿಕ್ಯೂಟಿವ್ ಹಾಸ್ಟೆಲ್ ಬ್ಲಾಕ್ ಸಹಾ ಒಳಗೊಂಡಿದೆ.
- ಆಂಫಿ ಥಿಯೇಟರ್.
- ಪ್ರದರ್ಶನ ಪ್ರಯೋಗಾಲಯ

**9. ಈ ಕೆಳಕಂಡ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು.**

- ಹಾಲಿ ಇರುವ ತರಬೇತಿ ಕೊಠಡಿಗಳಲ್ಲಿ, ಒಂದು ತರಗತಿಯ ಕೊಠಡಿಯನ್ನು ಕಾರ್ಯಕಾರಿ ಸಮ್ಮೇಳನ ಸಭಾಂಗಣವನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ.
- ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಹೂಡಿಯಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಒದಗಿಸುವುದು.
- ಪ್ರದರ್ಶನ ಪ್ರಯೋಗಾಲಯ.
- ಡಿಜಿಟಲ್ ಗ್ರಂಥಾಲಯ.
- ಕಂಪ್ಯೂಟರ್ ಲ್ಯಾಬ್.
- ಕವಿಪ್ರನಿನಿ/ಎಸ್ಕಾಂಗಳಲ್ಲಿ ತರಬೇತಿ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಸುಲಭಗೊಳಿಸಲು ತರಬೇತಿ ನಿರ್ವಹಣಾ ಮಾಹಿತಿ ವ್ಯವಸ್ಥೆಯನ್ನು (TMIS) ಅಭಿವೃದ್ಧಿಪಡಿಸುವುದು.

**(17) ಆಂತರಿಕ ಪರಿಶೋಧನಾ ಘಟಕ**

i. ನಿಗಮದಿಂದ ಕಾಲಕಾಲಕ್ಕೆ ಆದೇಶಿಸಲ್ಪಡುವ ಸುತ್ತೋಲೆಗಳು, ಜಾರಿಯಲ್ಲಿರುವ ನಿಬಂಧನೆಗಳು, ಲೆಕ್ಕ ಸಂಪುಟ ಹಾಗೂ ಆಂತರಿಕ ಪರಿಶೋಧನಾ ಕೈಪಿಡಿ ಪ್ರಕಾರ ಆಂತರಿಕ ಪರಿಶೋಧನೆ ಕಾರ್ಯವು ಆರ್ಥಿಕ ಸಲಹೆಗಾರರ (ಆಂ.ಪ) ರವರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ನೀಡಲ್ಪಟ್ಟ ಪರಿಶೋಧನಾ ವಿಚಾರಣೆ/ಟಿಪ್ಪಣಿ, ಹೆಚ್ಚುವರಿ ಪಾವತಿ/ನಿಯಮ ಬಾಹಿರ ವೆಚ್ಚ ಇವುಗಳನ್ನು ಸಂಬಂಧಿತ (ಆಡಿಟ್ ವಿಚಾರಣೆಗಳ/ಟಿಪ್ಪಣಿ) ನಿಗಮದ ಕಛೇರಿಯ ಮುಖ್ಯಸ್ಥರೊಂದಿಗೆ ಸಮಾಲೋಚಿಸಿದ ನಂತರ ಇತ್ಯರ್ಥಗೊಳಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ವಿಭಾಗವಾರು ಕಾರ್ಯ ಚಟುವಟಿಕೆಯ ವಿವರಗಳನ್ನು ಕಾಲಕಾಲಕ್ಕೆ ಕ್ರೋಢಿಕರಿಸಿ ಕಾರ್ಯಾಧಾರಿತ ಪ್ರಗತಿಯ ವರದಿಯನ್ನು ಸಲ್ಲಿಸಲಾಗುತ್ತಿದೆ.

**II ಆರ್ಥಿಕ ವರ್ಷದ 2020-21 ರ ಆಂತರಿಕ ಪರಿಶೋಧನಾ ವಿಭಾಗದ ಸಾಧನೆಗಳು ಹಾಗೂ ಮುಖ್ಯವಾಗಿ ಅವಲೋಕಿಸಿದ ವಿಷಯಗಳ ಸಂಕ್ಷಿಪ್ತ ವಿವರಗಳು :**

(1) ಕೇಂದ್ರ ಖರೀದಿ ಸಭೆಯ ಮುಂದೆ ಮಂಡಿಸಲಾದ ಖರೀದಿ ಹಾಗೂ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಗಮ ಕಾರ್ಯಾಲಯದ ಆಂತರಿಕ ಪರಿಶೋಧನೆಯಿಂದ 169 ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿರುತ್ತದೆ. ವಲಯ ಮಟ್ಟದಲ್ಲಿನ ಸದರಿ ವಿಷಯದ ಪ್ರಸ್ತಾವನೆಗಳನ್ನು ಪ್ರಸರಣ ವಲಯದ ಉಪ ಲೆಕ್ಕ ನಿಯಂತ್ರಣಾಧಿಕಾರಿ (ಆಂ.ಪ) ರವರು ಪರಿಶೀಲಿಸಿ ಆಂತರಿಕ ಪರಿಶೋಧನೆ ಅಭಿಪ್ರಾಯ ನೀಡಿರುತ್ತಾರೆ

(2) ಆರ್ಥಿಕ ವರ್ಷ 2020-21 ರಲ್ಲಿ ಒಟ್ಟು ರೂ.9.09 ಕೋಟಿಯಷ್ಟು [ರೂ.2.35 ಕೋಟಿ ದರ ವ್ಯತ್ಯಾಸದ ಬಿಲ್ಲುಗಳು (Price Variation bill) ಒಳಗೊಂಡಂತೆ] ಹೆಚ್ಚುವರಿ ಕ್ಲೇಮ್ ಮಾಡಿರುವ ಮೊತ್ತವನ್ನು ಆಂತರಿಕ ಪರಿಶೋಧನೆಯ ಪೂರ್ವ ತನಿಖೆಯ ಸಮಯದಲ್ಲಿ ಕಂಡುಹಿಡಿಯಲಾಗಿದ್ದು, ಇದರಲ್ಲಿ ರೂ. 8.37 ಕೋಟಿಯಷ್ಟು ಮೊತ್ತವನ್ನು ವಸೂಲಿ ಮಾಡಲಾಗಿದೆ.

(3) ಉಗ್ರಾಣದ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ ಅಂತರಿಕ ಪರಿಶೋಧನಾ ವಿಭಾಗದಿಂದ ನಿರಂತರ ವರದಿ ಮಾಡಿದ ಪರಿಣಾಮ, ಆರ್ಥಿಕ ವರ್ಷ 2020-21ರಲ್ಲಿ ಒಟ್ಟು ರೂ. 11.72ಕೋಟಿಯಷ್ಟು ಮೊತ್ತದ ರದ್ದಿ ಸಾಮಗ್ರಿಗಳನ್ನು ಮಾರಾಟ ಮಾಡಲಾಗಿರುತ್ತದೆ.

(4) ಆಂತರಿಕ ಪರಿಶೋಧನೆಯ ಮೇಲ್ವಿಚಾರಣೆಯಿಂದ ಆರ್ಥಿಕ ವರ್ಷ 2020-21 ರಲ್ಲಿ ರೂ. 11.91 ಕೋಟಿಯಷ್ಟು ವಸತಿ

ಸಮುಚ್ಚಾಯಗಳ ಬಾಡಿಗೆ ಹಾಗೂ **ರೂ. 9.66 ಕೋಟಿ**ಯಷ್ಟು ಕಛೇರಿ ಕಟ್ಟಡಗಳ ಬಾಡಿಗೆಯನ್ನು ಟಿ.ಎಲ್&ಎಸ್.ಎಸ್ ವಿಭಾಗಗಳಲ್ಲಿ ಬೇಡಿಕೆ ಮಾಡಲಾಗಿದ್ದು, ಕ್ರಮವಾಗಿ **ರೂ.11.82 ಕೋಟಿ** ಹಾಗೂ **ರೂ.9.20 ಕೋಟಿ** ಮೊತ್ತ ವಸೂಲಿ ಆಗಿರುತ್ತದೆ.

(5) ಆರ್ಥಿಕ ವರ್ಷ 2020–21ರ ಅವಧಿಯಲ್ಲಿ ವಿವಿಧ ಸಾಮಗ್ರಿ ಸರಬರಾಜು ಮತ್ತು ಕಾಮಗಾರಿ ಬಿಲ್ಲುಗಳಲ್ಲಿ ಒಟ್ಟು **ರೂ.** 1.21 ಕೋಟಿಯಷ್ಟು ದಂಡ (Penalty) ವನ್ನು ಕಡಿಮೆ ಲೆಕ್ಕಚಾರ ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡುಹಿಡಿಯಲಾಗಿದೆ.

(6) ಆರ್ಥಿಕ ವರ್ಷ 2020–21ರಲ್ಲಿ ಒಟ್ಟು **ರೂ 65.9 ಲಕ್ಷ**ದಷ್ಟು ಮೊತ್ತವನ್ನು ಅಂತಿಮ ಪರಿಮಾಣ ವ್ಯತ್ಯಾಸದ ಏರಿಳಿತ ಪಟ್ಟಿಯಲ್ಲಿ (Final Quantity Variation Bill) ಹೆಚ್ಚುವರಿಯಾಗಿ ಕ್ಲೇಮ್ ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡುಹಿಡಿಯಲಾಗಿದೆ.

(7) ನಿಗಮದಲ್ಲಿ ಸಿಬ್ಬಂದಿಗೆ ಸಂಬಂಧಪಟ್ಟ ಸೇವಾ ನಿಯಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅಭಿಪ್ರಾಯಗಳನ್ನು ನಿಗಮ ಮಟ್ಟದಲ್ಲಿ ಹಾಗೂ ಇತರೆ ಕಛೇರಿಗಳಲ್ಲಿ ಕೋರುತ್ತಿದ್ದು, ಕಾಲಕಾಲಕ್ಕೆ ನಿಯಮಗಳನ್ವಯ ಸೂಕ್ತ ಅಭಿಪ್ರಾಯವನ್ನು ನೀಡಲಾಗುತ್ತಿದೆ. ಅಧಿಕಾರಿಗಳ/ಸಿಬ್ಬಂದಿ ವೇತನ ನಿಗದೀಕರಣ, ಅಂತಿಮ ಗಳಿಕೆ ರಜಾ ಲೆಕ್ಕಚಾರ, ವೈದ್ಯಕೀಯ ವೆಚ್ಚಗಳ ಪಾವತಿ ಹಾಗೂ ಇತರೆ ಸಿಬ್ಬಂದಿ ವೆಚ್ಚ ಪಾವತಿಗಳಲ್ಲಿ ಆರ್ಥಿಕ ವರ್ಷ 2020–21ರಲ್ಲಿ ಆಂತರಿಕ ಪರಿಶೋಧನಾ ವಿಭಾಗವು ಪರಿಶೀಲಿಸಿ **ರೂ.70.74 ಲಕ್ಷ**ದಷ್ಟು ಹೆಚ್ಚುವರಿ ಪಾವತಿಯನ್ನು ಕಂಡುಹಿಡಿಯಲಾಗಿದೆ.

(8) ಕವಿಪ್ರನಿನಿ ವತಿಯಿಂದ ಉಪ ಕೇಂದ್ರಗಳನ್ನು ಹಾಗೂ ಪ್ರಸರಣ ಮಾರ್ಗಗಳನ್ನು ನಿರ್ಮಾಣ ಮಾಡುವಾಗ ಭೂ ಪರಿಹಾರ, ಬೆಳೆ ಪರಿಹಾರವನ್ನು ನಷ್ಟಗೊಳಗಾದ ವ್ಯಕ್ತಿಗಳಿಗೆ ನೀಡುತ್ತಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಂತರಿಕ ಪರಿಶೋಧನೆಯಿಂದ ಒಟ್ಟಾರೆ **ರೂ.85.75 ಲಕ್ಷ**ದಷ್ಟು ತಪ್ಪಾಗಿ ಲೆಕ್ಕಾಚಾರ ಮಾಡಿರುವುದನ್ನು ಆಂತರಿಕ ಪರಿಶೋಧನೆಯಿಂದ ಪರಿಶೀಲಿಸಿ ಹೆಚ್ಚುವರಿ ಪಾವತಿಯನ್ನು ತಡೆಗಟ್ಟಲಾಗಿದೆ.

(9) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಸ್.ಎಲ್.ಡಿ.ಸಿ ಕಛೇರಿಯ ಮುಕ್ತ ಪ್ರವೇಶಾಧಿಕಾರ ವಹಿವಾಟುಗಳಿಗೆ (Open Access) ಹಾಗೂ ವೀಲಿಂಗ್ ಎನರ್ಜಿ ಬಿಲ್ಲುಗಳಿಗೆ ಸಂಬಂಧಿಸಿದಂತೆ, ಒಟ್ಟಾರೆ **ರೂ.76.60 ಲಕ್ಷ**ದಷ್ಟು ತಪ್ಪಾಗಿ ಬಿಲ್ಲು ಮಾಡಿರುವುದನ್ನು ಆಂತರಿಕ ಪರಿಶೋಧನೆಯಲ್ಲಿ ಕಂಡು ಹಿಡಿದು ಸರಿಪಡಿಸಲಾಗಿದೆ.

III 2020–21ನೇ ಸಾಲಿನ ಆಂತರಿಕ ಪರಿಶೋಧನೆಯ ಪ್ರಗತಿಯ ಹೆಚ್ಚುವರಿ ಪಾವತಿ/ ನಿಯಮಬಾಹಿರ ವೆಚ್ಚದ ಮತ್ತು ಆಡಿಟ್ ವರದಿಗಳ ಸಾರಾಂಶದ ವಿವರಗಳನ್ನು ಕೆಳಗಿನ ವಿವರಣಾ ಪಟ್ಟಿಯಲ್ಲಿ ಗಮನಿಸಬಹುದಾಗಿದೆ. ವಲಯವಾರು ವಿವರವನ್ನು ಅನುಬಂಧಗಳಲ್ಲಿ ತೋರಿಸಲಾಗಿದೆ.

| **ಹೆಚ್ಚುವರಿ ಪಾವತಿಯ ವಿವರಗಳು (ರೂ. ಲಕ್ಷಗಳಲ್ಲಿ)** | | | | |
|---|---|---|---|---|
| ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ವಸೂಲಾದ ಮೊತ್ತ | ಅಂತಿಮ ಬಾಕಿ |
| **43.97** | **908.62** | **952.59** | **836.94** | **115.65** |
| | | | | |

| ನಿಯಮ ಬಾಹಿರವಾದ ವೆಚ್ಚದ ವಿವರಗಳು | | | | (ರೂ. ಲಕ್ಷಗಳಲ್ಲಿ) |
|---|---|---|---|---|
| ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ಸಕ್ರಮಗೊಳಿಸಿದ ಮೊತ್ತ | ಅಂತಿಮ ಬಾಕಿ |
| **21.25** | **217.18** | **238.43** | **224.48** | **13.95** |
| | | | | |
| **ಆಡಿಟ್ ಪ್ಯಾರಗಳ ವಿವರಗಳು** | | | | **ಸಂಖ್ಯೆಗಳಲ್ಲಿ** |
| ಪ್ರಾರಂಭದ ಆಡಿಟ್ ಪ್ಯಾರಗಳ ವಿವರ | ಆಡಿಟ್ ಪ್ಯಾರಗಳ ನೀಡಿದ ವಿವರ | ಒಟ್ಟು | ಅಡಿಟ್ ಪ್ಯಾರಗಳಿಗೆ ಉತ್ತರ ಪಡೆದ ವಿವರ | ಬಾಕಿ ಉಳಿದ ಆಡಿಟ್ ಪ್ಯಾರಗಳು |
| **306** | **1602** | **1908** | **1689** | **219** |

**ವಲಯವಾರು ವಿವರಗಳು ಈ ಕೆಳಕಂಡಂತಿದೆ**

**ಆರ್ಥಿಕ ವರ್ಷ 2020-21 ರಲ್ಲಿ ಆಡಿಟ್ ಪ್ಯಾರಗಳ ವಿವರಗಳು**

| ಕ್ರ. ಸಂ. | ವಲಯ ಕಛೇರಿ ಹೆಸರು | ಪ್ರಾರಂಭದ ಆಡಿಟ್ ಪ್ಯಾರಗಳ ಬಾಕಿ | ಆರ್ಥಿಕ ವರ್ಷದಲ್ಲಿ ನೀಡಲಾದ ಆಡಿಟ್ ಪ್ಯಾರಗಳ ಸಂಖ್ಯೆ | ಒಟ್ಟು | ಆರ್ಥಿಕ ವರ್ಷದಲ್ಲಿ ಉತ್ತರ ಪಡೆಯಲಾದ ಆಡಿಟ್ ಪ್ಯಾರಗಳ ಸಂಖ್ಯೆ | ಬಾಕಿ ಉಳಿದ ಆಡಿಟ್ ಪ್ಯಾರಗಳು |
|---|---|---|---|---|---|---|
| 1 | ಬೆಂಗಳೂರು | 30 | 324 | 354 | 340 | 14 |
| 2 | ತುಮಕೂರು | 4 | 407 | 411 | 410 | 1 |
| 3 | ಕಲಬುರಗಿ | 57 | 115 | 172 | 120 | 52 |
| 4 | ಮೈಸೂರು | 63 | 126 | 189 | 127 | 62 |
| 5 | ಹಾಸನ | 52 | 257 | 309 | 261 | 48 |
| 6 | ಬಾಗಲಕೋಟೆ | 86 | 270 | 356 | 322 | 34 |
| 7 | ಕೇಂದ್ರ ಕಛೇರಿ | 8 | 87 | 95 | 94 | 1 |
| 8 | ಎಸ್.ಎಲ್.ಡಿ.ಸಿ | 6 | 16 | 22 | 15 | 7 |
| | **ಒಟ್ಟು** | **306** | **1602** | **1908** | **1689** | **219** |

**ಆರ್ಥಿಕ ವರ್ಷ 2020-21 ರಲ್ಲಿ ಹೆಚ್ಚುವರಿ ಪಾವತಿಯ ವಿವರಗಳು** (ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಲಯ ಕಛೇರಿ ಹೆಸರು | ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ವಸೂಲಾದ ಮೊತ್ತ | ಅಂತಿಮ ಬಾಕಿ |
|---|---|---|---|---|---|---|
| 1 | ಬೆಂಗಳೂರು | 0.88 | 471.07 | 471.95 | 471.84 | 0.11 |
| 2 | ತುಮಕೂರು | 0.43 | 131.45 | 131.88 | 131.59 | 0.29 |
| 3 | ಕಲಬುರಗಿ | 10.16 | 17.51 | 27.67 | 19.35 | 8.33 |
| 4 | ಮೈಸೂರು | 1.88 | 20.19 | 22.07 | 15.86 | 6.21 |

| | | | | | | |
|---|---|---|---|---|---|---|
| 5 | ಹಾಸನ | 24.16 | 84.70 | 108.86 | 93.69 | 15.16 |
| 6 | ಬಾಗಲಕೋಟೆ | 1.59 | 34.80 | 36.39 | 35.92 | 0.47 |
| 7 | ಕೇಂದ್ರ ಕಛೇರಿ | 2.95 | 70.56 | 73.51 | 65.53 | 7.98 |
| 8 | ಎಸ್.ಎಲ್.ಡಿ.ಸಿ | 1.92 | 78.34 | 80.26 | 3.16 | 77.09 |
| | **ಒಟ್ಟು** | **43.97** | **908.62** | **952.59** | **836.94** | **115.65** |

**ಅರ್ಥಿಕ ವರ್ಷ 2020–21 ರಲ್ಲಿ ನಿಯಮಬಾಹಿರವಾದ ವೆಚ್ಚದ ವಿವರಗಳು (ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ವಲಯ ಕಛೇರಿ ಹೆಸರು | ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ಸಕ್ರಮಗೊಳಿಸಿದ ಮೊತ್ತ | ಅಂತಿಮ ಬಾಕಿ |
|---|---|---|---|---|---|---|
| 1 | ಬೆಂಗಳೂರು | 2.63 | 18.76 | 21.39 | 13.37 | 8.02 |
| 2 | ತುಮಕೂರು | 9.07 | 166.86 | 175.93 | 175.93 | 0.00 |
| 3 | ಕಲಬುರಗಿ | 0.41 | 0.01 | 0.42 | 0.42 | 0.00 |
| 4 | ಮೈಸೂರು | 6.42 | 9.20 | 15.62 | 11.63 | 3.99 |
| 5 | ಹಾಸನ | 0.72 | 11.14 | 11.86 | 11.03 | 0.83 |
| 6 | ಬಾಗಲಕೋಟೆ | 2.00 | 10.76 | 12.76 | 11.95 | 0.81 |
| 7 | ಕೇಂದ್ರ ಕಛೇರಿ | 0.00 | 0.00 | 0.00 | 0.00 | 0.00 |
| 8 | ಎಸ್.ಎಲ್.ಡಿ.ಸಿ | 0.00 | 0.45 | 0.45 | 0.15 | 0.30 |
| | **ಒಟ್ಟು** | **21.25** | **217.18** | **238.43** | **224.48** | **13.95** |

**(18) ನಿಯಂತ್ರಣಾಧಿಕಾರಿ (ಲೆಕ್ಕಗಳು, ಪಿಂಚಣಿ ಮತ್ತು ಮುಂಗಡ) ರವರ ಶಾಖೆ**

1. ಆರ್ಥಿಕ ಸಲಹೆಗಾರರು (ಎನ್‌ಡಿಸಿಪಿಎಸ್) ರವರ ನಿಯಂತ್ರಣದಲ್ಲಿ ಪಿಂಚಣಿ ಮತ್ತು ಮುಂಗಡ ಶಾಖೆಯು ಕಾರ್ಯ ನಿರ್ವಹಿಸುತ್ತಿದೆ.

2. ಆರ್ಥಿಕ ವರ್ಷ 2020–21 ರಲ್ಲಿ 'ಎ' ಮತ್ತು 'ಬಿ' ಪದವೃಂದ 124 ಅಧಿಕಾರಿಗಳು ನಿವೃತ್ತಿ ಹೊಂದಿದ್ದು, 2020–21ರಲ್ಲಿ 82 ಪ್ರಕರಣಗಳನ್ನು ಒಳಗೊಂಡಂತೆ ಮತ್ತು ಹಿಂದಿನ ಆರ್ಥಿಕ ಸಾಲಿಗೆ ಸಂಬಂಧಿಸಿದಂತೆ 49 ಪ್ರಕರಣಗಳು ಒಟ್ಟು 131 ಪಿಂಚಣಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ.

3. 2020–21 ಆರ್ಥಿಕ ವರ್ಷದಲ್ಲಿ ಪಿಂಚಣಿ ಮತ್ತು ಮುಂಗಡ ಶಾಖೆಯಲ್ಲಿ ಕುಟುಂಬ ಪಿಂಚಣಿಗೆ ಸಂಬಂಧಿಸಿದಂತೆ 664 ಕುಟುಂಬ ಪಿಂಚಣಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ.

4. ಪಿಂಚಣಿ ಪಾವತಿಯಲ್ಲಿ 200 ರೂಪಾಯಿಗಳನ್ನು ಕಳೆದು ಅದನ್ನು ಪಿಂಚಣಿದಾರರ ಭದ್ರತಾ ನಿಧಿಗೆ ಜಮೆ ಮಾಡಿ ಅದರಿಂದ ರೂ. 30000 / 75000 ರೂ.ಗಳನ್ನು ನಿಧನರಾದ ಪಿಂಚಣಿದಾರರ ಫಲಾನುಭವಿಗಳಿಗೆ ನೀಡಲಾಗುವುದು. 2020–21 ಆರ್ಥಿಕ ವರ್ಷದಲ್ಲಿ, 1217 ಪಿಎಸ್‌ಎಫ್ ಪ್ರಕರಣಗಳನ್ನು ಸ್ವೀಕರಿಸಲಾಗಿದ್ದು, 606 ಪಿಂಚಣಿ ಭದ್ರತಾ ನಿಧಿ ಹಿಂದಿನ ವರ್ಷಗಳ ಪ್ರಕರಣಗಳನ್ನೂ ಒಳಗೊಂಡಂತೆ ಪಿಂಚಣಿ ಮತ್ತು ಮುಂಗಡ ಶಾಖೆಯಿಂದ ಇತ್ಯರ್ಥಗೊಳಿಸಲಾಗಿದೆ.

**(19) ಆರ್ಥಿಕ ವರ್ಷ 2020-21 ನೇ ಸಾಲಿನಲ್ಲಿ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ) ರವರು ಹೊರಡಿಸಲಾದ ಮುಖ್ಯವಾದ ಆದೇಶಗಳು/ ಸುತ್ತೋಲೆಗಳು:**

| ಕ್ರ.ಸಂ | ಆದೇಶಗಳು/ ಸುತ್ತೋಲೆಗಳ ಸಂಖ್ಯೆ/ ದಿನಾಂಕ | ವಿಷಯ |
|---|---|---|
| 1 | ಸಂಖ್ಯೆ: ಕವಿಪ್ರನಿನಿ/ಬಿ16/9457/2019-20, ದಿನಾಂಕ: 11.04.2020 | ಆರೋಗ್ಯ ಸೇತು ಕೋವಿಡ್-19 ಮೊಬೈಲ್ ಆ್ಯಪ್ ಅನ್ನು ಬಳಸುವ ಬಗ್ಗೆ. |
| 2 | ಸಂಖ್ಯೆ: ಕವಿಪ್ರನಿನಿ/ಬಿ16/9457/2019-20, ದಿನಾಂಕ: 15.04.2020 | ಕೋವಿಡ್-19 ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಹಾಗೂ ಕಚೇರಿಯ ಕೆಲಸಗಳ ಕಾರ್ಯನಿರ್ವಹಣೆ ಸುಗಮವಾಗಿ ನಡೆಯಲು ದಿನಾಂಕ: 15.04.2021 ರಿಂದ ಕವಿಪ್ರನಿನಿಯ ಅಧಿಕಾರಿ/ ನೌಕರರು ಕಚೇರಿಗೆ ಹಾಜರಾಗುವ ಕುರಿತು. |
| 3 | ಸಂಖ್ಯೆ: ಕವಿಪ್ರನಿನಿ/ಬಿ16/9457/2019-20, ದಿನಾಂಕ: 18.04.2020 | ಕೋವಿಡ್-19 ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಹಾಗೂ ಕಚೇರಿಯ ಕೆಲಸಗಳ ಕಾರ್ಯನಿರ್ವಹಣೆ ಸುಗಮವಾಗಿ ನಡೆಯಲು ದಿನಾಂಕ: 20.04.2020 ರಿಂದ ಕವಿಪ್ರನಿನಿಯ ಅಧಿಕಾರಿ/ ನೌಕರರು ಕಚೇರಿಗೆ ಹಾಜರಾಗುವ ಕುರಿತು. |
| 4 | ಸಂಖ್ಯೆ: ಕವಿಪ್ರನಿನಿ/ಬಿ16/9457/2019-20, ದಿನಾಂಕ: 05.05.2020 | ಕೋವಿಡ್-19 ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಹಾಗೂ ಕಚೇರಿಯ ಕೆಲಸಗಳ ಕಾರ್ಯನಿರ್ವಹಣೆ ಸುಗಮವಾಗಿ ನಡೆಯಲು ದಿನಾಂಕ: 04.05.2020 ರಿಂದ ಕವಿಪ್ರನಿನಿಯ ಅಧಿಕಾರಿ/ ನೌಕರರು ಕಚೇರಿಗೆ ಹಾಜರಾಗುವ ಕುರಿತು. |
| 5 | ಸಂಖ್ಯೆ: ಕವಿಪ್ರನಿನಿ/ಬಿ16/3610(iii)/2003-04, ದಿನಾಂಕ: 06.05.2020 | ನಿಗಮದ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಜೂನ್-2021 ರ ಅವಧಿಯವರೆಗೆ ಪಾವತಿ ಮಾಡಬೇಕಾಗುವ ತುಟ್ಟಿಭತ್ಯೆಯ ಹೆಚ್ಚುವರಿ ಕಂತುಗಳನ್ನು ಸ್ಥಗಿತಗೊಳಿಸುವ ಬಗ್ಗೆ. |
| 6 | ಸಂಖ್ಯೆ: ಕವಿಪ್ರನಿನಿ/ಬಿ16/3579/98-99, ದಿನಾಂಕ: 06.05.2020 | 2020 ನೇ ಸಾಲಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ, ನಗದೀಕರಣ ಪಡೆಯುವ ಸೌಲಭ್ಯವನ್ನು ರದ್ದುಗೊಳಿಸುವ ಬಗ್ಗೆ. |
| 7 | ಸಂಖ್ಯೆ: ಕವಿಪ್ರನಿನಿ/ಬಿ16/ಬಿ5ಎ/2105/2000-01, ದಿನಾಂಕ: 06.05.2020 | ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾ - ವಳಿಗಳ ಅಧ್ಯಾಯ-9, ಗುಂಪು-II ರಲ್ಲಿ ಮೆರಿಟ್ ಗ್ರೇಡ್ ಮೆಕ್ಯಾನಿಕ್ (ಹಾಟ್‌ಲೈನ್) ಹೊಸ ಹುದ್ದೆಯನ್ನು ಸೇರ್ಪಡೆ ಮಾಡುವ ಬಗ್ಗೆ. |
| 8 | ಸಂಖ್ಯೆ: ಕವಿಪ್ರನಿನಿ/ಬಿ16/5607(ii)/2000-01, ದಿನಾಂಕ: 07.05.2020 | ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಕ್ರಮ ಸಂಖ್ಯೆ: 12(ಬಿ)(i) ಮತ್ತು 12(ಸಿ) ರಲ್ಲಿ ತಿಳಿಸಲಾಗಿರುವ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ತಿದ್ದುಪಡಿಯನ್ನು ಮಾಡುವ ಬಗ್ಗೆ. |

| | | |
|---|---|---|
| 9 | ಸಂಖ್ಯೆ: ಕವಿಪ್ರನಿನಿ/ಬಿ16/3597/1998–99, ದಿನಾಂಕ: 15.05.2020 | ಮಗುವನ್ನು ದತ್ತು ಪಡೆದ ನೌಕರರಿಗೆ ಮಾತೃತ್ವ ರಜೆ ಮತ್ತು ಪಿತೃತ್ವ ರಜೆ ಮಂಜೂರು ಮಾಡುವ ಬಗ್ಗೆ. |
| 10 | ಸಂಖ್ಯೆ: ಕವಿಪ್ರನಿನಿ/ಬಿ16/5607(II)/2000–01, ದಿನಾಂಕ: 12.06.2020 | ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಯ ಕ್ರಮ ಸಂಖ್ಯೆ: 12 (ಬಿ)(i) ಅಡಿಯಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಸ್ಪಷ್ಟೀಕರಣ. |
| 11 | ಸಂಖ್ಯೆ: ಕವಿಪ್ರನಿನಿ/ಬಿ16/9457/2019–20, ದಿನಾಂಕ: 20.06.2020 | ಕೋವಿಡ್–19 ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ. |
| 12 | ಸಂಖ್ಯೆ: ಕವಿಪ್ರನಿನಿ/ಬಿ16/5608/2000–01, ದಿನಾಂಕ: 18.08.2020 | ನೌಕರರಿಗೆ 2019–20ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಮಂಜೂರು ಮಾಡುವ ಬಗ್ಗೆ. |
| 13 | ಸಂಖ್ಯೆ: ಕವಿಪ್ರನಿನಿ/ಬಿ16/9457/2019–20, ದಿನಾಂಕ: 20.08.2020 | ಕಂಟೈನ್ಮೆಂಟ್ ವಲಯಗಳಲ್ಲಿ ವಾಸಿಸುತ್ತಿದ್ದು ಕಚೇರಿಗೆ ಬರಲು ಸಾಧ್ಯವಾಗದ ಅಥವಾ ಕೋವಿಡ್–19 ವೈರಾಣುವಿನ ಪಿಡುಗಿಗೆ ಒಳಗಾಗಿ ಮನೆಯಲ್ಲಿಯೇ ಪ್ರತ್ಯೇಕತೆಯಲ್ಲಿ ಇರಲು ತಿಳಿಸ–ಲಾಗಿರುವ ಅಧಿಕಾರಿ/ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಬಗ್ಗೆ. |
| 14 | ಸಂಖ್ಯೆ: ಕವಿಪ್ರನಿನಿ/ಬಿ16/5411(2)/96–97, ದಿನಾಂಕ: 02.11.2020 | ಸೇವೆಯಲ್ಲಿರುವ ನೌಕರರಿಗೆ ನೇರ ನೇಮಕಾತಿಯ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿ ನೀಡುವ ಬಗ್ಗೆ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗೆ ತಿದ್ದುಪಡಿ ಮಾಡುವ ಬಗ್ಗೆ. |
| 15 | ಸಂಖ್ಯೆ: ಕವಿಪ್ರನಿನಿ/ಬಿ16/86485/2018–19, ದಿನಾಂಕ: 05.11.2020 | ಅಧಿಕಾರ ಪ್ರತ್ಯಾ ಯೋಜನೆ ಕೈಪಿಡಿ–2018ಕ್ಕೆ ತಿದ್ದುಪಡಿ–ಇಂಜ್ಯುರಿ ರಜೆಯ ಮಂಜೂರಾತಿ ಬಗ್ಗೆ. |
| 16 | ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/ 36012/2020–21, ದಿನಾಂಕ:25.11.2020 | ಎನ್‌ಡಿಸಿಪಿಎಸ್ ಉಪಾದಾನ ಟ್ರಸ್ಟ್ ಮತ್ತು ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಟ್ರಸ್ಟ್‌ಗಳ ಕರ್ತವ್ಯ ಮತ್ತು ಹೊಣೆಗಳ ಬಗ್ಗೆ. |
| 17 | ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/ 36012/2020–21, ದಿನಾಂಕ:25.11.2020 | ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ. |
| 18 | ಸಂಖ್ಯೆ: ಕವಿಪ್ರನಿನಿ/ಬಿ16/2835/99–2000, ದಿನಾಂಕ: 05.12.2020 | 2021ನೇ ವರ್ಷಕ್ಕೆ ಮಂಜೂರು ಮಾಡಿರುವ ಸಾರ್ವತ್ರಿಕ ರಜಾ ದಿನಗಳ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ. |

| | | |
|---|---|---|
| 19 | ಸಂಖ್ಯೆ: ಕವಿಪ್ರನಿನಿ/ಬಿ16/5411/1996–97, ದಿನಾಂಕ: 14.12.2020 | ಅಂಗವಿಕಲರಿಗೆ/ ವಿಕಲಚೇತನರಿಗೆ ನೇರ ನೇಮಕಾತಿಯಲ್ಲಿ ಕಲ್ಪಿಸಿರುವ ಸಮತಳ ಮೀಸಲಾತಿಯನ್ನು ಪರಿಷ್ಕರಿಸಿ ಹೊರಡಿಸಿರುವ ಸರ್ಕಾರದ ಆದೇಶವನ್ನು ಅಳವಡಿಸಿಕೊಳ್ಳುವ ಬಗ್ಗೆ. |
| 20 | ಸಂಖ್ಯೆ: ಕವಿಪ್ರನಿನಿ/ಬಿ16/5411/1996–97, ದಿನಾಂಕ: 16.01.2021 | ಕಿಡ್ನಿ ಡಯಾಲಿಸಿಸ್‌ಗೆ ಒಳಗಾದ ನೌಕರರಿಗೆ ಒಂದು ದಿನದ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಕವಿಮಂ ನೌಕರರ ಸೇವಾ ನಿಯಮಾವಳಿಗಳಿಗೆ ತಿದ್ದುಪಡಿ ಮಾಡುವ ಬಗ್ಗೆ. |
| 21 | ಸಂಖ್ಯೆ: ಕವಿಪ್ರನಿನಿ/ಬಿ16/3579/98–99, ದಿನಾಂಕ: 19.01.2021 | 2021 ನೇ ಸಾಲಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿವೃತ್ತಿ ಹೊಂದುವ ಅಧಿಕಾರಿ/ನೌಕರರಿಗೆ ಹೊರತುಪಡಿಸಿ, ರದ್ದುಗೊಳಿಸುವ ಬಗ್ಗೆ. |
| 22 | ಸಂಖ್ಯೆ: ಕವಿಪ್ರನಿನಿ/ಬಿ16/676/99–2000(II), ದಿನಾಂಕ: 28.01.2021 | ನೌಕರರು/ ಅಧಿಕಾರಿಗಳಿಗೆ ಉನ್ನತ ವ್ಯಾಸಂಗ ಮಾಡಲು Education Leave (Paid) ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ. |
| 23 | ಸಂಖ್ಯೆ: ಕವಿಪ್ರನಿನಿ/ಬಿ16/7208/2014–15(III), ದಿನಾಂಕ: 03.02.2021 | ನಿಗಮದ ಸೇವೆಯಲ್ಲಿರುವ ನೌಕರರಿಗೆ ಕಿರಿಯ ಇಂಜಿನಿಯರ್(ವಿ)/ ಉಗ್ರಾಣ ಪಾಲಕ ದರ್ಜೆ2ರ ಹುದ್ದೆಗೆ ಇನ್–ಸರ್ವೀಸ್ ಮೂಲಕ ನೇಮಕಾತಿ ಮಾಡುವ ಬಗ್ಗೆ. |
| 24 | ಸಂಖ್ಯೆ: ಕವಿಪ್ರನಿನಿ/ಬಿ16/3579/98–99, ದಿನಾಂಕ: 26.02.2021 | 2021ನೇ ಸಾಲಿನ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿಯತಗೊಳಿಸುವ ಬಗ್ಗೆ. |
| 25 | ಸಂಖ್ಯೆ: ಕವಿಪ್ರನಿನಿ/ಬಿ16/3579/98–99, ದಿನಾಂಕ: 05.03.2021 | 2021ನೇ ಸಾಲಿನ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿಯತಗೊಳಿಸುವ ಬಗ್ಗೆ ತಿದ್ದುಪಡಿ. |

**20) ಸಾಂಸ್ಥಿಕ ಆಡಳಿತ:**

ಕವಿಪ್ರನಿನಿಯು ತನ್ನ ಎಲ್ಲಾ ರೀತಿಯ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಪ್ರಾಮಾಣಿಕತೆಯ ಬಗ್ಗೆ ನಂಬಿಕೆ ಹೊಂದಿದೆ.

ಕವಿಪ್ರನಿನಿಯ ಮಂಡಳಿಯು ತನ್ನ ಎಲ್ಲಾ ವ್ಯವಹರಣೆಗಳಲ್ಲಿ ಉತ್ತಮ ಆಚರಣೆಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ಸಾಂಸ್ಥಿಕ ಆಡಳಿತದ ಅಭ್ಯಾಸಗಳನ್ನು ನಂಬುತ್ತದೆ ಮತ್ತು ಬೆಂಬಲಿಸುತ್ತದೆ.

ಕಂಪನಿಯಲ್ಲಿನ ಆಡಳಿತದ ಪ್ರಕ್ರಿಯೆಯು, ಸಭೆಗಳ ನಂತರ ಅನುಸರಣೆ, ಪರಿಶೀಲನೆ ಹಾಗೂ ಮಂಡಳಿಯಿಂದ/ಮಂಡಳಿಯ ಉಪ ಸಮಿತಿಗಳಿಂದ ಕೈಗೊಂಡ ಕ್ರಮಗಳಿಗೆ/ನಿರ್ಣಯಗಳು ಬಾಕಿ ಇರುವುದಕ್ಕೆ ವರದಿ ಸಲ್ಲಿಕೆ ಇಂತಹ ಪರಿಣಾಮಕಾರಿ ಕ್ರಮಗಳನ್ನು ಒಳಗೊಂಡಿದೆ.

31 ಮಾರ್ಚ್ 2021 ರಂದು ನಿರ್ದೇಶಕರ ಮಂಡಳಿಯು 17 ಸದಸ್ಯರನ್ನು ಒಳಗೊಂಡಿರುತ್ತದೆ. ಮಂಡಳಿ ಮತ್ತು ಉಪ ಸಮಿತಿ ಸಭೆಗಳಲ್ಲಿ ಎಲ್ಲಾ ನಿರ್ದೇಶಕರು ಸಕ್ರಿಯವಾಗಿ ಪಾಲ್ಗೊಂಡರು ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗೆ ಮೌಲ್ಯವನ್ನು ತುಂಬಿದರು.

**ದಿನಾಂಕ 01–04–2020 ರಿಂದ ವರದಿ ಮಾಡುವ ದಿನಾಂಕದ ಅವಧಿಯಲ್ಲಿ ಮಂಡಳಿಯ ನಿರ್ದೇಶಕರಾಗಿ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿದೆ:**

| ಕ್ರ. ಸಂ. | ನಿರ್ದೇಶಕರ ಹೆಸರು ಶ್ರೀಯುತರು/ಶ್ರೀಮತಿ | ಡಿಐಎನ್ ಸಂಖ್ಯೆ | ಹುದ್ದೆ | ಅವಧಿ | |
|---|---|---|---|---|---|
| | | | | ಇಂದ | ರವರೆಗೆ |
| 1 | ಬಿ.ಎಸ್.ಯಡಿಯೂರಪ್ಪ | 02319705 | ಗೌರವಾನ್ವಿತ ಅಧ್ಯಕ್ಷರು | 05/08/2019 | 07/08/2021 |
| 2 | ವಿ.ಸುನೀಲ್ ಕುಮಾರ್ | 09383816 | ಗೌರವಾನ್ವಿತ ಅಧ್ಯಕ್ಷರು | 07/08/2021 | – |
| 3 | ಡಾ. ಎನ್.ಮಂಜುಳ, ಭಾ.ಆ.ಸೇ | 07508345 | ವ್ಯವಸ್ಥಾಪಕ ನಿರ್ದೇಶಕರು | 20/08/2019 | – |
| 4 | ಪಿ.ರವಿಕುಮಾರ್, ಭಾ.ಆ.ಸೇ | 02285126 | ನಿರ್ದೇಶಕರು | 05/08/2019 | 04/09/2020 |
| 5 | ಮಾಹೇಂದ್ರ ಜೈನ್, ಭಾ.ಆ.ಸೇ | 01660388 | ನಿರ್ದೇಶಕರು | 24/06/2019 | 18/11/2020 |
| 6 | ಕಪಿಲ್ ಮೋಹನ್, ಭಾ.ಆ.ಸೇ | 03627128 | ನಿರ್ದೇಶಕರು | 18/11/2020 | 07/04/2021 |
| 7 | ಜಿ.ಕುಮಾರ್ ನಾಯಕ್, ಭಾ.ಆ.ಸೇ | 01918435 | ನಿರ್ದೇಶಕರು | 07/04/2021 | – |
| 8 | ಐ.ಎಸ್.ಎನ್.ಪ್ರಸಾದ್,ಭಾ.ಆ.ಸೇ | 01469651 | ನಿರ್ದೇಶಕರು | 06/09/2013 | – |
| 9 | ಇ.ವಿ.ರಾಮಣ್ಣ ರೆಡ್ಡಿ, ಭಾ.ಆ.ಸೇ | 02935216 | ನಿರ್ದೇಶಕರು | 04/09/2020 | 12/11/2021 |
| 10 | ಎನ್.ಮಂಜುನಾಥ ಪ್ರಸಾದ್, ಭಾ.ಆ.ಸೇ | 02281307 | ನಿರ್ದೇಶಕರು | 12/11/2021 | – |
| 11 | ವಿ.ಪೊನ್ನುರಾಜ್, ಭಾ.ಆ.ಸೇ | 05211567 | ನಿರ್ದೇಶಕರು | 15/12/2018 | – |
| 12 | ರಾಜೇಶ್ ಗೌಡ.ಎಂ.ಬಿ, ಭಾ.ಆ.ಸೇ | 06917336 | ನಿರ್ದೇಶಕರು | 18/09/2019 | 13/08/2021 |
| 13 | ಪಿ.ರಾಜೇಂದ್ರ ಚೋಳನ್, ಭಾ.ಆ.ಸೇ | 06395219 | ನಿರ್ದೇಶಕರು | 13/08/2021 | – |
| 14 | ಗಂಗಾಧರ ಸ್ವಾಮಿ.ಜಿ.ಎಮ್, ಭಾ.ಆ.ಸೇ | 06782021 | ನಿರ್ದೇಶಕರು (ಆಮತ್ತುಮಾ.ಸಂ) | 15/10/2019 | 14/07/2021 |
| 15 | ಮಹೇಶ್ ಕರ್ಜಗಿ, ಕ.ಆ.ಸೇ | 09267361 | ನಿರ್ದೇಶಕರು (ಆ ಮತ್ತು ಮಾ.ಸಂ) | 14/07/2021 | – |
| 16 | ಆರ್.ನಾಗರಾಜ | 03108629 | ನಿರ್ದೇಶಕರು(ಹಣಕಾಸು) | 30/08/2019 | |
| 17 | ಸಿದ್ಲಿಂಗಪ್ಪ ತೇಲಿ, ಭಾ.ಕ.ಸೇ | 08764080 | ನಿರ್ದೇಶಕರು(ಹಣಕಾಸು) | 21/05/2020 | 21/05/2020 |
| | | | ಸಿಎಫ್ಒ(ಕೆಎಂಪಿ) | 09/09/2020 | – |
| 18 | ಕೆ.ಸಿದ್ದರಾಜು | 05184367 | ನಿರ್ದೇಶಕರು(ಪ್ರಸರಣ) | 06/12/2019 | 07/10/2020 |
| 19 | ಬಿ.ಕೆ.ಉದಯಕುಮರ್ | 08529370 | ನಿರ್ದೇಶಕರು(ಪ್ರಸರಣ) | 07/10/2020 | 13/05/2021 |
| 20 | ಜಿ.ಆರ್.ಚಂದ್ರಶೇಖರಯ್ಯ | 0759908 | ನಿರ್ದೇಶಕರು(ಪ್ರಸರಣ) | 13/05/2021 | – |
| 21 | ಟಿ.ಆರ್.ರಾಮಕೃಷ್ಣಯ್ಯ | 07924084 | ನಿರ್ದೇಶಕರು | 14/08/2017 | – |
| 22 | ಟಿ.ಎಮ್.ಶಿವಪ್ರಕಾಶ್ | 08522445 | ನಿರ್ದೇಶಕರು | 18/07/2019 | – |
| 23 | ಟಿ.ರಾಮ ನಾಯ್ಕ್ | 08908142 | ನಿರ್ದೇಶಕರು | 14/09/2020 | – |
| 24 | ಪ್ರಶಾಂತ್.ಆರ್.ಮಖನೂರ್ | 07709746 | ನಿರ್ದೇಶಕರು | 25/11/2020 | – |

| | | | | | |
|---|---|---|---|---|---|
| 25 | ಮಹಾದೇವಪ್ಪ ಶಿವಪ್ಪ ಅಲಗವಾಡಿ | 09006543 | ನಿರ್ದೇಶಕರು | 25/11/2020 | – |
| 26 | ಬಾನುಪ್ರಕಾಶ್.ಎಮ್.ಎಸ್ | 07415144 | ನಿರ್ದೇಶಕರು | 27/11/2020 | – |
| 27 | ಭವಾನಿ ರಾವ್ ಮೊಹ್ರೆ | 01677748 | ನಿರ್ದೇಶಕರು | 27/11/2020 | – |

**ಮಂಡಳಿಯ ಸಭೆಗಳು :**

ಮಂಡಳಿ ನಿರ್ದೇಶಕರ ಸಭೆಯನ್ನು ಮುಂಚಿತವಾಗಿಯೇ ಗೊತ್ತುಪಡಿಸಿ, ಪ್ರತಿಯೊಬ್ಬ ನಿರ್ದೇಶಕರಿಗೆ ಲಿಖಿತ ರೂಪದಲ್ಲಿ ಸಭೆಯ ಸೂಚನಾ ಪತ್ರವನ್ನು ತಲುಪಿಸಲಾಗುತ್ತದೆ. ಸಭೆಯ ಕಾರ್ಯಸೂಚಿ ಹಾಗೂ ಸಂಬಂಧಿತ ಇತರ ಟಿಪ್ಪಣಿಗಳ ಮಾಹಿತಿಗಳನ್ನು ಮುಂಚಿತವಾಗಿ ಒದಗಿಸಲಾಗುತ್ತದೆ.

2020–21ನೇ ಸಾಲಿನ ಈ ಕೆಳಕಂಡ ದಿನಾಂಕಗಳಂದು ನಾಲ್ಕು ಮಂಡಳಿ ಸಭೆಗಳನ್ನು ನಡೆಸಲಾಯಿತು:

| ಕ್ರಮ ಸಂಖ್ಯೆ | ಸಭೆ ಸಂಖ್ಯೆ | ಸಭೆಯ ದಿನಾಂಕ |
|---|---|---|
| 1 | 120 ನೇ ಸಭೆ | 04/05/2020 |
| 2 | 121 ನೇ ಸಭೆ | 09/09/2020 |
| 3 | 122 ನೇ ಸಭೆ | 30/11/2020 |
| 4 | 123 ನೇ ಸಭೆ | 23/03/2021 |

**ಮಂಡಳಿಯ ಉಪ ಸಮಿತಿ :**

ಮಂಡಳಿಯ ಉಪ ಸಮಿತಿಗಳನ್ನು ಕೇವಲ ಪ್ರಮುಖ ವಿಷಯಗಳ ಬಗ್ಗೆ ಹೆಚ್ಚಿನ ಕೇಂದ್ರಿಕೃತ ಗಮನ ಹರಿಸುವುದಕ್ಕಷ್ಟೇ ಅಲ್ಲದೆ, ಅಂತಹ ಪ್ರಕರಣ ಬಗ್ಗೆ ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳಲು ರಚಿಸಲಾಯಿತು. ನಿರ್ಣಯಗಳನ್ನು ತೆಗೆದುಕೊಳ್ಳಲು ಮಂಡಳಿಯು ಕೆಲವು ನಿರ್ದಿಷ್ಟ ಅಧಿಕಾರಗಳನ್ನು ನೀಡಿದೆ.

**1. ಕೇಂದ್ರಿಯ ಖರೀದಿ ಸಮಿತಿ :**

ಮುಖ್ಯ ಇಂಜಿನಿಯರ್(ವಿದ್ಯುತ್) ರವರಿಗೆ ವಹಿಸಿರುವ ಅಧಿಕಾರವನ್ನು ಮೀರಿದ ಹಾಗೂ ರೂ.20 ಕೋಟಿಯವರೆಗೆ ಆರ್ಥಿಕ ಪರಿಣಾಮಗಳನ್ನು ಬೀರಬಹುದಾದ ಪ್ರಸರಣ ವಲಯ ಅಥವಾ ಯೋಜನೆಗಳ ಸಂಬಂಧ ಎಲ್ಲಾ ವಿಷಯಗಳು, ವಿದ್ಯುತ್ ಕೇಂದ್ರ/ಮಾರ್ಗ ಕಾಮಗಾರಿ ವಹಿಸುವಿಕೆ, ಖರೀದಿ ಸಂಬಂಧವಾದ ಎಲ್ಲಾ ಪ್ರಕರಣಗಳನ್ನು ಪರಿಗಣಿಸಲು ಕೇಂದ್ರಿಯ ಖರೀದಿ ಸಮಿತಿಯನ್ನು ರಚಿಸಲಾಗಿದೆ.

**ಈ ಕೆಳಕಂಡಂತೆ ಕೇಂದ್ರ ಖರೀದಿ ಸಮಿತಿಯನ್ನು ರಚಿಸಲಾಗಿದೆ.**

| ಕ್ರ. ಸಂ. | ಸದಸ್ಯರು ಶ್ರೀಯುತರು/ಶ್ರೀಮತಿ | ಹುದ್ದೆ | ಅವಧಿ | |
|---|---|---|---|---|
| | | | ಇಂದ | ರವರೆಗೆ |
| 1 | ಡಾ. ಎನ್.ಮಂಜುಳ, ಭಾ.ಆ.ಸೇ<br>ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | ಅಧ್ಯಕ್ಷರು | 20/08/2019 | – |
| 2 | ಆರ್. ನಾಗರಾಜ, ನಿರ್ದೇಶಕರು<br>(ಹಣಕಾಸು) (ಅಧಿಕ ಪ್ರಭಾರ), ಕವಿಪ್ರನಿನಿ | ಸದಸ್ಯರು | 30/08/2019 | 21/05/2020 |

| | | | | |
|---|---|---|---|---|
| 3 | ಸಿದ್ದಿಲಿಂಗಪ್ಪ ತೇಲಿ, ಭಾ.ಕ.ಸೇ,<br>ನಿರ್ದೇಶಕರು(ಹಣಕಾಸು), ಕವಿಪ್ರನಿನಿ | ಸದಸ್ಯರು | 21/05/2020 | – |
| 4 | ಕೆ.ಸಿದ್ದರಾಜು,<br>ನಿರ್ದೇಶಕರು(ಪ್ರಸರಣ), ಕವಿಪ್ರನಿನಿ | ಸದಸ್ಯರು | 06/12/2019 | 07/10/2020 |
| 5 | ಬಿ.ಕೆ.ಉದಯಕುಮಾರ್,<br>ನಿರ್ದೇಶಕರು(ಪ್ರಸರಣ), ಕವಿಪ್ರನಿನಿ | ಸದಸ್ಯರು | 07/10/2020 | 13/05/2021 |
| 6 | ಜಿ.ಆರ್.ಚಂದ್ರಶೇಖರಯ್ಯ | ಸದಸ್ಯರು | 13/05/2021 | – |
| | ರಮ್ಯ.ಕೆ, ಎಫ್‌ಸಿಎಸ್,<br>ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ | ಸಂಚಾಲಕರು | 16/01/2019 | – |

**ವರದಿಯ ವರ್ಷದಲ್ಲಿ ಈ ಕೆಳಕಂಡ ಕೇಂದ್ರ ಖರೀದಿ ಸಭೆಗಳು ನಡೆಸಲಾಗಿದೆ :**

| ಕ್ರ ಸಂ | ಸಭೆ ಸಂಖ್ಯೆ | ಸಭೆ ದಿನಾಂಕ |
|---|---|---|
| 1 | 189ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ | 08/04/2020 |
| 2 | ಎ) 155ನೇ ಪ್ರಸರಣ ವಲಯ, ಬೆಂಗಳೂರು<br>ಬಿ) 95ನೇ ಪ್ರಸರಣ ವಲಯ, ಮೈಸೂರು<br>ಸಿ) 72ನೇ ಪ್ರಸರಣ ವಲಯ, ಕಲಬುರ್ಗಿ<br>ಇ) 190ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್ | 20/06/2020 |
| 3 | ಎ) 191ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್<br>ಬಿ) 96ನೇ ಪ್ರಸರಣ ವಲಯ, ಮೈಸೂರು<br>ಸಿ) 73ನೇ ಪ್ರಸರಣ ವಲಯ, ಕಲಬುರ್ಗಿ<br>ಡಿ) 66ನೇ ಪ್ರಸರಣ ವಲಯ, ತುಮಕೂರು<br>ಇ) 95ನೇ ಪ್ರಸರಣ ವಲಯ, ಬಾಗಲಕೋಟೆ<br>ಎಫ್) 156ನೇ ಪ್ರಸರಣ ವಲಯ, ಬೆಂಗಳೂರು<br>ಜಿ) 70ನೇ ಪ್ರಸರಣ ವಲಯ, ಹಾಸನ | 20/08/2020 ಮತ್ತು<br>27/08/2020 ರಂದು<br>ಮುಂದೂಡಲಾಗಿರುತ್ತದೆ |
| 4 | ಎ) 192 ನೇ ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್<br>ಬಿ) 96ನೇ ಪ್ರಸರಣ ವಲಯ, ಬಾಗಲಕೋಟೆ<br>ಸಿ) 67ನೇ ಪ್ರಸರಣ ವಲಯ, ತುಮಕೂರು<br>ಡಿ) 71ನೇ ಪ್ರಸರಣ ವಲಯ, ಹಾಸನ<br>ಸಿ) 74ನೇ ಪ್ರಸರಣ ವಲಯ, ಕಲಬುರ್ಗಿ<br>ಎಫ್) 157ನೇ ಪ್ರಸರಣ ವಲಯ, ಬೆಂಗಳೂರು<br>ಬಿ) 97ನೇ ಪ್ರಸರಣ ವಲಯ, ಮೈಸೂರು | 11/12/2020 ಮತ್ತು<br>19/12/2020 ರಂದು<br>ಮುಂದೂಡಲಾಗಿರುತ್ತದೆ |

**2. ಸಾಲ ಪಡೆಯುವಿಕೆ ಉಪ ಸಮಿತಿ :**

ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಯ ಮಿತಿಗೆ ಒಳಪಟ್ಟಂತೆ, ನಿಗಮದ ಪರವಾಗಿ ಬ್ಯಾಂಕ್‌ಗಳು/ಆರ್ಥಿಕ ಸಂಸ್ಥೆಗಳಿಂದ ಕಾಲಕಾಲಕ್ಕೆ (ಪ್ರಸ್ತುತ ರೂ.8600 ಕೋಟಿಗಳು) ಧೀರ್ಘಾವಧಿ ಸಾಲಗಳನ್ನು ಪಡೆಯಲು ಸಾಲ ಪಡೆಯುವಿಕೆಗೆ ಉಪ ಸಮಿತಿಗೆ ಅಧಿಕಾರಗಳನ್ನು ವಹಿಸಲಾಗಿದೆ.

ಉಪ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರುಗಳು ಒಳಗೊಂಡಿರುತ್ತಾರೆ :

| ಕ್ರ. ಸಂ. | ಸದಸ್ಯರು ಶ್ರೀಯುತರು/ಶ್ರೀಮತಿ | ಹುದ್ದೆ | ಅವಧಿ | |
|---|---|---|---|---|
| | | | ಇಂದ | ರವರೆಗೆ |
| 1 | ಜಿ.ಕುಮಾರ್ ನಾಯಕ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 07/04/2021 | – |
| 2 | ಕಪಿಲ್ ಮೋಹನ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 18/11/2020 | 07/04/2021 |
| 3 | ಮಹೇಂದ್ರ ಜೈನ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 24/06/2019 | 18/11/2020 |
| 4 | ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು | 06/09/2013 | – |
| 5 | ಡಾ. ಎನ್.ಮಂಜುಳ, ಭಾ.ಆ.ಸೇ<br>ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | ಸದಸ್ಯರು | 20/08/2019 | – |
| 6 | ಆರ್.ನಾಗರಾಜ, ನಿರ್ದೇಶಕರು<br>(ಹಣಕಾಸು) (ಅಧಿಕ ಪ್ರಭಾರ), ಕವಿಪ್ರನಿನಿ | ಸದಸ್ಯರು | 30/08/2019 | 21/05/2020 |
| 7 | ಸಿದ್ಲಿಂಗಪ್ಪ ತೇಲಿ, ಭಾ.ಕ.ಸೇ<br>ನಿರ್ದೇಶಕರು (ಹಣಕಾಸು), ಕವಿಪ್ರನಿನಿ | ಸದಸ್ಯರು | 21/05/2020 | – |
| | ರಮ್ಯ.ಕೆ, ಎಫ್‌ಸಿಎಸ್,<br>ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ | ಸಂಚಾಲಕರು | 16/01/2019 | – |

ವರದಿ ಮಾಡುವ ವರ್ಷದಲ್ಲಿ ಸಾಲ ಪಡೆಯುವಿಕೆಯ ಉಪ ಸಮಿತಿಯು ಈ ಕೆಳಕಂಡಂತೆ ಸಭೆಗಳನ್ನು ನಡೆಸಲಾಯಿತು:

| ಕ್ರ. ಸಂ. | ಸಂಸ್ಥೆಯಿಂದ ದೀರ್ಘಾವಧಿ ಸಾಲವನ್ನು ಪಡೆಯಲು | ಹಣಕಾಸಿನ ನೆರವಿನ ಮೊತ್ತ | ಸಭೆಯ ದಿನಾಂಕ |
|---|---|---|---|
| 1 | ಮೆ॥ ಇಂಡಿಯನ್ ಬ್ಯಾಂಕ್ | ರೂ.350 ಕೋಟಿ | 19/08/2020 |
| 2 | ಮೆ॥ ಭಾರತೀಯ ಸ್ಟೇಟ್ ಬ್ಯಾಂಕ್ | ರೂ.500 ಕೋಟಿ | 30/11/2020 |
| 3 | ಮೆ॥ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | ರೂ.500 ಕೋಟಿ | 25/03/2021 |

**3. ಪರಿಶೋಧನಾ ಸಮಿತಿ :**

ಕಂಪನಿ ಕಾಯ್ದೆ–2013ರ ಅವಕಾಶಗಳ ಪ್ರಕಾರ, ಕವಿಪ್ರನಿನಿಯು ಕೆಳಕಂಡಂತೆ ಪರಿಶೋಧನಾ ಸಮಿತಿಯು ರಚಿಸಲಾಗಿದೆ.

| ಕ್ರ. ಸಂ. | ಸದಸ್ಯರು ಶ್ರೀಯುತರು/ಶ್ರೀಮತಿ | ಹುದ್ದೆ | ಅವಧಿ | |
|---|---|---|---|---|
| | | | ಇಂದ | ರವರೆಗೆ |
| 1 | ಜಿ.ಕುಮಾರ್ ನಾಯಕ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 07/04/2021 | – |
| 2 | ಕಪಿಲ್ ಮೋಹನ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 18/11/2020 | 07/04/2021 |
| 3 | ಮಹೇಂದ್ರ ಜೈನ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 24/06/2019 | 18/11/2020 |
| 4 | ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು | 06/09/2013 | – |
| 5 | ರಾಜೇಶ್ ಗೌಡ.ಎಂ.ಬಿ, ಭಾ.ಆ.ಸೇ<br>ವ್ಯವಸ್ಥಾಪಕ ನಿರ್ದೇಶಕರು, ಬೆ.ವಿ.ಕಂ | ಸದಸ್ಯರು | 18/09/2019 | – |
| 6 | ಪಿ.ರಾಜೇಂದ್ರ ಚೋಳನ್, ಭಾ.ಆ.ಸೇ<br>ವ್ಯವಸ್ಥಾಪಕ ನಿರ್ದೇಶಕರು, ಬೆ.ವಿ.ಕಂ | ಸದಸ್ಯರು | 13/08/2021 | – |
| 7 | ಕೆ.ಸಿದ್ದರಾಜು,<br>ನಿರ್ದೇಶಕರು (ಪ್ರಸರಣ), ಕವಿಪ್ರನಿನಿ | ಸದಸ್ಯರು | 06/12/2019 | 07/10/2020 |
| 8 | ಬಿ.ಕೆ.ಉದಯ ಕುಮಾರ್,<br>ನಿರ್ದೇಶಕರು (ಪ್ರಸರಣ), ಕವಿಪ್ರನಿನಿ | ಸದಸ್ಯರು | 07/10/2020 | 13/05/2021 |
| 9 | ಜಿ.ಆರ್.ಚಂದ್ರಶೇಖರಯ್ಯ<br>ನಿರ್ದೇಶಕರು (ಪ್ರಸರಣ), ಕವಿಪ್ರನಿನಿ | ಸದಸ್ಯರು | 13/05/2021 | – |
| | ರಮ್ಯ.ಕೆ, ಎಫ್‌ಸಿಎಸ್,<br>ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ | ಸಂಚಾಲಕರು | 16/01/2019 | – |

**ಪರಿಶೋಧನಾ ಸಮಿತಿಗೆ ಸೂಚಿಸಲಾದ ಆಧಾರಿತ ವಿಷಯಗಳು ಈ ಕೆಳಕಂಡಂತಿದೆ:**

1) ಕಂಪನಿಯ ಪರಿಶೋಧಕರ ನೇಮಕ, ಸಂಭಾವನೆ ಮತ್ತು ನೇಮಕಾತಿಯ ಷರತ್ತುಗಳ ಬಗ್ಗೆ ಶಿಫಾರಸ್ಸು.
2) ಲೆಕ್ಕ ಪರಿಶೋಧಕರ ಸ್ವಾತಂತ್ರ್ಯ ಮತ್ತು ಕಾರ್ಯಕ್ಷಮತೆಯ ಬಗ್ಗೆ ಪರಿಶೀಲಿಸಲು ಹಾಗೂ ಮೇಲ್ವಿಚಾರಣೆ ನಡೆಸಲು ಹಾಗೂ ಪರಿಶೋಧನಾ ಪ್ರಕ್ರಿಯೆಯ ಪರಿಣಾಮಕಾರಿತ್ವದ ಬಗ್ಗೆ ಪರಿಶೀಲನೆ ನಡೆಸಲು.
3) ಆರ್ಥಿಕ ನಿರೂಪಣೆ ಹಾಗೂ ಪರಿಶೋಧಕರ ತತ್ಸಂಬಂಧ ವರದಿಯ ಪರಿಶೀಲನೆ.
4) ಸಂಬಂಧಿತ ವ್ಯಕ್ತಿಗಳೊಂದಿಗೆ ಇರಬಹುದಾದ ಕಂಪನಿಯ ವಹಿವಾಟಿನ/ವ್ಯವಹಾರಗಳ ಅನುಮೋದನೆ ಅಥವಾ ತದನಂತರದಲ್ಲಿ ಉಂಟಾಗುವ ಮಾರ್ಪಾಡು.
5) ಅಂತರ ನಿಗಮ ಸಾಲ ಮತ್ತು ಹೂಡಿಕೆಗಳ ಪರಿಶೀಲನೆ.

6) ಕಂಪನಿಯ ಆಸ್ತಿ ಅಥವಾ ಸ್ವಾಧೀನಪಡಿಸಿರುವಿಕೆಗೆ ಸಂಬಂಧಿಸಿದಂತೆ ಅಗತ್ಯವಿದ್ದಲ್ಲಿ ಮೌಲ್ಯೀಕರಣ.

7) ಆಂತರಿಕ ಆರ್ಥಿಕ ನಿಯಂತ್ರಣದ ಮತ್ತು ಅಪಾಯಕಾರಿ ನಿರ್ವಹಣೆ ವ್ಯವಸ್ಥೆಯ ಮೌಲ್ಯಮಾಪನ.

8) ಸಾರ್ವಜನಿಕ ಕೊಡುಗೆ ಮೂಲಕ ಸ್ವೀಕರಿಸಿದ ನಿಧಿಯ ಪೂರ್ಣ ಬಳಕೆ ಹಾಗೂ ಅದಕ್ಕೆ ಸಂಬಂಧಿತ ವಿಷಯಗಳ ಮೇಲುಸ್ತುವಾರಿ.

ಪರಿಶೋಧನಾ ಸಮಿತಿಯ ಸಭೆಗಳಿಗೆ ಲೆಕ್ಕ ಪರಿಶೋಧಕರು ಹಾಗೂ ಪೂರ್ಣಾವಧಿಯ ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ ರವರಿಗೆ ಆಮಂತ್ರಣವಿದ್ದರು, ಮತ ಚಲಾಯಿಸಲು ಹಕ್ಕಿರುವುದಿಲ್ಲ.

**ಪ್ರಸಕ್ತ ವರದಿಯ ವರ್ಷದಲ್ಲಿ, ಪರಿಸೋಧನಾ ಸಮಿತಿಯ ಸಭೆಗಳನ್ನು ಈ ಕೆಳಕಂಡಂತೆ ನಡೆಸಲಾಯಿತು:**

| ಕ್ರಮ ಸಂಖ್ಯೆ | ಸಭೆ ಸಂಖ್ಯೆ | ಸಭೆಯ ದಿನಾಂಕ |
|---|---|---|
| 1 | 31ನೇ ಸಭೆ | 21/11/2020 |
| 2 | 32ನೇ ಸಭೆ | 17/02/2021 |

**ಪ್ರಸಕ್ತ ವರದಿಯ ವರ್ಷದಲ್ಲಿ, ಸಾಮನ್ಯ ಸಭೆಯನ್ನು ಈ ಕೆಳಕಂಡಂತೆ ನಡೆಸಲಾಯಿತು:**

| ಸಭೆಯ ಸಂಖ್ಯೆ ಮತ್ತು ದಿನಾಂಕ | ನಿರ್ಣಯಗಳು |
|---|---|
| 21ನೇ ವಾರ್ಷಿಕ ಸಾಮಾನ್ಯ ಸಭೆ–ದಿನಾಂಕ: 22/12/2020 ಮತ್ತು 09/04/2021 ರಂದು ಮುಂದೂಡಲಾಗಿರುತ್ತದೆ. | ಸಾಮಾನ್ಯ ನಿರ್ಣಯಗಳು<br>i) ಆ.ವ 2019–20ರ ನಿರ್ದೇಶಕರ ವರದಿಯನ್ನು ಅಳವಡಿಸಿಕೊಳ್ಳುವುದು.<br>ii) ಆ.ವ 2019–20ರ ಪರಿಶೋಧಿತ ವಾರ್ಷಿಕ ಲೆಕ್ಕಗಳು.<br>iii) ಆ.ವ 2019–20ರ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿ<br>iv) ಆ.ವ 2019–20ರ ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪ್ರಮಾಣ ಪತ್ರ. |

**ಜಾಗರಣೆ ಕಾರ್ಯವಿಧಾನ(ಶಿಳ್ಳೆ ಊದುವ) ನೀತಿ:**

ಕಂಪನಿಗಳ ಕಾಯ್ದೆ, 2013 ರ ಕಲಂ 177(9) ರ ಅಡಿಯಲ್ಲಿ ಅಗತ್ಯಕ್ಕೆ ಅನುಸಾರವಾಗಿ, ಕಂಪನಿಯು ಜಾಗರಣ ಕಾರ್ಯವಿಧಾನವನ್ನು (ಶಿಳ್ಳೆ ಊದುವ) ನೀತಿಯನ್ನು ಸ್ಥಾಪಿಸಿದೆ. ಪಾಲಿಸಿಯ ಪ್ರತಿ ಕಂಪನಿಯ ಅಂತರ್ಜಾಲ www.kptcl.karnataka.gov.inನಲ್ಲಿ ಲಭ್ಯವಿದೆ.

**ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ.**

ನಾಮ ನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಪಾತ್ರ ಮತ್ತು ಕಾರ್ಯನಿರ್ವಹಣೆಯನ್ನು ಸೂಚಿಸುವ ಕಂಪನಿಗಳ ಕಾಯ್ದೆ, 2013 ರ ಕಲಂ 178ರ ಉಪ ವಿಭಾಗ (2), (3) ಮತ್ತು (4) ರ ನಿಬಂಧನೆಗಳನ್ನು ಸರ್ಕಾರಿ ಕಂಪನಿಗಳಿಗೆ ವಿನಾಯಿತಿ ನೀಡಲಾಗಿದೆ. ಪೂರ್ಣಾವಧಿಯ ನಿರ್ದೇಶಕರ ಸಂಭಾವನೆ ಮತ್ತು ಭತ್ಯೆಗಳು ಅವರಿಗೆ ಅನ್ವಯವಾಗುವ ವೇತನದ ಸಮಯದ ಪ್ರಮಾಣವನ್ನು ಆಧರಿಸಿರುತ್ತದೆ. ಅಲ್ಪಾವಧಿಯ ನಿರ್ದೇಶಕರಿಗೆ ಕಾಲಕಾಲಕ್ಕೆ ಕರ್ನಾಟಕ ಸರ್ಕಾರದ ಆದೇಶಗಳ ಪ್ರಕಾರ ಸಿಟ್ಟಿಂಗ್ ಶುಲ್ಕವನ್ನು ಮಾತ್ರ ಪಾವತಿಸಲಾಗುತ್ತಿದೆ. ಅದರಂತೆ, ಕಂಪನಿಗಳ ಕಾಯ್ದೆ, 2013 ರ ಕಲಂ 178(1) ರ ಅಡಿಯಲ್ಲಿ ವಿನಾಯಿತಿಯನ್ನು ನವದೆಹಲಿಯ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಿಂದ ಕೋರಲಾಗಿದೆ.

**ಸ್ವತಂತ್ರ ನಿರ್ದೇಶಕರ ನೇಮಕಾತಿ:**

ಸ್ವತಂತ್ರ ನಿರ್ದೇಶಕರ ನೇಮಕಾತಿಗೆ ಸಂಬಂಧಿಸಿದಂತೆ, ಕಂಪನಿ ಕಾಯ್ದೆ 2013 ರ ಕಲಂ 149(6) ರ ಷರತ್ತು (ಎ) ಅನ್ನು ಎಂಸಿಎಯ ಅಧಿಸೂಚನೆ ದಿನಾಂಕ: 05.06.2015 ರಲ್ಲಿ ತಿದ್ದುಪಡಿ ಮಾಡಿ, ರಾಜ್ಯ ಸರ್ಕಾರಕ್ಕೆ ಸಮಗ್ರತೆಯ ವ್ಯಕ್ತಿ ಮತ್ತು ಸಂಬಂಧಿತ ಪರಿಣಿತಿ ಮತ್ತು ಅನುಭವವನ್ನು ಹೊಂದಿರುವಂತಹ ಸ್ವತಂತ್ರ ನಿರ್ದೇಶಕರನ್ನು ನಿರ್ಧರಿಸಲು ಮತ್ತು ನೇಮಿಸಲು ಅಧಿಕಾರ ನೀಡಲಾಗಿದೆ. ಈ ಮೇಲ್ಕಂಡ ನಿಬಂಧನೆಯಿಂದಾಗಿ ಕರ್ನಾಟಕ ರಾಜ್ಯ ಸರ್ಕಾರವು ಸ್ವತಂತ್ರ ನಿರ್ದೇಶಕರನ್ನು ನೇಮಿಸುತ್ತಿದೆ. ಮುಂದುವರೆದಂತೆ, ಮುಂದಿನ ನೀತಿ ಸಂಹಿತೆಯನ್ನು ಕರ್ನಾಟಕ ಸರ್ಕಾರವು ಸೂಚಿಸಬೇಕಾಗಬಹುದು.

**(21) ಕಾಯ್ದೆಯ ಕಲಂ 134(3) ರ ನಿಬಂಧನೆಗಳ ಪ್ರಕಾರ ಈ ಕಏಳಗಿನ ಮಾಹಿತಿಯನ್ನು ಒದಗಿಸಲಾಗಿದೆ.**

**(ಎ) ವಾರ್ಷಿಕ ಸಲ್ಲಿಕೆ:**

ಅನುಬಂಧ–1 ರಲ್ಲಿ ನೀಡಲಾಗಿರುವ ಕಲಂ 92 ರ ನಿಬಂಧನೆಗಳಿಗೆ ಅನುಸಾರವಾಗಿ ವಾರ್ಷಿಕ ಸಲ್ಲಿಕೆಯ ಸಾರವನ್ನು ಈ ವರದಿಗೆ (ಎಂಜಿಟಿ–9) ಲಗತ್ತಿಸಲಾಗಿದೆ.

**(ಬಿ) ನಿರ್ದೇಶಕರ ಜವಾಬ್ದಾರಿ ಹೇಳಿಕೆ:**

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 134(5)ರ ಅಡಿಯಲ್ಲಿನ ಅವಶ್ಯಕತೆಗೆ ಅನುಸಾರವಾಗಿ ನಿರ್ದೇಶಕರುಗಳು ಈ ರೀತಿ ಹೇಳಿಕೆಯನ್ನು ನೀಡಿರುತ್ತಾರೆ.

(ಎ) ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆಯಲ್ಲಿ, ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳನ್ನು ಪಾಲಿಸುವುದರ ಜೊತೆಗೆ ಹೊರಹೊಮ್ಮುವ ವಿಷಯಗಳಿಗೆ ಸಂಬಂಧಿಸಿದ ವಿವರಣೆಯೊಂದಿಗೆ ಅನುಸರಿಸಲಾಗಿದೆ.

(ಬಿ) ನಿರ್ದೇಶಕರುಗಳು ಈ ರೀತಿಯ ಲೆಕ್ಕಪತ್ರಗಳ ನೀತಿಗಳನ್ನು ಆರಿಸಿಕೊಂಡಿದ್ದಾರೆ ಹಾಗೂ ಅವುಗಳನ್ನು ನಿರಂತರವಾಗಿ ಅಳವಡಿಸಿಕೊಂಡು ತೀರ್ಪುಗಳು ಮತ್ತು ಸಮಂಜಸವಾದ ಅಂದಾಜುಗಳನ್ನು ಮಾಡುತ್ತಾರೆ ಹಾಗೂ ಈ ಅವಧಿಯಲ್ಲಿ ಕಂಪನಿಯ ಲಾಭ ಮತ್ತು ನಷ್ಟವನ್ನು ಮತ್ತು ಆರ್ಥಿಕ ವರ್ಷದ ಕೊನೆಯಲ್ಲಿ ಕಂಪನಿಯ ವ್ಯವಹಾರಗಳ ಸ್ಥಿತಿಯ ನೈಜ ಮತ್ತು ನ್ಯಾಯಸಮ್ಮತ ನೋಟವನ್ನು ಹಾಗೂ ವಿವೇಕಯುತವಾಗಿ ನೀಡುವಂತೆ ಮಾಡಿದ್ದಾರೆ.

(ಸಿ) ನಿರ್ದೇಶಕರುಗಳು ಕಂಪನಿಗೆ ಸಂಬಂಧಿತ ಲೆಕ್ಕಪತ್ರ ದಾಖಲೆಗಳ ನಿರ್ವಹಣೆಗೆ ಸರಿಯಾದ ಮತ್ತು ಸಾಕಷ್ಟು ಕಾಳಜಿವಹಿಸಿ, ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ಕಂಪನಿಗಳ ಸ್ವತ್ತುಗಳನ್ನು ರಕ್ಷಿಸುವುದಕ್ಕೆ ಮತ್ತು ವಂಚಿಸುವ ಹಾಗೂ ಇತರೆ ಅಕ್ರಮಗಳನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚಲು ಕ್ರಮ ತೆಗೆದುಕೊಂಡಿದ್ದಾರೆ.

(ಡಿ) ನಿರ್ದೇಶಕರುಗಳು ವಾರ್ಷಿಕ ಲೆಕ್ಕಪತ್ರಗಳನ್ನು ಮುಂದುವರಿದುಕೊಂಡು ಹೋಗುವ ತತ್ವ (ಗೋಯಿಂಗ್ ಕನ್ಸರ್ನ್) ಆಧಾರದ ಮೇಲೆ ಸಿದ್ಧಪಡಿಸಿದ್ದಾರೆ.

(ಇ) ಅನ್ವಯವಾಗುವ ಎಲ್ಲಾ ಕಾನೂನು ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ, ನಿರ್ದೇಶಕರುಗಳು ಸರಿಯಾದ ವ್ಯವಸ್ಥೆಗಳನ್ನು ಕಂಡುಕೊಂಡಿದ್ದಾರೆ.

**(ಸಿ) ಪ್ರತಿ ಅವಲೋಕನಗಳ, ಮೀಸಲಾತಿ ಅಥವಾ ಪ್ರತಿಕೂಲ ಟೀಕೆ ಅಥವಾ ಹಕ್ಕು ನಿರಾಕರಣೆ ಕುರಿತು ಮಂಡಳಿಯಿಂದ ವಿವರಣೆ ಅಥವಾ ಪ್ರತಿಕ್ರಿಯೆಗಳು**

(i) ಶಾಸನಬದ್ಧ ಲೆಕ್ಕಪರಿಶೋಧಕರರಿಂದ ತಮ್ಮ ವರದಿಯನ್ನು ಅನುಬಂಧ–2 ಎಂದು ಲಗತ್ತಿಸಲಾಗಿದೆ.

(ಡಿ) ನಿಬಂಧನೆ 188ರ ಉಪ ನಿಬಂಧನೆ (1) ರಲ್ಲಿ ಸೂಚಿಸಿರುವಂತೆ, ಒಪ್ಪಂದಗಳ ಅಥವಾ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಇರುವ ವ್ಯವಸ್ಥೆಯ ವಿವರಗಳು.–ಯಾವುದೂ ಇಲ್ಲ.

(ಇ) ಕಂಪನಿಯ ವ್ಯವಹಾರಗಳ ಸ್ಥಿತಿ–ಹಿಂದಿನ ಪುಟ ಸಂಖ್ಯೆ 1 ರಿಂದ 83 ರಲ್ಲಿ ಸೂಚಿಸಿದಂತೆ.

**(ಎಫ್) ಯಾವುದಾದರೂ ಮೊತ್ತ ಇದ್ದಲ್ಲಿ, ಅದು ಯಾವುದೇ ಮೀಸಲುಗಳಿಗೆ ಸಾಗಿಸಲು ಪ್ರಸ್ತಾಪಿಸಿದ್ದಲ್ಲಿ–ಯಾವುದೇ ಮೀಸಲುಗೆ ಸಾಗಿಸಲು ಯಾವುದೇ ಮೊತ್ತವನ್ನು ಪ್ರಸ್ತಾಪಿಸಲಾಗಿಲ್ಲ.**

**(ಜಿ) ಯಾವುದಾದರೂ ಮೊತ್ತ ಇದ್ದಲ್ಲಿ, ಅದು ಡಿವಿಡೆಂಡ್ ರೂಪದಲ್ಲಿ ಪಾವತಿಸಲು ಶಿಫಾರಸ್ಸು ಮಾಡಿದ್ದಲ್ಲಿ–ಯಾವುದೇ ಮೊತ್ತ ಡಿವಿಡೆಂಡ್ ರೂಪದಲ್ಲಿ ಪಾವತಿಸಲು ಶಿಫಾರಸ್ಸು ಮಾಡಿಲ್ಲ.**

**(ಹೆಚ್) ಭೌತಿಕ ಬದಲಾವಣೆಗಳು ಮತ್ತು ಬದ್ಧತೆಗಳು, ಯಾವುದಾದರೂ ಇದ್ದಲ್ಲಿ, ಅದು ಕಂಪನಿಯ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವಂತಹದ್ದಾದಲ್ಲಿ, ಅದು ಕಂಪನಿಯ ಹಣಕಾಸು ಪತ್ರಗಳಿಗೆ ಸಂಬಂಧಿಸಿದ ಆರ್ಥಿಕ ವರ್ಷದ ನಡುವೆ ನಡೆದ ವಹಿವಾಟಾಗಿದ್ದಲ್ಲಿ, ವರದಿಯ ದಿನಾಂಕ – ಯಾವುದೂ ಇಲ್ಲ.**

**(ಐ) ಇಂಧನ ಸಂರಕ್ಷಣೆ, ತಂತ್ರಜ್ಞಾನ ಗ್ರಹಿಕೆ, ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹೋಗುವಿಕೆ;**

ಕಂಪನಿಯ ಕಾರ್ಯಾಚರಣೆಗಳಲ್ಲಿ ಯಾವುದೇ ಉತ್ಪಾದನೆ ಅಥವಾ ಸಂಸ್ಕರಣಾ ಚಟುವಟಿಕೆಗಳು ಒಳಗೊಂಡಿಲ್ಲವಾದ್ದರಿಂದ, ಇಂಧನ ಸಂರಕ್ಷಣೆ ಮತ್ತು ತಂತ್ರಜ್ಞಾನ ಗ್ರಹಿಕೆಗೆ ಸಂಬಂಧಿಸಿದ ವಿವರಗಳು ಕಂಪನಿಗಳ (ನಿರ್ದೇಶಕರ ಮಂಡಳಿಯ ವರದಿಯಲ್ಲಿ ವಿವರಗಳನ್ನು ಬಹಿರಂಗ ಪಡಿಸುವುದು) ನಿಯಮಗಳು, 1988 ರ ಪ್ರಕಾರ ಅನ್ವಯಿಸುವುದಿಲ್ಲ. ಪರಿಶೀಲಿಸಿದ ವರ್ಷದ ಅವಧಿಯಲ್ಲಿ ಯಾವುದೇ ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹೋಗುವಿಕೆ ಇರುವುದಿಲ್ಲ.

**(ಜೆ) ಕಂಪನಿಯ ಅಪಾಯ ನಿರ್ವಹಣಾ ನೀತಿಯ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಹೇಳಿಕೆ–ಯಾವುದೂ ಇಲ್ಲ.**

**(ಕೆ) ಕಂಪನಿಯು ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಸಂಬಂಧಿಸಿದ ಕ್ರಮಗಳಲ್ಲಿ ಅಭಿವೃದ್ಧಿಪಡಿಸುವ ಮತ್ತು ಜಾರಿಗೊಳಿಸುವ ನೀತಿಯ ವಿವರಗಳು.**

**22) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಮಿತಿ:**

ಕಂಪನಿಗಳ ಕಾಯ್ದೆ, 2013ರ ನಿಬಂಧನೆ 135 ರ ಪ್ರಕಾರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಮಿತಿಯನ್ನು ರಚಿಸಲಾಗಿದೆ. ಆ ರಚನೆಯು ಈ ಕೆಳಕಂಡಂತಿದೆ.

| ಕ್ರ. ಸಂ. | ಸದಸ್ಯರು ಶ್ರೀಯುತರು/ಶ್ರೀಮತಿ | ಹುದ್ದೆ | ಅವಧಿ | |
|---|---|---|---|---|
| | | | ಇಂದ | ರವರೆಗೆ |
| 1 | ಜಿ.ಕುಮಾರ್ ನಾಯಕ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 07/04/2021 | – |
| 2 | ಕಪಿಲ್ ಮೋಹನ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 18/11/2020 | 07/04/2022 |
| 3 | ಮಹೇಂದ್ರ ಜೈನ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು | 24/06/2019 | 18/11/2020 |

| | | | | |
|---|---|---|---|---|
| 4 | ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ<br>ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು | 06/09/2013 | – |
| 5 | ಡಾ. ಎನ್.ಮಂಜುಳ, ಭಾ.ಆ.ಸೇ<br>ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | ಸದಸ್ಯರು | 20/08/2019 | – |
| | ರಮ್ಯ.ಕೆ, ಎಫ್‌ಸಿಎಸ್,<br>ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ | ಸಂಚಾಲಕರು | 16/01/2019 | – |

**(i) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿ.**

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಂಡಿರುವ ಪ್ರತಿಯನ್ನು ಅನುಬಂಧ–3 ಎಂದು ಲಗತ್ತಿಸಲಾಗಿದೆ.

**(ii) ವರದಿಯ ವರ್ಷದ ಅವಧಿಯಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಸಭೆಗಳು ಈ ಕೆಳಕಂಡಂತೆ ನಡೆದಿದೆ.**

| ಕ್ರಮ ಸಂಖ್ಯೆ | ಸಭೆ ಸಂಖ್ಯೆ | ಸಭೆಯ ದಿನಾಂಕ |
|---|---|---|
| 1 | 8ನೇ ಸಭೆ | 17/02/2021 |

**(iii) 2020–21 ರ ಅವಧಿಯಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಕೊಡುಗೆ**

ಆರ್ಥಿಕ ವರ್ಷ 2020–21ರ ದಿನಾಂಕ: 31.03.2021 ರಂದು ಇದ್ದಂತೆ ಕಂಪನಿ ಕಾಯ್ದೆ, 2013 ಷಡ್ಯೂಲ್ ಗಿಟಟ ರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಚಟುವಟಿಕೆಗಳ ಪಟ್ಟಿಯ ಪ್ರಕಾರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ವೆಚ್ಚದ ಮೊತ್ತ ರೂ.11,36,67,504/– ಗಳನ್ನು ವ್ಯಹಿಸಲಾಗಿದೆ.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಚಟುವಟಿಕೆಗಳಿಗೆ ಖರ್ಚು ಮಾಡಿದ ಮೊತ್ತದ ವಿವರಗಳು ಈ ವರದಿಯ ಅನುಬಂಧ–3 ರಲ್ಲಿದೆ.

**(iv) ಆಧಾರಿತ ನಿಯಮಗಳು**

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು ಸಮರ್ಪಕ ಅಧಿಕಾರಗಳನ್ನು ಮತ್ತು ಆಧಾರಿತ ನಿಯಮಗಳನ್ನು ಹೊಂದಿದ್ದು, ಕಂಪನಿ ಕಾಯ್ದೆ, 2013 ರಲ್ಲಿ ನಮೂದಿಸಿರುವಂತೆ ಪರಿಣಾಮಕಾರಿ ಪಾತ್ರವನ್ನು ನಿರ್ವಹಿಸಬಹುದು. ಅದರಲ್ಲಿ ಈ ಕೆಳಕಂಡವುಗಳು ಒಳಗೊಂಡಿದೆ.

ಎ) ಮಂಡಳಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಲು ಮತ್ತು ಶಿಫಾರಸ್ಸು ಮಾಡುವುದು.

ಬಿ) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾಡಬೇಕಾದ ವೆಚ್ಚದ ಮೊತ್ತವನ್ನು ಶಿಫಾರಸ್ಸು ಮಾಡುವುದು.

ಸಿ) ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ನೀತಿಯ ಮೇಲ್ವಿಚಾರಣೆಯನ್ನು ಕಾಲಕಾಲಕ್ಕೆ ನಡೆಸುವುದು ಮತ್ತು

ಡಿ) ಕಂಪನಿಯಿಂದ ಕೈಗೊಂಡ ಚಟುವಟಿಕೆಗಳು ಅಥವಾ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಯೋಜನೆಗಳ/ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪಾರದರ್ಶಕ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸುವುದು.

**(23) ಶಾಸನಬದ್ಧ ಲೆಕ್ಕ ಪರಿಶೋಧಕರು**

ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ಕವಿಪ್ರನಿನಿಯ ಆರ್ಥಿಕ ವರ್ಷ 2020–21 ರ ಆರ್ಥಿಕ ಲೆಕ್ಕಪತ್ರ ನಿರೂಪಣೆಗಳ ಪರಿಶೋಧನೆ ನಡೆಸಲು ಮೆ॥ ಬಿ.ಕೆ.ರಾಮಾದ್ಯಾನಿ & ಕಂಪನಿ ಎಲ್ ಎಲ್ ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಶಾಸನಬದ್ಧ ಪರಿಶೋಧಕರನ್ನಾಗಿ ಪತ್ರ ಸಂಖ್ಯೆ ಸಿ.ಎ.ವಿ/ಸಿಒವೈ/ಕರ್ನಾಟಕ, ಕೆಎನ್‌ಟಿಆರ್‌ಎ(1)/1086 ದಿನಾಂಕ: 28/08/2020 ರಂದು ನೇಮಕ ಮಾಡಲಾಗಿದೆ.

**(24) ವೆಚ್ಚ ಲೆಕ್ಕ ಪರಿಶೋಧಕರು**

ನಿರ್ದೇಶಕರುಗಳ ಮಂಡಳಿ ದಿನಾಂಕ: 09.09.2020 ರಂದು ತನ್ನ 121ನೇ ಸಭೆಯಲ್ಲಿ ಕವಿಪ್ರನಿನಿಯ ಆರ್ಥಿಕ ವರ್ಷ 2020–21 ರ ವೆಚ್ಚ ಲೆಕ್ಕ ದಾಖಲೆಗಳನ್ನು ಪರಿಶೀಲಿಸಲು ಮೆ॥ ಕೆಪಿಆರ್ & ಅಸೋಸಿಯೇಟ್ಸ್, ಬೆಂಗಳೂರು ಇವರನ್ನು ವೆಚ್ಚ ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ.

**(25) ಸೆಕ್ರೆಟೇರಿಯಲ್ ಪರಿಶೋಧಕರು**

ಕಂಪನಿ ಕಾಯ್ದೆ, 2013 ರ ಅನುಸೂಚಿ 204 ರ ಅಡಿಯಲ್ಲಿ ನಿರ್ದೇಶಕರುಗಳ ಮಂಡಳಿಯು ಶ್ರೀ ಅಂಕುಶ್ ಸೇತಿ, ಅಭ್ಯಾಸ ನಿರತ ಕಂಪನಿ ಕಾರ್ಯದರ್ಶಿ ಇವರನ್ನು ದಿನಾಂಕ: 28.06.2019 ರಂದು ತನ್ನ 115ನೇ ಸಭೆಯಲ್ಲಿ ಕವಿಪ್ರನಿನಿಯ ಆರ್ಥಿಕ ವರ್ಷ 2018–19, 2019–20 ಮತ್ತು 2020–21 ರ ಸೆಕ್ರೆಟೇರಿಯಲ್ ಪರಿಶೋಧಕರನ್ನಾಗಿ ನೇಮಕ ಮಾಡಲಾಗಿದೆ.

**(26) ಕೃತಜ್ಞತೆಗಳು**

ಕವಿಪ್ರನಿನಿಗೆ ಎಲ್ಲಾ ರೀತಿಯ ನೆರವು ಹಾಗೂ ಮಾರ್ಗದರ್ಶನ ನೀಡಿದ ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ, ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ವಿದ್ಯುತ್ ವಿತ್ತೀಯ ನಿಗಮ ನಿಯಮಿತ, ವಾಣಿಜ್ಯ ಬ್ಯಾಂಕುಗಳು ಹಾಗೂ ಇತರ ಆರ್ಥಿಕ ಸಂಸ್ಥೆಗಳು, ನಿಗಮ ವ್ಯವಹರಣೆಗಳ ಸಚಿವಾಲಯ, ರಿಜಿಸ್ಟ್ರಾರ್ ಆಫ್ ಕಂಪನೀಸ್ ಹಾಗೂ ಸಾರ್ವಜನಿಕರಿಗೆ ನಿರ್ದೇಶಕ ಮಂಡಳಿಯು ತನ್ನ ಅಭಿನಂದನೆಯನ್ನು ಸಲ್ಲಿಸುತ್ತದೆ.

ಕಂಪನಿಯು ನಿರಂತರವಾಗಿ ಬೆಳೆದು ಅಭಿವೃದ್ಧಿ ಹೊಂದಲು ಎಲ್ಲಾ ಹಂತಗಳಲ್ಲಿ ಅವಿರತ ಪರಿಶ್ರಮ ಹಾಗೂ ಕೊಡುಗೆಯನ್ನು ನೀಡಿದ ಅಧಿಕಾರಿ ಹಾಗೂ ನೌಕರರ ವರ್ಗಕ್ಕೆ ನಿಗಮದ ಮಂಡಳಿಯು ಅಭಿನಂದಿಸುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿ ಪರವಾಗಿ

ಸಹಿ/–
(ವಿ.ಸುನೀಲ್ ಕುಮಾರ್)
ಅಧ್ಯಕ್ಷರು, ಕವಿಪ್ರನಿನಿ

**ಅನುಬಂಧ–1**

**ನಮೂನೆ ಸಂಖ್ಯೆ ಎಂ.ಜಿ.ಟಿ–9**
**ದಿನಾಂಕ 31ನೇ ಮಾರ್ಚ್ 2021 ರಂದು ಮುಕ್ತಾಯಗೊಂಡ**
**ಆರ್ಥಿಕ ವರ್ಷದ ವಾರ್ಷಿಕ ಸಲ್ಲಿಕೆಗಳ ಸಾರಾಂಶ**
**(ಕಂಪನಿ ಕಾಯ್ದೆ, 2013ರ ಪ್ರಕರಣ 92(3) ಹಾಗೂ ಕಂಪನಿ (ವ್ಯವಸ್ಥಾಪನೆ ಮತ್ತು ಆಡಳಿತ)**
**ನಿಯಮಗಳು, 2014ರ ನಿಯಮ 12(1)ರ ಅನುಸರಣೆಯಾಗಿ)**

## I. ನೊಂದಾವಣೆ ಮತ್ತು ಇತರ ವಿವರಗಳು:

| | | |
|---|---|---|
| i | ಸಿ.ಐ.ಎನ್. | ಯು40109ಕೆಎ1999ಎಸ್‌ಜಿಸಿ025521 |
| ii | ನೋಂದಣಿ ದಿನಾಂಕ | 28–07–1999 |
| iii | ಕಂಪನಿಯ ಹೆಸರು | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ |
| iv | ವರ್ಗ/ಕಂಪನಿಯ ಉಪ ವರ್ಗ | ಸರ್ಕಾರದ ಕಂಪನಿ |
| v | ನೋಂದಣಿ ಕಛೇರಿಯ ವಿಳಾಸ ಹಾಗೂ ಸಂಪರ್ಕ ವಿವರ | ಕಂಪನಿ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು–560 009 |
| vi | ಲಿಸ್ಟೆಡ್ ಕಂಪನಿಯೇ | ಲಿಸ್ಟೆಡ್ ಕಂಪನಿಯಲ್ಲ |
| vii | ರಿಜಿಸ್ಟ್ರಾರ್ ಹಾಗೂ ವರ್ಗಾವಣೆ ಕಾರ್ಯಬಾರಿಯ ಹೆಸರು, ವಿಳಾಸ ಹಾಗೂ ಸಂಪರ್ಕ ವಿವರ | ಅನ್ವಯಿಸುವುದಿಲ್ಲ |

### II. ಕಂಪನಿಯ ಮೂಲ ವ್ಯವಹಾರಿಕ ಚಟುವಟಿಕೆಗಳು:

ಕಂಪನಿಯ ಒಟ್ಟಾರೆ ವಹಿವಾಟು ಗಳಿಕೆಯ ಶೇ. 10 ಅಥವಾ ಹೆಚ್ಚಿನ ಪಾಲಿರುವ ಎಲ್ಲಾ ವ್ಯವಹಾರಿಕ ಚಟುವಟಿಕೆಗಳನ್ನು ತೋರಿಸತಕ್ಕದ್ದು:

| ಕ್ರ.ಸಂ | ಮುಖ್ಯ ಉತ್ಪಾದನೆ/ಸೇವೆಯ ಹೆಸರು ಹಾಗೂ ವಿವರ | ಉತ್ಪಾದಿತ/ಸೇವೆಯ ಎನ್.ಐ.ಸಿ ಸಂಕೇತ | ಕಂಪನಿಯ ಒಟ್ಟು ವಹಿವಾಟಿನ ಶೇಕಡಾ ಪಾಲು |
|---|---|---|---|
| 1 | ಪ್ರಸರಣ | 35/07 | 100% |

### III. ಹೊಂದಿರುವಿಕೆ. ಪೂರಕ, ಸಹ ಕಂಪನಿಗಳ ವಿವರಗಳು:

| ಕ್ರ.ಸಂ | ಕಂಪನಿಯ ಹೆಸರು ಮತ್ತು ವಿಳಾಸ | ಸಿಐಎನ್/ ಜಿಎಲ್ಎನ್ | ಹೊಂದುವಿಕೆ/ ಪೂರಕ/ಸಹ ಕಂಪನಿ | ಹೋದಿರುವ ಷೇರಿನ ಶೇ. ಪ್ರಮಾಣ | ಅನ್ವಯಿತ ಪರಿಚ್ಛೇಧ |
|---|---|---|---|---|---|
| 1 | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

**IV. ಷೇರು ಹೊಂದಿರುವಿಕೆ ಸ್ವರೂಪ (ಸ್ವಾಮ್ಯ ಷೇರುಗಳ ಬಂಡವಾಳವನ್ನು ಒಟ್ಟು ಸ್ವಾಮ್ಯದ ಶೇಕಡಾ ಪ್ರಮಾಣದಂತೆ)**

**i. ಪ್ರವರ್ಗವಾರು ಷೇರು**

| ಷೇರುದಾರರ ಪ್ರವರ್ಗ | ವರ್ಷದ ಆರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ | | | | ವರ್ಷದ ಆರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ | | | | ಪ್ರಸಕ್ತ ವರ್ಷದಲ್ಲಿ ಶೇಕಡಾ ಬದಲಾವಣೆ |
|---|---|---|---|---|---|---|---|---|---|
| | ಡೀಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರಿನ ಶೇ. ಪ್ರಮಾಣ | ಡೀಮ್ಯಾಟ್ | ಭೌತಿಕ | ಒಟ್ಟು | ಒಟ್ಟು ಷೇರಿನ ಶೇ. ಪ್ರಮಾಣ | |
| ಎ. ಪ್ರವರ್ತಕ | | | | | | | | | |
| **1) ಭಾರತೀಯ** | | | | | | | | | |
| ಎ. ವೈಯಕ್ತಿಕ/ಹಿಂ.ಅ.ಕು. | | | | | | | | | |
| ಬಿ. ಕೇಂದ್ರ ಸರ್ಕಾರ | | | | | | | | | |
| ಸಿ. ರಾಜ್ಯ ಸರ್ಕಾರ(ಗಳು) | – | 21823225 | 21823225 | 100% | | 21823225 | 21823225 | 100% | ಇಲ್ಲ |
| ಡಿ. ನಿಗಮ ಸಂಸ್ಥೆಗಳು | | | | | | | | | |
| ಇ. ಬ್ಯಾಂಕು/ಆ.ಸಂ. | | | | | | | | | |
| ಎಫ್. ಇತರೆ ಯಾವುದೇ | | | | | | | | | |
| **ಉಪ ಮೊತ್ತ ಎ (1)** | – | 21823225 | 21823225 | 100% | | 21823225 | 21823225 | 100% | ಇಲ್ಲ |
| **2) ವಿದೇಶಿ** | | | | | | | | | |
| ಜಿ. ಅ.ಭಾ–ವ್ಯಕ್ತಿಗಳು | | | | | | | | | |
| ಹೆಚ್. ಇತರೆ–ವ್ಯಕ್ತಿಗಳು | | | | | | | | | |
| ಐ. ನಿಗಮ ಸಂಸ್ಥೆಗಳು | | | | | | | | | |
| ಜೆ. ಬ್ಯಾಂಕು/ಆ.ಸಂ. | | | | | | | | | |
| ಕೆ. ಇತರೆ ಯಾವುದೇ | | | | | | | | | |
| **ಉಪ ಮೊತ್ತ ಎ (2)** | – | ಇಲ್ಲ | ಇಲ್ಲ | ಇಲ್ಲ | – | ಇಲ್ಲ | ಇಲ್ಲ | ಇಲ್ಲ | ಇಲ್ಲ |
| **ಬಿ. ಸಾರ್ವಜನಿಕ ಷೇರು ಹೊಂದಿರುವಿಕೆ** | | | | | | | | | |
| **1. ಆರ್ಥಿಕ ಸಂಸ್ಥೆಗಳು** | | | | | | | | | |
| ಎ. ಮ್ಯುಚುವಲ್ ಫಂಡ್ಸ್ | | | | | | | | | |
| ಬಿ. ಬ್ಯಾಂಕು/ಆ.ಸಂ. | | | | | | | | | |
| ಸಿ. ಕೇಂದ್ರ ಸರ್ಕಾರ | | | | | | | | | |
| ಡಿ. ರಾಜ್ಯ ಸರ್ಕಾರ(ಗಳು) | | | | | | | | | |
| ಇ. ವೆಂಚರ್ ಬಂಡವಾಳ ನಿಧಿ | | | | | | | | | |
| ಎಫ್. ವಿಮಾ ಕಂಪನಿಗಳು | | | | | | | | | |
| ಜಿ. ಎಫ್.ಐ.ಐ ಗಳು | | | | | | | | | |
| ಎಚ್. ವಿದೇಶಿ ವೆಂಚರ್ ಬಂಡವಾಳ ನಿಧಿ | | | | | | | | | |
| ಐ. ಇತರೆ (ತಿಳಿಸಿ) | | | | | | | | | |
| **ಉಪ ಮೊತ್ತ ಬಿ (1)** | | | | | | | | | |
| **2. ಸಂಸ್ಥೇತರ** | | | | | | | | | |

| | | | | | | | | | |
|---|---|---|---|---|---|---|---|---|---|
| ಎ. ನಿಗಮ ಸಂಸ್ಥೆಗಳು<br>1. ಭಾರತೀಯ<br>2. ಸಾಗರೋತ್ತರ | | | | | | | | | |
| ಬಿ. ವೈಯಕ್ತಿಕ<br>(i) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳವನ್ನು ಹೊಂದಿರುವ ವೈಯಕ್ತಿಕ ಷೇರುದಾರರು<br>(ii) ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳವನ್ನು ಹೊಂದಿರುವ ವೈಯಕ್ತಿಕ ಷೇರುದಾರರು | | | | | | | | | |
| ಸಿ. ಇತರೆ (ತಿಳಿಸಿ) | – | ಇಲ್ಲ | ಇಲ್ಲ | ಇಲ್ಲ | – | ಇಲ್ಲ | ಇಲ್ಲ | ಇಲ್ಲ | ಇಲ್ಲ |
| **ಉಪ ಮೊತ್ತ ಬಿ (2)** | | | | | | | | | |
| ಒಟ್ಟು ಸಾರ್ವಜನಿಕ ಷೇರು ಹೊಂದಿರುವಿಕೆ<br><br>ಬಿ = ಬಿ(1)+ಬಿ(2) | | | | | | | | | |
| **ಸಿ. ಜಿ.ಡಿ.ಆರ್ ಗಳು ಮತ್ತು ಎ.ಡಿ.ಆರ್‌ಗಳಿಗಾಗಿ ಅಭಿರಕ್ಷಕರು ಹೊಂದಿರುವ ಷೇರು** | | | | | | | | | |
| **ಒಟ್ಟಾರೆ** (ಎ+ಬಿ+ಸಿ) | – | 21823225 | 21823225 | 100% | – | 21823225 | 21823225 | 100% | ಇಲ್ಲ |

**ii. ಪ್ರವರ್ತಕರ ಷೇರು ಹೊಂದಿರುವಿಕೆ :**

| ಕ್ರ ಸಂ | ಷೇರುದಾರರ ಹೆಸರು | ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳು | | | ವರ್ಷದ ಅಂತ್ಯದಲ್ಲಿ ಹೊಂದಿದ್ದ ಷೇರುಗಳು | | | ಪ್ರಸಕ್ತ ವರ್ಷದಲ್ಲಿ ಹೊಂದಿರುವ ಷೇರುಗಳಲ್ಲಿ ಬದಲಾವಣೆ |
|---|---|---|---|---|---|---|---|---|
| | | ಷೇರು –ಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇಕಡ ಪ್ರಮಾಣ | ಒಟ್ಟು ಷೇರುಗಳಿಗೆ ಎದಿರಾಗಿ ಒತ್ತೆ ಇಟ್ಟ/ಭೋಗ್ಯ ಇಟ್ಟ ಷೇರು ಪ್ರಮಾಣ | ಷೇರುಗಳ ಸಂಖ್ಯೆ | ಕಂಪನಿಯ ಒಟ್ಟು ಷೇರುಗಳ ಶೇಕಡ ಪ್ರಮಾಣ | ಒಟ್ಟು ಷೇರುಗಳಿಗೆ ಎದಿರಾಗಿ ಒತ್ತೆ ಇಟ್ಟ/ಭೋಗ್ಯ ಇಟ್ಟ ಷೇರು ಪ್ರಮಾಣ | |
| 1 | ಡಾ॥ ಎನ್. ಮಂಜುಳಾ | 1 | 0 | | 1 | 0 | | – |
| 2 | ಶ್ರೀ ಕಪಿಲ್ ಮೋಹನ್ | 1 | 0 | | 1 | 0 | | – |
| 3 | ಶ್ರೀ ಐ.ಎಸ್.ಎನ್. ಪ್ರಸಾದ್ | 1 | 0 | | 1 | 0 | | – |
| 4 | ಶ್ರೀ ವಿ. ಪೊನ್ನೂರಾಜು | 1 | 0 | | 1 | 0 | | – |
| 5 | ಶ್ರೀ ರಾಜೇಶ್ ಗೌಡ ಎಂ.ಬಿ. | 1 | 0 | | 1 | 0 | | – |

| | | | | | | | | |
|---|---|---|---|---|---|---|---|---|
| 6 | ಶ್ರೀ ಆರ್. ನಾಗರಾಜ | 1 | 0 | | 0 | 0 | | –100% |
| 7 | ಶ್ರೀ ಸಿದ್ಲಿಂಗಪ್ಪ ತೇಲಿ | 0 | 0 | | 1 | 0 | | +100% |
| 8 | ಶ್ರೀ ಬಿ.ಕೆ.ಉದಯ ಕುಮಾರ್ | 1 | 0 | | 0 | 0 | | –100% |
| 9 | ಶ್ರೀ ಚಂದ್ರಶೇಖರಯ್ಯ | 0 | 0 | | 1 | 0 | | +100% |
| 10 | ಗೌ॥ ರಾಜ್ಯಪಾಲರು, ಕರ್ನಾಟಕ ರಾಜ್ಯ | **21823218** | **100** | | **21823218** | **100** | | – |
| | **ಒಟ್ಟು** | **21823225** | **100%** | | **21823225** | **100%** | | |

**iii. ಪ್ರವರ್ತಕರಲ್ಲಿ ಷೇರು ಹೊಂದಿರುವಿಕೆ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ, ದಯವಿಟ್ಟು ತಿಳಿಸಿ)**

| **ಕ್ರ ಸಂ** | | **ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳು** | | **ಪ್ರಸಕ್ತ ವರ್ಷದಲ್ಲಿ ಸಂಚಿತಗೊಂಡ ಷೇರುಗಳು** | |
|---|---|---|---|---|---|
| | | **ಷೇರುಗಳ ಸಂಖ್ಯೆ** | **ಕಂಪನಿಯ ಒಟ್ಟು ಷೇರುಗಳ ಶೇ. ಪ್ರಮಾಣ** | **ಷೇರುಗಳ ಸಂಖ್ಯೆ** | **ಕಂಪನಿಯ ಒಟ್ಟು ಷೇರುಗಳ ಶೇ. ಪ್ರಮಾಣ** |
| 1 | ವರ್ಷದ ಪ್ರಾರಂಭದಲ್ಲಿ | 21823225 | 100 | 21823225 | 100 |
| 2 | ಪ್ರಸಕ್ತ ವರ್ಷದಲ್ಲಿ ಪ್ರವರ್ತಕರ ಷೇರುಗಳ ದಿನಾಂಕವಾರು ಏರಿಕೆ/ ಇಳಿಕೆ, ಏರಿಕೆ/ಇಳಿಕೆಗೆ ಕಾರಣ ತಿಳಿಸುವುದು (ಉದಾ: ಹಂಚಿಕೆ / ವರ್ಗಾವಣೆ/ ಬೋನಸ್/ ರಿಯಾಯಿತಿ ದರದ ಸ್ವಾಮ್ಯ) | ಇಲ್ಲ | ಇಲ್ಲ | ಇಲ್ಲ | ಇಲ್ಲ |
| | ವರ್ಷಾಂತ್ಯದಲ್ಲಿ | 21823225 | 100 | 21823225 | 100 |

**ಋಣದ ಮೊತ್ತ:**

ಬಾಕಿ ಇರುವ/ಸಂಚಿತಗೊಂಡ ಆದರೆ ಪಾವತಿಗೆ ಬಾಕಿ ಇರದ ಬಡ್ಡಿಯನ್ನೂ ಒಳಗೊಂಡು ಕಂಪನಿಯ ಸಾಲದ ಮೊಬಲಗು:

| **ವಿವರಗಳು** | **ಠೇವಣಿಯನ್ನು ಹೊರತುಪಡಿಸಿದ ಸುರಕ್ಷಿತ ಸಾಲಗಳು** | **ಸುರಕ್ಷಿತಗೊಳಿಸದ ಸಾಲಗಳು** | **ಠೇವಣಿಗಳು** | **ಒಟ್ಟು ಸಾಲದ ಮೊಬಲಗು** |
|---|---|---|---|---|
| ಆರ್ಥಿಕ ವರ್ಷದ ಪ್ರಾರಂಭದಲ್ಲಿ ಇದ್ದ ಸಾಲದ ಮೊಬಲಗು | | | | |
| i) ಮೂಲ ಮೊಬಲಗು | 66989918636 | 8017822163 | 0 | 75007740799 |
| ii) ಬಾಕಿ ಬಡ್ಡಿ, ಆದರೆ ಪಾವತಿಸದಿರುವುದು | 0 | 0 | 0 | 0 |
| iii) ಸಂಚಿತಗೊಂಡ ಬಡ್ಡಿ, ಆದರೆ ಪಾವತಿಯಾಗದಿರುವುದು | 47021442 | 412568 | 0 | 47434010 |

| | | | | |
|---|---|---|---|---|
| **ಒಟ್ಟು (i+ii+iii)** | 67036940078 | 8018234731 | 0 | 75055174809 |
| ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಾಲದ ಮೊಬಲಗಿನಲ್ಲಿ ಬದಲಾವಣೆ | | | | |
| ಸೇರ್ಪಡೆ | 15820000000 | 8000000000 | 0 | 23820000000 |
| ಇಳಿತ | 6894206579 | 9255940722 | 0 | 16150147301 |
| **ನಿವ್ವಳ ಬದಲಾವಣೆ** | **8925793421** | **–1255940722** | 0 | **7669852699** |
| ಬಡ್ಡಿ ಮೊಬಲಗು | | | | |
| ಸೇರ್ಪಡೆ | | | | |
| ಇಳಿತ | | | | |
| ನಿವ್ವಳ ಬದಲಾವಣೆ | | | | |
| ಆರ್ಥಿಕ ವರ್ಷದ ಅಂತ್ಯದಲ್ಲಿ ಸಾಲದ ಮೊಬಲಗು | | | | |
| i) ಮೂಲ ಮೊಬಲಗು | 75915712057 | 6761881441 | 0 | 82677593498 |
| ii) ಬಾಕಿ ಬಡ್ಡಿ, ಆದರೆ ಪಾವತಿಸದಿರುವುದು | 0 | 0 | 0 | 0 |
| iii) ಸಂಚಿತಗೊಂಡ ಬಡ್ಡಿ, ಆದರೆ ಪಾವತಿಯಾಗದಿರುವುದು | 37156106 | 1239041 | 0 | 38395147 |
| **ಒಟ್ಟು (i+ii+iii)** | **75952868163** | **6763120482** | 0 | **82715988645** |

**V. ನಿರ್ದೇಶಕರು ಹಾಗೂ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ:**

**ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು ವ್ಯವಸ್ಥಾಪಕರು:**

| ಕ್ರ. ಸಂ. | ಸಂಭಾವನೆಯ ವಿವರ | ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು | ಒಟ್ಟು ಮೊಬಲಗು |
|---|---|---|---|
| 1 | ಒಟ್ಟು ಸಂಬಳ<br>ಆರ್ಥಿಕ ವರ್ಷ 2020–21<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(2) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳ ಬದಲು ಲಾಭ | ಡಾ॥ ಎನ್.ಮಂಜುಳ, ವ್ಯವಸ್ಥಾಪಕ ನಿರ್ದೇಶಕರು, (01.04.2020 ರಿಂದ 31.03.2021 ರವರೆಗೆ) | ರೂ.26,40,648.00 |

| | | | |
|---|---|---|---|
| 2 | ಒಟ್ಟು ಸಂಬಳ<br>ಆರ್ಥಿಕ ವರ್ಷ 2020-21<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(2) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳ ಬದಲು ಲಾಭ | ಶ್ರೀ ಕೆ.ಸಿದ್ದರಾಜು, ನಿರ್ದೇಶಕರು (ಪ್ರಸರಣ), (01.04.2020 ರಿಂದ 07.10.2020 ರವರೆಗೆ) | ರೂ.15,17,084.00 |
| 3 | ಒಟ್ಟು ಸಂಬಳ<br>ಆರ್ಥಿಕ ವರ್ಷ 2020-21<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ | ಶ್ರೀ ಉದಯಕುಮಾರ್.ಬಿ.ಕೆ, ನಿರ್ದೇಶಕರು (ಪ್ರಸರಣ), (08.102020 ರಿಂದ 31.03.2021 ರವರೆಗೆ) | ರೂ.52,70,772.00 |
| 4 | ಒಟ್ಟು ಸಂಬಳ<br>ಆರ್ಥಿಕ ವರ್ಷ 2020-21<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(2) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳ ಬದಲು ಲಾಭ | ಶ್ರೀ ಆರ್.ನಾಗರಾಜ, ನಿರ್ದೇಶಕರು(ಹಣಕಾಸು), (01.04.2020 ರಿಂದ 21.05.2020 ರವರೆಗೆ) | ರೂ.38,418.00 |
| 5 | ಒಟ್ಟು ಸಂಬಳ<br>ಆರ್ಥಿಕ ವರ್ಷ 2020-21<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(2) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳ ಬದಲು ಲಾಭ | ಶ್ರೀ ಸಿದ್ಲಿಂಗಪ್ಪ ತೇಲಿ, ನಿರ್ದೇಶಕರು(ಹಣಕಾಸು), (21.05.2020 ರಿಂದ 31.03.2021 ರವರೆಗೆ) | ರೂ.29,35,677.00 |

| | | | |
|---|---|---|---|
| 6 | ಒಟ್ಟು ಸಂಬಳ<br>ಆರ್ಥಿಕ ವರ್ಷ 2020–21<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(2) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೇಧ 17(3) ರ ಅಡಿಯಲ್ಲಿ ಸಂಬಳ ಬದಲು ಲಾಭ | ಶ್ರೀ ಗಂಗಾಧರಸ್ವಾಮಿ ಜಿ.ಎಂ ನಿರ್ದೇಶಕರು (ಆ ಮತ್ತು ಮಾ.ಸಂ), (01.04.2020 ರಿಂದ 31.03.2021 ರವರೆಗೆ) | ರೂ.14,23,297.00 |
| 7 | **ಒಟ್ಟು** | | **ರೂ.1,38,25,896.00** |
| 8 | ಷೇರುಗಳ ಆಯ್ಕೆ | | --- |
| 9 | ರಿಯಾಯಿತಿ ದರದ ಸ್ವಾಮ್ಯ | | --- |
| 10 | ಕಾರ್ಯಭಾರಿ ಶುಲ್ಕ<br>– ಲಾಭದ ಶೇಕಡಾ ಪ್ರಮಾಣದಂತೆ<br>– ಇತರೆ, ತಿಳಿಸಿ | | --- |
| 11 | ಇತರೆ, ತಿಳಿಸಿ | | --- |
| 12 | **ಒಟ್ಟು (ಎ)** | | **ರೂ.1,38,25,896.00** |
| | **ಅಧಿನಿಯಮದ ಪ್ರಕಾರ ಮಿತಿ** | | |

**ಇತರ ನಿರ್ದೇಶಕರುಗಳಿಗೆ ಸಂಭಾವನೆ :**

| ಕ್ರ. ಸಂ | ಸಂಭಾವನೆಯ ವಿವರಗಳು | ವ್ಯ.ನಿ/ಪೂ.ನಿ/ವ್ಯವಸ್ಥಾಪಕರ ಹೆಸರು | | | ಒಟ್ಟು ಮೊಬಲಗು |
|---|---|---|---|---|---|
| | | **ಕ್ರ.ಸಂ** | **ನಿರ್ದೇಶಕರ ಹೆಸರು** | **ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ** | |
| 1 | ಸ್ವಾಯತ್ತ ನಿರ್ದೇಶಕರು<br>• ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ<br>• ಕಾರ್ಯಭಾರಿ ಶುಲ್ಕ–ಇಲ್ಲ<br>• ಇತರೆ, ಟಿಎ ಮತ್ತು ಡಿಎ | 1 | ಶ್ರೀ. ಪಿ. ರವಿಕುಮಾರ್ | 2000/– | |
| | | 2 | ಶ್ರೀ. ಮಹೇಂದ್ರ ಜೈನ್ | 8000/– | |
| | | 3 | ಶ್ರೀ. ಐ.ಎಸ್.ಎನ್‌ಪ್ರಸಾದ್ | 20000/– | |
| | | 4 | ಶ್ರೀ. ವಿ. ಪೊನ್ನೂರಾಜು | 6000/– | |
| | | 5 | ಶ್ರೀ. ಕಪಿಲ್ ಮೋಹನ್ | 16000/– | |
| | | 6 | ಶ್ರೀಎಂ.ಬಿ ರಾಜೇಶ್ ಗೌಡ | 12000/– | |
| | | 7 | ಶ್ರೀ. ಈ. ವಿ ರಮಣ ರೆಡ್ಡಿ | 6000/– | |
| | ಒಟ್ಟು (1) | | | | ರೂ.70,000/– |

| | | | | | |
|---|---|---|---|---|---|
| 2 | ಇತರೆ ಕಾರ್ಯವಾಹಿಯೇತರ ನಿರ್ದೇಶಕರು<br>• ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ | ಕ್ರ.ಸಂ | ನಿರ್ದೇಶಕರ ಹೆಸರು | ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ | |
| | | 1 | ಶ್ರೀ. ಟಿ.ಆರ್. ರಾಮಕೃಷ್ಣಯ್ಯ | 8000/– | |
| | | 2 | ಶ್ರೀ. ಶಿವಪ್ರಕಾಶ್ ಟಿ.ಎಂ. | 8000/– | |
| | ಒಟ್ಟು (2) | | | | ರೂ.16,000/– |
| 3 | ಇತರೆ ಕಾರ್ಯವಾಹಿಯೇತರ ನಿರ್ದೇಶಕರು<br>ಮಂಡಳಿ ಸಭೆಗಳಿಗೆ ಹಾಜರಾಗಲು ಸಂಭಾವನಾ ಶುಲ್ಕ | ಕ್ರ.ಸಂ | ನಿರ್ದೇಶಕರ ಹೆಸರು | ಸಭೆಗೆ ಹಾಜರಾಗಲು ಸಂಭಾವನಾ ಶುಲ್ಕ | |
| | | 1 | ಶ್ರೀ. ಟಿ.ರಾಮ ನಾಯಕ್ | 6000/– | |
| | | 2 | ಶ್ರೀ. ಪ್ರಶಾಂತ್.ಆರ್.ಮಖನೂರ್ | 6000/– | |
| | | 3 | ಮಹದೇವಪ್ಪ ಶಿವಪ್ಪ ಅಲಗವಾಡಿ | 6000/– | |
| | | 4 | ಭನುಪ್ರಕಾಶ್.ಎಂ.ಎಸ್. | 3000/– | |
| | | 5 | ಭವಾನಿ ರವ್ ಮೋರೆ | 3000/– | |
| | ಒಟ್ಟು (3) | | | | ರೂ.24,000/– |
| | ಒಟ್ಟು (1+2+3) | | | | ರೂ.1,10,000/– |
| | ವ್ಯವಸ್ಥಾಪಕ ಮಂಡಳಿಯ ಒಟ್ಟು ಸಂಭಾವನೆ (ಎ+ಬಿ) | | | | |
| | ಅಧಿನಿಯಮದ ಪ್ರಕಾರ ಒಟ್ಟಾರೆ ಮಿತಿ | | | | |

**ಸಿ. ವ್ಯ.ನಿ/ಪೂ.ನಿ/ವ್ಯವಸ್ಥಾಪಕರನ್ನು ಹೊರತುಪಡಿಸಿದಂತೆ ಇತರ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಸಂಭಾವನೆ**

| ಕ್ರ.ಸಂ | ಸಂಭಾವನೆಯ ವಿವರ | ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ | | | |
|---|---|---|---|---|---|
| | | ಸಿ.ಇ.ಓ. | ಕಂಪನಿ ಕಾರ್ಯದರ್ಶಿ | ಸಿ.ಎಫ್.ಓ | ಒಟ್ಟು |
| 1 | ಒಟ್ಟು ಸಂಬಳ<br>ಎ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆಧ 17(1) ರಲ್ಲಿ ಒಳಪಟ್ಟಿರುವ ಅವಕಾಶಗಳ ಪ್ರಕಾರ ಸಂಬಳ<br>ಬಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆಧ 17(1) ರ ಅಡಿಯಲ್ಲಿ ವೇತನ ಸಂಬಂಧಿ ಸೌಲಭ್ಯಗಳ ಮೌಲ್ಯ<br>ಸಿ) ಆದಾಯ ತೆರಿಗೆ ಕಾಯ್ದೆ, 1961ರ ಪರಿಚ್ಛೆಧ 17(1) ರ ಅಡಿಯಲ್ಲಿ ಸಂಬಳ ಬದಲು ಲಾಭ | | ಶ್ರೀಮತಿ ರಮ್ಯ ಕಣ್ಣನ್,<br>ಕಂಪನಿ ಕಾರ್ಯದರ್ಶಿ,<br>ಕವಿಪ್ರನಿನಿ | | ರೂ.17,60,232.00 |
| 2 | ಷೇರುಗಳ ಆಯ್ಕೆ | | | | ---- |
| 3 | ರಿಯಾಯಿತಿ ದರದ ಸ್ವಾಮ್ಯ | | | | ---- |

| | | | | | |
|---|---|---|---|---|---|
| 4 | ಕಾರ್ಯಭಾರಿ ಶುಲ್ಕ<br>– ಲಾಭದ ಶೇಕಡಾ ಪ್ರಮಾಣದಂತೆ<br>– ಇತರೆ, ತಿಳಿಸಿ | | | | ---- |
| 5 | ಇತರೆ, ತಿಳಿಸಿ | | | | ---- |
| | ಒಟ್ಟು | | | | ರೂ. 17,60,232.00 |

**I. ದಂಡ/ಶಿಕ್ಷೆ/ಅಪರಾಧಗಳಿಗೆ ಒಟ್ಟುಗೂಡಿತ ದಂಡ**

| ಸ್ವರೂಪ | ಕಂಪನಿ ಕಾಯ್ದೆಯ ಪ್ರಕರಣ | ಸಂಕ್ಷಿಪ್ತ ವಿವರಣೆ | ವಿಧಿಸಲ್ಪಟ್ಟ ದಂಡ/ಶಿಕ್ಷೆ/ಒಟ್ಟುಗೂಡಿತ ದಂಡಗಳ ವಿವರ | ಪ್ರಾಧಿಕಾರ(ಆರ್.ಡಿ/ಎನ್.ಸಿ.ಎಲ್.ಟಿ/ ನ್ಯಾಯಾಲಯ) | ಸಲ್ಲಿಸಿದ ಮನವಿ(ಇದ್ದರೆ, ವಿವರ ಒದಗಿಸಿ) |
|---|---|---|---|---|---|
| **ಎ. ಕಂಪನಿ** | | | | | |
| ದಂಡ | | | | | |
| ಶಿಕ್ಷೆ | | | | | |
| ಒಟ್ಟುಗೂಡಿದ ದಂಡ | | | | | |
| **ಬಿ. ನಿರ್ದೇಶಕರು** | | | | | |
| ದಂಡ | | | | ಇಲ್ಲ | |
| ಶಿಕ್ಷೆ | | | | | |
| ಒಟ್ಟುಗೂಡಿದ ದಂಡ | | | | | |
| **ಸಿ. ತಪ್ಪಿತಸ್ಥ ಇತರ ಅಧಿಕಾರಿಗಳು** | | | | | |
| ದಂಡ | | | | | |
| ಶಿಕ್ಷೆ | | | | | |
| ಒಟ್ಟುಗೂಡಿದ ದಂಡ | | | | | |

# 31 ಮಾರ್ಚ್ 2021 ರ ಅಂತ್ಯಕ್ಕೆ ನಿರ್ದೇಶಕರ ವರದಿಗೆ ಅನುಬಂಧ

## 2020–21 ರ ವರ್ಷಕ್ಕೆ ಕಂಪನಿಯ ಆರ್ಥಿಕ ವರದಿಯ ಲೆಕ್ಕಪತ್ರಗಳಿಗೆ ನಿರ್ದೇಶಕರ ವರದಿಯ ಅನುಬಂಧ

## ಶಾಸನಬದ್ಧ ಲೆಕ್ಕಪರಿಶೋಧಕರ ಅಭಿಪ್ರಾಯ/ಗಮನಿತ ಅಂಶಗಳಿಗೆ ಆಡಳಿತ ವರ್ಗದ ಉತ್ತರಗಳು

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| 1 | ಲೆಕ್ಕ ಪತ್ರಗಳ ಕಡತಗಳ | ವಾಸ್ತವಿಕ – ಕವಿಪ್ರನಿನಿಯಲ್ಲಿ ಇ.ಆರ್.ಪಿ ಅನುಷ್ಠಾನದ ಬಗೆಗೆ ಟೆಂಡರ್ ಕರೆಯುವ ಕ್ರಮವು ಪ್ರಗತಿಯಲ್ಲಿದೆ. |
| 2 | 1 ಎ & ಬಿ | ಸ್ಥಿರ ಆಸ್ತಿ ರಿಜಿಸ್ಟರ್ ಮತ್ತು ಸಿವಿಲ್ ವಿಭಾಗದಲ್ಲಿ ಭೂ ದಾಖಲೆಗಳ ಪ್ರಕಾರ ಭೂ ವಿವರಗಳನ್ನು ಪರಸ್ಪರ ಸಂಬಂಧಿಸಲು ಮತ್ತು ಅದರ ಮೇಲೆ ಆಸ್ತಿ ತೆರಿಗೆ ಪಾವತಿಸಲು ಪ್ರಯತ್ನಗಳನ್ನು ಮಾಡಲಾಗುವುದು. |
| | ಸಿ. | ಹಣಕಾಸು ವರ್ಷ 2016–17 ರಿಂದ 2017–18 ರ ಅವಧಿಯಲ್ಲಿ ಕರ್ನಾಟಕ ಸರ್ಕಾರದಿಂದ ಮಂಜೂರಾದ ಮತ್ತು ಕವಿಪ್ರನಿನಿಯಿಂದ ಲೆಕ್ಕಕ್ಕೆ ಪಡೆದುಕೊಂಡ ಜಮೀನಿನ ವಿವರಗಳನ್ನು ಸಂಗ್ರಹಿಸಲು ಪ್ರಯತ್ನ ಪಡಲಾಗುವುದು ಮತ್ತು Ind As ನ ಅವಶ್ಯಕತೆಗನುಸಾರವಾಗಿ ಜಮೀನಿನ ಬೆಲೆಯನ್ನು ಪರಿಷ್ಕರಿಸಲು ಕ್ರಮ ತೆಗೆದುಕೊಳ್ಳಲಾಗುವುದು. |
| | ಡಿ. | ಉಪ ಕೇಂದ್ರಗಳ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರವು ಜಮೀನನ್ನು ವಿವಿಧ ಸ್ಥಳಗಳಲ್ಲಿ ಜಮೀನಿನ ಮೌಲ್ಯದ ಪಾವತಿಸಿಕೊಂಡು ಕವಿಪ್ರನಿನಿಗೆ ನೀಡಿದೆ. ತದನಂತರ ಹಂಚಿಕೆಮಾಡಿದ ಜಮೀನುಗಳು ಉಪ ಕೇಂದ್ರಗಳ ನಿರ್ಮಾಣಕ್ಕೆ ಸೂಕ್ತವಾಗಿಲ್ಲವೆಂದು ಕಂಡು ಬಂದು, ಕವಿಪ್ರನಿನಿಯು ಕರ್ನಾಟಕ ಸರ್ಕಾರವನ್ನು ಜಮೀನಿನ ಮೌಲ್ಯದ ಮೊತ್ತವನ್ನು ಹಿಂದಿರುಗಿಸುವಂತೆ ಕೋರಿತು. ಈ ವಿಷಯಕ್ಕೆ ಸಂಬಂದಿಸಿದಂತೆ ಪತ್ರವ್ಯವಹಾರವು ಕರ್ನಾಟಕ ಸರ್ಕಾರದೊಡನೆ ನಡೆಯುತ್ತಿದೆ. |
| | ಇ. | ಬೆಳೆಯ ಪರಿಹಾರ, ಕಾರಿಡಾರ್ ಪರಿಹಾರ, ಗಿಡ ಮರಗಳ ಕಡಿತಕ್ಕೆ ಪರಿಹಾರ ಇವುಗಳನ್ನು ಮೊದಲಿಗೆ ಟರ್ನ ಕೀ ಕಂಟ್ರಾಕ್ಟರ್ ಅವರು ಫಲಾನುಭವಿಗಳಿಗೆ ಪಾವತಿಸಿ, ನಂತರ ಆ ಮೊತ್ತವನ್ನು ಕವಿಪ್ರನಿನಿಯಿಂದ ಪಡೆದುಕೊಳ್ಳುತ್ತಾರೆ. ಬಹಳಷ್ಟು ಪ್ರಕರಣಗಳಲ್ಲಿ ಫಲಾನುಭವಿಗಳು ಹೆಚ್ಚಿನ ಪರಿಹಾರ ಮೊತ್ತವನ್ನು ಕೇಳಿ, ವಿವಿಧ ಪ್ರಾಧಿಕಾರಗಳ ಮುಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಕೆಲವೊಮ್ಮೆ ಅಂತಹ ಪ್ರಕರಣಗಳು ಆಸ್ತಿಯನ್ನು ವಹಿಸಿಕೊಟ್ಟ ತಾರೀಖಿನಿಂದ 2 ರಿಂದ 10 ವರ್ಷದ ನಂತರ ಇತ್ಯರ್ಥಗೊಂಡಿವೆ. ಅದುದರಿಂದ, ಕಂಪನಿಯು ಅಂತಹ ಪರಿಹಾರ ಮೊತ್ತಗಳನ್ನು ನಗದು ಆಧಾರದಲ್ಲಿ ಲೆಕ್ಕ ಮಾಡುತ್ತಿದೆ ಹಾಗಾಗಿ ಅವುಗಳನ್ನು ಟಿಪ್ಪಣಿ. 3.7 ರಡಿಯಲ್ಲಿ ತೋರಿಸಿದೆ. ಆದಾಗ್ಯೂ ಸಹ, ಅಂತಹ ಪರಿಹಾರ ಮೊತ್ತವನ್ನು ಮುಂದಿನ ಹಣಕಾಸು ವರ್ಷಗಳಲ್ಲಿ ಸಂಚಯ ಆಧಾರದ ಮೇಲೆ ಲೆಕ್ಕ ಮಾಡಲಾಗುವುದು. |
| | ಎಫ್. | ಖಾಸಗಿ ವ್ಯಕ್ತಿಗಳಿಂದ ಪಡೆದುಕೊಂಡ /ಸ್ವಾಧೀನ ಪಡಿಸಿದ ಜಮೀನಿನ ಬಗೆಗೆ ವಿವರಗಳನ್ನು ಸಂಗ್ರಹಿಸಲು ಕ್ರಮ ತೆಗೆದುಕೊಳ್ಳಲಾಗುವುದು ಮತ್ತು ಅದರ ಮೌಲ್ಯಮಾಪನ ಮಾಡಿ, ಲಭ್ಯವಿರುವ ದಾಖಲೆಗಳನ್ನಾಧರಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸ್ವಯಂ ನಿರ್ವಹಣ ಕಾಮಗಾರಿಗಳಿಗೆ ಸಂಬಂಧಿಸಿದ ಜಮೀನನ್ನು ಖಾಸಗಿ ವ್ಯಕ್ತಿಗಳಿಂದ ಪಡೆದುಕೊಳ್ಳಲು ಪ್ರಯತ್ನ ಮಾಡಲಾಗುವುದು. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | ಜಿ. | ಕೇವಲ ಕೆಲವೇ ಪ್ರಕರಣಗಳಲ್ಲಿ ಗುತ್ತಿಗೆದಾರರೊಡನೆ ಗುತ್ತಿಗೆ ಕರಾರು ಮಾಡಿಕೊಳ್ಳುವುದು, ತಾಂತ್ರಿಕ ಕಾರಣಗಳಿಂದ ಬಾಕಿ ಉಳಿದಿದೆ. ಮುಂದಿನ ವರ್ಷಗಳಲ್ಲಿ ಗುತ್ತಿಗೆದಾರರೊಡನೆ ಗುತ್ತಿಗೆ ಕರಾರು ಮಾಡಿಕೊಳ್ಳಲು ಕ್ರಮ ಆರಂಭಿಸಲಾಗುವುದು. |
| | 2ಎ & ಬಿ. | ಅಸ್ತಿಗಳನ್ನು ತದನಂತರ ಬಂಡವಾಳೀಕರಣ ಮಾಡಲು, ಟರ್ನ್' ಕೀ ಕಂಟ್ರಾಕ್ಟರ್ ಗಳು ಬಿಲ್ ಸಲ್ಲಿಸುವಲ್ಲಿನ ವಿಳಂಬವೇ ಕಾರಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ, ಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೆಲೆಗಳ ವ್ಯತ್ಯಾಸ ತಗಾದೆಗಳು, ಪರಿಮಾಣ ವ್ಯತ್ಯಾಸ ತಗಾದೆಗಳಿಗೆ ಎಷ್ಟರ ಮಟ್ಟಿಗೆ ಗುರತಿಸಲ್ಪಟ್ಟಿದೆಯೋ ಅಷ್ಟರ ಮಟ್ಟಿಗೆ ಹವಣಿಕೆ ಮಾಡಲಾಗುವುದು. ಆದಾಗ್ಯೂ, ಅಂತಹ ತಗಾದೆಗಳನ್ನು ನಿಖರವಾದ ರೀತಿಯಲ್ಲಿ ಇತ್ಯರ್ಥ ಮಾಡಲು ಮತ್ತು ಅವುಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಪ್ರತಿ ಹಣಕಾಸು ವರ್ಷಾಂತ್ಯಕ್ಕೆ ಲೆಕ್ಕಿಕರಿಸಲು ಪ್ರಯತ್ನ ಮಾಡಲಾಗುವುದು. |
| | ಸಿ | ದುರಸ್ತಿಯಾದ ಪರಿವರ್ತಕಗಳನ್ನು ಮರಳಿ ಪಡೆಯಲು ರಿಪೇರಿ ಸಂಸ್ಥೆಗಳೊಂದಿಗೆ ಕಟ್ಟುನಿಟ್ಟಾಗಿ ಪತ್ರವ್ಯವಹಾರ ನಡೆಸಲಾಗುತ್ತಿದೆ. ರಿಪೇರಿ ಸಂಸ್ಥೆಗಳ ವಿರುದ್ಧ ಹಲವಾರು ಪ್ರಕರಣಗಳಲ್ಲಿ ಕಾನೂನು ಪ್ರಕ್ರಿಯೆಗಳನ್ನು ಸಹ ಪ್ರಾರಂಭಿಸಲಾಗುತ್ತಿದೆ. ಕವಿಪ್ರನಿನಿಗೆ ಮೂರು ವರ್ಷಗಳ ಮೇಲ್ಪಟ್ಟು ಹಿಂದಿರುಗಿಸದೇ ಇರುವ ನ್ಯೂನತೆಯುಳ್ಳ ಪರಿವರ್ತಕಗಳಿಗೆ ಲೆಕ್ಕ ಪುಸ್ತಕಗಳಲ್ಲಿ ರೂ.673.22 ಲಕ್ಷಗಳ ಹವಣಿಕೆಯನ್ನು ಮಾಡಲಾಗಿದೆ. ಇನ್ನು ಮುಂದೆ ರಿಪೇರಿಯಾದ ಪರಿವರ್ತಕಗಳನ್ನು ಸಂಸ್ಥೆಗಳಿಂದ ಹಿಂಪಡೆದುಕೊಳ್ಳಲು ಹೆಚ್ಚಿನ ಪ್ರಯತ್ನಗಳನ್ನು ಮಾಡಲಾಗುವುದು. |
| | ಡಿ | ಆಸ್ತಿಗಳ ಮೂಲ ಬೆಲೆಯನ್ನು ಮತ್ತು ಅದರ ವಿಶಿಷ್ಟ ಆಸ್ತಿಯ ಮೇಲಿನ ಸಂಚಿತವಾದ ಸವಕಳಿಯನ್ನು ಗುರುತಿಸುವಲ್ಲಿನ ಕಾರ್ಯಸಾಧ್ಯ, ವ್ಯವಹಾರಿಕ ಕಷ್ಟಗಳಿಂದ ಆಸ್ತಿಯು, ಅದನ್ನು ಕ್ಷೇತ್ರದಿಂದ ತೆಗೆದು ಮತ್ತು ಒಂದು ಉಗ್ರಾಣದಲ್ಲಿ ಬಿಡುಗಡೆಯಾದ ಆಸ್ತಿಗಳನ್ನು ತಗ್ಗಿಸಿದ ಬೆಲೆಯಲ್ಲಿ (ರಿಟರ್ನ ಡೌನ್ ವ್ಯಾಲ್ಯೂ) ಆಗಿ ಲೆಕ್ಕನಮೂದಿಸಿ ಮತ್ತು ತದನಂತರದಲ್ಲಿ ತಗ್ಗಿಸಿದ ಬೆಲೆಯಲ್ಲಿಯೇ ಮನರುಪಯೋಗಕ್ಕೆ ತೆಗೆದುಕೊಳ್ಳಲಾಗಿದೆ. ಈ ಪದ್ಧತಿಯನ್ನು ಅಂದಿನ ಕೆ.ಇ.ಬಿ. ಆರಂಭವಾದ ದಿನಗಳಿಂದ ಸುಸಂಗತವಾಗಿ ಅನುಸರಿಸಲಾಗುತ್ತಿದೆ. ಮುಂದಿನ ವರ್ಷಗಳಲ್ಲಿ ಚಾಲ್ತಿಯಲ್ಲಿರುವ ವಿಧಾನಗಳನ್ನು ಪರಿಷ್ಕರಿಸಲು ಪ್ರಯತ್ನವನ್ನು ಮಾಡಲಾಗುವುದು. |
| | ಇ | ವಿಭಾಗಗಳು ನಡೆಸುತ್ತಿರುವ ಚಟುವಟಿಕೆಗಳ ಆಧಾರದ ಮೇಲೆ ಕವಿಪ್ರನಿನಿಯ ವಿಭಾಗಗಳನ್ನು ಆಸ್ತಿ ನಿರ್ವಹಣ ವಿಭಾಗ (ಟಿ.ಎಲ್. ಮತ್ತು ಎಸ್.ಎಸ್ ವಿಭಾಗ) ಮತ್ತು ಆಸ್ತಿ ನಿರ್ಮಾಣದ ವಿಭಾಗ (ಬೃಹತ್ ಕಾಮಗಾರಿ ವಿಭಾಗ) ಎಂದು ವರ್ಗೀಕರಿಸಲಾಗಿದೆ. ಟಿ.ಎಲ್ & ಎಸ್.ಎಸ್ ವಿಭಾಗಗಳು ಮುಖ್ಯವಾಗಿ ವಿದ್ಯುತ್ ಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ನಿರ್ವಹಣೆ ಮತ್ತು ಅದರ ಸಂಬಂಧಿತ ಲೆಕ್ಕಗಳ ಬಗೆಗೆ ಕಾರ್ಯ ನಿರ್ವಹಿಸುತ್ತದೆ. ಬೃಹತ್ ಕಾಮಗಾರಿ ವಿಭಾಗಗಳು ಆಸ್ತಿಗಳ ನಿರ್ಮಾಣ ಚಟುವಟಿಕೆ ನಡೆಸುವುದು ಮತ್ತು ಕಾಮಗಾರಿಗಳ ಸಂಬಂಧಿಸಿದ ಲೆಕ್ಕಗಳ ಬಗೆಗೆ ಕಾರ್ಯ ನಿರ್ವಹಿಸುತ್ತದೆ. ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಮಾಡಿದ ಎಲ್ಲಾ ಖರ್ಚುಗಳು ಅಂದರೆ ಸಿಬ್ಬಂದಿ ವೆಚ್ಚ, ಆಡಳಿತ ಮತ್ತು ಇತರೆ ವೆಚ್ಚ, ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಬಳಕೆ ಮಾಡಿದ ಆಸ್ತಿಗಳ ಮೇಲಿನ ಸವಕಳಿ ಇವುಗಳನ್ನು ಆಸ್ತಿಯ ಖರ್ಚು ಎಂದು ಬಂಡವಾಳಿಕರಣ ಗೊಳಿಸಲಾಗುತ್ತಿದೆ. ಅಂಥಹ ಖರ್ಚನ್ನು ಅಸ್ತಿಯನ್ನು ನಿಗದಿತ ಸ್ಥಳಕ್ಕೆ ತರುವ ಖರ್ಚು ಮತ್ತು ಅದರ ವ್ಯವಸ್ಥಾಪಕ ವರ್ಗವು ಇಚ್ಛಿಸುವ ರೀತಿಯಲ್ಲಿ Ind As 16ರ ಖಂಡಿಕೆ 16 (ಬಿ) ಆಚರಣೆಗೆ ಅವಶ್ಯಕ ಷರತ್ತುಗಳ ಪ್ರಕಾರವಾಗಿರುತ್ತದೆ. ಹಾಗಾಗಿ ಕವಿಪ್ರನಿನಿಯು ಕೈಗೊಂಡಿರುವ ಕ್ರಮವು ಸರಿಯಾಗಿದೆ. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | ಎಫ್. | Ind As 23 ರ ಕಂಡಿಕೆ 8 ರ ಪ್ರಕಾರ ಒಂದು ಸಂಸ್ಥೆಯು ಸಾಲಗಳ ವೆಚ್ಚಗಳನ್ನು ಬಂಡವಾಳೀಕರಿಸಿ, ಅವುಗಳು ನೇರವಾಗಿ ಅರ್ಹ ಆಸ್ತಿಯ ಕಟ್ಟಡ ರಚನೆ ಅಥವಾ ಉತ್ಪಾದನೆಯ ಖರ್ಚು, ಅದು ಆಸ್ತಿಯ ಖರ್ಚಿನ ಒಂದು ಭಾಗವಾಗುತ್ತದೆ ಹಾಗಾಗಿ ಟಿ.ಎಲ್. & ಎಸ್.ಎಸ್ ವಿಭಾಗಗಳು ರೂ.86.41 ಲಕ್ಷದಷ್ಟು ಮೊತ್ತದ ಉನ್ನತೀಕರಣದ ಕಾಮಗಾರಿಗಳ ಬಡ್ಡಿಯನ್ನು ಬಂಡವಾಳೀಕರಣ ಗೊಳಿಸಿರುವುದು ಸಕ್ರಮವಾಗಿದೆ. |
| | ಜಿ | ನಿಗಮದ ಅನುಮತಿ ಪಡೆದು ಗ್ರಾಹಕರೇ ಸ್ವಯಂ ನಿರ್ವಹಣ ಕಾಮಗಾರಿ ಮಾಡುತ್ತಿದ್ದು ಮತ್ತು ಆಸ್ತಿಯು ಕಾರ್ಯರಂಭಗೊಂಡ ನಂತರ ಜಂಟಿ ದಾಸ್ತಾನನ್ನು ಪಡೆಯುವ ಪ್ರಕ್ರಿಯೆಯು ಪೂರ್ಣಗೊಳಿಸಿ ನಿಗಮಕ್ಕೆ ಹಸ್ತಾಂತರಿಸತಕ್ಕದ್ದು. ಜಂಟಿ ದಾಸ್ತಾನಿನ ವಿಧಾನವನ್ನು ಪೂರ್ಣಗೊಳಿಸಲು ಮತ್ತು ನಿಗದಿತ ಅವಧಿಯಲ್ಲಿ ಆಸ್ತಿಗಳ ವರ್ಗೀಕರಣಕ್ಕೆ ಸಂಬಂದಿಸಿದಂತೆ ಕವಿಪ್ರನಿನಿಯು ಹೋರಡಿಸಿರುವ ಆದೇಶ ಸಂಖ್ಯೆ.ಬಿ 19/245/85–96, ದಿನಾಂಕ 30/11/2019 ನೀಡಲಾಗಿದ್ದ, ಇದರ ಪ್ರಕಾರ ಸ್ವಯಂ ನಿರ್ವಹಣ ಕಾಮಗಾರಿಯಿಂದ ರಚನೆಗೊಂಡ ಆಸ್ತಿಗಳನ್ನು ಕಾರ್ಯರಂಭಗೊಂಡ ದಿನದಿಂದ 45 ದಿನಗಳೊಳಗೆ ಕವಿಪ್ರನಿನಿಗೆ ಹಸ್ತಾಂತರಿಸತಕ್ಕದ್ದು. ಇವುಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಅದೇಶಗಳನ್ನು ನೀಡಲಾಗುವುದು. |
| | ಎಚ್. | ಹೆಚ್ಚಿನ ಸಂಖ್ಯೆಯ ಪ್ರಕರಣಗಳಲ್ಲಿ ಕವಿಪ್ರನಿನಿಯು ಸ್ವಾಧಿನಪಡಿಸಿಕೊಂಡಿದ್ದು ಮತ್ತು ಕಟ್ಟಡವನ್ನು ತನ್ನ ಉಪಯೋಗಕ್ಕೇ ಬಳಸಿಕೊಳ್ಳುತ್ತಾ ಇದೆ. ಕೆಲವು ಸಂದರ್ಭಗಳಲ್ಲಿ ಕಟ್ಟಡಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ, ಅದರಲ್ಲೂ ಸಹ ಅತಿ ಹೆಚ್ಚಿನ ಭಾಗವನ್ನು ಕವಿಪ್ರನಿನಿಯು ಬಳಸುತ್ತಿದ್ದು ಬಹಳಷ್ಟು ಕಡಿಮೆ ಭಾಗವನ್ನು ವಿದ್ಯುತ್ ಸರಬರಾಜು ಕಂಪನಿಗಳು ಉಪಯೋಗಿಸುತ್ತಿದೆ. ಹೀಗಾಗಿ ಆವರಣಗಳನ್ನು ವಿಭಾಗಿಸಿ ವಿದ್ಯುತ್ ಸರಬರಾಜು ಕಂಪನಿಗಳು ಸುಪರ್ದಿ ಹೊಂದಿರುವ ಅವರಣದ ಮೌಲ್ಯ ಮಾಪನ ಮಾಡುವುದು ಕಷ್ಟಕರವಾಗಿರುತ್ತದೆ. ಆದಾಗ್ಯೂ ಸಹ ಮುಂದಿನ ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಸುಪರ್ದಿ ಹೊಂದಿರುವ ಅವರಣದ / ಕಟ್ಟಡಗಳ ಭಾಗವನ್ನು ನಿರ್ಧರಿಸಲು ಪ್ರಯತ್ನ ಮಾಡಲಾಗುವುದು. |
| | ಐ. | ಕವಿಪ್ರನಿನಿಯು ಒಂದು ವಿದ್ಯುತ್ ಪ್ರಸರಣ ವ್ಯವಸ್ಥೆಯಾಗಿದೆ ಮತ್ತು ಎಲ್ಲಾ ಪ್ರಸರಣ ಸಲಕರಣೆಗಳು ವಿದ್ಯುತ್ ಪ್ರಸರಣದ ಚಟುವಟಿಕೆಯನ್ನು ಕೈಗೊಳ್ಳಲು ವರ್ಗವಿಡೀ ಬಳಸುವ ಸ್ಥಿತಿಯಲ್ಲಿರಬೇಕು. ಪ್ರಸರಣ ಸಲಕರಣೆಗಳು ದುರ್ಬಲಗೊಳ್ಳುವುದು ವೃದ್ದಿಯಾಗದೆ ಇರಬಹುದು. |
| 3 | ಎ | ಆರ್ಥಿಕ ವರ್ಷದ ಕೊನೆಯಲ್ಲಿ ಪ್ರತಿ ಯೋಜನೆಯ ಸ್ಥಿತಿಯನ್ನು ಪತ್ತೆಹಚ್ಚಲು ಕವಿಪ್ರನಿನಿ ನಿರ್ದಿಷ್ಟ ಅನುಬಂಧಗಳನ್ನು ವಿನ್ಯಾಸಗೊಳಿಸಿದೆ. ವೆಚ್ಚದ ರಿಜಿಸ್ಟರ್ (C Register) ಅನ್ನು ಪ್ರತಿ ಯೋಜನೆಯ ಪ್ರಕಾರ ಆಯಾ ಲೆಕ್ಕಪತ್ರ ಘಟಕಗಳಲ್ಲಿ ನಿರ್ವಹಿಸಲಾಗುತ್ತಿದೆ. ಆ ರಿಜಿಸ್ಟರ್‌ಗಳು ಯೋಜನೆಯ ಅಂದಾಜು ವೆಚ್ಚ ಮತ್ತು ಸಾಮಗ್ರಿಗಳ ಪ್ರಮಾಣ ಹಾಗೂ ಮೌಲ್ಯದ ವಿವರಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಯೋಜನೆಗೂ ಪ್ರತ್ಯೇಕವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಆಯಾಯ ಸಂಬಂಧಪಟ್ಟ ಲೆಕ್ಕ ಘಟಕಗಳ ಪ್ರಕಾರ ನಿರ್ವಹಿಸಲ್ಪಡುತ್ತಿದೆ. ಈ ಸಿ–ರಿಜಿಸ್ಟರ್‌ಗಳಲ್ಲಿ ಯೋಜನೆಯ ಅಂದಾಜು ಖರ್ಚು, ಅದರಲ್ಲಿ ಸಾಮಗ್ರಿಗಳ ಪರಿಮಾಣ, ಗಾತ್ರ, ಮತ್ತು ಅದರ ಖರ್ಚು ಇದರ ವಿವರಗಳನ್ನೊಳ ಗೊಂಡಿರುವಂತೆ ಅನುಬಂಧವನ್ನು ವಿಶೇಷವಾಗಿ ಅಭಿವೃದ್ಧಿಪಡಿಸಲಾಗಿದೆ. ಈ ಎಲ್ಲಾ ಅನುಬಂಧಗಳನ್ನು ಹಾಗೂ ಸಿ–ರಿಜಿಸ್ಟರ್‌ಗಳನ್ನು ಲೆಕ್ಕಪರಿಶೋಧಕರ ಪರಿಶೀಲನೆಗಾಗಿ ಪರಿಶೀಲನೆಯ ಸಮಯದಲ್ಲಿ ಒದಗಿಸಲಾಗಿತ್ತು. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಮೇಲಿನ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ, ಲೆಕ್ಕಪರಿಶೋಧಕರು ಹಲವು ಕಾಮಗಾರಿಗಳ ಮೇಲೆ ಪ್ರಸಕ್ತ ವರ್ಷದಲ್ಲಿ ಪ್ರಗತಿಯಾಗಿರುವುದಿಲ್ಲ ಹಾಗೂ ಹಲವು ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ.<br><br>ಕೆಲವು ಯೋಜನೆಗಳ ಕಳಪೆ ಪ್ರಗತಿಗೆ ಮುಖ್ಯ ಕಾರಣವೆಂದರೆ Right of Way ಸ್ಥಳಗಳಿಂದ ಅಡಚಣೆ, ಬಾಕಿ ಇರುವ ನ್ಯಾಯಾಲಯದ ಪ್ರಕರಣಗಳು, ಟರ್ನ್‌ಕೀ ಗುತ್ತಿಗೆದಾರರ ಕಾರ್ಯಕ್ಷಮತೆ ಇತ್ಯಾದಿ. ಅಪರ್ಯಾಪ್ತವಾಗಿ ಮುಗಿದ ಕಾಮಗಾರಿಗಳು ಮತ್ತು ನಂತರ ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳ ಪಟ್ಟಿಯನ್ನು ಲೆಕ್ಕ ಪರಿಶೋಧಕರಿಗೆ ನೀಡಲಾಯಿತು. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದ ಸಾಲಗಳ ವೆಚ್ಚವನ್ನು (Interest During Construction) ಬಂಡವಾಳೀಕರಿಸುವುದಿಲ್ಲ. |
| | ಬಿ | ಒಟ್ಟು ಟರ್ನ್‌ಕೀ ಕೆಲಸಗಳಿಗೆ ಸಂಬಂಧಿಸಿದಂತೆ, ಒಪ್ಪಂದದ ಒಟ್ಟು ವೆಚ್ಚದ ಮೇಲೆ 10% ರಷ್ಟು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಭದ್ರತಾ ಠೇವಣಿ ಕಾರ್ಯಕ್ಷಮತೆಯ ಗ್ಯಾರಂಟಿಯಾಗಿ ಸಂಗ್ರಹಿಸಲಾಗುತ್ತಿದೆ. ಒಪ್ಪಂದದ ಕಾರ್ಯಕ್ಷಮತೆಯ ಗ್ಯಾರಂಟಿಯು ಸಂಪೂರ್ಣ ಒಪ್ಪಂದದ ಕಾರ್ಯಕ್ಷಮತೆಯನ್ನು ಭದ್ರಪಡಿಸಲು ಮತ್ತು ಟರ್ನ್‌ಕೀ ಗುತ್ತಿಗೆದಾರರ ಕಾರ್ಯಕ್ಷಮತೆಯ ಕೊರತೆಯ ಸಂದರ್ಭದಲ್ಲಿ ಕಂಪನಿಯಿಂದ ಉಂಟಾಗುವ ಹೆಚ್ಚುವರಿ ಯೋಜನಾ ವೆಚ್ಚವನ್ನು ತಗ್ಗಿಸಲು ಉದ್ದೇಶಿಸಲಾಗಿದೆ.<br><br>ರೂ.46.85 ಕೋಟಿ ಮೊತ್ತದ ಬ್ಯಾಂಕ್ ಗ್ಯಾರಂಟಿ ನಗದಿಕರಿಸಿರುವುದನ್ನು (Encashed) ವಿವಿಧ ಶಾರ್ಟ್ ಕ್ಲೋಸ್ಡ್ ಕೆಲಸಗಳಿಗೆ ಸಂಬಂಧಿಸಿದೆ ಮತ್ತು ಪ್ರತ್ಯೇಕ ಖಾತೆಯ ಅಡಿಯಲ್ಲಿ ಖಾತೆಯಲ್ಲಿ ಲೆಕ್ಕೀಕರಿಸಲಾಗುವುದು.<br><br>ಟರ್ನ್‌ಕೀ ಗುತ್ತಿಗೆದಾರರ ಕಾರ್ಯನಿರ್ವಹಣೆಯ ಕೊರತೆಯಿಂದಾಗಿ ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಲಾಗಿದೆ ಮತ್ತು ಆದ್ದರಿಂದ, ಲೆಕ್ಕಪತ್ರ ನೀತಿಗೆ ಅನುಗುಣವಾಗಿ ಆದಾಯವೆಂದು ಪರಿಗಣಿಸಲಾಗುವುದಿಲ್ಲ. ಹೀಗೆ ನಗದೀಕರಿಸಲಾದ ಬ್ಯಾಂಕ್ ಗ್ಯಾರಂಟಿಯು ಆಯಾ ಯೋಜನೆಯ ವೆಚ್ಚದಿಂದ ಕಡಿಮೆಯಾಗುವುದಿಲ್ಲ, ಏಕೆಂದರೆ ಉಳಿದಿರುವ ಯೋಜನಾ ಕಾರ್ಯವನ್ನು ಪೂರ್ಣಗೊಳಿಸಲು ಇತರ ಟರ್ನ್‌ಕೀ ಗುತ್ತಿಗೆದಾರರಿಗೆ ಇನ್ನೂ ಹಲವು ಶಾರ್ಟ್ ಕ್ಲೋಸ್ಡ್ ಕಾಮಗಾರಿಗಳನ್ನು ನೀಡಬೇಕಾಗಿದೆ. ಬಾಕಿ ಕಾಮಗಾರಿಯ ನಂತರ ಮತ್ತು ಪೂರ್ಣಗೊಂಡ ನಂತರ, ಬ್ಯಾಂಕ್ ಗ್ಯಾರಂಟಿ ನಗದೀಕರಣ ಮಾಡಿದ ಅಥವಾ ಬ್ಯಾಂಕ್ ಗ್ಯಾರಂಟಿ ನಗದೀಕರಣ ಮಾಡಿದ ಯಾವುದೇ ಹೆಚ್ಚುವರಿ ವೆಚ್ಚಗಳು ಪೂರ್ಣಗೊಂಡ ಬ್ಯಾಲೆನ್ಸ್ ಕೆಲಸದ ವೆಚ್ಚಕ್ಕೆ ಹೋಲಿಸಿದರೆ ಹೆಚ್ಚು ಎಂದು ವಿಶ್ಲೇಷಣೆ ಮಾಡಬಹುದು. ಹೇಳಲಾದ ವಿಶ್ಲೇಷಣೆಯ ಆಧಾರದ ಮೇಲೆ, ನಗದೀಕರಣ ಮಾಡಿದ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಆಸ್ತಿಯಿಂದ ಕಡಿಮೆ ಮಾಡಬಹುದು ಅಥವಾ ಲೆಕ್ಕಪತ್ರ ನೀತಿಗೆ ಅನುಗುಣವಾಗಿ ಆದಾಯ ಎಂದು ಪರಿಗಣಿಸಬಹುದು.<br><br>ಮೇಲಿನ ಹಿನ್ನೆಲೆಯಲ್ಲಿ, ಲೆಕ್ಕಪರಿಶೋಧಕರು ಕಾಮೆಂಟ್ ಮಾಡಿದಂತೆ ಬ್ಯಾಂಕ್ ಗ್ಯಾರಂಟಿ ನಗದೀಕರಣ ಮಾಡಿದ ಮೊತ್ತವನ್ನು ಆಸ್ತಿಯಿಂದ ಕಡಿಮೆ ಮಾಡಬಹುದೇ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಣ ಮಾಡುವ ಸಮಯದಲ್ಲಿ ಆದಾಯ ಎಂದು ಪರಿಗಣಿಸಬಹುದೇ ಎಂಬುದರ ಕುರಿತು ವಿಶ್ಲೇಷಣೆ ಮಾಡಲಾಗುವುದಿಲ್ಲ. |
| | ಸಿ | ಟರ್ನ್‌ಕೀ ಕಾಮಗಾರಿಯ ಸರಕುಗಳನ್ನು ಕೆಲಸದ ಸ್ಥಳಕ್ಕೆ ತಲುಪಿಸಲಾಗುತ್ತದೆ ಮತ್ತು ಔಪಚಾರಿಕ ರಸೀದಿ ಮತ್ತು ಸರಕುಗಳ ವಿತರಣೆಯ ಆಧಾರದ ಮೇಲೆ ಅಂತಹ ಸರಕುಗಳ ಮೌಲ್ಯಕ್ಕೆ ಹೊಣೆಗಾರಿಕೆಯನ್ನು ರಚಿಸಲಾಗುತ್ತದೆ. ತರುವಾಯ DWA ನಿಯಮಗಳು |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಮತ್ತು ಷರತ್ತುಗಳ ಆಧಾರದ ಮೇಲೆ ಟರ್ನ್‌ಕೀ ಗುತ್ತಿಗೆದಾರರಿಗೆ ಪಾವತಿಯನ್ನು ಮಾಡಲಾಗುತ್ತದೆ. ಕೆಲಸದಲ್ಲಿ ಸರಬರಾಜು ಮಾಡಲಾದ ಮತ್ತು ಬಳಸದ ಸಾಮಗ್ರಿಗಳ ಸಂದರ್ಭದಲ್ಲಿ, ಗುತ್ತಿಗೆದಾರರ ಬಿಲ್‌ಗಳಿಂದ ಅಂತಹ ಸಿದ್ಧಪಡಿಸಿದ ವಸ್ತುಗಳ ಮೌಲ್ಯವನ್ನು ವಸೂಲಿ ಮಾಡಲಾಗುತ್ತದೆ ಅಥವಾ ಬಾಕಿ ಇರುವ ಧಾರಣ ಹಣದ ವಿರುದ್ಧ ಹೊಂದಾಣಿಕೆ ಮಾಡಲಾಗುತ್ತದೆ.<br><br>ಟರ್ನ್‌ಕೀ ಸಾಮಗ್ರಿಗಳನ್ನು ಕಾರ್ಯ ಸ್ಥಳಕ್ಕೆ ಸಾಗಿಸಲಾಗುವುದು ಮತ್ತು ಸಾಮಗ್ರಿಗಳ ಬೆಲೆಗೆ ಅನುಗುಣವಾಗಿ ಔಪಚಾರಿಕ ಸ್ವೀಕೃತಿ ಮತ್ತು ನೀಡಿಕೆಯ ಆಧಾರದ ಮೇಲೆ ಹೊಣೆಗಾರಿಕೆ ರೂಪಿಸಲಾಗುವುದು. ನಂತರ ಟರ್ನ್ ಕೀ ಗುತ್ತಿಗೆದಾರರಿಗೆ ಡಿಡಬ್ಲ್ಯೂಎನಲ್ಲಿ ನಮೂದಿಸಿರುವ ಕರಾರಿನ ರೀತ್ಯಾ ಪಾವತಿ ಮಾಡಲಾಗುವುದು. ಸಾಮಗ್ರಿಗಳನ್ನು ಒದಗಿಸಿದ್ದು ಅವುಗಳನ್ನು ಕೆಲಸಕ್ಕೆ ಬಳಸಿಕೊಳ್ಳದೆ ಇದ್ದಾಗ ಅಂತಹ ಸಾಮಗ್ರಿಗಳ ಬೆಲೆಯನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು ಅಥವಾ ರಿಟೆನ್ಷನ್ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಒಮ್ಮೆ ಸಾಮಗ್ರಿಗಳನ್ನು ಗುತಿಗೆದಾರರಿಗೆ ನೀಡಿದಲ್ಲಿ, ಸಾಮಗ್ರಿಗಳನ್ನು ನೀಡಿರುವುದನ್ನು ಉಗ್ರಾಣ ಪುಸ್ತಕದಲ್ಲಿ ದಾಖಲಿಸಲಾಗುವುದು ಮತ್ತು ಅವುಗಳು ಗುತ್ತಿಗೆದಾರರೊಂದಿಗೆ ಸುರಕ್ಷಿತವಾಗಿರುತ್ತವೆ.<br><br>ಅವುಗಳಲ್ಲಿ ಯಾವುದೇ ಸಾಮಗ್ರಿಗಳನ್ನು ಕೆಲಸಕ್ಕೆ ಬಳಸಿಕೊಳ್ಳದೆ ಇದ್ದಲ್ಲಿ ಅಂತಹ ಸಾಮಗ್ರಿಗಳನ್ನು ಗುತ್ತಿಗೆದಾರರು ಹಿಂದಕ್ಕೆ ಪಡೆಯಬಹುದು. ಇಂತಹ ಸಂದರ್ಭದಲ್ಲಿ ಅದನ್ನು ಕವಿಪ್ರನಿನಿ ಉಗ್ರಾಣದ ಪುಸ್ತಕದಲ್ಲಿ ದಾಖಲಿಸುವ ಅಗತ್ಯವಿರುವುದಿಲ್ಲ. ಮತ್ತು ಲೆಕ್ಕ ಪರಿಶೋಧಕರು ಅಭಿಪ್ರಾಯಪಟ್ಟಿರುವಂತೆ ಇಂತಹ ವ್ಯವಹಾರಗಳಲ್ಲಿ ಇನ್ವೆಂಟರಿಯಾಗಿ ಇರುವುದಿಲ್ಲ.<br><br>ಆದಾಗ್ಯೂ ಸಂಬಂಧಪಟ್ಟ ಮಾರಾಟಗಾರರಿಗೆ ಮಾರಾಟಗಾರರ ಬಿಲ್ಲಿನಿಂದ/ರಿಟೆನ್ಶನ್ ಹಣದಿಂದ ವಸೂಲಿ/ಹೊಂದಾಣಿಕೆ ಮಾಡುವ ಮೊದಲು ಈ ಕುರಿತು ತಿಳುವಳಿಕೆ ನೀಡಲು ಲೆಕ್ಕ ಘಟಕಗಳಿಗೆ ಸೂಚನೆ ನೀಡಲಾಗುವುದು. |
| 4 | ಎ | ಯೋಜನಾ ಖರ್ಚಿನ ವಿವರಗಳು, ಪಿ.ಎಸ್.ಡಿ.ಎಫ್. ನಿಂದ ಸ್ವೀಕರಿಸಿದ ಅನುದಾನ ಇದರ ವಿವರಗಳು, ಬಳಕೆಯ ಪ್ರಮಾಣಪತ್ರ, ಪಿ.ಎಸ್.ಡಿ.ಎಫ್. ಬರಬೇಕಾಗಿರುವ ಅನುದಾನದ ಬಾಕಿ ಮೊತ್ತ, ಇವುಗಳ ವಿವರಗಳನ್ನು ಲೆಕ್ಕಪರಿಶೋಧಕರಿಗೆ ಒದಗಿಸಲಾಯಿತು. ಆದಾಗ್ಯೂ 2021–22 ರ ಹಣಕಾಸಿನ ವರ್ಷದಲ್ಲಿ ಪಿಎಸ್‌ಡಿಎಫ್ ಕಾಮಗಾರಿಗಳ ಯೋಜನಾವಾರು ವಿವರಗಳನ್ನು ಒದಗಿಸಲು ಪ್ರಯತ್ನ ಮಾಡಲಾಗುವುದು. |
| | ಬಿ | ಅನುದಾನಗಳಿಂದ ರಚಿಸಿದೆ ಪ್ರಮುಖ ರೀತಿಯ ಆಸ್ತಿಗಳು ಎಂದರೆ, ವಿದ್ಯುತ್ ಕೇಂದ್ರಗಳು, ಅದರ ಉಪಕರಣಗಳು ಹಾಗೂ ಮಾರ್ಗಗಳು ಮತ್ತು ಕೇಬಲಗಳು. ಈ ರೀತಿಯ ಎಲ್ಲಾ ಆಸ್ತಿಗಳು ಸಿ.ಇ.ಆರ್.ಸಿ, ನಿಗದಿಗೊಳಿಸಿದ ಒಂದೇ ತರಹದ ಸವಕಳಿ ದರವನ್ನು ಹೊಂದಿದೆ. ಹಾಗಾಗಿ ಅಂತಹ ಏಕಪ್ರಕಾರ ಸವಕಳಿ ದರವನ್ನು ನಿಧಿಯ ಮೂಲಕ ಸಾಲತೀರಿಸುವಿಕೆಗೆ ಪರಿಗಣಿಸಲಾಗುವುದು, ಇವು ಹಣಕಾಸು ತಖ್ತೆಗಳ ಮೇಲೆ ಪ್ರಮುಖ ಪರಿಣಾಮ ಹೊಂದಿರವುದಿಲ್ಲ. |
| | ಸಿ | ಕವಿಪ್ರನಿನಿಯು ಪಿ.ಎಸ್.ಡಿ.ಎಫ್ ಮತ್ತು ಜಿ.ಇ.ಸಿ, ಇವುಗಳ ಬಾಕಿ ಅನುದಾನ ಅರ್ಹಮೊತ್ತವನ್ನು ಪಿ.ಎಸ್.ಡಿ.ಎಫ್ ಮತ್ತು ಜಿ.ಇ.ಸಿ ಯಿಂದ ಸ್ವೀಕರಿಸಬಹುದಾದವು ಎಂದು ಲೆಕ್ಕ ಮಾಡಲಾಗುತ್ತದೆ. ಲೆಕ್ಕ ಪತ್ರಗಳ ಪರಿಶೀಲನೆಯ ಸಮಯದಲ್ಲಿ, ಎ.ಜಿ. ಲೆಕ್ಕಪರಿಶೋಧಕರು ಪರಿಶೀಲನೆ ಮಾಡುವಾಗ, ಈ ಬಗೆಗೆ ಅನುದಾನವನ್ನು ಸ್ವೀಕರಿಸಬಹುದಾದುದು ಎಂದು ಲೆಕ್ಕ ಮಾಡುವುದರ ಬಗ್ಗೆ ಆಕ್ಷೇಪಣೆ ಮಾಡಿರುತ್ತಾರೆ. AG ಲೆಕ್ಕ ಪರಿಶೋಧಕರ ವಾದವೆಂದರೆ, Ind AS-20 ಪ್ಯಾರಾಗ್ರಾಫ್ 8 ರ ಪ್ರಕಾರ ಸರ್ಕಾರದ ಅನುದಾನ ಮತ್ತು ಸರ್ಕಾರದ ನೆರವಿನ ಬಹಿರಂಗಪಡಿಸುವಿಕೆಯ ಲೆಕ್ಕಪತ್ರದಂತೆ, |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಅನುದಾನವನ್ನು ಸ್ವೀಕರಿಸಲಾಗುವುದು ಎಂಬ ಸಮಂಜಸವಾದ ಭರವಸೆ ಇರುವವರೆಗೆ ಸರ್ಕಾರದ ಅನುದಾನವನ್ನು ಗುರುತಿಸಲಾಗುವುದಿಲ್ಲ. ಕೇವಲ ಅನುದಾನದ ಸ್ವೀಕೃತಿಯು ತನ್ನಷ್ಟಕ್ಕೆ ತಾನೇ ಅನುದಾನಕ್ಕೆ ಲಗತ್ತಾದ ಷರತ್ತುಗಳನ್ನು ಪಾಲಿಸಲಾಗಿದೆ ಅಥವಾ ಮುಂದೆ ಪಾಲಿಸಲಾಗುವುದು ಎಂಬುದರ ನಿರ್ಣಾಯಕ ಸಾಕ್ಷವಾಗಿರುವುದಿಲ್ಲ.<br><br>ಕವಿಪ್ರನಿನಿಯು ಇದು ಅರ್ಹ ಅನುದಾನದ ಬಾಕಿ ಮೊತ್ತವನ್ನು ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪಿ.ಎಸ್.ಡಿ.ಎಫ್ ಮತ್ತು ಜಿ.ಇ.ಸಿ, ಪ್ರಾಧಿಕಾರಗಳೊಡನೆ ಅಸಂಖ್ಯಾತ ಪತ್ರವ್ಯವಹಾರ ನಡೆಸಿದೆ, ವಿದ್ಯುತ್ ಮಂತ್ರಾಲಯ, ಭಾರತ ಸರ್ಕಾರ, ಇವರ ಪತ್ರ ಸಂಖ್ಯೆ.ಎಫ್.ನಂ.1/7/2015–ಇ.ಎಫ್. ಎಂ. ತಾರೀಖು 02/09/2017 ಮತ್ತು ವಿದ್ಯುತ್ ಮಂತ್ರಾಲಯ, ಭಾರತ ಸರ್ಕಾರ, ಇವರ ಪತ್ರ ಸಂಖ್ಯೆ 10–01–2014, ಅಧಿಕೃತ ಜ್ಞಾಪನ, ಮಾರ್ಚ 2016 ರಲ್ಲಿ ಬಿಡುಗಡೆ ಮಾಡುವಂತೆ ಪತ್ರ ವ್ಯವಹಾರ ನಡೆಸಿದ್ದು, ಕವಿಪ್ರನಿನಿಯ ಈ ಕೋರಿಕೆಗೆ ವಿದ್ಯುತ್ ಮಂತ್ರಾಲಯ ಇನ್ನೂ ಜವಾಬು ನೀಡಬೇಕಾಗಿದೆ. ಪಿ.ಎಸ್.ಡಿ.ಎಫ್ ಮತ್ತು ಜಿ.ಇ.ಸಿ, ಪ್ರಾಧಿಕಾರಗಳಿಂದ ಯಾವುದೇ ಪತ್ರ/ಜವಾಬು ಬಾರದಿರುವುದರಿಂದ, ಎ.ಜಿ.ಆಡಿಟರ್ ಅವರು ಸ್ವೀಕರಿಸಬಹುದಾದ ಅನುದಾನದ ಮೊತ್ತವನ್ನು ಲೆಕ್ಕ ಪುಸ್ತಕಗಳಿಂದ ಹಿಂಪಡೆಯಿರಿ ಎಂದು ಸಲಹೆ ನೀಡಿರುತ್ತಾರೆ. ಎ.ಜಿ. ಆಡಿಟರ್ ಅವರ ಅಭಿಪ್ರಾಯ ಉಕ್ತಿಯ ಪಾಲನೆಗಾಗಿ, ಕವಿಪ್ರನಿನಿಯು ಅನುದಾನದ ಮೊತ್ತವನ್ನು ಲೆಕ್ಕ ಪುಸ್ತಕಗಳಿಂದ ಹಿಂದಕ್ಕೆ ಪಡೆದಿದೆ. |
| 5 | | **ಭೋಗ್ಯಗಳು** |
| | ಎ | ಕವಿಪ್ರನಿನಿಯು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮತ್ತು ಇತರರೊಡನೆ ಮಾಡಿಕೊಂಡ ಗುತ್ತಿಗೆ ಕರಾರು ಇವುಗಳು ಕಂಪನಿಯಲ್ಲಿ ಲಭ್ಯವಿದೆ. ಆರ್ಥಿಕ ವರ್ಷ 2021–22 ರ ಅವಧಿಯಲ್ಲಿ IND AS 116 ರ ಪ್ರಕಾರ ಗುರುತಿಸುವಿಕೆ, ಪ್ರಸ್ತುತಿ, ಮಾಪನ ಮತ್ತು ಬಹಿರಂಗ ಪಡಿಸುವಿಕೆಯ ತತ್ವಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಗಳನ್ನು ಮಾಡಲಾಗುವುದು. |
| | ಬಿ | ಆರ್ಥಿಕ ವರ್ಷ 2021–22 ರಲ್ಲಿ ಸಂಬಂದ ಪಟ್ಟ ಪಂಗಡದೊಡನೆ ಗುತ್ತಿಗೆ ಕರಾರನ್ನು ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು. |
| 6 | | **ಆರ್ಥಿಕ ಆಸ್ತಿಗಳು–ವ್ಯಾಪಾರ ಮತ್ತು ಇತರೆ ಸ್ವೀಕೃತಿಗಳು** |
| | ಎ | ಕೆ.ಇ.ಆರ್.ಸಿ. ಅನುಮೋದಿಸಿದ ಜಕಾತಿ ದರಗಳ ಪ್ರಕಾರ ಕವಿಪ್ರನಿನಿಯು ಪ್ರತಿ ತಿಂಗಳೂ ಸಹ ಪ್ರಸರಣ ಬಿಲ್‌ಗಳನ್ನು ನೀಡುತ್ತಿದೆ. ವಿದ್ಯುತ್ ಸರಬರಾಜು ಕಂಪನಿಗಳು ನಿಯಮಿತವಾಗಿ ಮಾಸಿಕ ಪ್ರಸರಣ ಬಿಲ್‌ಗಳಿಗೆ ಪಾವತಿ ಮಾಡುತ್ತಿಲ್ಲ. ವಿದ್ಯುತ್ ಸರಬರಾಜು ಕಂಪನಿಗಳು ತಮ್ಮಲ್ಲಿ ಲಭ್ಯವಿರುವ ನಿಧಿಗಳಿಗೆ ಅನುಸಾರವಾಗಿ ಒಂದೇ ಮೊತ್ತವಾಗಿ ಪಾವತಿಸುತ್ತಿದೆ, ಅದರಲ್ಲಿ ಹಣವು ಯಾವ ತಿಂಗಳ ಬಿಲ್‌ಗೆ ಸಂಬಂಧಿಸಿದ್ದು ಎಂದು ನಮೂದಿಸುತ್ತಿಲ್ಲ. ಹಾಗಾಗಿ ಕವಿಪ್ರನಿನಿಯು ಅವುಗಳನ್ನು ಮಾಸಿಕ ಬಿಲ್‌ಗಳೊಡನೆ ಪರಸ್ಪರ ಹೊಂದಾಣಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಆದಾಗ್ಯೂ ಆರ್ಥಿಕ ವರ್ಷ 2021–22 ರ ನಂತರ ವಿದ್ಯುತ್ ಸರಬರಾಜು ಕಂಪನಿಗಳಿಂದ ಸ್ವೀಕೃತವಾದ ಪಾವತಿ ಮೊತ್ತವನ್ನು FIFO ಆಧಾರದ ಮೇಲೆ ಲೆಕ್ಕ ಮಾಡಲು ಕವಿಪ್ರನಿನಿಯು ಯೋಜಿಸುತ್ತಿದೆ.<br><br>ವಿದ್ಯುತ್ ಸರಬರಾಜು ಕಂಪನಿಗಳ ವ್ಯವಹಾರದಿಂದ ಬರಬೇಕಾದವುಗಳ ಸಮನ್ವಯ ಗೊಳಿಸುವುದು ಪ್ರಗತಿಯಲ್ಲಿದೆ. ವಿದ್ಯುತ್ ಸರಬರಾಜು ಕಂಪನಿಗಳಿಂದ ಇತರೆ ಸ್ವೀಕೃತಿ ಮತ್ತು ಪಾವತಿಗಳ ಲೆಕ್ಕಗಳ ಸಮನ್ವಯದ ನಿರ್ವಹಣೆಯನ್ನು ಘಟಕಗಳ ಮಟ್ಟದಲ್ಲಿ ಮತ್ತು ಆಡಳಿತ ಕಛೇರಿಯ ಮಟ್ಟದಲ್ಲಿ ನಿರ್ವಹಿಸಲಾಗುತ್ತದೆ. ವಿದ್ಯುತ್ ಸರಬರಾಜು ಕಂಪನಿಗಳು |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಇತರೆ ಸ್ವೀಕೃತಿ ಮತ್ತು ಪಾವತಿಗಳ ಲೆಕ್ಕಗಳ ಸಮನ್ವಯದ ಬಗೆಗೆ ಪ್ರಸರಣ ವಲಯ ಮಟ್ಟದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿಗಳೊಡನೆ ಸಭೆಗಳನ್ನು ಏರ್ಪಡಿಸಲು ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳಲಾಗುವುದು.<br>ಇತರ ಪಕ್ಷಕಾರರಿಂದ ಸ್ವೀಕೃತಿಗಳ ಬಗೆಗೆ, ಹೆಚ್ಚಿನ ಮೊತ್ತವು ಕರ್ನಾಟಕ ಸರ್ಕಾರ, ಬಿ.ಬಿ.ಎಂ.ಪಿ ಮತ್ತಿತರ ರಾಜ್ಯ/ಸರ್ಕಾರಿ ನಿಗಮಗಳಾಗಿವೆ ಅಂತಹ ನಿಗಮಗಳಿಂದ ಸ್ವೀಕೃತಿಗಳ ಬಾಕಿಗೆ ಶಿಲ್ಕು ಸ್ಥಿರೀಕರಣ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ.<br>ಘಟಕಗಳಲ್ಲಿನ ನಿರ್ವಹಿಸಲಾಗಿರುವ ಸ್ವೀಕೃತಿಗಳ ಬಗೆಗೆ, ಷೆಡ್ಯೂಲ್‌ಗಳಲ್ಲಿ ಅಸಂಖ್ಯಾತ ಬಾಬ್ತುಗಳಿದ್ದು, ಪ್ರತಿಯೊಬ್ಬ ಪಕ್ಷಕಾರರಿಂದ ಶಿಲ್ಕು ಸ್ಥಿರೀಕರಣ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಲು ಪ್ರಾಯೋಗಿಕವಾಗಿ ಕಾರ್ಯಸಾಧ್ಯವಾಗುವುದಿಲ್ಲ. |
| | ಬಿ | ಘಟಕಗಳಲ್ಲಿ ನಿರ್ವಹಿಸಿರುವ ಐಟಂಗಳು ಇವೆ ಸ್ವೀಕರಿಸಬಹುದಾದ ಷೆಡ್ಯೂಲಿನಲ್ಲಿ ಅಸಂಖ್ಯಾತ ಐಟಂಗಳು ಇವೆ. ವಸೂಲಾತಿಯ ಕ್ರಮಗಳನ್ನು ನಿಯತವಾಗಿ ಕೈಗೊಳ್ಳಲಾಗುತ್ತಿದೆ ಮತ್ತು ನೌಕರರಿಂದ/ ಪಕ್ಷಕಾರರಿಂದ/ ಫರ್ಮ್‌ಗಳಿಂದ ವಸೂಲಾತಿಯ ಕ್ರಮವು ನಿಯತವಾಗಿ ಪ್ರಗತಿಯಲ್ಲಿದೆ. ಹಾಗಾಗಿ ಆರ್ಥಿಕ ಆಸ್ತಿಪಾಸ್ತಿಗಳ ಶಿಥಿಲತೆಯ ಬಗೆಗೆ ವ್ಯವಸ್ಥೆ ಮಾಡುವುದು ಅವಶ್ಯಕವೇನಲ್ಲ. |
| 7 | | **ಠೇವಣಿ ಸಾಲಗಳು ಮತ್ತು ಮುಂಗಡಗಳು** |
| | ಎ | ಕಂಪನಿಯ ಲೆಕ್ಕ ಪತ್ರಗಳ ಪರಿಶೋಧನೆ ಸಮಯದಲ್ಲಿ ಠೇವಣಿಗಳು, ಸಾಲ ಮತ್ತು ಮುಂಗಡಗಳು, ಇವುಗಳ ಬಗೆಗೆ ನಿಗದಿತ ಅನುಬಂಧಗಳಲ್ಲಿ, ಲೆಕ್ಕದ ಘಟಕಗಳು ಅವುಗಳ ಸ್ಥಿತಿಗತಿ, ಅವುಗಳ ವಯಸ್ಸು, ಅವುಗಳ ಬಾಕಿಯಾಗಿ ಉಳಿಯಲು ಕಾರಣಗಳು ಈ ಬಗೆಗೆ ಕವಿಪ್ರನಿನಿಯ ಘಟಕಗಳು ವಿವರಣೆಯನ್ನು ಒದಗಿಸಿವೆ. |
| | ಬಿ | ಕವಿಪ್ರನಿನಿ ದಾಖಲಿಸಿರುವ ಪರಿಷ್ಕರಣ ಮೇಲ್ಮನವಿ ಸಂಖ್ಯೆ 5/ಆರ್.ಪಿ/2020 ಅರ್ಜಿ ಸಂಖ್ಯೆ 361/ ಟಿ.ಟಿ/2018, ದಿನಾಂಕ 08–11–2019, ಇದರ ಪರಿಷ್ಕರಣೆ ಕೋರಿರುವುದು, ಇನ್ನೂ ಬಾಕಿ ಉಳಿದಿದೆ.<br>ಈ ವಿಷಯವನ್ನು 26–11–2021 ರಂದು ಕೊನೆಗೆ ವಿಚಾರಣೆ ಮಾಡಲಾಯಿತು. ಆಯೋಗವು ಪ್ರತಿವಾದಿಗಳಿಗೆ ಮತ್ತು ಅರ್ಜಿದಾರರಿಗೆ ಅವರ ಪ್ರತ್ಯುತ್ತರವನ್ನು ತಾರೀಖು 30–12–2021 ರೊಳಗೆ ದಾಖಲಿಸಲು ಅನುಮತಿ ನೀಡಲಾಯಿತು. ಮತ್ತು ತದನಂತರ ವಿಷಯವನ್ನು ವಿಚಾರಣೆಗಾಗಿ, ಯಥಾ ಕ್ರಮವಾಗಿ ಪಟ್ಟಿಮಾಡಲಾಗುವುದು, ಈ ಬಗೆಗೆ ಪ್ರತ್ಯೇಕ ನೋಟಿಸ್ ನೀಡಲಾಗುವುದು. |
| 8 | | **ಇತರೆ ಪ್ರಸ್ತುತ ಮತ್ತು ಪ್ರಸ್ತುತವಲ್ಲದ ಆಸ್ತಿಗಳು** |
| | ಎ | ಈ ವಿಷಯವನ್ನು ಕೂಲಂಕುಶವಾಗಿ ಪರೀಕ್ಷೆ ಮಾಡಲಾಗುವುದು ಮತ್ತು ಈ ಬಗೆಗೆ ಕ್ರಮವನ್ನು 2021–22 ರಲ್ಲಿ ತೆಗೆದುಕೊಳ್ಳಲಾಗುವುದು. |
| | ಬಿ | ಅಂತರ ಘಟಕ ಲೆಕ್ಕಗಳ ವ್ಯವಹಾರಗಳಡಿಯಲ್ಲಿ ಹಳೆಯ ಬಾಬ್ತುಗಳನ್ನು ಸಮನ್ವಯ ಗೊಳಿಸಲಾಗುತ್ತಿದೆ. 01/04/2015 ಮತ್ತು ತದನಂತರ ಅಂತರ ಘಟಕ ಲೆಕ್ಕಗಳ ವ್ಯವಹಾರಗಳ ನಿರ್ವಹಣೆಗಾಗಿ ಹೊಸ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಗೊಳಿಸಿ, ಆನ್‌ಲೈನ್ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| 9 | | **ಇನ್‌ವೆಂಟರಿಗಳು/ ತಪಶೀಲು ಪಟ್ಟಿ:**<br>ರದ್ದಿಗೊಂಡ ಮತ್ತು ಬಳಕೆಯಾಲ್ಲಿಲ್ಲದ ಆಸ್ತಿಗಳನ್ನು ಷೆಡ್ಯೂಲ್ ರೇಟ್ ಪುಸ್ತಕದಲ್ಲಿರುವಂತೆ ಪೇಟೆ ಬೆಲೆಗನುಗುಣವಾಗಿ ಲೆಕ್ಕ ಮಾಡಲು, ಸುತೋಲೆಯ ಮೂಲಕ ಆದೇಶಗಳನ್ನು ಈಗಾಗಲೇ ನೀಡಲಾಗಿದೆ. ಅವುಗಳಿಲ್ಲದ ಕಡೆಗಳಲ್ಲಿ, ಅದರ ಮೌಲ್ಯದ 10% ರಂತೆ ಮಾಡತಕ್ಕದ್ದು. ಸುತ್ತೋಲೆಯನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಲೆಕ್ಕ ಮಾಡುವ ಘಟಕಗಳಿಗೆ ಆದೇಶ ನೀಡಲಾಗಿದೆ. |
| 10 | | **ಆರ್ಥಿಕ ಮತ್ತು ಇತರೆ ಹೊಣೆಗಾರಿಕೆಗಳು** |
| | ಎ | ಕವಿಪ್ರನಿನಿಯಲ್ಲಿ ಪ್ರಸರಣದ ಮೂಲಭೂತ ಸೌಕರ್ಯಗಳ ರಚನೆ, ನಿರ್ವಹಣೆ ಇವು ಒಂದು ಸತತವಾಗಿ ನಡೆಯುವ ಪ್ರಕ್ರಿಯೆ, ಇದಕ್ಕಾಗಿ ಕವಿಪ್ರನಿನಿಯ ವರ್ಷ ವರ್ಷವೂ ಸಹ ಸಾಕಷ್ಟು ಸಂಖ್ಯೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಈ ಕಾಮಗಾರಿಗಳನ್ನ ಕವಿಪ್ರನಿನಿಯ ಗುತ್ತಿಗೆದಾರರ/ಕಂಟ್ರಾಕ್ಟರ್‌ಗಳ ಮೂಲಕ ಮಾಡಿಸುವುದುರಿಂದ, ಕವಿಪ್ರನಿನಿಯ ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಂ.ಡಿ ಮತ್ತು ಇತರೆ ಠೇವಣಿಗಳನ್ನು ಗುತ್ತಿಗೆದಾರರ/ಕಂಟ್ರಾಕ್ಟರ್‌ಗಳಿಂದ ಸಂಗ್ರಹಿಸುತ್ತದೆ. ಕಾಮಗಾರಿವಾರು, ಗುತ್ತಿಗೆದಾರರ, ಷೆಡ್ಯೂಲ್‌ಗಳನ್ನು, ಅವರ ಠೇವಣಿ ವಸೂಲಿ ಮತ್ತು ಅದರ ಹಿಂದಿರುಗಿಸುವಿಕೆಯ ನಿಗಾವಣೆಗಾಗಿ ನಿರ್ವಹಿಸುತ್ತಾ ಬಂದಿದೆ., ಷೆಡ್ಯೂಲ್‌ಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಬಾಬುಗಳು ಇರುವುದರಿಂದ, ಹಾಗಾಗಿ ಪ್ರತಿಯೊಬ್ಬ ಗುತ್ತಿಗೆದಾರ/ಫರ್ಮ್‌ನಿಂದ ಶಿಲ್ಕು ಸ್ಥಿರೀಕರಣ ಪಡೆದುಕೊಳ್ಳುವುದು ಪ್ರಾಯೋಗಿಕವಾಗಿ ಅಸಾಧ್ಯವಾಗುತ್ತದೆ. |
| | ಬಿ | ಕವಿಪ್ರನಿನಿಯ ಲೆಕ್ಕ ಘಟಕಗಳು, ಪಾವತಿ ಲೆಕ್ಕಗಳಿಗೆ ಸಂಬಂದಿಸಿದಂತೆ ಪ್ರಸ್ತುತ ಸ್ಥಿತಿಗತಿ, ಕಾಲವದಿ, ಅವು ಬಾಕಿ ಉಳಿಯಲು ಕಾರಣಗಳು, ವಿವರಗಳನ್ನು, ಕೊಡಬೇಕಾದ ಮೊತ್ತದ ಬಗೆಗೆ ನಿಗದಿತ ಅನುಬಂಧಗಳಲ್ಲಿ ಆಡಿಟ್ ಸಮಯದಲ್ಲಿ ಒದಗಿಸಿದೆ.<br>ಎಫ್.ವಿ.ಟಿ.ಪಿ.ಎಲ್ ಮತ್ತು ಎಫ್.ವಿ.ಒ.ಸಿ.ಎಲ್ ಪ್ರಕಾರ ಮೌಲ್ಯಮಾಪನ ಮಾಡಬೇಕಾದ ಯಾವುದೇ ಹಣಕಾಸು ಆಸ್ತಿ ಮತ್ತು ಹೊಣೆಗಾರಿಕಯನ್ನು ಪ್ರಸ್ಥುತ ಕವಿಪ್ರನಿನಿಯು ಹೊಂದಿರುವುದಿಲ್ಲ.<br>ಭೋಗ್ಯ ವೆಚ್ಚ, FVTPL ಅಥವಾ FVOCI ಎಲ್ಲಾ ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಸಾಲಿನ ಮೂಲಕ ಸಾಲಿನ ವರ್ಗೀಕರಣವನ್ನು ಈಗಾಗಲೇ ಹಣಕಾಸು ಹೇಳಿಕೆಗಳ ಟಿಪ್ಪಣಿ ಸಂಖ್ಯೆ 37.18ರಲ್ಲಿ ಬಹಿರಂಗಪಡಿಸಲಾಗಿದೆ, ಅಲ್ಲಿ ಕಂಪನಿಯು ಎಲ್ಲಾ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಭೋಗ್ಯ ವೆಚ್ಚದ ಆಧಾರದ ಮೇಲೆ ವರ್ಗೀಕರಿಸಲಾಗಿದೆ.<br>ಮುಂದುವರೆದು, ಕವಿಪ್ರನಿನಿಯ ಎಲ್ಲಾ ಹಣಕಾಸು ಆಸ್ತಿ ಮತ್ತು ಹೊಣೆಗಳ ವಿವರಣಾತ್ಮಕವಾದ ವಿಶ್ಲೇಷಣೆಯನ್ನು ನೆರವೇರಿಸಿದೆ, ಅದು ಕೆಳಕಂಡಂತೆ ಇದೆ.<br>**(ಅ) ಆರ್ಥಿಕ ಹೊಣೆಗಾರಿಕೆ:**<br>Ind AS 109ರ ಪ್ರಕಾರ ಒಂದು ಸಂಸ್ಥೆಯು ತನ್ನೆಲ್ಲಾ ಅರ್ಥಿಕ ಹೊಣೆಗಳನ್ನೂ ಸಹ ಋಣತೀರಿಕೆ ಖರ್ಚು ಆಧಾರದ ಮೇಲೆ ವರ್ಗೀಕರಿಸತಕ್ಕದ್ದು, ಕೆಲವು ಪ್ರಕರಣಗಳಲ್ಲಿ ಆರ್ಥಿಕ ಹೊಣೆಯನ್ನು ಎಫ್.ವಿ.ಟಿ.ಪಿ.ಎಲ್ ನಲ್ಲಿ ವರ್ಗಿಕರಿಸಬಹುದಾಗಿದೆ. ಅವುಗಳನ್ನು ಹೊರತು ಪಡಿಸಿದಂತೆ ಮಿಕ್ಕೆಲ್ಲವೂ ಸಹ, ತನ್ನೆಲ್ಲಾ ಅರ್ಥಿಕ ಹೊಣೆಗಳನ್ನೂ ಋಣತೀರಿಕೆ ಖರ್ಚು ಆಧಾರದ ಮೇಲೆ ವರ್ಗೀಕರಿಸಿದೆ ಉದಾಹರಣೆ: ಹಿಂಪಡಯಬಹುದಾದ ಭದ್ರತಾ |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಠೇವಣಿಗಳು, ಸರಬರಾಜುದಾರರ ಹೊಣೆಗಳು, ಇತ್ಯಾದಿ.<br>ಆರ್ಥಿಕ ಹೊಣೆಯನ್ನು ಎಫ್.ವಿ.ಟಿ.ಪಿ.ಎಲ್‌ನಲ್ಲಿ ವರ್ಗೀಕರಿಸಬಹುದಾದ ಕೆಲವು ಉದಾಹರಣೆಗಳು :<br>• ಉತ್ಪನ್ನಗಳು<br>• FVTPL ನಂತೆ ಪದನಾಮವು ಮಾಪನ ಅಥವಾ ಗುರುತಿಸುವಿಕೆ ಅಸಂಗತತೆಯನ್ನು ನಿವಾರಿಸುತ್ತದೆ ಅಥವಾ ಗಮನಾರ್ಹವಾಗಿ ಕಡಿಮೆ ಮಾಡುತ್ತದೆ.<br>• ಹಣಕಾಸು ಖಾತರಿ ಒಪ್ಪಂದಗಳು.<br>• ಹಣಕಾಸಿನ ಸ್ವತ್ತುಗಳ ವರ್ಗಾವಣೆಯು ಗುರುತಿಸುವಿಕೆಗೆ ಅರ್ಹತೆ ಪಡೆಯದಿದ್ದಾಗ ಅಥವಾ ನಿರಂತರ ಒಳಗೊಳ್ಳುವಿಕೆಯ ವಿಧಾನವನ್ನು ಅನ್ವಯಿಸಿದಾಗ ಉದ್ಭವಿಸುವ ಹಣಕಾಸಿನ ಹೊಣೆಗಾರಿಕೆಗಳು.<br>• ಸಾದಿಲ್ವಾರು ಪರಿಗಣನೆ<br>• ಪೇಟೆಯಲ್ಲಿನ ಬಡ್ಡಿ ದರಕ್ಕಿಂತ ಕಡಿಮೆ ಒದಗಿಸುವ ಬದ್ಧತೆ.<br>ಹಾಗಾಗಿ ಮೇಲಿನದರ ಆಧಾರದ ಮೇಲೆ, ಎಫ್.ವಿ.ಟಿ.ಪಿ.ಎಲ್‌ನಲ್ಲಿ ವರ್ಗೀಕರಿಸಬಹುದಾದ ಯಾವುದೇ ಆರ್ಥಿಕ ಹೊಣೆಗಾರಿಕೆಗಳು ಇರುವುದಿಲ್ಲ.<br>**(ಆ) ಆರ್ಥಿಕ ಆಸ್ತಿಗಳು:**<br>ಆರ್ಥಿಕ ಆಸ್ತಿಗಳನ್ನು ಕೆಳಕಂಡಂತೆ ಮೂರು ವರ್ಗಗಳಾಗಿ ವರ್ಗೀಕರಿಸಬೇಕಾಗಿದೆ.<br>ಅ) ಋಣತೀರಿಕೆ ಖರ್ಚು:<br>ಕೆಳಗಿನ ಎರಡೂ ಷರತ್ತುಗಳನ್ನು ಪೂರೈಸಿದರೆ ಹಣಕಾಸಿನ ಆಸ್ತಿಯನ್ನು ಋಣತೀರಿಕೆ ಖರ್ಚು ಎಂದು ವರ್ಗೀಕರಿಸುವ ಅಗತ್ಯವಿದೆ.<br>• ಒಂದು ಸಂಸ್ಥೆಯು ಹೊಂದಿರುವ ಆರ್ಥಿಕ ಆಸ್ತಿ, ವ್ಯಾಪಾರದ ಮಾದರಿ, ಅದರ ಧ್ಯೇಯೋದ್ದೇಶ, ಕರಾರಿನ ಪ್ರಕಾರವಾದ ಹಣದ ಹರಿವನ್ನು ಅದರ ವಾಯಿದೆ ತನಕ ಸಂಗ್ರಹಿಸಬೇಕು.<br>• ಆರ್ಥಿಕ ಆಸ್ತಿಗಳು ಸಂಸ್ಥೆಗೆ ಅಸಲು ಮತ್ತು ಬಡ್ಡಿಯ ಸಂಪೂರ್ಣ ಪಾವತಿಗಳನ್ನು ಒದಗಿಸುತ್ತದೆ<br>ಉದಾಹರಣೆಗೆ, ಕೆ.ಪಿ.ಟಿ.ಸಿ.ಎಲ್. ನೌಕರರಿಗೆ ಸಾಲ ನೀಡಿದ್ದಲ್ಲಿ, ಅದರ ಉದ್ದೇಶವು ಕರಾರಿನಂತೆ ಹಣದ ಹರಿವನ್ನು ಪಡೆದುಕೊಳ್ಳುವುದು, ಅಂದರೆ ಅಸಲು ಮತ್ತು ಬಡ್ಡಿಯನ್ನು ಅದರ ವಾಯಿದೆಯ ತನಕ ಪಾವತಿಸುವುದು. ಹಾಗಾಗಿ ಈ ಸಾಲಗಳನ್ನು ಋಣತೀರಿಕೆ ಖರ್ಚು ಎಂದು ವರ್ಗೀಕರಿಸಬೇಕಾಗಿದೆ.<br>(ಆ) ಎಫ್.ವಿ.ಒ.ಸಿ.ಐ:<br>ಕೆಳಕಂಡ ಎರಡೂ ಷರತ್ತುಗಳನ್ನೂ ಸಹ ಪೂರೈಸಿದಲ್ಲಿ, ಒಂದು ಆರ್ಥಿಕ ಆಸ್ತಿಯನ್ನು ಎಫ್.ವಿ.ಒ.ಸಿ.ಐ., ಎಂದು ವರ್ಗೀಕರಿಸಬೇಕಾಗುತ್ತದೆ.<br>• ಒಪ್ಪಂದದ ನಗದು ಹರಿವುಗಳನ್ನು ಮತ್ತು ಆರ್ಥಿಕ ಸ್ವತ್ತುಗಳ ಮಾರಾಟದಿಂದ ಬರುವ ಆದಾಯವನ್ನು ಸಂಗ್ರಹಿಸುವ ಉದ್ದೇಶವನ್ನು ಹೊಂದಿರುವ ವ್ಯವಹಾರ ಮಾದರಿಯಲ್ಲಿ ನಡೆಯುತ್ತದೆ. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | • ಆರ್ಥಿಕ ಸ್ವತ್ತುಗಳು ಸಂಸ್ಥೆಗೆ ಅಸಲು ಮತ್ತು ಬಡ್ಡಿಯ ಪಾವತಿಗಳನ್ನು ನೀಡುತ್ತದೆ<br>ಉದಾಹರಣೆಗೆ : ಒಪ್ಪಂದದ ನಗದು ಹರಿವನ್ನು ಸಂಗ್ರಹಿಸುವ ಉದ್ದೇಶದಿಂದ ಆಗಾಗ್ಗೆ ಉಲ್ಲೇಖಿಸಲಾದ ಬಾಂಡ್‌ಗಳನ್ನು ಖರೀದಿಸಿದ ಸಂಸ್ಥೆಯು ಮಾರುಕಟ್ಟೆ ಮೌಲ್ಯದಲ್ಲಿ ಹೆಚ್ಚಳದ ಸಂದರ್ಭದಲ್ಲಿ ಈ ಡಿಬೆಂಚರ್‌ಗಳನ್ನು ಮಾರಾಟ ಮಾಡುತ್ತದೆ.<br>(ಇ) ಎಫ್.ವಿ.ಟಿ.ಪಿ.ಎಲ್<br>ಎಫ್.ವಿ.ಒ.ಸಿ.ಐ ಅಥವಾ ಋಣತೀರಿಕೆ ಖರ್ಚು ಎಂದು ವರ್ಗೀಕರಿಸಲು ಅರ್ಹವಲ್ಲದ ಆರ್ಥಿಕ ಆಸ್ತಿಯನ್ನು ಎಫ್.ವಿ.ಟಿ.ಪಿ.ಎಲ್. ಎಂದು ವರ್ಗೀಕರಿಸಲಾಗುವುದು.<br>ಆರ್ಥಿಕ ಸ್ವತ್ತುಗಳ ಪರಿಶೀಲನೆಯ ಮೇಲೆ, ಎಲ್ಲಾ ಆರ್ಥಿಕ ಸ್ವತ್ತುಗಳನ್ನು ಋಣತೀರಿಕೆ ಖರ್ಚು ಎಂದು ವರ್ಗೀಕರಿಸುವ ಅಗತ್ಯವಿದೆ. |
| 11 | | **ಸಿಬ್ಬಂದಿ ಉಪಯೋಗಗಳು** |
| | (ಎ)(i) | **ವಾಸ್ತವಿಕತೆ :** |
| | ii) | ಕರ್ನಾಟಕ ಸರ್ಕಾರವು ತನ್ನ ಪತ್ರ ಸಂಖ್ಯೆ ತಾರೀಖು 16/09/2016 ರಲ್ಲಿ ಕವಿಪ್ರನಿನಿಗೆ ನಿರ್ದೇಶನ ನೀಡಿ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್ (KEPGT) ಗೆ ಕೊಡಬೇಕಾದ ಮೊತ್ತವಾದ ರೂ.527.79 ಕೋಟಿಗಳನ್ನ ಒಂದಾವರ್ತಿಯ ಕ್ರಮವಾಗಿ ಲೆಕ್ಕಕ್ಕೆ ಪರಿಗಣಿಸುವಂತೆ ತಿಳಿಸಿದ್ದಾರೆ. ಆದರೆ ಕ.ವಿ.ನಿ.ಆ (KERC) ರೂ.527.79 ಕೋಟಿಗಳನ್ನು ತನ್ನ ಟ್ಯಾರಿಫ್ ಆಜ್ಞೆಯಲ್ಲಿ ಖರ್ಚು ಎಂದು ಪರಿಗಣಸಲಾಗದು ಎಂದು ತಿರಸ್ಕರಿಸಿರುವುದರಿಂದ, ಕವಿಪ್ರನಿನಿಯು ಈ ಮೊತ್ತವನ್ನು ಪಾವತಿಸದ ಕಾರಣ, ಸದರಿ ಮೊತ್ತವನ್ನು ಕೆ.ಇ.ಪಿ.ಜಿ.ಟಿ. ಮೂಲ ನಿಧಿಗೆ ಕಾರ್ಪಸ್ ಫಂಡ್‌ನಲ್ಲಿ ಸೇರಿಸಲಾಗಿಲ್ಲ. ಆದುದರಿಂದ ಆಕ್ಚೂರಿಯಲ್ ವ್ಯಾಲ್ಯುಯೇಷನ್ ಸಮಯದಲ್ಲಿ ಅದರ ಮೊತ್ತವನ್ನು ಲೆಕ್ಕಮಾಡಿ ಆಕ್ಚಯುರಿ ಅವರು ಈ ಮೊತ್ತವನ್ನು ಪರಿಗಣಿಸದೇ ಲೆಕ್ಕ ಮಾಡಿದ್ದಾರೆ. |
| | iii) | ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್ [ಕೆ.ಇ.ಪಿ.ಜಿ.ಟಿ] ಕಾಲಕಾಲಕ್ಕೆ ಆಕ್ಚೂರಿಯಲ್ ವ್ಯಾಲ್ಯುಯೇಷನ್ ಮೇರೆಗೆ ಮೌಲ್ಯ ನಿರ್ಣಯ ಮಾಡಿಸಲಾಗುತ್ತಿದೆ, ಮತ್ತು ಯಾವ ದರದಲ್ಲಿ ಕವಿಪ್ರನಿನಿ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್ [ಕೆ.ಇ.ಪಿ.ಜಿ.ಟಿ] ಗೆ ವಂತಿಕೆ ಪಾವತಿಸಬೇಕು ಎಂಬುದನ್ನು ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ತಿಳಿಸುತ್ತದೆ. ಅದರ ಪ್ರಕಾರವಾಗಿ ಕವಿಪ್ರನಿನಿ ನಿವೃತ್ತಿ ವೇತನ ಮತ್ತು ಉಪದಾನ ಪಿಂಚಣಿ ಮತ್ತು ಗ್ರಾಚ್ಯುಟಿ ಉಪಬಂಧ ಕವಿಪ್ರನಿನಿ ಲೆಕ್ಕಪತ್ರ ನಿರ್ವಹಣ ನೀತಿಗನುಸಾರವಾಗಿ ಲೆಕ್ಕ ನಿರ್ವಹಿಸುತ್ತದೆ. ಇಲ್ಲಿಯತನಕವೂ, ಕವಿಪ್ರನಿನಿ ಆಕ್ಚುಯರಿಯವರು ನಿರ್ಧರಿಸಿದಂತೆ ಮತ್ತು ಕೆ.ಇ.ಪಿ.ಜಿ.ಟಿ ಇವರು ತಿಳಿಸಿದ ದರದ ಪ್ರಕಾರ ನಿವೃತ್ತಿ ವೇತನ ಮತ್ತು ಉಪದಾನ ವಂತಿಕೆ ನೀಡುತ್ತಾ ಬಂದಿದೆ. ಅದರಂತೆ, ಅಂಥಹ ಯೋಜನೆಯು ಕವಿಪ್ರನಿನಿಗೆ ಸಂಬಂಧಿಸಿದಂತೆ ನಿರ್ದಿಷ್ಟ ವಂತಿಗೆ ಯೋಜನೆ "(Difined Contribution Plan" ಆಗಿರುತ್ತದೆ. |
| | iv) | ಕವಿಪ್ರನಿನಿಯು ಕೆ.ಇ.ಪಿ.ಜಿ.ಟಿ ಮೂಲಕ ಸೂಚಿಸಲಾದ ದರಗಳ ಆಧಾರದ ಮೇಲೆ ಪಿಂಚಣಿ ಮತ್ತು ಗ್ರಾಚ್ಯುಟಿ ಕೊಡುಗೆಯನ್ನು ಲೆಕ್ಕ ಹಾಕುತ್ತಿದೆ ಮತ್ತು ಕವಿಪ್ರನಿನಿಯು 'ವ್ಯಾಖ್ಯಾನಿತ ಕೊಡುಗೆ ಯೋಜನೆ' ಆಗಿರುವುದರಿಂದ ಪಿಂಚಣಿ ಮತ್ತು ಗ್ರಾಚ್ಯುಟಿಗೆ ಸಂಬಂಧಿಸಿದಂತೆ ವಾಸ್ತವಿಕ ಮೌಲ್ಯಮಾಪನವನ್ನು ಮಾಡುತ್ತಿಲ್ಲ. ಆದ್ದರಿಂದ, ಬಹಿರಂಗಪಡಿಸಲಾಗಿಲ್ಲ. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | (ಬಿ)(i) | ಕವಿಪ್ರನಿನಿ ಮತ್ತು ವಿ.ಕ.ಸಂ. ಗಳ ಎನ್.ಡಿ.ಸಿ.ಪಿ.ಎಸ್ ಅಡಿಯಲ್ಲಿ ಬರುವ ಎಲ್ಲಾ ನೌಕರರ ವಿವರಗಳನ್ನು ಅಂದರೆ ಸಂಬಳ, ಸಾರಿಗೆ, ವಂತಿಗೆ ಇತ್ಯಾದಿಗಳನ್ನು ಸಂಗ್ರಹಿಸುತ್ತಿದೆ. ಕೆ.ಇ.ಪಿ.ಜಿ.ಟಿ.ಯು ಎಲ್.ಐ.ಸಿ.ಯನ್ನು ಎನ್.ಡಿ.ಸಿ.ಪಿ.ಎಸ್ ನಿಧಿಯ ವ್ಯವಸ್ಥಾಪಕರನ್ನಗಿ ನೇಮಕ ಮಾಡಿದೆ ಮತ್ತು ಎನ್.ಡಿ.ಸಿ.ಪಿ.ಎಸ್ ಫಂಡ್ ವಂತಿಗೆಯನ್ನು ಎಲ್.ಐ.ಸಿ ಯಲ್ಲಿ ಹೂಡಿಕೆಮಾಡಿದೆ.<br><br>ಕವಿಪ್ರನಿನಿಯಲ್ಲಿ ಕೆಲಸ ಮಾಡುತ್ತಿರುವ, ಎಲ್.ಐ.ಸಿಯಲ್ಲಿ ಲಭ್ಯವಿರುವ ಎನ್.ಡಿ.ಸಿ.ಪಿ.ಎಸ್ ಉದ್ಯೋಗಿಗಳ ಮಾಹಿತಿಯ ಆಧಾರದ ಮೇಲೆ ಗ್ರಾಚ್ಯುಟಿ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಆಕ್ಚುರಿಯಲ್ ಮೌಲ್ಯಮಾಪನ ವರದಿಯ ಕವಿಪ್ರನಿನಿಯ ಭಾಗವನ್ನು ಒದಗಿಸಲು KEPGT ಎಲ್ಐಸಿಯು ಗೆ ವಿನಂತಿಸಿದೆ.<br><br>ಅದರಂತೆ, ಎಲ್ಐಸಿಯು ತಾತ್ಕಾಲಿಕ ಆಧಾರದ ಮೇಲೆ ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಸಿದ್ಧಪಡಿಸಿದೆ ಮತ್ತು ದಿನಾಂಕ : 31/03/2021 ರಂತೆ ಹಣಕಾಸಿನ ಹೇಳಿಕೆಯಲ್ಲಿ ಗುರುತಿಸಲು ಗ್ರಾಚ್ಯುಟಿ ಹೊಣೆಗಾರಿಕೆಯನ್ನು ತಿಳಿಸಿತು. ತಾತ್ಕಾಲಿಕ ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಆಧರಿಸಿ, KPTCL NDCPs ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಗ್ರಾಚ್ಯುಟಿ ಹೊಣೆಗಾರಿಕೆಯನ್ನು ಲೆಕ್ಕೀಕರಿಸಿದೆ. ಆದ್ದರಿಂದ, Ind As 19 ರ ಅಡಿಯಲ್ಲಿ ಅಗತ್ಯವಿರುವ ಪ್ರಕಟಣೆಯನ್ನು ಮಾಡಲಾಗಿಲ್ಲ. ಸಂಪೂರ್ಣ ವಾಸ್ತವಿಕ ಮೌಲ್ಯಮಾಪನ ವರದಿಯನ್ನು ಸ್ವೀಕರಿಸಿದ ನಂತರ, ಅಗತ್ಯವಿರುವ ಪ್ರಕಟಣೆಯನ್ನು ಮಾಡಲಾಗುವುದು. |
| | ii) | ಕವಿಪ್ರನಿನಿ ಎನ್.ಡಿ.ಸಿ.ಪಿ.ಎಸ್ ಯೋಜನೆಯ ಅಡಿಯಲ್ಲಿ ಪಿ.&ಜಿ ಟ್ರಸ್ಟ್‌ಗೆ ರೂ.1.56 ಕೋಟಿಯಷ್ಟು ಹೆಚ್ಚಿನ ಮೊತ್ತವನ್ನು ಪಾವತಿ ಮಾಡಿರುತ್ತಾರೆ. ಹಾಗಾಗಿ ಲೆಕ್ಕ ಪುಸ್ತಕಗಳಲ್ಲಿ ಋಣಿಕ ಶಿಲ್ಕು ಬಾಕಿ ನಿಂತಿದೆ. ಆ ಮೊತ್ತವನ್ನು ಹಿಂದಕ್ಕೆ ಪಡೆಯಲು ಪಡೆಯಲು, ಪಿ.&ಜಿ ಟ್ರಸ್ಟ್ ನೊಡನೆ ಲೆಕ್ಕ ಸಮನ್ವಯ ಮಾಡಲಾಗುತ್ತಿದೆ. ಈ ವ್ಯತ್ಯಾಸವನ್ನು 2021–22 ರಲ್ಲಿ ಬಗೆಹರಿಸಲಾಗುವುದು. |
| | iii) | ಕವಿಪ್ರನಿನಿ ಮತ್ತು ವಿ.ಕ.ಸಂ.ಗಳು ಎನ್.ಡಿ.ಸಿ.ಪಿ. ಯೋಜನೆಯ ಅಡಿಯಲ್ಲಿ ಬರುವ ಎಲ್ಲಾ ನೌಕರರ ವಿವರಗಳನ್ನು KEPGT ಸಂಗ್ರಹಿಸುತ್ತಿದೆ. ಸಂಪೂರ್ಣ ಮಾಹಿತಿ ಲಭ್ಯವಾಗುತ್ತಿದ್ದಂತೆ, ಆಕ್ಚೂರಿಯಲ್ ವ್ಯಾಲ್ಯುಯೇಷನ್ ಕಾರ್ಯವನ್ನು ಆಕ್ಚುಯರಿ ಇವರಿಗೆ ವಹಿಸಿಕೊಡಲಾಗುತ್ತದೆ. ಆಕ್ಚುರಿಯಲ್ ವರದಿಯು ಸ್ವೀಕರಿಸಿದ ನಂತರ ಸೂಕ್ತ ಕ್ರಮವನ್ನು ಆರಂಭಿಸಲಾಗುವುದು.<br><br>ಕೆಇಪಿಜಿಟಿ ಮತ್ತು ಎನ್‌ಡಿಸಿಪಿಎಸ್ ಆಕ್ಚೂರಿಯಲ್ ವ್ಯಾಲ್ಯುಯೇಷನ್ ಕಲ್ಪನೆಗಳು ಸಾಮಾನ್ಯ:<br><br>ಎನ್.ಡಿ.ಸಿ.ಪಿ.ಎಸ್ ಅಡಿಯಲ್ಲಿ ಬರುವ ಪ್ರತಿಯೊಬ್ಬ ನೌಕರರ ವಿವರಗಳು ಲಭ್ಯವಿಲ್ಲದ ಕಾರಣ, ಕೆ.ಇ.ಪಿ.ಜಿ.ಟಿ ಯು ಎನ್.ಡಿ.ಸಿ.ಪಿ.ಎಸ್. ಗ್ರಾಚ್ಯುಟಿ ಹೊಣೆಯನ್ನು ದಿನಾಂಕ 31/03/2021 ರಂದು ಆಕ್ಚೂರಿಯಲ್ ವ್ಯಾಲ್ಯುಯೇಷನ್ ಕಾರ್ಯಕ್ಕೆ ಆಕ್ಚುಯರಿಯನ್ನು ನೇಮಕ ಮಾಡಿಲ್ಲ. ಎನ್.ಡಿ.ಸಿ.ಪಿ.ಎಸ್ ನೌಕರರ ವಿವರವು ಎಲ್.ಐ.ಸಿಯಲ್ಲಿ ಲಭ್ಯವಿರುವುದರಿಂದ, KEPGT ಇವರ ವಿಶಿಷ್ಟವಾದ ಕೋರಿಕೆಯ ಮೇರೆಗೆ ಎಲ್.ಐ.ಸಿ ಯವರು ಚಾಲ್ತಿಯಲ್ಲಿರು ಕೈಗಾರಿಕಾ ಮಾನಕ ಊಹೆಗಳಾಧಾರದ ಮೇಲೆ ತಾತ್ಕಾಲಿಕ ವರದಿಯೊಂದನ್ನು ಒದಗಿಸಿರುತ್ತಾರೆ. ಅಂತೆಯೇ, ಆಟ್ರಿಷನ್ ದರ, ವಾರ್ಷಿಕ ವೇತನ ಹೆಚ್ಚಳ ದರ ಇತ್ಯಾದಿಗಳಿಗೆ ಸಂಬಂಧಿಸಿದ ಊಹೆಗಳನ್ನು KEPGT ನಿಂದ LIC ಗೆ ಒದಗಿಸಲಾಗಿಲ್ಲ. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಆಕ್ಚುರಿಯಲ್ ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳಲು ಅಧಿಕೃತ ಆಕ್ಚುರಿಯನ್ನು ನೇಮಿಸಿದ ನಂತರ ಅದನ್ನು ಸರಿಪಡಿಸಲಾಗುವುದು. |
| | ಸಿ) | ಅರ್ಧ ವೇತನ ರಜೆಯ ಬಗೆಗೆ ಆಕ್ಚೂರಿಯಲ್ ವ್ಯಾಲ್ಯುಯೇಷನ್ ಅನ್ನು ಮೊಟ್ಟಮೊದಲ ಬಾರಿಗೆ 2019–20ರಲ್ಲಿ ಮಾಡಲಾಯಿತು ಮತ್ತು ದಿನಾಂಕ 31/03/2020 ಕ್ಕೆ ಹೊಣೆಗಾರಿಕೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. |
| | ಡಿ) | ಕುಟುಂಬ ಸಹಾಯ ನಿಧಿಯ ವಂತಿಗೆಯ ಆಕ್ಚೂರಿಯಲ್ ವ್ಯಾಲ್ಯುಯೇಷನ್ ಅನ್ನು Ind As–19 ರ ಅವಶ್ಯಕತೆಯಂತೆ ಕವಿಪ್ರನಿನಿಯಲ್ಲಿ ಮಾಡಲಾಗಿದೆ. ಆಕ್ಚೂರಿಯಲ್ ವ್ಯಾಲ್ಯುಯೇಷನ್ ನ ಪ್ರಕಾರ ದಿನಾಂಕ 31/03/2021 ರಂದು ತುಲನ ಪತ್ರದಲ್ಲಿ ಮಾನ್ಯ ಮಾಡಬೇಕಾದ ನಿವ್ವಳ ಹೊಣೆಯು ದಿನಾಂಕ 31/03/2021 ರಂದು ಲೆಕ್ಕ ಪುಸ್ತಕಗಳಲ್ಲಿ–ರುವುದಕ್ಕಿಂತಲೂ ಕಡಿಮೆಯಾಗಿದೆ., ಆದುದರಿಂದ ಅದರ ಕುಟುಂಬ ಸಹಾಯ ನಿಧಿ, ಸೇವೆಯಲ್ಲಿಯೆ ಮರಣ ಹೊಂದಬಹುದಾದ ನೌಕರರ ವಿಷಯದಲ್ಲಿ, ಯಾವುದೇ ವ್ಯವಸ್ಥೆ ಮಾಡುವ ಅವಶ್ಯಕತೆ ಇರುವುದಿಲ್ಲ.<br>ಮುಂದುವರೆದು, ನಿವೃತ್ತಿ ಹೊಂದುತ್ತಿರುವ ನೌಕರರಿಗೆ ಕಂಪನಿಯು ವಂತಿಗೆಯನ್ನು ಈ ನಿಧಿಯ ಹೂಡಿಕೆಯ ಮೇಲಿನ ಬಡ್ಡಿಯಿಂದ ಭರಿಸುತ್ತಿರುವುದು ಹಾಗೂ ಕವಿಪ್ರನಿನಿಯ ನಿಧಿಯಿಂದ ಕೊಡುತ್ತಿಲ್ಲ. ಕಂಪನಿಯ ವಂತಿಗೆಯು ಡಿಫೈಂಡ್ ಕಾನ್ಟ್ರಿಬ್ಯೂಷನ್ ಪ್ಲಾನ್ [DCP] ಹಾಗಾಗಿ ಯಾವುದೇ ಆಕ್ಚೂರಿಯಲ್ ವ್ಯಾಲ್ಯುಯೇಷನ್ ಅವಶ್ಯಕತೆ ಇಲ್ಲವೆಂದು, ಆಕ್ಚುಯರಿ ಅವರ ಅಭಿಪ್ರಾಯವಾಗಿದೆ. |
| 12 | | **ಶಾಸನಬದ್ಧ ರವಾನೆಗಳು**<br>ಪತ್ರ ಸಂಖ್ಯೆ ಎಫ್.ಎ/(ಎ&ಆರ್)/ಕೆ.ಸಿ.ಒ–18/96289/2021–22, ದಿನಾಂಕ 25–11–2021 ರಡಿಯಲ್ಲಿ ಸಲ್ಲಿಸಲಾದ ಜಿ.ಎಸ್.ಟಿ ರಿಟರ್ನ್‌ಗಳನ್ನು ಸಮನ್ವಯ ಮಾಡುವಂತೆ ನಿರ್ದೇಶನ ನೀಡಲಾಗಿದೆ ಮತ್ತು ಅವುಗಳನ್ನು ಆರ್ಥಿಕ ವರ್ಷ 2021–22 ರಲ್ಲಿ ಸಮನ್ವಯ ಗೊಳಿಸಲಾಗುವುದು.<br>ದಾಸ್ತಾನುಗಳ ಕೊರತೆ ಬಗೆಗೆ ವಸೂಲಿ ಮಾಡಲಾದ ಮೊತ್ತ ಮತ್ತಿತರ ವಿವಾದತ್ಮಕ ವಿಷಯಗಳನ್ನು ನೌಕರರಿಂದ ವಸೂಲಿ ಮಾಡಬೇಕಾದ ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುವುದು ಮತ್ತು ಅದನ್ನು ವರಮಾನವೆಂದು ಪರಿಗಣಿಸಲಾಗುವುದಿಲ್ಲ. ಹಾಗಾಗಿ ಜಿ.ಎಸ್.ಟಿ ಅನ್ವಯವಾಗುವುದಿಲ್ಲ ಆದಾಗ್ಯೂ ಮುಂದಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ಸಮಾಲೋಚಕರ ಅಭಿಪ್ರಾಯವನ್ನು ಪಡೆದುಕೊಳ್ಳಲಾಗುವುದು.<br>ಆದಾಗ್ಯೂ ಬ್ಯಾಂಕ್ ಗ್ಯಾರಂಟಿಯನ್ನು ಅವಾಹನೆ ಮೂಲಕ ವಸೂಲಾದ ಮೊತ್ತವನ್ನು ವರ್ಗೀಕರಣ ಸಮಯದಲ್ಲಿ ಆಸ್ತಿಯ ಖರ್ಚಿನ ವಿರುದ್ಧ ಹೊಂದಾಣಿಕೆ ಮಾಡಲಾಗುವುದು ಮತ್ತು ಅದನ್ನು ಆದಾಯವೆಂದು ಪರಿಗಣಿಸುವುದಿಲ್ಲ. ಹಾಗಾಗಿ ಅವುಗಳಿಗೆ ಜಿ.ಎಸ್.ಟಿ ಅನ್ವಯವಾಗುವುದಿಲ್ಲ. ಆದಾಗ್ಯೂ ಮುಂದಿನ ಕ್ರಮ ತೆಗೆದುಕೊಳ್ಳುವ ಬಗೆಗೆ ತಜ್ಞರ ಅಭಿಪ್ರಾಯವನ್ನು ಪಡೆದುಕೊಳ್ಳಲಾಗುವುದು |
| 13 | | **ಸಾದಿಲ್ವಾರು ಹೊಣೆಗಾರಿಕೆ ಮತ್ತು ಬದ್ಧತೆಗಳು:**<br>ಎಲ್ಲಾ ಲೆಕ್ಕ ನಿರ್ವಹಣೆಯ ಘಟಕಗಳಿಂದ, ಮತ್ತು ಕಾನೂನು ವಿಭಾಗದಿಂದ, ನಿಗಮ ಕಾರ್ಯಾಲಯದಿಂದಲೂ ಸಹ ಕವಿಪ್ರನಿನಿಗೆ ಬಾಕಿಯಿರುವ ನ್ಯಾಯಾಲಯ ಪ್ರಕರಣಗಳು, ಮತ್ತು ಬಂಡವಾಳ ಬದ್ದತೆಯ ಬಗೆಗೆ ವಿವರಗಳ ಸಂಕಲನವನ್ನು ಕವಿಪ್ರನಿನಿನಿ ಮಾಡುತ್ತಿದೆ. ಅದಕ್ಕೆ ಸೂಕ್ತವಾದ ಅನುಬಂಧವನ್ನು ನಿಗದಿಪಡಿಸಲು ಮತ್ತು ಅದನ್ನು |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಸಾದಿಲ್ವಾರು ಹೊಣೆ ಮತ್ತು ಬಂಡವಾಳ ಬದ್ಧತೆ ಎಂದು ಪ್ರಕಟ ಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಆದಾಗ್ಯೂ ಅವಶ್ಯಕವೆನಿಸಿದರೆ, ಹೆಚ್ಚಿನ ಮಾಹಿತಿ ಪಡೆಯಲು ಅನುಕೂಲವಾಗುವಂತೆ 2021–22 ರಲ್ಲಿ ಅನುಬಂಧವನ್ನು ಮಾರ್ಪಾಡು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. |
| 14 | | **ಆದಾಯಗಳು/ ರೆವಿನ್ಯೂ** |
| | ಎ) | ಎಂ.ಸಿ.ಎ ಅಧಿಸೂಚನೆ ಜಿ.ಎಸ್.ಆರ್. 111 [ಇ] ತಾರೀಖು 16 ನೇ ಫೆಬ್ರವರಿ 2015, ಸಾಮಾನ್ಯ ಅನುದೇಶ (2)ದನ್ವಯ 'ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್'ಗೆ ಅನ್ವಯವಾಗುವುದು ಅದರ ಉದ್ದೇಶವಾಗಿದೆ.<br><br>ಪ್ರಾಯೋಗಿಕ ತೊಂದರೆಗಳಿಂದಾಗಿ ಸಮಾಲೋಚನೆ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ತಪಾಸಣೆ ಶುಲ್ಕಗಳು, ಅರ್ಥ ಮ್ಯಾಟ್ ಡಿಸೈನ್ ಶುಲ್ಕಗಳು, ಮಂಟಪ ಕೀಪರ್ ಶುಲ್ಕಗಳನ್ನು ಅಪ್ ಫ್ರಂಟ್ ಆಗಿಯೇ ವಸೂಲು ಮಾಡಿ ಮತ್ತು ಅವುಗಳನ್ನು ಯಾವಾಗ ನಗದು ರೀತಿಯಲ್ಲಿ ಸ್ವೀಕೃತವಾಗುತ್ತದೆಯೋ ಅವಾಗಲೆಲ್ಲಾ ಆದಾಯ ಎಂದು ಲೆಕ್ಕಪತ್ರಗಳ ನಿರ್ವಹಣ ನೀತಿಗನುಸಾರವಾಗಿ ಪರಿಗಣಿಸಲಾಗುತ್ತಿದೆ. ಹೆಚ್ಚಿನ ಪ್ರಕರಣಗಳಲ್ಲಿ ಆರ್ಥಿಕ ವರ್ಷ ಮುಕ್ತಾಯದ ಮುನ್ನವೇ ಸೇವೆಯನ್ನು ಒದಗಿಸಲಾಗಿರುತ್ತದೆ. ಹಾಗಾಗಿ, ಅಂತಹ ಶುಲ್ಕಗಳನ್ನು ನಗದು ಆಧಾರದ ಮೇಲೆ ಲೆಕ್ಕ ಪತ್ರದಲ್ಲಿ ನಮೂದಿಸಲಾಗುವುದು, ಹಾಗಾಗಿ ಅಂತಹ ಶುಲ್ಕಗಳನ್ನು ನಗದು ಆಧಾರದ ಮೇಲೆ ಲೆಕ್ಕ ಮಾಡುವುದು ನಿಗಮದ ರೀತಿ, ನೀತಿ ಮತ್ತು ಗಾತ್ರದ ಬಗೆಗೆ ಅದೇನು ಅಷ್ಟು ಮುಖ್ಯವಲ್ಲ ಮತ್ತು ಇದನ್ನು ಕವಿಪ್ರನಿನಿ ಒಟ್ಟಾರೆ ವರಮಾನಕ್ಕೆ ಹೋಲಿಸಿದಲ್ಲಿ ಲೆಕ್ಕಪತ್ರಗಳ ಮೇಲೆ ಇದರ ಪ್ರಮುಖ ಪರಿಣಾಮ ಬೀರುವುದಿಲ್ಲ. |
| | ಬಿ) | Ind AS-20 ರ ಪ್ರಕಾರ ಹಣಕ್ಕೆ ಸಂಬಂಧ ಪಡದ ಆಸ್ತಿಗಳನ್ನು ಕೆಳಕಂಡಂತೆ ಪರಿಗಣಿಸಲಾಗುವುದು.<br><br>"ಸವಕಳಿ ಮಾಡಲಾಗದ ಆಸ್ತಿಗಳಿಗೆ ಸಂಬಂಧಿಸಿದ ಅನುದಾನಗಳು ಕೆಲವು ಜವಾಬ್ದಾರಿಗಳನ್ನು ಪೂರೈಸುವ ಅಗತ್ಯವಿರಬಹುದು ಮತ್ತು ನಂತರ ಬಾಧ್ಯತೆಗಳನ್ನು ಪೂರೈಸುವ ವೆಚ್ಚವನ್ನು ಹೊಂದಿರುವ ಅವಧಿಗಳಲ್ಲಿ ಲಾಭ ಅಥವಾ ನಷ್ಟದಲ್ಲಿ ಗುರುತಿಸಲಾಗುತ್ತದೆ. ಉದಾಹರಣೆಯಾಗಿ, ಸೈಟ್‌ನಲ್ಲಿ ಕಟ್ಟಡದ ನಿರ್ಮಾಣದ ಮೇಲೆ ಭೂಮಿಯ ಅನುದಾನವು ಷರತ್ತು ಬದ್ಧವಾಗಿರಬಹುದು ಮತ್ತು ಕಟ್ಟಡದ ಜೀವಿತಾವಧಿಯಲ್ಲಿ ಲಾಭ ಅಥವಾ ನಷ್ಟದಲ್ಲಿ ಅನುದಾನವನ್ನು ಗುರುತಿಸುವುದು ಸೂಕ್ತವಾಗಿರುತ್ತದೆ."<br><br>ಆದ್ದರಿಂದ, ಕವಿಪ್ರನಿನಿಯ ಜಮೀನಿನಲ್ಲಿ ಸ್ಥಾಪನೆ ಮಾಡಿರುವ ಸ್ಥಾವರ, ಯಂತ್ರೋಪಕರಣಗಳು ಇವುಗಳಿಗೆ ಅನ್ವಯವಾಗುವ ಸವಕಳಿ ದರದಲ್ಲಿ ಈ ಜಮೀನನ್ನು ಭೋಗ್ಯಗೊಳಿಸಲಾಯಿತು.<br><br>ಎ.ಜಿ. ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಭೂಮಿಯು ಸವಕಳಿಯ ಆಸ್ತಿಯಲ್ಲದ ಕಾರಣ ಭೂಮಿಯ ಭೋಗ್ಯಕ್ಕೆ ಆಕ್ಷೇಪಿಸಿದ್ದಾರೆ. Ind AS-20 ರ ಪ್ಯಾರಾಗ್ರಾಫ್ 18 ರ ಪ್ರಕಾರ, ಸವಕಳಿ ಮಾಡಲಾಗದ ಆಸ್ತಿಗಳಿಗೆ ಸಂಬಂಧಿಸಿದ ಅನುದಾನವು ಕೆಲವು ಜವಾಬ್ದಾರಿಗಳನ್ನು ಪೂರೈಸುವ ಅಗತ್ಯವಿರಬಹುದು ಮತ್ತು ನಂತರ ಸಂಧಿಸುವ ವೆಚ್ಚವನ್ನು ಭರಿಸುವ ಅವಧಿಗಳಲ್ಲಿ ಲಾಭ ಅಥವಾ ನಷ್ಟದಲ್ಲಿ ಗುರುತಿಸಲ್ಪಡುತ್ತದೆ ಎಂಬುದು ಎ.ಜಿ ಲೆಕ್ಕಪರಿಶೋಧಕರ ವಾದವಾಗಿದೆ. ಈ ಪ್ರಕರಣದಲ್ಲಿ |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | | ಕಂಪನಿಯು ಯಾವುದೇ ಷರತ್ತುಗಳಿಲ್ಲದೆ ವೆಚ್ಚವನ್ನು ಸ್ವೀಕರಿಸಿದೆ ಮತ್ತು ಹಕ್ಕನ್ನು ವರ್ಗಾಯಿಸಲಾಗಿದೆ.<br><br>ಮೇಲಿನದನ್ನು ಪರಿಗಣಿಸಿ, ಎ.ಜಿ ಲೆಕ್ಕಪರಿಶೋಧಕರು ಭೂಮಿಯ ಮೇಲೆ ಮಾಡಿದ ಭೋಗ್ಯವನ್ನು ಹಿಂಪಡೆಯಲು ಸೂಚಿಸಿದರು. ಎ.ಜಿ ಲೆಕ್ಕಪರಿಶೋಧಕರ ಅವಲೋಕನವನ್ನು ಅನುಸರಿಸುವ ಸಲುವಾಗಿ, ಕವಿಪ್ರನಿನಿಯು ಭೂಮಿಯ ಮೇಲಿನ ಭೋಗ್ಯವನ್ನು ರದ್ದುಗೊಳಿಸಿದೆ. ಹಾಗಾಗಿ ರಿವರ್ಸಿಂಗ್ ಎಂಟ್ರಿ ಮಾಡಲಾಗಿದೆ |
| 15 | | **ಇತರೆ** |
| | ಎ) | ಹಿಂದಿನ ವರ್ಷಗಳ ಮುಖ್ಯವಾದ ದೋಷಗಳು, ಸವಕಳಿಯ ಪರಿಣಾಮ, ಆಸ್ತಿಗಳ ಮೌಲ್ಯದ ಮತ್ತಿತರ ಹೊಂದಾಣಿಕೆಗಳು, ಇವುಗಳನ್ನು ಈಕ್ವಿಟಿಗೆ ಹೊಂದಾಣಿಕೆ ಮಾಡಲಾಗಿದೆ ಮತ್ತು ಅದನ್ನು ಈಕ್ವಿಟಿ ಬದಲಾವಣೆಗಳ ತಖ್ತೆಯಲ್ಲಿ ಹೊಂದಾಣಿಕೆ ಮಾಡಲಾಗಿದೆ. |
| | ಬಿ) | Ind AS-7 "ನಗದು ಹರಿವಿನ ಹೇಳಿಕೆ" ನಲ್ಲಿ ನಿಗದಿಪಡಿಸಿದಂತೆ 'ಪರೋಕ್ಷ ವಿಧಾನ' ಅಡಿಯಲ್ಲಿ ನಗದು ಹರಿವಿನ ಹೇಳಿಕೆಯನ್ನು ಸಿದ್ಧಪಡಿಸಲಾಗಿದೆ. ಕಂಪನಿಯು ಆಸ್ತಿ, ಸ್ಥಾವರ ಮತ್ತು ಸಲಕರಣೆ, ಪ್ರಗತಿಯಲ್ಲಿರುವ ಬಂಡವಾಳದ ಕೆಲಸ, ಸಾಲಗಳು, ಅಸುರಕ್ಷಿತ ಸಾಲಗಳು ಇತ್ಯಾದಿಗಳಲ್ಲಿನ ಎಲ್ಲಾ ಬದಲಾವಣೆಗಳನ್ನು ನಗದು ಹರಿವಿನ ಹೇಳಿಕೆಯಲ್ಲಿ ಬಹಿರಂಗಪಡಿಸಿದೆ. 2021-22ರ ಅವಧಿಯಲ್ಲಿ ಅಯ ವ್ಯಯ ಪಟ್ಟಿಯಲ್ಲಿ ಸಂಗ್ರಹವಾದ ಬಡ್ಡಿ ವೆಚ್ಚ/ಆದಾಯಕ್ಕೆ ಸಂಬಂಧಿಸಿದ ಶುಲ್ಕಗಳನ್ನು ಆರಂಭಿಕ ಮತ್ತು ಮುಕ್ತಯದ ಬಾಕಿಯ ಪರಿಣಾಮವನ್ನು ಸರಿಹೊಂದಿಸಲು ಪ್ರಯತ್ನಗಳನ್ನು ಮಾಡಲಾಗುವುದು. |
| | ಸಿ) | ಕವಿಪ್ರನಿನಿ ಒ.ಪಿ.ಸಂಖ್ಯೆ.55/2019, ರಲ್ಲಿ ಗೌರವಾನ್ವಿತ ಕೆ.ಇ.ಆರ್.ಸಿ. ರವರ ಮುಂದೆ ದಿನಾಂಕ 26-08-2019 ರಂದು ದಾಖಲಿಸಿದ್ದು, ಅದು ಇನ್ನೂ ಬಾಕಿ ಉಳಿದಿದೆ. ಈ ಬಗೆಗೆ ಗೌರವಾನ್ವಿತ ಕೆ.ಇ.ಆರ್.ಸಿ.ಯ ನಿರ್ಣಯದ ನಂತರ ಹಣಕಾಸು ಪತ್ರಗಳ ಮೇಲೆ ಅದರ ಪರಿಣಾಮವನ್ನು ನಿಶ್ಚಿತ ಪಡಿಸಲಾಗುವುದು. |
| | ಡಿ) | ಸದರಿ ಪ್ರಕರಣವು ಕವಿಪ್ರನಿನಿ, ವಿಸಕಂಗಳು ಹಾಗೂ ಕರ್ನಾಟಕ ಸರ್ಕಾರದ ನಡುವೆ ಇತ್ಯರ್ಥಗೊಳ್ಳಬೇಕಿರುತ್ತದೆ. ವಿದ್ಯುತ್ ಸರಬರಾಜ ಕಂಪನಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮವನ್ನು ಜರುಗಿಸಲಾಗುವುದು ಹಾಗೂ ಮಾನ್ಯ ಕರ್ನಾಟಕ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಲಾಗುವುದು. |
| | ಇ) | ಕವಿಪ್ರನಿನಿಯ ಲೆಕ್ಕ ಘಟಕಗಳು ವಸೂಲ್ಮಾಡಿದ ಜುಲ್ಮಾನೆಗಳ ಬಗೆಗೆ ಅದರ ಸ್ಥಿತಿಗತಿ, ಅವು ಬಾಕಿ ಉಳಿಯಲು ಕಾರಣಗಳು ಮತ್ತು ಅವಶ್ಯಕ ದಾಖಲೆಗಳನ್ನು ನಿಗದಿತ ಅನುಬಂಧಗಳ ರೀತಿಯಲ್ಲಿ, ಆಡಿಟ್ ಸಮಯದಲ್ಲಿ ಒದಗಿಸಿವೆ. |
| | ಎಫ್) | TAN ಸಂಖ್ಯೆ ಸಸ್‌ನಲ್ಲಿ ಗುರುತಿಸಿದ ಕಾರಣ, ಕಂಪನಿಯು TDS ಕ್ರೆಡಿಟ್ ಅನ್ನು ಗುರುತಿಸುವಲ್ಲಿ ತೊಂದರೆಯನ್ನು ಎದುರಿಸುತ್ತಿದೆ. ಆದರೂ ಐಟಿ ಇಲಾಖೆಯೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು. |
| | ಜಿ) | 2014-15 ರಿಂದ 2018-19 ರವರೆಗೆ ಪಾವತಿಸಿದ ಎಕ್ಸ್-ಗ್ರೇಷಿಯಾಕ್ಕೆ ಸಂಬಂಧಿಸಿದಂತೆ ಅನುಮೋದನೆಗಾಗಿ ಪತ್ರಗಳನ್ನು ಈಗಾಗಲೇ ಕರ್ನಾಟಕ ಸರ್ಕಾರಕ್ಕೆ ದಿನಾಂಕ 09/09/2015, 20/08/2016, 03/08/2017, 16/08/2018, 17/08/2019, 15/05/2020 ಮತ್ತು 11/01/2021 ಗಳಲ್ಲಿ ತಿಳಿಸಲಾಗಿದೆ. 2021 ಕರ್ನಾಟಕ ಸರ್ಕಾರದಿಂದ ಅನುಮೋದನೆ ಇನ್ನೂ ಸಿಗಬೇಕಿದೆ. |

| ಕ್ರಮ ಸಂಖ್ಯೆ | ಅಭಿಪ್ರಾಯ | ವ್ಯವಸ್ಥಾಪಕ ವರ್ಗದ ಉತ್ತರ |
|---|---|---|
| | ಎಚ್) | ಮೈಕ್ರೋ, ಸಣ್ಣ, ಮತ್ತು ಮದ್ಯಮ ಗಾತ್ರದ ಉದ್ಯಮಗಳ ಲೆಕ್ಕ ಘಟಕಗಳಿಂದ ಮಾಹಿತಿ ಪಡೆದುಕೊಳ್ಳಲು ಪ್ರತ್ಯೇಕ ಅನುಬಂದವನ್ನು ಮಾರ್ಚ್‌ನ ಅಂತಿಮ ಲೆಕ್ಕ ಪತ್ರಗಳಲ್ಲಿ ನಿಗದಿಪಡಿಸಲಾಗಿದೆ. ಲೆಕ್ಕ ನಿರ್ವಹಿಸುವ ಘಟಕಗಳಿಂದ ಪಡೆದುಕೊಂಡ ವಿವರಗಳಿಗೆ ಅನುಸಾರವಾಗಿ, 2020–21 ನೇ ವರ್ಷದಲ್ಲಿ, ಮೈಕ್ರೋ, ಸಣ್ಣ, ಮತ್ತು ಮದ್ಯಮ ಗಾತ್ರದ ಉದ್ಯಮಗಳ ಜೊತೆಗೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ. |
| | ಐ) | ಎ.ಜಿ. ಅಡಿಟರ್‌ಗಳ ಸೂಚನೆ ಮೇರೆಗೆ ಹಿಂದಿನ ವರ್ಷಗಳಲ್ಲಿ, Ind As ಹಣಕಾಸು ತಖ್ತೆಗಳಲ್ಲಿ, ಕಂಡುಬರುವ ಅಂಕಿ ಸಂಖ್ಯೆಗಳನ್ನು, ಹತ್ತಿರದ ಲಕ್ಷ, ಮಿಲಿಯನ್, ಅಥವಾ ಕೋಟಿಗಳಲ್ಲಿ ಅಥವಾ ದಶಮಾಂಶಗಳಿಗೆ ಪೂರ್ಣಾಂಕಕ್ಕೆ ತಂದಿಲ್ಲ. |

**ಸಹಿ/–**
**ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)**
**ಕವಿಪ್ರನಿನಿ**

## ಆರ್ಥಿಕ ವರ್ಷ 2020–21 ರ ನಿರ್ದೇಶಕರ ವರದಿಯ ಅನುಬಂಧ–3
## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
## ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ

**ಒಳಾಂಶ ಕೋಷ್ಟಕ :**


1. ಹಿನ್ನೆಲೆ
2. ಉದ್ದೇಶ
3. ಸಾ.ಸಾ.ಹೊ.ಸಮಿತಿಯ ಆಧಾರಿತ ವಿಷಯಗಳು
4. ಸಾ.ಸಾ.ಹೊ ಚಟುವಟಿಕೆ/ಯೋಜನೆ
5. ಸಾ.ಸಾ.ಹೊ. ಮೊಬಲಗು
6. ಸಾ.ಸಾ.ಹೊ. ಮೊಬಲಗಿನ ಖರ್ಚುವೆಚ್ಚಗಳು
7. ಆಡಳಿತ
8. ಮಾಹಿತಿಯ ಪ್ರಚಾರ

## 1. ಹಿನ್ನೆಲೆ :

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯು, ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯಲ್ಲಿನ ಸಮುದಾಯ ಹಾಗೂ ವಾತಾವರಣದ ಜವಾಬ್ದಾರಿಯುತ ಸಾಮಾನ್ಯ ಪ್ರಜ್ಞೆಯಾಗಿದೆ. ಇದು, ನೀತಿವಂತಿಕೆ ವ್ಯವಹರಣೆಯ ಮೂಲಕ ಸಮಾಜದ ಆರ್ಥಿಕ ಬೆಳವಣಿಗೆಗೆ ಬೃಹತ್ ಪ್ರಮಾಣದಲ್ಲಿ ಕೊಡುಗೆ ನೀಡಿ, ಜೀವನಾಧಾರಕ್ಕೆ ಆಧಾರವಾಗಬಹುದಾದ ಸಾಮಾರ್ಥ್ಯವನ್ನು ನೆಲೆಗೊಳಿಸಲು ನಿರಂತರ ಬದ್ಧತೆಯಾಗಿರುತ್ತದೆ. ನಿಗಮವು ತನ್ನ ವ್ಯವಹರಣೆಯನ್ನು ಜವಾಬ್ದಾರಿ, ನ್ಯಾಯಾಯುತ ಹಾಗೂ ಅತ್ಯಂತ ಪಾರದರ್ಶಕತೆಯ ವಿಧಾನದ ಮೂಲಕ ನಡೆಸಲು ನಂಬಿಕೆಯುಳ್ಳದ್ದಾಗಿದೆ. ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯ ಸಮಾಜ ಹಾಗೂ ವಾತಾವರಣದ ಮೇಲೆ, ಸಾಮಾಜಿಕ ಉದ್ದೇಶಗಳ ಅಂಗವಾಗಿ, ಒಟ್ಟಾರೆ ಸಕಾರಾತ್ಮಕ ಪರಿಣಾಮವನ್ನು ಬೀರಲು ಕಂಪನಿಯು ನಿರಂತರವಾಗಿ ವಿಹಿತ ವಿಧಾನಗಳತ್ತ ಅನ್ವೇಷಿಸಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯದ ಒಂದು ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ತನ್ನ ವಿದ್ಯುತ್ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳ ಮೂಲಕ ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣೆಯನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಕವಿಪ್ರನಿನಿಯು, ಸಾರ್ವಜನಿಕ ನಾಗರೀಕರಿಗೆ ಸೇವೆಯನ್ನು ನೀಡುವಲ್ಲಿ, ಸ್ಪರ್ಧಾತ್ಮಕ ದರದ, ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನೀಡಲು ಕೆಳಕಂಡ ಧ್ಯೇಯೋದ್ದೇಶವನ್ನು ಹೊಂದಿದೆ:

1. ವಿದ್ಯುತ್ ಪ್ರಸರಣೆಯಲ್ಲಿ ಉತ್ತಮ ಕಾರ್ಯಾಚರಣೆಗೆ ಪ್ರೋತ್ಸಾಹ;
2. ತನ್ನ ಎಲ್ಲಾ ತಾಂತ್ರಿಕ ಸೌಲಭ್ಯಗಳು ಉನ್ನತಮಟ್ಟದ ನಿರ್ವಹಣೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು;
3. ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ಗುಣಮಟ್ಟಕ್ಕೆ ಒತ್ತು ಕೊಡುವುದು.

## 2. ಉದ್ದೇಶ:

ಈ ನೀತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಒಂದು ಪ್ರಮುಖ ವ್ಯವಹರಣ ಪ್ರಕ್ರಿಯೆಯನ್ನಾಗಿಸಲು ಮಾರ್ಗದರ್ಶಕಗಳನ್ನು ಅಣಿಗೊಳಿಸುತ್ತದೆ. ಭಾರತದಲ್ಲಿ ನಿಗಮದ ಕಾರ್ಯ ಚಟುವಟಿಕೆಗಳ ಸಾಮಾಜಿಕ ಹಾಗೂ ವಾತಾವರಣದ ಮೇಲಿನ ಪರಿಣಾಮವನ್ನು ಆಧರಿಸಿ, ಸಮಾಜದ ಕ್ಷೇಮಾಭಿವೃದ್ಧಿ ಚಟುಚಟಿಕೆಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಕಂಪನಿ ಕಾಯ್ದೆ, 2013ರ ಅನುಸೂಚಿ VIIರ ಪ್ರಕಾರ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ದಿಷ್ಟ ಪಡಿಸುತ್ತದೆ. ಅನುಷ್ಠಾನಗೊಳಿಸುವಿಕೆಯ ವರ್ಷಗಳಲ್ಲಿ, ಕೈಗೊಳ್ಳಬೇಕಾದ ಯೋಜನೆ ಹಾಗೂ ಉದ್ದೇಶಗಳನ್ನು ಹೊರಸೂಸುವುದರೊಂದಿಗೆ, ಆಯ್ಕೆ ಮಾಡಿರುವ ಕ್ಷೇತ್ರ/ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವಿಕೆಯ ಕಾರ್ಯಕ್ರಮ ಹಾಗೂ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸುತ್ತದೆ. ಕಂಪನಿ ಕಾಯ್ದೆ, 2013ರ ಅನುಸೂಚಿ–7 ರಲ್ಲಿ ವಿಷದೀಕರಿಸಿರುವ ಚಟುವಟಿಕೆಗಳಿಗೆ ಒಳಪಟ್ಟು, ಕಂಪನಿಯು ವಿವಿಧ ಸನ್ನಿವೇಶ ಹಾಗೂ ಸವಾಲುಗಳಿಗೆ ಸೂಕ್ತ ಹಾಗೂ ಸುಲಭ ರೀತಿಯಲ್ಲಿ ಸ್ಪಂದಿಸಲು ನೀತಿಯ ಉದ್ದೇಶವನ್ನು ಸಾಧ್ಯವಾದಷ್ಟೂ ವಿಸ್ತೃತವಾಗಿಸಲಾಗಿದೆ. ಆದರೆ, ಭಾರತದಾಚೆ ಕೈಗೊಳ್ಳುವ ಯಾವುದೇ ಚಟುವಟಿಕೆಗಳಿಗೆ ಯಾವುದೇ ರೀತಿಯ ಕೊಡುಗೆ, ವಂತಿಗೆಗಳನ್ನು ನೀಡುವುದಿಲ್ಲ.

## 3. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಆಧಾರಿತ ವಿಷಯಗಳು :

ಕವಿಪ್ರನಿನಿಯ ನಿರ್ದೇಶನ ಮಂಡಳಿಯು, ಕೆಳಕಂಡ ಆಧಾರಿತ ವಿಷಯಗಳೊಂದಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಿದೆ:

i) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿ ಮಂಡಳಿಗೆ ಶಿಫಾರಸ್ಸು ಮಾಡುವುದು;

ii) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಭರಿಸುವ ವೆಚ್ಚಗಳಿಗೆ ಶಿಫಾರಸ್ಸು ಮಾಡುವುದು;

iii) ಕಾಲಕಾಲಕ್ಕೆ ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.

iv) ಕಂಪನಿಯು ಕೈಗೊಳ್ಳುವ ಚಟುವಟಿಕೆಗಳು ಅಥವಾ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಯೋಜನೆಗಳು / ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾರದರ್ಶಕ ಮೇಲ್ವಿಚಾರಣೆಯನ್ನು ಕಾರ್ಯಗತಗೊಳಿಸುವುದು.

**ನಿಗಮದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ಯೋಜಿತ ಉದ್ದೇಶಗಳನ್ನು ಕಾರ್ಯಕಲ್ಪಗೊಳಿಸಲು ಕೆಳಕಂಡಂತೆ ಪ್ರಕ್ರಿಯೆಗೊಳಿಸುತ್ತದೆ:**

- ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಉಪಕ್ರಮಗಳ ಅನುಬಂಧವಾಗಿ, ನಿಗಮವು ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುವ ಕಾರ್ಯನೀತಿಯನ್ನು ರೂಪಿಸಿ ಪರಿಶೀಲಿಸುವುದು;
- ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗಾಗಿ ಭರಿಸಬೇಕಾದ ವೆಚ್ಚಕ್ಕೆ ಶಿಫಾರಸ್ಸು ಮಾಡುವುದು;
- ನಿಗಮವು ಕೈಗೊಳ್ಳಬೇಕಾದ ಯೋಜನೆ/ಕಾರ್ಯಕ್ರಮ/ಚಟುವಟಿಕೆಗಳ ಅನುಷ್ಠಾನ ಅಥವಾ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನಿಮಿತ್ತವಾಗಿ ಭರಿಸಿದ ಕಟ್ಟಕಡೆಯ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಪಾರದರ್ಶಕ ಮೇಲ್ವಿಚಾರಣಾ ಕಾರ್ಯನೀತಿಯನ್ನು ರೂಪಿಸುವುದು;
- ಕಾಲಕಾಲಕ್ಕೆ ಈ ನೀತಿಯನ್ನು ಮೇಲ್ವಿಚಾರಣೆಗೆ ಒಳಪಡಿಸಿ ಅನುಷ್ಠಾನಗೊಳಿಸುವುದು;
- ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ಬಗ್ಗೆ ಹಾಗೂ ಆ ನಿಮಿತ್ತವಾಗಿ ನಿಗಮದ ಕೊಡುಗೆಯ ಬಗ್ಗೆ ವಾರ್ಷಿಕವಾಗಿ ಮಂಡಳಿಗೆ ವರದಿಯನ್ನು ಸಲ್ಲಿಸುವುದು;
- ಕಾಯ್ದೆಯ ಅಡಿಯಲ್ಲಿ ಕಡ್ಡಾಯಗೊಳಿಸಿರುವ ಇತರ ಯಾವುದೇ ಅಗತ್ಯತೆ ಹಾಗೂ ತತ್ಸಂಬಂಧ ಹೊರಡಿಸಿರುವ ನಿಯಮಗಳ ಪಾಲನೆ.

**4. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆ/ಯೋಜನೆ:**

ಕಂಪನಿ ಕಾಯ್ದೆ, 2013ರ ಅನುಸೂಚಿ VII, ಕಂಪನಿಗಳು ತಮ್ಮ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯಲ್ಲಿ ಕೆಳಗೆ ಸೂಚಿಸಿರುವ ಚಟುವಟಿಕೆಗಳನ್ನು ಒಳಪಡಿಸಿಕೊಳ್ಳಬೇಕೆಂದು ಅಗತ್ಯಪಡಿಸುತ್ತದೆ:

i. ತೀವ್ರಮಟ್ಟದ ಹಸಿವು, ಬಡತನ ಮತ್ತು ಅಪೌಷ್ಠಿಕತೆ ನಿರ್ಮೂಲನೆ ಮಾಡುವುದು, ನೈರ್ಮಲ್ಯದ ಪ್ರಚಾರಕ್ಕಾಗಿ ಮತ್ತು ಸುರಕ್ಷಿತವಾಗಿ ಕುಡಿಯುವ ನೀರನ್ನು ಒದಗಿಸಲು ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಕೋಶಕ್ಕೆ ದೇಣಿಗೆ ನೀಡಿದ ಕೊಡುಗೆ ಸೇರಿದಂತೆ ಮುಂಜಾಗ್ರತಾ ಕ್ರಮಗಳು ಮತ್ತು ನೈರ್ಮಲ್ಯ ಸೇರಿದಂತೆ ಆರೋಗ್ಯ ಸುರಕ್ಷತೆಯನ್ನು ಉತ್ತೇಜಿಸುವುದು.

ii. ವಿಶೇಷವಾಗಿ ಮಕ್ಕಳು, ಮಹಿಳೆಯರು, ಹಿರಿಯರು ಮತ್ತು ವಿಭಿನ್ನ ಶಕ್ತರ ಜೀವನ ಉನ್ನತೀಕರಣ ಯೋಜನೆಯಲ್ಲಿ ವೃತ್ತಿ ಕೌಶಲ್ಯಗಳನ್ನು ಒಳಗೊಂಡಂತೆ ಶಿಕ್ಷಣವನ್ನು ಉತ್ತೇಜಿಸುವುದು.

iii. ಲಿಂಗ ಸಮಾನತೆ, ಮಹಿಳಾ ಸಬಲೀಕರಣವನ್ನು ಉತ್ತೇಜಿಸುವುದು, ಮಹಿಳೆಯರು ಮತ್ತು ಅನಾಥರಿಗೆ ಆಶ್ರಮ ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು; ಹಿರಿಯ ನಾಗರಿಕರು ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಎದುರಿಸುತ್ತಿರುವ ಅಸಮಾನತೆಗಳನ್ನು ಕಡಿಮೆ ಮಾಡುವ ಕ್ರಮಗಳಿಗಾಗಿ ವೃದ್ಧಾಶ್ರಮಗಳು, ಆರೈಕೆ ಕೇಂದ್ರಗಳು ಮತ್ತು ಇಂತಹ ಇತರೆ ಸೌಲಭ್ಯಗಳನ್ನು ಸ್ಥಾಪಿಸುವುದು.

iv. ಪರಿಸರ ಸಂರಕ್ಷಣೆ, ಪರಿಸರ ಸಮತೋಲನ, ಸಸ್ಯ ಸಂಪತ್ತು ಮತ್ತು ಪ್ರಾಣಿಗಳ ರಕ್ಷಣೆ, ಕೃಷಿ ಅರಣ್ಯ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಗಂಗಾ ನದಿಯ ಪುನರುಜ್ಜೀವನಕ್ಕಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ನಿರ್ಮಲ ಗಂಗಾ ನಿಧಿಗೆ ಕೊಡುಗೆ ಸೇರಿದಂತೆ ಮಣ್ಣು, ವಾಯು ಮತ್ತು ನೀರಿನ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.

v. ಐತಿಹಾಸಿಕ ಪ್ರಾಮುಖ್ಯತೆ ಹೊಂದಿರುವ ಕಟ್ಟಡಗಳು ಮತ್ತು ತಾಣಗಳು ಸೇರಿದಂತೆ ರಾಷ್ಟ್ರೀಯ ಪರಂಪರೆಯ ಕಲೆ,

ಸಂಸ್ಕೃತಿಯ ರಕ್ಷಣೆ; ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ, ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳಿಗೆ ಉತ್ತೇಜನ ಮತ್ತು ಅಭಿವೃದ್ಧಿ.

vi. ಸಶಸ್ತ್ರ ಪಡೆಗಳ ಶೂರರು, ಯುದ್ಧದಲ್ಲಿ ಮಡಿದ ಸೈನಿಕರ ವಿಧವೆಯರು ಮತ್ತು ಅವರ ಅವಲಂಬಿತರ ಪ್ರಯೋಜನಕ್ಕಾಗಿ ಕ್ರಮಗಳು ವಹಿಸುವುದು.

vii. ಗ್ರಾಮೀಣ ಕ್ರೀಡೆಗಳು, ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಕ್ರೀಡೆಗಳು, ಪ್ಯಾರಾಒಲಂಪಿಕ್ ಕ್ರೀಡೆಗಳು ಮತ್ತು ಒಲಂಪಿಕ್ ಕ್ರೀಡೆಗಳ ಉತ್ತೇಜನಕ್ಕಾಗಿ ತರಬೇತಿ.

viii. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರೂಪಿಸಿರುವ ಪರಿಹಾರ ನಿಧಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ, ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಮಹಿಳಾ ಕಲ್ಯಾಣಕ್ಕಾಗಿ ಕೊಡುಗೆ; ಮತ್ತು

ix. ಕೇಂದ್ರ ಸರ್ಕಾರದ ಅನುಮೋದನೆ, ಹೊಂದಿರುವ ಶೈಕ್ಷಣಿಕ ಸಂಸ್ಥೆಗಳೊಳಗೆ ಇರುವ ತಾಂತ್ರಿಕ ಇನ್‌ಕ್ಯೂಬೇಟರ್‌ಗಳಿಗೆ ಕೊಡುಗೆಗಳು ಅಥವಾ ನಿಧಿಗಳು.

x. ಗ್ರಾಮೀಣ ಅಭಿವೃದ್ಧಿ ಯೋಜನೆಗಳು.

xi. ಕೊಳಗೇರಿ ಪ್ರದೇಶ ಅಭಿವೃದ್ಧಿ ಯೋಜನೆಗಳು.

**ವಿವರಣೆ:** ಈ ಅಂಶದ ಉದ್ದೇಶಕ್ಕಾಗಿ **"ಕೊಳಗೇರಿ ಪ್ರದೇಶ"**ಎಂಬ ಶಬ್ದವು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿರುವ ಯಾವುದೇ ಸಿ.ಎಸ್.ಆರ್. ಚಟುವಟಿಕೆಗಳು ಮತ್ತು ಅದರ ಸಲುವಾಗಿ ಖರ್ಚು ಮಾಡಬಹುದಾದ ಮೊಬಲಗನ್ನು ನಿರ್ದಿಷ್ಟಪಡಿಸುವ ಕೈಪಿಡಿ ದಾಖಲೆಯಾಗಿರುತ್ತದೆ. ಸದರಿ ಅನುಸೂಚಿಯು ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಅನುಸೂಚಿ–7 ನ್ನು ಕವಿಪ್ರನಿನಿಯ ಸಾಂಸ್ಥಿಕ ಸಾಮಾಜಿ ಹೋಣೆಗಾರಿಕೆ ಕಾರ್ಯನೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

**5. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗು :**

ಕಂಪನಿ ಕಾಯ್ದೆ 2013ರ ಪ್ರಕರಣ 135 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ಆರ್ಥಿಕ ವರ್ಷದಲ್ಲಿ, ತತ್‌ಕ್ಷಣದ ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಕನಿಷ್ಠ ಶೇಕಡಾ 2ರಷ್ಟನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಅನುಸರಣೆಯಾಗಿ ಖರ್ಚು ಮಾಡುವುದನ್ನು ನಿಗಮವು ಖಚಿತಪಡಿಸಿಕೊಳ್ಳತಕ್ಕದ್ದು.

ಈ ನೀತಿಯ ಪ್ರಕಾರ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಖರ್ಚಿನ ಮೊದಲ ಆರ್ಥಿಕ ವರ್ಷವು 2014–15 ಆಗಿದ್ದು, ನಿವ್ವಳ ಲಾಭವು ಆರ್ಥಿಕ ವರ್ಷ 2011–12, 2012–13 ಮತ್ತು 2013–14ರ ನಿವ್ವಳ ಲಾಭದ ಸರಾಸರಿ ಎಂದು ಅರ್ಥೈಸುತ್ತದೆ. ಮೇಲೆ ತಿಳಿಸಿರುವ ನಿವ್ವಳ ಲಾಭ ಎಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭ ಎಂದಾಗುತ್ತದೆ. ಇದರಲ್ಲಿ ಭಾರತದಾಚೆ ನಡೆಸಿದ ವ್ಯವಹರಣೆಯಿಂದ ಗಳಿಸಿದ ಲಾಭವನ್ನು ಒಳಗೊಳ್ಳುವುದಿಲ್ಲ.

**6. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚು (ವೆಚ್ಚಗಳು):**

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳನ್ನು ಕೆಳಕಂಡವುಗಳಿಗೆ ಸಂಬಂಧಿಸಿದಂತೆ ನಿರ್ಧರಿಸುತ್ತದೆ:

- ಅಭಿವೃದ್ಧಿತ ವಿವಿಧ ಸಂಸ್ಥೆಗಳು ಹಾಗೂ ಪ್ರಾರಂಭಿಕ ಹಂತದ ಆಕರ ಸಂಸ್ಥೆಗಳಿಗೆ ನಿಧಿ ಸೌಲಭ್ಯ ಒದಗಿಸಬೇಕಾದ ಶೇಕಡಾವಾರು ಒಟ್ಟು ಮೊಬಲಗು; ಮತ್ತು
- ವಿತರಣೆಯನ್ನು ಎಷ್ಟು ಭಾಗಗಳಲ್ಲಿ ಬಿಡುಗಡೆ ಮಾಡಬೇಕು;

• ಸಾ.ಸಾ.ಹೊ. ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಏನಾದರೂ ಹೆಚ್ಚುವರಿ ಕಂಡುಬಂದರೆ, ಅವು ನಿಗಮದ ವ್ಯವಹರಿತ ಲಾಭದ ಭಾಗವಾಗಿರುವುದಿಲ್ಲ.

• ಸ್ವೀಕರಿಸಿದ ಯಾವುದೇ ವಂತಿಗೆಯಿಂದ ಗಳಿಸಿದ ಆದಾಯವು ಹಾಗೂ ಸಾ.ಸಾ.ಹೊ. ಚಟುವಟುಕೆಗಳಿಂದ ಒದಗಿದ ಯಾವುದೇ ಹೆಚ್ಚುವರಿಯನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು.

• ನಿಗಮದ ಉದ್ಯೋಗಿಗಳ ಸಾ.ಸಾ.ಹೊ. ಸಾಮರ್ಥ್ಯವನ್ನು ರೂಪಿಸಲು ನಿಧಿಯನ್ನು ಸಜ್ಜುಗೊಳಿಸಲು ಸಮಿತಿಯು ಶಿಫಾರಸ್ಸು ಮಾಡಿ, ತನ್ಮೂಲಕ ಸಾ.ಸಾ.ಹೊ. ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

## 7. ಆಡಳಿತ :

1) ಪ್ರತಿ ವರ್ಷ, ಆಯಾ ಆರ್ಥಿಕ ವರ್ಷದಲ್ಲಿ ಹಮ್ಮಿಕೊಂಡಿರುವ ಸಾ.ಸಾ.ಹೊ. ಚಟುವಟಿಕೆಗಳ ಕಾರ್ಯಕ್ರಮ ವಿವರಗಳ ಯೋಜನೆ ಹಾಗೂ ತತ್ಸಂಬಂಧ ಖರ್ಚುವೆಚ್ಚಗಳ ವಿವರಗಳ ಪ್ರಸ್ತಾಪವನ್ನು ಸಾ.ಸಾ.ಹೊ. ಸಮಿತಿಯು ಅನುಮೋದನೆಗಾಗಿ ಮಂಡಳಿಗೆ ಮಂಡಿಸತಕ್ಕದ್ದು. ಅವಶ್ಯವೆಂದು ಕಂಡುಬಂದರೆ, ಅಗತ್ಯ ಮಾರ್ಪಾಡುಗಳೊಂದಿಗೆ ಮಂಡಳಿಯು ಸಾ.ಸಾ.ಹೊಣೆಗಾರಿಕೆ ಚಟುವಟಿಕೆಯ ಯೋಜನೆಯನ್ನು ಪರಿಗಣಿಸಿ ಅನುಮೋದಿಸುತ್ತದೆ.

2) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ಸಾ.ಸಾ.ಹೊ ಚಟುವಟಿಕೆಗಳ ಅನುಷ್ಠಾನವನ್ನು ಪರಿಶೀಲಿಸಿ, ಈ ನೀತಿಯ ಪ್ರಕಾರ ಕಾರ್ಯಕ್ರಮಗಳು ಸಮರ್ಥನೀಯ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿತಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾಲಕಾಲಕ್ಕೆ ಅಗತ್ಯ ನಿರ್ದೇಶನ ನೀಡತಕ್ಕದ್ದು.

3) ಪ್ರತಿ ಆರು ತಿಂಗಳುಗಳಿಗೊಮ್ಮೆ, ಆ ಆರು ತಿಂಗಳುಗಳಲ್ಲಿ ಅನುಮೋದಿತ ಸಾ.ಸಾ.ಹೊ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಬಗ್ಗೆ ತಹಲ್ ವರದಿಯನ್ನು ಒದಗಿಸತಕ್ಕದ್ದು. ಅಂತಹ ಸಮಿತಿಯು ಪರಿಶೀಲಿಸಿ, ಅನುಷ್ಠಾನಿತ ಕಾರ್ಯದ ಬಗ್ಗೆ ಮಂಡಳಿಯ ಗಮನಕ್ಕೆ ತರತಕ್ಕದ್ದು.

4) ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಮಂಡಳಿಗೆ ಸಾ.ಸಾ.ಹೊ.ಸಮಿತಿಯು ವರದಿಯನ್ನು ಮಂಡಿಸತಕ್ಕದ್ದು.

## 8. ಮಾಹಿತಿಯ ಪ್ರಚಾರ:

ಸಾ.ಸಾ.ಹೊ.ಸಮಿತಿಯು, ನಿಗಮದ ಮಂಡಳಿಗೆ ಕನಿಷ್ಠ ವಾರ್ಷಿಕವಾಗಿ, ನಿಗಮವು ಕೈಗೊಂಡ ನಿ.ಸಾ.ಹೊ.ಯೋಜನೆಗಳು/ ಚಟುವಟಿಕೆಗಳು ಹಾಗೂ ಅದರ ಯೋಜನೆಗಳು/ಚಟುವಟಿಕೆಗಳಿಂದ ಕಂಡುಬಂದ ಫಲಿತಾಂಶಗಳ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

ಈ ನೀತಿಯ ಮಾಹಿತಿಯನ್ನು ನಿಗಮದ ಜಾಲತಾಣ www.kptcl.com/eprasarana ದಲ್ಲಿ ತುಂಬಿಸ ತಕ್ಕದ್ದು. ಮುಂದುವರೆಸಿ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕಾರ್ಯಚಟುಚಟಿಕೆಯ ವಿವರವಾದ ವರದಿಯನ್ನು ನಿಗಮದ ವಾರ್ಷಿಕ ಲೆಕ್ಕಪತ್ರಗಳ ನಿರ್ದೇಶಕರ ವರದಿಯಲ್ಲಿ ಹಾಗೂ ಜಾಲತಾಣದಲ್ಲಿ ಪ್ರಚಾರಪಡಿಸುವುದು.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ವಯ, ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆಗೆ ಒಳಪಡಿಸಿ, ಅನುಸರಣೆ ಮಾಡಿರುವ ಬಗ್ಗೆ ಸಾ.ಸಾ.ಹೊ ಸಮಿತಿಯು ನಿಗಮದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಜವಾಬ್ದಾರಿಯುತವಾದ ಹೇಳಿಕೆಯನ್ನು ನೀಡತಕ್ಕದ್ದು.

**ಅನುಬಂಧ-4**

## ಆರ್ಥಿಕ ವರ್ಷ 2020-21ರ ನಿರ್ದೇಶಕರ ವರದಿಯ ಅನುಬಂಧ

## 2021 ರ ಮಂಡಳಿಯು ವರದಿಯಲ್ಲಿ ಒಳಪಡಿಸಬೇಕಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ವಾರ್ಷಿಕ ವರದಿ

1. ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಯೋಜನೆಯ ಬಗ್ಗೆ ಸಂಕ್ಷಿಪ್ತ ನೋಟ:- ಅನುಬಂಧ-3 ರಲ್ಲಿ ನೀಡಲಾಗಿದೆ.

2. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಸಮಿತಿಯ ಸಂಯೋಜನೆ ಈ ಕೆಳಕಂಡಂತಿದೆ.

| ಕ್ರ. ಸಂ. | ನಿರ್ದೇಶಕರ ಹೆಸರು | ಪದನಾಮ/ ನಿರ್ದೇಶಕತೆಯ ವಿಧ | ಸಿ.ಎಸ್.ಆರ್ ಸಮಿತಿಯು ಹಮ್ಮಿಕೊಂಡ ಸಭೆಗಳ ಸಂಖ್ಯೆ | ಸಿ.ಎಸ್.ಆರ್ ಸಮಿತಿಯು ಹಾಜರಾದ ಸಭೆಗಳ ಸಂಖ್ಯೆ |
|---|---|---|---|---|
| 1 | ಶ್ರೀ ಕಪಿಲ್ ಮೋಹನ್, ಭಾ.ಆ.ಸೇ | ಅಧ್ಯಕ್ಷರು | 01 | 01 |
| 2 | ಶ್ರೀ ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ | ಸದಸ್ಯರು | 01 | 01 |
| 3 | ಡಾ.ಎನ್.ಮಂಜುಳ, ಭಾ.ಆ.ಸೇ | ಸದಸ್ಯರು | 01 | 01 |

3. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ ನೀತಿ, ಯೋಜನೆಗಳ/ಕಾರ್ಯಗಳ ಮಾಹಿತಿಯನ್ನು ಮಂಡಳಿಯ:- ಅನುಮೋದನೆಯ ನಂತರ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಜಾಲತಾಣದ ಸಂಪರ್ಕ ಈ ಕೆಳಕಂಡಂತಿದೆ. www.kptcl.karnataka.gov.in

4. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಅಡಿ ಕೈಗೊಂಡಯೋಜನೆಗಳ ಪ್ರಭಾವದ ಮೌಲ್ಯಮಾಪನವನ್ನು ಕಂಪನಿ ನಿಯಮಗಳ (ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ) 2014 ರ ನಿಯಮವು 8ರ ಉಪ ಕಂಡಿಕೆ (3) ರನ್ವಯ ಕೈಗೊಂಡಿರುವುದಕ್ಕೆ ವರದಿಯನ್ನು ಲಗತ್ತಿಸುವುದು-ಅನ್ವಯಿಸುವುದಿಲ್ಲ.

5. ಕಂಪನಿ ಕಾಯಿದೆ ನಿಯಮಗಳ (ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ)- ನಿಯಮ 7 ರ ಉಪ ಕಂಡಿಕೆ (3) ರಲ್ಲಿ ತಿಳಿಸಿರುವ ಯಾವುದಾದರೂ ಮೊತ್ತವನ್ನು ಆರ್ಥಿಕ ವರ್ಷದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಿದ್ದರೆ- ಯಾವುದೂ ಇರುವುದಿಲ್ಲ.

| ಕ್ರ.ಸಂ | ಆರ್ಥಿಕ ವರ್ಷ | | |
|---|---|---|---|
| 1 | **ಯಾವುದೂ ಇಲ್ಲ** | | |
| 2 | | | |
| 3 | | | |
| | **ಒಟ್ಟು** | | |

6. ಕಂಪನಿ ಕಾಯಿದೆ ಕಂಡಿಕೆ 135(5) ರನ್ವಯ 3 ಆರ್ಥಿಕ ವರ್ಷಗಳ ಸರಾಸರಿ ನಿವ್ವಳ ಲಾಭ- ರೂ.5,84,93,65,135/- ಗಳಾಗಿರುತ್ತದೆ.

7. (ಎ) ಕಂಪನಿ ಕಾಯಿದೆ ಕಂಡಿಕೆ 135(5) ರನ್ವಯ ಕಂಪನಿ ಸರಾಸರಿ ನಿವ್ವಳ ಲಾಭದ ಶೇ.2 ರಷ್ಟು ಮೊತ್ತವು ರೂ.11,69,87,303/– ಗಳಾಗಿರುತ್ತದೆ.

(ಬ) ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ–ಯೋಜನೆಗಳ/ಕಾರ್ಯಕ್ರಮಗಳಿಂದ ಹಿಂದಿನ ವರ್ಷಗಳಿಗೆ ಉಂಟಾಗಿರುವ ಸರ್ಪ್ಲಸ್ (ಹೆಚ್ಚುವರಿ) ಮೊತ್ತ– ಯಾವುದೂ ಇರುವುದಿಲ್ಲ.

(ಸಿ) ಯಾವುದಾದರೂ ಮೊತ್ತವನ್ನು ಆರ್ಥಿಕ ವರ್ಷ ಹೊಂದಣಿಕೆ ಮಾಡಬೇಕಾಗಿದ್ದರೆ – (ಯಾವುದೂ ಇರುವುದಿಲ್ಲ).

(ಡಿ) ಆರ್ಥಿಕ ವರ್ಷಕ್ಕೆ ಒಟ್ಟು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊತ್ತ ರ (7a+7b+7c)– ರೂ.11,69,87,303/–.

8. (ಎ) ಆರ್ಥಿಕ ವರ್ಷ 2020–21 ರಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗೆ ಖರ್ಚು ಮಾಡಿದ ಮತ್ತು ಖರ್ಚು ಮಾಡದ ಮೊತ್ತದ ವಿವರ

| ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿದ ಒಟ್ಟು ಮೊತ್ತ (ರೂ.ಗಳಲ್ಲಿ) | ಖರ್ಚು ಮಾಡದ ಮೊತ್ತದ ವಿವರ(ರೂ.ಗಳಲ್ಲಿ) | | | | |
|---|---|---|---|---|---|
| | ಕಲಂ 135(6) ರನ್ವಯ ಖರ್ಚು ಮಾಡದ ಒಟ್ಟು ಮೊತ್ತವನ್ನು | | ಕಲಂ 135(5) ರ ಅನುಬಂಧ 7 ರ ಎರಡನೇ ಕಂಡಿಕೆಯನ್ವಯ ಮೊತ್ತವನ್ನು ಯಾವುದಾದರೂ ನಿರ್ಧಿಷ್ಟ ನಿಧಿಗೆ ವರ್ಗಾಯಿಸಿರುವ ಮೊತ್ತದ ವಿವರ | | |
| | ಮೊತ್ತ | ವರ್ಗಾವಣೆ ಮಾಡಿದ ದಿನಾಂಕ | ನಿಧಿಯ ಹೆಸರು | ಮೊತ್ತ | ವರ್ಗಾವಣೆ ಮಾಡಿದ ದಿನಾಂಕ |
| ರೂ.11,36,67,504/– | ರೂ.33,19,799/– | 30 ಸೆಪ್ಟಂಬರ್ 2021 | ಅನ್ವಯಿಸುವುದಿಲ್ಲ. | | |

(ಬಿ) **ಚಾಲ್ತಿಯಲ್ಲಿರುವ ಯೋಜನೆಗಳಿಗೆ** ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ಮೊತ್ತವನ್ನು ವರ್ಗಾಯಿಸಿರುವ ವಿವರ–ಯಾವುದೂ ಇಲ್ಲ.

| (1) | (2) | (3) | (4) | (5) | (6) | (7) | (8) |
|---|---|---|---|---|---|---|---|
| ಕ್ರ. ಸಂ | ಯೋಜನೆ –ಯ ಹೆಸರು | ಕಾಯ್ದೆಯ ಅನುಸೂಚಿ 7 ರಡಿ ವಿವಿಧ ಚಟುವಟಿಕೆ ಗಳ ಪಟ್ಟಿ | ಸ್ಥಳೀಯ ಪ್ರದೇಶ (ಹೌದು/ ಇಲ್ಲ) | ಯೋಜನೆಯ ಸ್ಥಳ | ಯೋಜನೆಗೆ ಖರ್ಚುಮಾಡಿದ ಮೊತ್ತ (ರೂ.ಗಳಲ್ಲಿ) | ಅನುಷ್ಠಾನ ಗೊಳಿಸಿರುವ ವಿಧಾನ– ನೇರವಾಗಿ ಹೌದು/ಇಲ್ಲ | ಅನುಷ್ಠಾನ ಗೊಳಿಸಿರುವ ವಿಧಾನ ಏಜೆನ್ಸಿ ಮುಖಾಂತರ |
| | | | | ರಾಜ್ಯ | ಜಿಲ್ಲೆ | ಹೆಸರು | ಸಾಂ.ಸಾ.ಹೊ ನೊಂದಣಿ ಸಂಖ್ಯೆ |
| 1 | ಯವುದೂ ಇಲ್ಲ | | | | | | |
| 2 | | | | | | | |
| 3 | | | | | | | |
| | ಒಟ್ಟು | | | | | | |

**(ಸಿ) ಆರ್ಥಿಕ ವರ್ಷದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು ಹೊರತುಪಡಿಸಿ/ಇತರೆ ಯೋಜನೆಗಳಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ಖರ್ಚು ಮಾಡಿದ ಮೊತ್ತದ ವಿವರ:–**

| (1) | (2) | (3) | (4) | (5) | (6) | (7) | (8) | (9) | (10) | (11) | |
|---|---|---|---|---|---|---|---|---|---|---|---|
| ಕ್ರ. ಸಂ | ಯೋಜನೆಯ ಹೆಸರು | ಕಾಯ್ದೆಯ ಅನುಸೂಚಿ 7 ರಡಿ ವಿವಿಧ ಚಟುವಟಿಕೆಗಳ ಪಟ್ಟಿ | ಸ್ಥಳೀಯ ಪ್ರದೇಶ (ಹೌದು/ ಇಲ್ಲ) | ಯೋಜನೆಯ ಹೆಸರು | ಯೋಜನೆಯ ಅವಧಿ | | | | | ಹೆಸರು | ಸಾಂ.ಸಾ. ಹೊ ನೋಂದಣಿ ಸಂಖ್ಯೆ |
| 1 | ಕೋವಿಡ್–19 ವಿಪತ್ತು ಎಂದು ಘೋಷಿಸಿದ ಕೇಂದ್ರ ಸರ್ಕಾರದಡಿ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ | ಆರೋಗ್ಯ ರಕ್ಷಣೆ | ಕರ್ನಾಟಕ ರಾಜ್ಯ | | --- | 10,47,09,783 | 10,47,09,783 | --- | ಇಲ್ಲ | ಕರ್ನಾಟಕ ರಾಜ್ಯ ದುರಂತ ನಿರ್ವಹಣೆ ಅಧಿಕಾರ, ಕರ್ನಾಟಕ ರಾಜ್ಯ ಸರ್ಕಾರ ಸಾಂ.ಸಾ.ಹೊ ನೋಂದಣಿ ಸಂಖ್ಯೆ | |
| 2 | ಕೆಪಿಎಂಸಿ ಕಾಯ್ದೆಯಡಿ ನೋಂದಣಿಗೊಂಡ ವೈದ್ಯರಿಗೆ ಬಲ್ಕ್ ಸಂದೇಶವನ್ನು ಕಳುಹಿಸಿದ್ದು ಮತ್ತು ಕೋವಿಡ್–19 ಗೆ ಸಂಬಂಧಿತ ರೋಗಿಗಳಿಗೆ ಸಂದೇಶವನ್ನು ಕಳುಹಿಸಿದ್ದು. | ಆರೋಗ್ಯ ರಕ್ಷಣೆ | ಹೌದು | ಕರ್ನಾಟಕ ರಾಜ್ಯ | --- | 22,420 | 22,420 | --- | ಹೌದು | --- | ಅನ್ವಯಿಸು–ವುದಿಲ್ಲ |
| 3 | ಮಂಡ್ಯ ಸರ್ಕಾರಿ ಕಾಲೇಜು ಆವರಣದಲ್ಲಿ ಹಾದು ಹೋಗಿದ್ದ ತೂಬಿನಕೆರೆ ಮಂಡ್ಯ ಪ್ರಸರಣ ಮಾರ್ಗವನ್ನು ವರ್ಗಾಯಿಸಿರುವ ಸಾಂ.ಸಾ. ಹೊ ಕೆಲಸಗಳು | ಶಿಕ್ಷಣ | ಹೌದು | ಮಂಡ್ಯ ಜಿಲ್ಲೆ, ಕರ್ನಾಟಕ ರಾಜ್ಯ | --- | 1,22,55,100 | 89,35,301 | 33,19,799 | ಹೌದು | --- | ಅನ್ವಯಿಸು–ವುದಿಲ್ಲ |
| | ಒಟ್ಟು | | | | | | 11,36,67,504 | 33,19,799 | | | |

(ಡಿ) ಆಡಳಿತಾತ್ಮಕ ತಲಬರಹದಡಿ ಖರ್ಚು ಮಾಡಿದ ಮೊತ್ತ: ಯಾವುದೂ ಇಲ್ಲ.

(ಇ) ಖರ್ಚು ಮಾಡಿದ ಮೊತ್ತದ ಪ್ರಭಾವದ ಮೌಲ್ಯ ಮಾಪನ–ಯಾವುದೂ ಇಲ್ಲ.

(ಎಫ್) ಆರ್ಥಿಕ ವರ್ಷದಲ್ಲಿ ಒಟ್ಟು ಮೊತ್ತ (8b+8c+8d+8e): ಯಾವುದೂ ಇಲ್ಲ.

(ಜಿ) ಹೆಚ್ಚುವರಿ ಮೊತ್ತದ ಹೊಂದಾಣಿಕೆ–ಯಾವುದೂ ಇಲ್ಲ.

| ಕ್ರ.ಸಂ | ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| i) | ಕಂಪನಿಯ ಸರಾಸರಿ ನಿವ್ವಳ ಮೊತ್ತದ ಸೇ.2 ರಷ್ಟು ಮೊತ್ತ–ಕಲಂ 135(5) ರಡಿ | 11,69,87,303 |
| ii) | ಆರ್ಥಿಕ ವರ್ಷದಲ್ಲಿ ಒಟ್ಟು ಖರ್ಚು ಮಾಡಿದ ಮೊತ್ತ | 11,36,67,504 |
| iii) | ಆರ್ಥಿಕ ವರ್ಷದಲ್ಲಿ ಹೆಚ್ಚುವರಿ ಮೊತ್ತ ಖರ್ಚು ಮಾಡಿದ ಮೊತ್ತದ ವಿವರ [(ii)-(i)] | ಯಾವುದೂ ಇಲ್ಲ |
| iv) | ಹೆಚ್ಚುವರಿ ಮೊತ್ತ ಹಿಂದಿನ ಆರ್ಥಿಕ ವರ್ಷದಲ್ಲಿ ಸಾಂ.ಸಾ.ಹೊ ಚಟುವಟಿಕೆಗಳಿಂದ ಮಾಡಿದ ಹೆಚ್ಚುವರಿ ಮೊತ್ತ | ಯಾವುದೂ ಇಲ್ಲ |
| v) | ಮುಂದಿನ ಆರ್ಥಿಕ ವರ್ಷಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಲಭ್ಯವಿರುವ ಮೊತ್ತ. [(iii)-(iv)] | ಯಾವುದೂ ಇಲ್ಲ |

9. (ಎ) ಹಿಂದಿನ ಮೂರು ವರ್ಷಗಳಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ಖರ್ಚು ಮಾಡಿದ ಮೊತ್ತದ ವಿವರ: ಯಾವುದೂ ಇಲ್ಲ.

| ಕ್ರ. ಸಂ | ಹಿಂದಿನ ಆರ್ಥಿಕ ವರ್ಷ | ಕಲಂ 135(6) ಅಡಿಯಲ್ಲಿ ಖರ್ಚು ಮಾಡದ ಸಾಂ.ಸಾ.ಹೊ ಖಾತೆಗೆ ಮೊತ್ತವನ್ನು ವರ್ಗಾಯಿಸಲಾಗಿದೆ (ರೂ.ಗಳಲ್ಲಿ) | ವರದಿ ಮಾಡುವ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿದ ಮೊತ್ತ | ಕಲಂ 135(6) ರ ಪ್ರಕಾರ ಅನುಸೂಚಿ VII ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಿಧಿಗೆ ಮೊತ್ತವನ್ನು ವರ್ಗಾಯಿಸಿರುವುದಿಲ್ಲ. | | | ಮುಂದಿನ ಆರ್ಥಿಕ ವರ್ಷಗಳಲ್ಲಿ ಖರ್ಚು ಮಾಡಬೇಕಾದ ಮೊತ್ತ |
|---|---|---|---|---|---|---|---|
| | | | | ಮೊತ್ತದ ಹೆಸರು | ಮೊತ್ತ (ರೂ.ಗಳಲ್ಲಿ) | ವರ್ಗಾಯಿಸಿದ ದಿನಾಂಕ | |
| 1. | ಯಾವುದೂ ಇಲ್ಲ | | | | | | |
| 2. | | | | | | | |
| 3. | | | | | | | |
| | ಮೊತ್ತ | | | | | | |

(ಬಿ) ಹಿಂದಿನ ಆರ್ಥಿಕ ವರ್ಷಗಳಲ್ಲಿ ಹಾಲಿ ಚಾಲ್ತಿಯಲ್ಲಿರುವ ಯೋಜನೆಗಳಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ಖರ್ಚು ಮಾಡಿರುವ ಮೊತ್ತದ ವಿವರ: ಯಾವುದೂ ಇಲ್ಲ.

| (1) | (2) | (3) | (4) | (5) | (6) | (7) | (8) | (9) |
|---|---|---|---|---|---|---|---|---|
| ಕ್ರ. ಸಂ | ಯೋಜನೆಯ ಗುರುತಿನ ಸಂಖ್ಯೆ | ಯೋಜನೆಯ ಹೆಸರು | ಯೋಜನೆಯು ಆರಂಭಗೊಂಡ ಆರ್ಥಿಕ ವರ್ಷ | ಯೋಜನೆಯ ಅವಧಿ | ಯೋಜನೆಗೆ ಮಂಜೂರು ಮಾಡಿರುವ ಒಟ್ಟು ಮೊತ್ತ | ಆರ್ಥಿಕ ವರ್ಷದಲ್ಲಿ ಯೋಜನೆಯಡಿ ಖರ್ಚು ಮಾಡಿದ ಮೊತ್ತದ ವಿವರ | ವರದಿ ಮಾಡುತ್ತಿರುವ ಆರ್ಥಿಕ ವರ್ಷಾಂತ್ಯದಲ್ಲಿ ಸದರಿ ಯೋಜನೆಗೆ ಖರ್ಚು ಮಾಡಿರುವ ಒಟ್ಟಾರೆ ಮೊತ್ತ | ಯೋಜನೆಯ ಪ್ರಸ್ತುತ ಸ್ಥಿತಿ ಪೂರ್ಣ ಗೊಂಡಿರುತ್ತದೆ/ ಚಾಲ್ತಿಯಲ್ಲಿರುತ್ತದೆ |
| 1 | | | | | | | | |
| 2 | | | | ಯಾವುದೂ ಇಲ್ಲ | | | | |
| 3 | | | | | | | | |
| | ಮೊತ್ತ | | | | | | | |

10. ಆರ್ಥಿಕ ವರ್ಷದಲ್ಲಿ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯಡಿ ಯಾವುದಾದರೂ ಬಂಡವಾಳದ ಆಸ್ತಿಯನ್ನು ಸ್ಥಾಪನೆ/ಸ್ವಾಧೀನ ಪಡೆದುಕೊಂಡಿದ್ದರೆ, ಸದರಿ ಆಸ್ತಿಗಳ ವಿವರ: ಯಾವುದೂ ಇಲ್ಲ.

**(ಆಸ್ತಿವಾರು ವಿವರಗಳು).**

(ಎ) ಬಂಡವಾಳ ಆಸ್ತಿಗಳ ಆರಂಭಿಕ ಅಥವಾ ಸ್ವಾಧೀನ ಪಡೆದ ದಿನಾಂಕ.

(ಬಿ) ಬಂಡವಾಳ ಆಸ್ತಿಗಳ ಆರಂಭಿಕ ಅಥವಾ ಸ್ವಾಧೀನ ಪಡೆದ ಮೊತ್ತವನ್ನು ಸಾಂಸ್ಥಿಕ ಸಾಮಾಜಿಕ ಹೊಣೆಯಡಿ ಖರ್ಚು ಮಾಡಲಾದ ಮೊತ್ತದ ವಿವರ.

(ಸಿ) ಬಂಡವಾಳ ಆಸ್ತಿಗಳನ್ನು ನೊಂದಣಿ ಮಾಡಲಾದ ಸಾರ್ವಜನಿಕ ಪ್ರಾಧಿಕಾರ ಅಥವಾ ಫಲಾನುಭವಿಗಳ ಹೆಸರು, ವಿಳಾಸ, ಇತ್ಯಾದಿ ವಿವರಗಳು.

(ಡಿ) ಬಂಡವಾಳ ಆಸ್ತಿಗಳ ಆರಂಭಿಕ ಅಥವಾ ಸ್ವಾಧೀನ ಪಡೆದ ಸ್ವತ್ತಿನ ವಿವರಗಳು(ಪೂರ್ಣ ವಿಳಾಸ ಹಾಗೂ ಬಂಡವಾಳ ಆಸ್ತಿಯ ಸ್ಥಳದ ವಿವರ).

11. ಕಂಪನಿಯು ತನ್ನ ನಿವ್ವಳ ಸರಾಸರಿ ನಿವ್ವಳ ಲಾಭದ ಶೇ.2 ರಷ್ಟು ಕಾಯ್ದೆಯ 135(5) ರಡಿ ಖರ್ಚು ಮಾಡದಿದ್ದರೆ, ಕಾರಣಗಳನ್ನು ತಿಳಿಸುವುದು.

**ರೂ.33,19,799/- ಗಳ ಮೊತ್ತವನ್ನು ಖರ್ಚು ಮಾಡದಿರುವುದಕ್ಕೆ ಕಾರಣಗಳು :** ವ್ಯಯಿಸಬೇಕಾದ ಒಟ್ಟು ಮೊತ್ತ ರೂ.1,22,55,100/- ಗಳನ್ನು ಮಂಡ್ಯ ಸರ್ಕಾರಿ ಕಾಲೇಜು ಆವರಣದಲ್ಲಿ ಹಾದುಹೋಗಿದ್ದ ತೂಬಿನಕೆರೆ ಮಂಡ್ಯ ಪ್ರಸರಣ ಮಾರ್ಗವನ್ನು ವರ್ಗಾಯಿಸುವ ಸಾಂಸ್ಥಿಕ ಸಾಮಾಜಿಕ ಹೊಣೆಯಡಿ ರೂ.89,35,301/- ಗಳನ್ನು ದಿನಾಂಕ: 31.03.2021 ಕ್ಕೆ ಹಾಗೂ ರೂ.1,10,52,977/- ಗಳನ್ನು ದಿನಾಂಕ: 30.11.2021 ಕ್ಕೆ ಖರ್ಚು ಮಾಡಲಾಗಿದೆ ಎಂದು ತಿಳಿಸಲಾಗಿದೆ. ಪ್ರಾಂಶುಪಾಲರು, ಮಂಡ್ಯ ಸರ್ಕಾರಿ ಕಾಲೇಜು ರವರಿಗೆ ಬರೆದಿರುವ ಪತ್ರದಲ್ಲಿ, ಜೆಎಂಎಫ್‌ಸಿ, ಮಂಡ್ಯ ನ್ಯಾಯಾಲಯದಲ್ಲಿ ಹೂಡಿರುವ ಸಿವಿಲ್ ದಾವೆಯನ್ನು ಅಂತ್ಯಗೊಳಿಸಲು ತಿಳಿಸಲಾಗಿದೆ. ಆದ್ದರಿಂದ ಕಾಮಗಾರಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ತಡೆಹಿಡಿದು ಸಾಂಸ್ಥಿಕ ಸಾಮಾಜಿಕ ಹೊಣೆಯಡಿ ಬಾಕಿ ಇರುವ ರೂ.12,02,123/- ಗಳನ್ನು ಕಾಮಗಾರಿಗಳ ಪುನರಾರಂಭಗೊಂಡ ನಂತರ ವ್ಯಯಿಸಲಾಗುವುದು ಎಂದು ತಿಳಿಸಲಾಗಿದೆ.

| | | |
|---|---|---|
| (ಡಾ. ಎನ್.ಮಂಜುಳ, ಭಾ.ಆ.ಸೇ)<br>ಡಿಐಎನ್. 07508345<br>ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | (ಜಿ.ಕುಮಾರ್ ನಾಯಕ್, ಭಾ.ಆ.ಸೇ)<br>ಡಿಐಎನ್. 01918435<br>ಅಧ್ಯಕ್ಷರು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ, ಕವಿಪ್ರನಿನಿ | ಸಹಿ/-<br>(ಕಾಯ್ದೆಯ ಕಲಂ 380 ಉಪ ಕಂಡಿಕೆ (1) ಷರತ್ತು (ಡಿ) ರಲ್ಲಿ ಸೂಚಿಸಿರುವ ವ್ಯಕ್ತಿಗಳು (ಅನ್ವಯಿಸಿದ್ದಲ್ಲಿ) |

**ಕಂಪನಿ ಕಾಯ್ದೆ 2013ರ ಪ್ರಕರಣ 143(6)(ಬಿ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ಇದರ 31ನೇ ಮಾರ್ಚ್ 2021ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಹಾಗೂ ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾ ಲೇಖಪಾಲರು ರವರ ಅಭಿಪ್ರಾಯಗಳು.**

ಕಂಪನಿ ಕಾಯ್ದೆ 2013 ರಡಿಯಲ್ಲಿ ನಿಗದಿಪಡಿಸಿರುವ ಆರ್ಥಿಕ ಕಾರ್ಯ ನೀತಿ ಚೌಕಟ್ಟಿನ ಪ್ರಕಾರ, 31 ಮಾರ್ಚ್ **2021**ಕ್ಕೆ ಅಂತ್ಯಗೊಂಡಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಾರ್ಷಿಕ ಆರ್ಥಿಕ ನಿರೂಪಣೆಯ ಲೆಕ್ಕಪತ್ರ ಪಟ್ಟಿಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿರುತ್ತದೆ. ಕಾಯಿದೆಯ ಕಲಂ 139(5) ರ ಅಡಿಯಲ್ಲಿ ಭಾರತದ ನಿಯಂತ್ರಕರು ಹಾಗೂ ಮಹಾ ಲೇಖಪಾಲರಿಂದ ನೇಮಿಸಲ್ಪಟ್ಟಿರುವ ಶಾಸನ ಬದ್ಧ ಲೆಕ್ಕ ಪರಿಶೋಧಕರು, ಕಾಯಿದೆಯ ಕಲಂ 143(10) ರಲ್ಲಿ ನಿಗಧಿಪಡಿಸಿರುವ ಪರಿಶೋಧನೆ ಮತ್ತು ಖಚಿತ ಗುಣಮಟ್ಟಗಳ ಪ್ರಕಾರ, ಈ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರ ಪಟ್ಟಿಗಳ ಮೇಲೆ, ಸ್ವಾಯತ್ತ ಪರಿಶೋಧನೆ ನಡೆಸಿ ಕಾಯಿದೆಯ ಕಲಂ 143ರ ಅಡಿಯಲ್ಲಿ ಅಭಿಪ್ರಾಯ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. **ಇದನ್ನು ಪರಿಷ್ಕೃತ ಲೆಕ್ಕ ಪರಿಸೋಧನಾ ದಿನಾಂಕ 24ನೇ ಡಿಸೆಂಬರ್ 2021 ಇದರಲ್ಲಿ ಮಾಡಲಾಗಿದೆ ಎಂದು ಹೇಳಲಾಗಿದೆ ಮತ್ತು ಲೆಕ್ಕ ಪರಿಶೋಧನಾ ವರದಿ ದಿನಾಂಕ ನವಂಬರ್ 23, 2021 ಇದನ್ನು ಹಿಂದಿಕ್ಕಿದೆ.**

ಕಾಯಿದೆ ಕಲಂ 143(6)(ಎ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 31ನೇ ಮಾರ್ಚ್ **2021**ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಮತ್ತು ಲೆಕ್ಕ ಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ ಪೂರಕ ಪರಿಶೋಧನೆ ನಡೆಸಿದ್ದೇನೆ. ಶಾಸನಬದ್ಧ ಲೆಕ್ಕ ಪರಿಶೋಧಕರ ಪರಿಶೋಧಿತ ಕಾರ್ಯನಿರೂಪಣಾ ಮಾಹಿತಿಯನ್ನು ಪರಾಮರ್ಶಿಸದೆ ಹಾಗೂ ಕೇವಲ ಶಾಸನಬದ್ಧ ಲೆಕ್ಕ ಪರಿಶೋಧಕರು, ಕಂಪನಿ ಸಿಬ್ಬಂದಿಯೊಡನೆ ನಡೆಸಿದ ವಿಚಾರಣೆ ಹಾಗೂ ಕೆಲವು ಆಯ್ದ ಲೆಕ್ಕಪತ್ರ ದಾಖಲೆಗಳ ಪರಿಶೀಲನೆಗೆ ಮಿತಿಗೊಳಿಸಿ ವೈಯಕ್ತಿಕವಾಗಿ ಈ ಪೂರಕ ಲೆಕ್ಕ ಪರಿಶೋಧನಾ ಕಾರ್ಯವನ್ನು ನಿರ್ವಹಿಸಲಾಗಿದೆ. ಆಡಳಿತ ವ್ಯವಸ್ಥೆಯಿಂದ ಆರ್ಥಿಕ ಪಟ್ಟಿಯಲ್ಲಿ ಪರಿಷ್ಕರಣೆ ಮಾಡಿರುವ ಹಿನ್ನೆಲೆಯಲ್ಲಿ ಪೂರಕ ಆಡಿಟ್‌ನಲ್ಲಿ ಟಿಪ್ಪಣಿ 37.36 (ಡಿ) (ವಿವರಣಾ ಟಿಪ್ಪಣಿ) ಯಲ್ಲಿ ಲೆಕ್ಕಕ್ಕೆ ಮತ್ತು ಪರಿಷ್ಕೃತ ಲೆಕ್ಕ ಪರಿಶೋಧನಾ ವರದಿಗೆ ಹೈ ಲೈಟ್ ಮಾಡಿ ನಾನು ಸೂಚಸಿರುವಂತೆ ಗಮನಿಸಿರುವ ಅಂಶಗಳ ಪರಿಣಾಮವಾಗಿ ಅಥವಾ ಶಾಸನ ಬದ್ಧ ಲೆಕ್ಕ ಪರಿಶೋಧಕರ ವರದಿಗೆ ಕಾಯ್ದೆಯ ಕಲಂ 143(6)(ಬಿ)ರ ಅಡಿಯಲ್ಲಿ ನಾನು ಹೆಚ್ಚಿನ ಅಭಿಪ್ರಾಯವನ್ನು ನೀಡಲು ಏನೂ ಇಲ್ಲ.

**ಭಾರತದ ನಿಯಂತ್ರಕರು ಹಾಗೂ**
**ಮಹಾ ಲೇಖಪಾಲರ ಪರವಾಗಿ**
**ಸಹಿ/–**
**(ಅನೂಪ್ ಫ್ರಾನ್ಸಿಸ್ ಡುಂಗ್‌ಡುಂಗ್)**
**ಪ್ರಧಾನ ಲೆಕ್ಕಪರಿಶೋಧಕರು (ಪರಿಶೋಧನೆ–II)**
**ಕರ್ನಾಟಕ ಬೆಂಗಳೂರು.**

**ಸ್ಥಳ : ಬೆಂಗಳೂರು.**
**ದಿನಾಂಕ : 28.12.2021**

# ಸ್ವಾಯತ್ತ ಲೆಕ್ಕ ಪರಿಶೋಧಕರ ವರದಿ

ಗೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ (IND-AS)

ಭಾರತೀಯ ಲೆಕ್ಕ ಪದ್ಧತಿಯ ಪ್ರಕಾರದ ಆರ್ಥಿಕ ಲೆಕ್ಕ–ಪತ್ರಗಳ ಬಗ್ಗೆ ವರದಿ

ನಿಗಮದ ನಿರ್ದೇಶಕರ ಮಂಡಳಿಯು ದಿನಾಂಕ 18 ನೇ ನವೆಂಬರ್ 2021 ರಂದು ಅನುಮೋದಿಸಿರುವ ಆರ್ಥಿಕ ವರ್ಷ 2020–21 ನೇ ಸಾಲಿನ ಭಾರತೀಯ ಲೆಕ್ಕ ಪದ್ದತಿಯ ತಖ್ತೆಗಳ ಮೇಲೆ ದಿನಾಂಕ 23 ನವೆಂಬರ್ 2021 ರಂದು ನಾವು ವರದಿ ನೀಡಿದ್ದು, ಕಂಪನಿ ಕಾಯ್ದೆಯ ಕಲಂ 143(6)ರ ಅಡಿಯಲ್ಲಿ ಭಾರತೀಯ ಮಹಾಲೇಖಪಾಲರ ಹಾಗೂ ನಿಯಂತ್ರಕರು ಗಮನಿಸಿ, ಟೀಕಿಸಿರುವ ಅಂಶಗಳಿಗೆ ಸಂಬಂಧಿಸಿದಂತೆ ಪರಿಷ್ಕರಣೆಗೊಂಡಿದೆ. ಈ ಪರಿಷ್ಕರಣೆಯ ಪರಿಣಾಮವಾಗಿ ಭಾರತೀಯ ಲೆಕ್ಕ ಪದ್ದತಿಯ ತಖ್ತೆಗಳ ಟಿಪ್ಪಣಿ ಸಂಖ್ಯೆ 37.36(ಡಿ) ಗೆ ಉಲ್ಲೇಖಿಸಿ, ಕಂಪನಿಯ ಆರ್ಥಿಕ ತಖ್ತೆಗಳು ಹಾಗೂ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಷ್ಕರಣೆಯ ಪರಿಣಾಮವನ್ನು ಒದಗಿಸಲಾಗಿದೆ. ಈ ವರದಿಯು ದಿನಾಂಕ ನವೆಂಬರ್ 23, 2021 ರ ನಮ್ಮ ಹಿಂದಿನ ವರದಿಯನ್ನು ಚ್ಯುತಿಗೊಳಿಸಲಾಗಿದೆ. ನವೆಂಬರ್ 23, 2021 ರ ಮೂಲ ವರದಿಯ ತದನಂತರದಲ್ಲಿನ ಅಂಶಗಳ ಸಂಬಂಧವಾದ ನಮ್ಮ ಕಂಪನಿಯ ಲೆಕ್ಕ ಪರಿಶೋಧನಾ ಕಾರ್ಯವಿಧಾನಗಳು, ಭಾ.ಲೆ.ಪ., (IND-AS)ಆರ್ಥಿಕ ಲೆಕ್ಕ–ಪತ್ರಗಳ ಬಗ್ಗೆ ಟಿಪ್ಪಣಿ 37.36(ಡಿ) ರಲ್ಲಿ ಮಾಡಿರುವ ತಿದ್ದುಪಡಿಗಳಿಗೆ ಸೀಮಿತವಾಗಿದೆ.

## ಅಭಿಪ್ರಾಯ ನೀಡಿಕೆ ನಿರಾಕರಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕಂಪನಿ)ದ 31ನೇ ಮಾರ್ಚ್ 2021 ರಂದು ಇದ್ದಂತೆ, ಆಸ್ತಿ–ಹೊಣೆ ಪಟ್ಟಿ ಹಾಗೂ ಆ ದಿನಾಂಕದ ವರ್ಷಾಂತ್ಯದವರೆಗಿನ ಲಾಭ ಮತ್ತು ನಷ್ಟದ ಲೆಕ್ಕ(ಇತರ ಸಮಗ್ರ ಆದಾಯಗಳನ್ನೂ ಒಳಗೊಂಡು), ಹಣ ಚಲಾವಣೆಯ ವರದಿ, ಆ ವರ್ಷಕ್ಕೆ ಕೊನೆಗೊಂಡಂತೆ ಸ್ವಾಮ್ಯದ ಬದಲಾವಣೆಯ ಪಟ್ಟಿ, ಗಮನಾರ್ಹ ಲೆಕ್ಕಪದ್ಧತಿ ತತ್ವಗಳ ಸಾರಾಂಶಗಳು ಹಾಗೂ ಇತರ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡ ಭಾರತೀಯ ಲೆಕ್ಕಪದ್ಧತಿ ತತ್ವಗಳನುಸಾರದ ಆರ್ಥಿಕ ಲೆಕ್ಕ–ಪತ್ರಗಳನ್ನು (ಇನ್ನು ಮುಂದೆ ಭಾ.ಲೆ.ಪ.–ಆರ್ಥಿಕ ಆರ್ಥಿಕ ಲೆಕ್ಕ–ಪತ್ರಗಳೆಂದು ಉಲ್ಲೇಖಿಸಲ್ಪಡುತ್ತವೆ) ಪರಿಶೋಧನೆಗೊಳಪಡಿಸಲು ನಮ್ಮನ್ನು ತೊಡಗಿಸಿಕೊಳ್ಳಲಾಯಿತು.

ಭಾ.ಲೆ.ಪ. ತತ್ವಗಳನುಸಾರದ ಕಂಪನಿಯ ಆರ್ಥಿಕ ಲೆಕ್ಕ–ಪತ್ರಗಳ ಬಗ್ಗೆ ನಾವು ಅಭಿಪ್ರಾಯ ನೀಡುವುದಿಲ್ಲ. ನಮ್ಮ ವರದಿಯ ಅಭಿಪ್ರಾಯ ನೀಡಿಕೆ ನಿರಾಕರಣೆಯ ಭಾಗದಲ್ಲಿ ಅರ್ಹತಾದಾಯಕ ಅಂಶಗಳ ವಿವರಣೆಯ ಪ್ರಯುಕ್ತ ಅಗತ್ಯ ಪ್ರಮಾಣದ ಯುಕ್ತ ಪರಿಶೋಧನಾ ಪುರಾವೆಗಳನ್ನು ಪಡೆದುಕೊಳ್ಳಲು ಆಗದ ಕಾರಣ, ಕಂಪನಿಯ ಈ ಭಾ.ಲೆ.ಪ.ತತ್ವಗಳನುಸಾರದ ಆರ್ಥಿಕ ಲೆಕ್ಕ–ಪತ್ರಗಳ ಬಗ್ಗೆ ಪರಿಶೋಧನಾ ಅಭಿಪ್ರಾಯವನ್ನು ನೀಡಲು ಆಗುವುದಿಲ್ಲ.

## ಅಭಿಪ್ರಾಯ ನೀಡಿಕೆ/ನಿರಾಕರಣೆಗೆ ಆಧಾರ:

ಮಾರ್ಚ್ 31,2020 ರ ಅಂತ್ಯಕ್ಕೆ ನಿಗಮದ ಆರ್ಥಿಕ ಲೆಕ್ಕ–ಪತ್ರಗಳನ್ನು ನಿಗಮದ ನಿರ್ದೇಶಕ ಮಂಡಳಿಯವರು ಮಾರ್ಚ್22, 2021 ರಂದು ಅನುಮೋದಿಸಿದ್ದು, ಹಿಂದಿನ ಶಾಸನಬದ್ಧ ಲೆಕ್ಕ ಪರಿಶೋಧಕರಾದ ಮೆ॥ ಬಿ.ಪಿ.ರಾವ್ & ಕಂಪನಿ, ರವರು ಮಾರ್ಚ್ 22, 2021 ರಂದು ವರದಿ ನೀಡಿರುತ್ತಾರೆ. ಈ ವರದಿಯಲ್ಲಿ, ಅವರು 'ಅಭಿಪ್ರಾಯ ನೀಡಿಕೆ/ನಿರಾಕರಣೆ 'ವಿಭಾಗದಲ್ಲಿ ವಿವರಿಸಿದ ವಿಷಯಗಳ ಪ್ರಾಮುಖ್ಯತೆಯಿಂದಾಗಿ ಆರ್ಥಿಕ ಲೆಕ್ಕ–ಪತ್ರಗಳ ಬಗ್ಗೆ ಯಾವುದೇ ಅಭಿಪ್ರಾಯವನ್ನು ನೀಡದೇ, ಒಪ್ಪದಿರುವಿಕೆ/ನಿರಾಕರಣೆಯನ್ನು ನೀಡಿರುತ್ತಾರೆ ಮತ್ತು ಅಗತ್ಯ ಪ್ರಮಾಣದ ಯುಕ್ತ ಪರಿಶೋಧನಾ ಪುರಾವೆಗಳನ್ನು ಪಡೆದುಕೊಳ್ಳಲು ಆಗದ ಕಾರಣ ಪರಿಶೋಧನಾ ಅಭಿಪ್ರಾಯವನ್ನು ನೀಡಲು ಅಸಮರ್ಥತೆಯನ್ನು ವ್ಯಕ್ತಪಡಿಸಿರುತ್ತಾರೆ. ನಾವು ಕೆಳಕಂಡಂತೆ ಹೆಚ್ಚಿನ ವರದಿಯನ್ನು ನೀಡುತ್ತೇವೆ:–

**ಲೆಕ್ಕದ ಪುಸ್ತಕಗಳು:**

ಕಂಪನಿಯ ಲೆಕ್ಕ ಪುಸ್ತಕಗಳನ್ನು ಕೈ ಬರಹದಿಂದ ಮತ್ತು ಕೆಲವನ್ನು ಎಕ್ಸೆಲ್ ವರ್ಕ್ ಬುಕ್ ಗಳಿಂದಲೂ ನಿರ್ವಹಿಸಲಾಗುತ್ತಿದೆ. ಲೆಕ್ಕದ ಪುಸ್ತಕಗಳಲ್ಲಿ ಕೆಲವು ತಿದ್ದಿದ ಬರಹಗಳು, ಕಂಡು ಬಂದಿದ್ದು, ಅದಕ್ಕೆ ಆಡಳಿತ ವರ್ಗವು ತಾವು ಅವುಗಳನ್ನು ಪರಿಶೀಲಿಸಿ/ಪರಿಷ್ಕರಿಸಿ ಅವುಗಳು ಸರಿಯಾಗಿವೆ ಎಂದು ಉತ್ತರಿಸಿದ್ದಾರೆ. ಈಗಿರುವ ಲೆಕ್ಕ ಪುಸ್ತಕಗಳು ಹಾಗೂ ಮತ್ತಿತರ ದಾಖಲೆಗಳು ಅಂದರೆ ಬಟವಾಡೆಯ–ರಿಜಿಸ್ಟರ್, ಸ್ವತ್ತುಗಳು/ ಸರಕು ಸಾಮಗ್ರಿಗಳ ದಾಖಲೆಗಳು ತಪ್ಪಾಗುವ ಮತ್ತು ಅನಧಿಕೃತವಾಗಿ ತಿದ್ದುಪಡಿ/ಮಾರ್ಪಾಟು ಮಾಡುವ ಸಾಧ್ಯತೆಗಳಿವೆ. ಈ ಬಗ್ಗೆ ನಾವು ವ್ಯವಸ್ಥಾಪಕ ವರ್ಗ ಹೇಳಿಕೆ/ನಿವೇದನೆಗಳನ್ನು ಅವಲಂಬಿಸಿ–ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಸಾಕಷ್ಟು ನಿಖರತೆ, ಮತ್ತು ಲೆಕ್ಕ ಪುಸ್ತಕಗಳನ್ನು ಆಂತರಿಕ ಲೆಕ್ಕ ಪರಿಶೋಧಕರು ಪರಿಶೀಲನೆ ಮಾಡಿದ್ದಾರೆ, ಸಾಕಷ್ಟು ತಪಾಸಣೆಗಳನ್ನು ಮಾಡಿರುತ್ತಾರೆ ಮತ್ತು ಈ ಬಗೆಗೆ ಯಾವುದೇ ಅನಧಿಕೃತ ತಪ್ಪು ತಿದ್ದುವಿಕೆ/ಸಂಪಾದನೆ ಇಲ್ಲ ವೆಂಬುದನ್ನು ಖಾತ್ರಿ ಪಡಿಸಿಕೊಂಡಿದ್ದೇವೆ ಎಂಬುದನ್ನು ನಂಬಿ, ಅವುಗಳನ್ನು ಆಧಾರವಾಗಿಟ್ಟುಕೊಂಡಿದ್ದೇವೆ.

**ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು (ಪಿ.ಪಿ.ಇ)– ಟಿಪ್ಪಣಿ 2 ಅನ್ನು ಗಮನಿಸಿ**

1. ಭೂಮಿ (ಪೂರ್ಣ ಒಡೆತನದ ಭೂಮಿ ಮತ್ತು ಗೇಣಿ/ ಗುತ್ತಿಗೆಗೆ ಹಿಡಿದ ಭೂಮಿ.)

ಎ. ಕಂಪನಿಯಲ್ಲಿ ನಿರ್ವಹಿಸಿರುವ ಸ್ಥಿರಾಸ್ತಿಗಳ ದಾಖಲೆಗಳು ಮತ್ತು ಸಿವಿಲ್ ಇಂಜಿನಿಯರಿಂಗ್ ಶಾಖೆಯಲ್ಲಿ ಹೊಂದಿರುವ ವಿವರಗಳು ಸೂಕ್ತ ಕೋಡಿಂಗ್ / ಕ್ರಾಸ್ ರೆಫರೆನ್ಸ್ ವ್ಯವಸ್ಥೆ ಇಲ್ಲದಿರುವುದರಿಂದ ಒಂದಕ್ಕೊಂದು ಹೊಂದಿರುವುದಿಲ್ಲ (ಟಿಪ್ಪಣಿ ಸಂಖ್ಯೆ 2.1ನ್ನು ಗಮನಿಸಿ). ಟಿಪ್ಪಣಿ 2.2, 2.3 ಮತ್ತು 2.3ಎ ಗಳಿಗೆ ಸೂಚಿಸಲಾದ ಎಲ್ಲಾ ನ್ಯೂನತೆಗಳು ಹಾಗೂ ಇತರ ವಿಷಯಗಳು ಸಿವಿಲ್ ಶಾಖೆಯಲ್ಲಿ ನಿರ್ವಹಿಸಲ್ಪಟ್ಟ ದಾಖಲೆಗಳನ್ನು ಆಧರಿಸಿದೆ. ಈ ಮೇಲೆ ತಿಳಿಸಿದ ಟಿಪ್ಪಣಿಗಳಲ್ಲಿ ವಿವರಿಸಿದ ನ್ಯೂನತೆಗಳು ಕಂಪನಿಯ ಆಸ್ತಿಗಳು, ಅದರ ಸ್ವಾಮ್ಯ/ ಒಡೆತನ ಇವುಗಳ ಮಹತ್ವಪೂರ್ಣವಾದ ಪ್ರಭಾವವನ್ನು ಹೊಂದಿದೆ.

ಬಿ. ಸಿವಿಲ್ ಶಾಖೆಯಲ್ಲಿ ನಿರ್ವಹಿಸಿದ ದಾಖಲೆಗಳು ಮತ್ತು ಸ್ಥಿರಾಸ್ತಿ ದಾಖಲೆಗಳೊಂದಿಗೆ ಅದರ ಸಮನ್ವಯವನ್ನು ಆಧರಿಸಿ ಸ್ಪಷ್ಟವಾದ ಭೂಮಿ/ಕಟ್ಟಡ ನಿರ್ಧಿಷ್ಟ ಶೆಡ್ಯೂಲ್ ಅನುಪಸ್ಥಿತಿಯಲ್ಲಿ,ಆಸ್ತಿಗಳ ಮೇಲೆ ವಿವಿಧ ಆಸ್ತಿ ತೆರಿಗೆಗಳು/ಅನ್ವಯವಾಗುವ ಪುರಸಭೆ ಅಥವಾ ಸ್ಥಳೀಯ ಪ್ರಾಧಿಕಾರದ ತೆರಿಗೆಗಳಿಗೆ ಸಂಬಂಧಿಸಿದಂತೆ ಮಾಡಲಾದ ಹವಣಿಕೆಗಳ ಸಮರ್ಪಕತೆ, ಸಂಪೂರ್ಣತೆ ಮತ್ತು ಸರಿಯಾಗಿರುವುದು ಮತ್ತು ಆರ್ಥಿಕ ಲೆಕ್ಕ–ಪತ್ರಗಳಲ್ಲಿ ಅದರ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಸಿ. ಕಂಪನಿಯು (IND-AS) ಅನ್ನು ಮೊಟ್ಟ ಮೊದಲ ಬಾರಿಗೆ ಆರ್ಥಿಕ ವರ್ಷ 2016–17ರಲ್ಲಿ ಏಪ್ರಿಲ್ 1, 2015ನ್ನು ಪರಿವರ್ತನೆ ದಿನಾಂಕವನ್ನಾಗಿ ಅಳವಡಿಸಿಕೊಂಡಿತು. Ind AS-20- 'ಸರ್ಕಾರದ ಅನುದಾನಕ್ಕಾಗಿ ಲೆಕ್ಕಪತ್ರ ನಿರ್ವಹಣೆ ಮತ್ತು ಸರ್ಕಾರದ ಸಹಾಯದ ಬಹಿರಂಗಪಡಿಸುವಿಕೆ' ಯ ಪ್ರಕಾರ ಮಾರ್ಚ್ 31, 2018 ರವರೆಗೆ ಬಂಡವಾಳೀಕರಣಗೊಳಿಸಿದ ಆಸ್ತಿಗಳಿಗೆ ಸಂಬಂಧಿಸಿದಂತೆ ವಿತ್ತೀಯೇತರ–ಅನುದಾನವನ್ನು ನ್ಯಾಯಯುತ ಮೌಲ್ಯದಲ್ಲಿ ಗುರುತಿಸಲು ಕಡ್ಡಾಯಗೊಳಿಸುತ್ತದೆ. ಆದರೆ, ಏಪ್ರಿಲ್ 1, 2018 ರ ಮೊದಲು ಸ್ವೀಕರಿಸಿದ ಎಲ್ಲಾ ವಿತ್ತೀಯವಲ್ಲದ–ಅನುದಾನಗಳನ್ನು ನ್ಯಾಯಯುತ ಮೌಲ್ಯದಲ್ಲಿ ಮೌಲ್ಯೀಕರಿಸಲಾಗಿಲ್ಲ ಮತ್ತು ನಾಮಮಾತ್ರ ಮೌಲ್ಯದಲ್ಲಿ ಗುರುತಿಸಲ್ಪಟ್ಟಿರುವ ನಿದರ್ಶನಗಳಿವೆ ಎಂದು ನಾವು ಅರ್ಥಮಾಡಿಕೊಂಡಿದ್ದೇವೆ. ಆರ್ಥಿಕ ಲೆಕ್ಕ–ಪತ್ರಗಳ ಮೇಲಿನ ಪ್ರಭಾವವನ್ನು ಮತ್ತು ಮೇಲೆ ತಿಳಿಸಿದ ಲೆಕ್ಕ ತತ್ವವನ್ನು ಅನುಸರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ನಮಗೆ ಸಾಧ್ಯವಾಗುತ್ತಿಲ್ಲ.

ಡಿ. ಟಿಪ್ಪಣಿ ಸಂಖ್ಯೆ 5.3ರಲ್ಲಿ ವಿವರಿಸಿದಂತೆ, ರೂ. 1149.02 ಲಕ್ಷ ಗಳನ್ನು ಕಂಪನಿಯು ವಿವಿಧ ಭೂಮಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಕೆಲವು ಮುಂಗಡಗಳನ್ನು ವಿವಿಧ ಕಂದಾಯ ಪ್ರಾಧಿಕಾರಗಳಿಗೆ ನೀಡಿದೆ. ಕಂಪನಿಯು ಅಂತಹ ಮುಂಗಡಗಳನ್ನು ಹಿಂದಿರುಗಿಸಲು ಅಥವಾ ಈಗಾಗಲೇ ಮಾಡಿರುವ ಮುಂಗಡ ಪಾವತಿ ಮೊತ್ತಕ್ಕೆ

ಹೊಸದಾಗಿ ಜಮೀನು ಹಂಚಿಕೆ ಮಾಡುವಂತೆ ಈ ಟಿಪ್ಪಣಿಯಲ್ಲಿ ಕೋರಿದೆ. ಜಮೀನು ಹಂಚಿಕೆ/ಸ್ವಾಧೀನ ಕೊಡುವುದು/ಮುಂಗಡಗಳ ಹಿಂದಿರುಗಿಸುವಿಕೆ ಬಗ್ಗೆ ಸ್ಪಷ್ಟವಾದ ಸ್ಥಿತಿಗತಿಯ ಮಾಹಿತಿಯು ಇಲ್ಲದಿರುವುದರಿಂದ ಅಂತಹ ಮುಂಗಡಗಳ ಹಿಂಪಡೆಯುವ/ಹೊಂದಾಣಿಕೆಯ ಬಗ್ಗೆ ನಾವು ಯಾವುದೇ ಅಭಿಪ್ರಾಯ ಮಾಡಲಾಗದು.

ಇ. ಟಿಪ್ಪಣಿ 1.9(ಡಿ) ಮತ್ತು 3.7ರಲ್ಲಿ ಉಲ್ಲೇಖಿಸಿದಂತೆ ಕಂಪನಿಯು ಭೂ ಮಾಲಿಕರಿಗೆ ಪಾವತಿಸಬೇಕಾದ ಪರಿಹಾರವನ್ನು (ಅದರಲ್ಲಿ ಮೂರನೇ ಪಕ್ಷಕಾರರಿಗೆ ಸಂಬಂಧಿಸಿದ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನ ಪಡಿಸಿಕೊಂಡಿರುವ ಮತ್ತು ಇದಕ್ಕೆ ವರ್ಗಾಯಿಸಲಾದ ಭೂಮಿ ಸೇರಿದೆ ಹಾಗೂ ಬೆಳೆಯ ಪರಿಹಾರ, ಕಾರಿಡಾರ್ ಪರಿಹಾರ, ಮರ ಕಡಿತದ ಬಗೆಗೆ ಪರಿಹಾರ, ಇತ್ಯಾದಿಗಳನ್ನು ತಮ್ಮ ಭೂಮಿಯ ಮೂಲಕ ಹಾದು ಹೋಗುವ ಪ್ರಸರಣ ಮಾರ್ಗಗಳ ನಿರ್ಮಾಣವನ್ನು ಸುಲಭಗೊಳಿಸಲು) ಮತ್ತು ಅದರ ಮೇಲಿನ ಬಡ್ಡಿಯನ್ನು ನಗದು ಆಧಾರದ ಮೇಲೆ ಗುರುತಿಸುತ್ತದೆ. ಈ ಲೆಕ್ಕ ಪದ್ಧತಿಯು ಕಂಪನಿಗಳ ಕಾಯಿದೆ, 2013 ರ ವಿಭಾಗ 128 ಮತ್ತು Ind AS 1- 'ಹಣಕಾಸಿನ ಪಟ್ಟಿಗಳ ಪ್ರಸ್ತುತಿ' ರಲ್ಲಿ ಕಡ್ಡಾಯಗೊಳಿಸಲಾದ ಲೆಕ್ಕಪತ್ರದ ಸಂಚಯ ವ್ಯವಸ್ಥೆಗೆ ಅನುಗುಣವಾಗಿಲ್ಲ. ಪರಿಹಾರವನ್ನು ಪಾವತಿಸುವ ವಿಷಯದಲ್ಲಿ ಕಂಪನಿಯು ತನ್ನ ನೀತಿ/ಹಿಂದಿನ ನ್ಯಾಯಾಂಗ ಘೋಷಣೆಗಳ ಆಧಾರದ ಮೇಲೆ ಪಾವತಿಸಬಹುದಾದ ಸಂಭವನೀಯ ಪರಿಹಾರ/ಬಡ್ಡಿಯನ್ನು ಅಂದಾಜಿಸಿರಬೇಕು ಮತ್ತು ಅದನ್ನು ಗುರುತಿಸಬೇಕು, ಇದುವರೆಗಿನ ಇತ್ತೀಚಿನ ಬೆಳವಣಿಗೆಗಳ ಆಧಾರದ ಮೇಲೆ ಅದರ ಅಂತಿಮ ನಿರ್ಣಯದ ದಿನಾಂಕದ ವರೆಗೆ ಪ್ರತಿ ವರದಿ ಮಾಡುವ ದಿನಾಂಕದಂದು ಪಾವತಿಸಬೇಕಾದ ಪರಿಹಾರ/ಬಡ್ಡಿಯನ್ನು ಮರು–ಮಾಪನ ಮಾಡಬೇಕು. ಅಂತಹ ಪರಿಹಾರಗಳು / ಬಡ್ಡಿಯನ್ನು (ಪಾವತಿಯ ವರ್ಷದಲ್ಲಿ) ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ಗುರುತಿಸಲಾಗಿದೆ. ಈ ಅಭಿಪ್ರಾಯವು ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಪಾವತಿಸಬೇಕಾದ ಪರಿಹಾರಗಳು / ಬಡ್ಡಿಗೆ ಸಂಬಂಧಿಸಿದಂತೆ ಅನ್ವಯವಾಗುತ್ತದೆ. ಕಂಪನಿಯು ಏಪ್ರಿಲ್ 1, 2019 ರಂತೆ ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ಇಕ್ವಿಟಿಗಳ ಸಮತೋಲನಗಳಿಗೆ ಸೂಕ್ತವಾದ ಹೊಂದಾಣಿಕೆಗಳನ್ನು ಮಾಡುವ ಮೂಲಕ ಆರ್ಥಿಕ ವರ್ಷ 2019–20 ರ ತುಲನಾತ್ಮಕ ಅಂಕಿ ಅಂಶಗಳನ್ನು ಮರುಹೊಂದಾಣಿಕೆ ಮಾಡಿದೆ ಹಾಗೂ ಪ್ರಸಕ್ತ ವರ್ಷದಲ್ಲಿ ಪಾವತಿಸಿದ ಆದರೇ ಅಂತಹ ಪರಿಹಾರಗಳನ್ನು ಗುರುತಿಸಲ್ಪಟ್ಟ ಮಟ್ಟಿಗೆ ಹಿಂದಿನ ವರ್ಷಗಳ ಲೆಕ್ಕಪತ್ರಗಳಲ್ಲಿ ಗುರುತಿಸಲಾಗಿಲ್ಲ.

ಎಫ್. ಟಿಪ್ಪಣಿ 1.14(ಸಿ) ನಲ್ಲಿರುವ ಲೆಕ್ಕ ಪದ್ಧತಿಯ ಪ್ರಕಾರ ವಿತ್ತೀಯವಲ್ಲದ ಇತರೆ ರೀತಿಯ ಆಸ್ತಿಗಳ ಅನುದಾನ, ಅಂದರೆ ಜಮೀನು ಮುಂತಾದವುಗಳು ಹಾಗೂ ಇತರೆ ಸಂಪನ್ಮೂಲಗಳನ್ನು ಅಂಕಿತ ಮೌಲ್ಯದಲ್ಲಿ ಗುರುತಿಸಲಾಗುತ್ತಿದೆ. ಕಂಪನಿಯು ಒದಗಿಸಿದ ಮಾಹಿತಿ ಮತ್ತು ಕೊಟ್ಟ ವಿವರಣೆಗಳ ಅಧಾರದ ಮೇಲೆ, ನಮಗೆ ತಿಳಿದು ಬರುವುದೇನೆಂದರೆ, ಖಾಸಗಿ ವ್ಯಕ್ತಿಗಳಿಂದ ಪಡೆದ ಭೂಮಿಯ ಸ್ಪಷ್ಟ ವಿವರಗಳ ವಿಭಜನೆ ಇಲ್ಲದೇ, ಶೂನ್ಯ ಬೆಲೆಯಲ್ಲಿ ಮೌಲ್ಯಮಾಪನ ಮಾಡಿದೆ.

ಮುಂದುವರೆದು, ಹಲವು ಭೂಮಿಗಳನ್ನು ಔಪಚಾರಿಕವಾಗಿ ಕಂಪನಿಗೆ ಹಸ್ತಾಂತರಿಸಿಲ್ಲ. ಅಂತಹ ಭೂಮಿಗಳ ಮೌಲ್ಯವನ್ನು ಕಂಪನಿಯು ಪ್ರತ್ಯೇಕವಾಗಿ ನಮೂದಿಸಿಲ್ಲ.

ಜಿ. ಕೆಲವು ಗೇಣಿ ಭೂಮಿಗೆ ಸಂಬಂಧಿಸಿದಂತೆ, ಗೇಣಿದಾರರೊಡನೆ ಗೇಣಿ ಕರಾರುಗಳನ್ನು ಮಾಡಿಕೊಂಡಿರುವುದಿಲ್ಲ (ಟಿಪ್ಪಣಿ ಸಂಖ್ಯೆ 2.2ನ್ನು ಗಮನಿಸಿ). ಈ ಪರಿಣಾಮವಾಗಿ, ಅಂತಹ ಆಸ್ತಿಗಳ ಮೌಲ್ಯವನ್ನು ಲಾಭ ನಷ್ಟ ತಖ್ತೆಗೆ ಭೋಗ್ಯ ಮಾಡಿರುವುದಿಲ್ಲ. ಹಾಗಾಗಿ ಆರ್ಥಿಕ ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಕಂಡು ಹಿಡಿಯಲಾಗಲಿಲ್ಲ.

**<u>2. ಸ್ಥಾವರ, ಉಪಕರಣ ಮತ್ತು ಇತರ ಯೋಜನಯ ಬಂಡವಾಳೀಕರಣಗಳು (ಟಿಪ್ಪಣಿ 2ಅನ್ನು ಗಮನಿಸಿ)</u>**

ಎ. ಗುತ್ತಿಗೆದಾರರು / ಸರಬರಾಜುಗಾರರಿಗೆ ನೀಡಿದ ಖರೀದಿ/ ಕಾಮಗಾರಿ ಆದೇಶಗಳು, ಕಾರ್ಯ ಸ್ಥಳದಲ್ಲಿ ಸ್ವೀಕೃತವಾದ/ನಿರ್ಮಾಣಗೊಂಡ ಸಾಮಗ್ರಿಗಳು, ಅವರಿಂದ ಪಡೆದ ಹುಂಡಿಗಳು ಮತು ಲೆಕ್ಕ ಪುಸ್ತಕಗಳಲ್ಲಿ ಲೆಕ್ಕೀಕರಣದ ಬಗ್ಗೆ ಪರಿಣಾಮಕಾರಿಯಾದ ಟ್ರ್ಯಾಕಿಂಗ್ ಪದ್ಧತಿ ಇರಲಿಲ್ಲ. ಪ್ರಸಕ್ತ ವರ್ಷದಲ್ಲಿ ರೂ. 42,327.34

ಲಕ್ಷಗಳ ಮೊತ್ತದ ಹುಂಡಿಗಳು, ಅಸ್ತಿಗಳ ಬಂಡವಾಳೀಕರಣ ಆದ ಮೇಲೆ ಬಿಲ್‌ಗಳನ್ನು ಲೆಕ್ಕಪತ್ರಗಳಲ್ಲಿ ದಾಖಲಿಸಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ (ಟಿಪ್ಪಣಿ ಸಂಖ್ಯೆ 37.35 ಅನ್ನು ಗಮನಿಸಿ). ಕಳೆದ ಆರ್ಥಿಕ ವರ್ಷಗಳಲ್ಲಿಯೂ ಇಂತಹ ನಿದರ್ಶನಗಳಿವೆ ಎಂದು ನಾವು ತಿಳಿದುಕೊಂಡಿರುತ್ತೇವೆ. ಈ ರೀತಿ ಗುರುತಿಸಲ್ಪಟ್ಟ ವೆಚ್ಚಗಳು, ಎಲ್ಲೆಲ್ಲಿ ಅವಶ್ಯಕವಿದೆಯೋ, ಆರ್ಥಿಕ ವರ್ಷ 2019–20 ರ ತುಲನಾತ್ಮಕ ಅಂಕಿ ಅಂಶಗಳನ್ನು ಪುನರುಚ್ಚರಿಸಿದೆ ಮತ್ತು ಏಪ್ರಿಲ್ 1, 2019 ರಂದು ಇದ್ದಂತ ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ಇಕ್ವಿಟಿಗಳ ಮೊತ್ತಗಳಿಗೆ ಸೂಕ್ತ ಹೊಂದಾಣಿಕೆಗಳನ್ನು ಮಾಡಲಾಗಿದೆ. ಅದರ ಪರಿಣಾಮವಾಗಿ, ಬಂಡವಾಳೀಕರಿಸಿದ ಆಸ್ತಿಗಳ, ಇದಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳು ಮತ್ತು ಅದರ ಮೇಲಿನ ಸವಕಳಿಗಳು ನಿಖರವಾಗಿರುವುದಿಲ್ಲ ಹಾಗಾಗಿ ಲೆಕ್ಕಪತ್ರಗಳಲ್ಲಿ ನಿಖರವಾದ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.

ಬಿ. ಗುತ್ತಿಗೆದಾರರು/ ಸರಬರಾಜುದಾರರಿಗೆ ನೀಡಿಲಾದ ಖರೀದಿ/ ಕಾಮಗಾರಿ ಆದೇಶಗಳಿಗೆ ಸಂಬಂಧಿಸಿದಂತೆ, ಪ್ರಮಾಣ ಮತ್ತು ದರ ವ್ಯತ್ಯಾಸದ ಹುಂಡಿಗಳು/ ಕ್ರೆಡಿಟ್ ಟಿಪ್ಪಣಿಗಳು, ಅಂತಿಮ ನಿರ್ಣಯ/ಹುಂಡಿಗಳ/ಕ್ರೆಡಿಟ್ ನೋಟುಗಳ ಸ್ವೀಕೃತಿಯ ಮೇಲೆ ಮಾತ್ರ ಗುರುತಿಸಲ್ಪಡುತ್ತವೆ.ಬಂಡವಾಳೀಕರಣದ ಸಮಯದಲ್ಲಿ ಇವುಗಳನ್ನು ಅಂದಾಜು ಮಾಡಲಾಗುತ್ತಿಲ್ಲ ಮತ್ತು ಗುರುತಿಸಲಾಗುತ್ತಿಲ್ಲ. ಈ ರೀತಿ ಗುರುತಿಸಲ್ಪಟ್ಟ ಹುಂಡಿಗಳ/ಕ್ರೆಡಿಟ್ ನೋಟುಗಳ ಮೊತ್ತವನ್ನು, ಎಲ್ಲೆಲ್ಲಿ ಅವಶ್ಯಕವಿದೆಯೋ, ಆರ್ಥಿಕ ವರ್ಷ 2019–20 ರ ತುಲನಾತ್ಮಕ ಅಂಕಿ ಅಂಶಗಳನ್ನು ಪುನರುಚ್ಚರಿಸಿದೆ ಮತ್ತು ಏಪ್ರಿಲ್ 1, 2019 ರಂದು ಇದ್ದಂತ ಆಸ್ತಿಗಳು, ಹೊಣೆಗಾರಿಕೆಗಳು ಮತ್ತು ಇಕ್ವಿಟಿಗಳ ಮೊತ್ತಗಳಿಗೆ ಸೂಕ್ತ ಹೊಂದಾಣಿಕೆಗಳನ್ನು ಮಾಡಲಾಗಿದೆ. ಅದರ ಪರಿಣಾಮವಾಗಿ, ಬಂಡವಾಳೀಕರಿಸಿದ ಆಸ್ತಿಗಳ, ಇದಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳು ಮತ್ತು ಅದರ ಮೇಲಿನ ಸವಕಳಿಗಳು ನಿಖರವಾಗಿರುವುದಿಲ್ಲ ಹಾಗಾಗಿ ಲೆಕ್ಕಪತ್ರಗಳಲ್ಲಿ ನಿಖರವಾದ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.

ಸಿ. ಕಂಪನಿಯು ಹಲವು ಆಸ್ತಿಗಳನ್ನು ದುರಸ್ತಿ/ರಿಪೇರಿಗೆ ಕಳುಹಿಸಿಕೊಟ್ಟಿದ್ದು,ಅವುಗಳು ಬಹಳ ಸಮಯವಾದರೂ ಹಿಂಪಡೆದಿರುವುದಿಲ್ಲ. ಕಂಪನಿಯು ಆಂತಹ ಆಸ್ತಿಗಳ ಪುಸ್ತಕ ಮೌಲ್ಯವನ್ನು ಅಂದಾಜು ಮಾಡಿರುವಂತೆ ರೂ. 2,533.67 ಲಕ್ಷಗಳಾಗಿದ್ದು, ಅದಕ್ಕನುಗುಣವಾಗಿ ಕಂಪನಿಯು ರೂ. 658.23 ಲಕ್ಷಗಳನ್ನು ಹವಣಿಕೆ ಮಾಡಲಾಗಿದೆ (ಟಿಪ್ಪಣಿ ಸಂಖ್ಯೆ 32.1 (ಬಿ) ಗಮನಿಸಿ). ಈ ಆಸ್ತಿಗಳ ಪ್ರಸ್ತುತ ಸ್ಥಿತಿ ಹಾಗೂ ಧೃಢೀಕರಣಗಳಿಗೆ ಒಳಪಟ್ಟಿದೆ ಹಾಗೂ ಹೆಚ್ಚುವರಿ ಪ್ರಾವಿಷನ್ ಅಗತ್ಯತೆಯನ್ನು ಪ್ರಸ್ತುತ ಖಚಿತಪಡಿಸಿಕೊಳ್ಳಲಾಗಲಿಲ್ಲ.

ಡಿ. ಟಿಪ್ಪಣಿ 1.11 (ಜಿ) ಗೆ ಸಂಬಂಧಿಸಿದಂತೆ, 'ಕಳಚಿದ ಆಸ್ತಿಗಳು' ಎಂದು ಪರಿಗಣಿಸಲಾದ ಕೆಲವು ಆಸ್ತಿಗಳ ಇಳಿಕೆಗೊಳಿಸಿದ ಮೌಲ್ಯವನ್ನು ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಸಿ.ಇ.ಆರ್.ಸಿ) ನಿಗದಿಪಡಿಸಿದ ದರಗಳನ್ವಯ ನೇರ–ಸಾಲಿನ ವಿಧಾನದಲ್ಲಿ ಸವಕಳಿ ದರಗಳನ್ನು ಲೆಕ್ಕೀಕರಿಸುತ್ತದೆ (ಅಂತಹ ಆಸ್ತಿಗಳ ಬಳಕೆಗೆ ಯೋಗ್ಯವಾದ ಅವಧಿಯನ್ನು ಪ್ರತಿಬಿಂಬಿಸಲು ದರವನ್ನು ಪರಿಷ್ಕರಿಸದೆ). ಕಳಚಿದ ಆಸ್ತಿಗಳಿಗೆ ಹೀಗೆ ಅನುಸರಿಸಲಾದ ಇಳಿಕೆಗೊಳಿಸಿದ ಮೌಲ್ಯದ ವಿಧಾನವು Ind AS 16 ರ ಪ್ಯಾರಾ 62–ಆಸ್ತಿ, ಸ್ಥಾವರ ಮತ್ತು ಉಪಕರಣಗಳಲ್ಲಿ ಕಲ್ಪಿಸಿದಂತೆ ಆಸ್ತಿಗಳಲ್ಲಿ ಅಂತರ್ಗತವಾಗಿರುವ ಭವಿಷ್ಯದ ಆರ್ಥಿಕ ಪ್ರಯೋಜನಗಳ ಬಳಕೆಯ ನಿರೀಕ್ಷಿತ ಮಾದರಿಯನ್ನು ಪ್ರತಿಬಿಂಬಿಸುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳಿಲ್ಲ. ಅಂತಹ ಕಳಚಿದ ಆಸ್ತಿಗಳ ಇಳಿಕೆಗೊಳಿಸಿದ ಮೌಲ್ಯವನ್ನು ಸಕ್ರಿಯ ಬಳಕೆಯ ಮರುಹಂಚಿಕೆಗಾಗಿ ಆಸ್ತಿಗಳನ್ನು ಗ್ರಾಸ್ ಬ್ಲಾಕ್‌ಗೆ ಹಿಂತಿರುಗಿಸಲಾಗುತ್ತದೆ ಮತ್ತು ಇತರ ಸಾಮಾನ್ಯ ಆಸ್ತಿಗಳಿಗೆ ಅನ್ವಯವಾಗುವಂತೆ ನೇರ–ಸಾಲಿನ ವಿಧಾನದಲ್ಲಿ ನೂತನ ಆಸ್ತಿಯಂತೆ ಸವಕಳಿಗೊಳಿಸಲಾಗುತ್ತದೆ ಮತ್ತು ಪರಿಷ್ಕೃತ ಬಳಕೆಗೆ ಉಪಯುಕ್ತವಾದ ಅವಧಿಯನ್ನು ಆ ಹಂತದಲ್ಲಿ ಮೌಲ್ಯಮಾಪನ ಮಾಡಲಾಗುವುದಿಲ್ಲ. ಈ ಪರಿಣಾಮವಾಗಿ, ಕಳಚಿದ ಆಸ್ತಿಗಳು ಗ್ರಾಸ್ ಬ್ಲಾಕ್‌ಗೆ ಹೋಲಿಸಿದರೆ ದೀರ್ಘಾವಧಿಯಲ್ಲಿ ಸವಕಳಿಯಾಗುತ್ತವೆ. ಹೀಗಾಗಿ ಆರ್ಥಿಕ ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಖಚಿತಪಡಸಿಕೊಳ್ಳಲಾಗಲಿಲ್ಲ.

ಇ. ಸಂಬಂಧ ಪಟ್ಟ ಘಟಕಗಳ ಆಡಳಿತಾತ್ಮಕ ವೆಚ್ಚವನ್ನು ಬಂಡವಾಳೀಕರಣ ಮಾಡುವ ಸಂದರ್ಭದಲ್ಲಿ ಸ್ಥಾವರ ಮತ್ತು ಉಪಕರಣಗಳ ವೆಚ್ಚ ವೆಂದು ಪರಿಗಣಿಸುತ್ತದೆ ಇದು Ind AS16 – ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಪ್ಯಾರಾ

19ಕ್ಕೆ ವ್ಯತಿರಿಕ್ತವಾಗಿರುತ್ತದೆ. ಆರ್ಥಿಕ ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

ಎಫ್. ಕಂಪನಿಯು, ಸಾಮರ್ಥ್ಯ ಹೆಚ್ಚಳದ ಕಾಮಗಾರಿಗಳ ಮೇಲಿನ ಸಾಲಗಳ ಬಡ್ಡಿಯನ್ನು ಬಂಡವಾಳೀಕರಿಸುತ್ತದೆ. ಅದರಲ್ಲಿ ಸಾಮಾನ್ಯವಾಗಿ, ಕಂಪನಿಯ ಟಿ.ಎಲ್ & ಎಸ್.ಎಸ್. ವಿಭಾಗಗಳಲ್ಲಿ ನಡೆಸಲ್ಪಟ್ಟ ಕಾಮಗಾರಿಗಳು (ನಿರ್ವಹಣೆಯ ವಿಭಾಗಗಳು), ಅವು ಕೆಲವು ಚಾಲ್ತಿಯಲ್ಲಿರುವ ಪರಿವರ್ತಕಗಳ/ಇತರ ಬಿಡಿ ಭಾಗಗಳನ್ನು ಹೊಸದರಿಂದ ಬದಲಾಯಿಸಲಾಗುತ್ತದೆ. ನಮ್ಮ ಅಭಿಪ್ರಾಯದಲ್ಲಿ, Ind AS 23ರಡಿಯಲ್ಲಿ ಅಂತಹ ಬದಲಾವಣೆ ಕಾಮಗಾರಿಗಳು 'ಕ್ವಾಲಿಫೈಯಿಂಗ್ ಅಸೆಟ್' ಎಂಬ ಅರ್ಹತೆಯನ್ನು ಪಡೆಯುವುದಿಲ್ಲ ಹೀಗಾಗಿ ಬಡ್ಡಿಯ ವೆಚ್ಚಗಳನ್ನು ಬಂಡವಾಳೀಕರಣ ಮಾಡುವಂತಿಲ್ಲ ಮತ್ತು ತದನುಸಾರವಾಗಿ ಈ ಬಡ್ಡಿಯ ವೆಚ್ಚವನ್ನು ಅವಧಿ ವೆಚ್ಚವಾಗಿ ಲಾಭ ಮತ್ತು ನಷ್ಟ ತಖ್ತೆಯಲ್ಲಿ ಗುರುತಿಸಬೇಕಾಗಿತ್ತು, ಆದರೆ ಸಮಗ್ರ ಅಂಕಿ ಅಂಶಗಳ ಕೊರತೆಯಿಂದಾಗಿ ಆರ್ಥಿಕ ಲೆಕ್ಕಪತ್ರಗಳ ಮೇಲಿನ ಇದರ ಪರಿಣಾಮವನ್ನ ನಾವು ಖಚಿತಪಡಿಸಿಕೊಳ್ಳಲಾಗಲಿಲ್ಲ.

ಜಿ. ಸ್ವಯಂ ನಿರ್ವಹಣೆ ಕಾಮಗಾರಿ (ಎಸ್.ಇ.ಡಬ್ಲ್ಯು) ಮತ್ತು ಠೇವಣಿ ವಂತಿಗೆ ಕಾಮಗಾರಿ (ಡಿ.ಸಿ.ಡಬ್ಲ್ಯು) ಅಡಿಯಲ್ಲಿ ಕಂಪನಿಗೆ ವರ್ಗಾಯಿಸಲ್ಪಟ್ಟ ಆಸ್ತಿಗಳ ಸರಿಯಾದ ಮತ್ತು ಸಮಯೋಚಿತವಾಗಿ ಬಂಡವಾಳೀಕರಣವನ್ನು ಪ್ರತಿನಿಧಿಸಲು ಹಾಗೂ ಈ ಬಗ್ಗೆ ಸಂಪೂರ್ಣತೆ ಮತ್ತು ನಿಖರತೆಯನ್ನು ಖಾತ್ರಿ ಪಡಿಸಿಕೊಳ್ಳಲು ಯಾವುದೇ ವ್ಯವಸ್ಥೆ ಇರಲಿಲ್ಲ. ಹಿಂದಿನ ವರ್ಷಗಳಲ್ಲಿ ಕಾರ್ಯಗತಗೊಂಡ ಎಸ್.ಇ.ಡಬ್ಲ್ಯು ಮತ್ತು ಡಿ.ಸಿ.ಡಬ್ಲ್ಯು ಕಾಮಗಾರಿಗಳ, ಗುರುತಿಸಲಾದ ಮಟ್ಟಿಗೆ, ಅವುಗಳನ್ನು ರೂ.9,568.46 ಲಕ್ಷಗಳಷ್ಟು ಬಂಡವಾಳೀಕರಿಸಲಾಯಿತು ಮತ್ತು ಪೂರ್ವಾನ್ವಯ ಸವಕಳಿಯ ಮೊತ್ತವನ್ನು ರೂ.3,230.73 ಲಕ್ಷಗಳನ್ನು ಗುರುತಿಸಿ, ಆರ್ಥಿಕ ವರ್ಷ 2019–20ರ ತುಲನಾತ್ಮಕ ಅಂಕಿ ಅಂಶಗಳನ್ನು ಮರುಹೊಂದಾಣಿಕೆ ಮಾಡಿದೆ ಮತ್ತು ಏಪ್ರಿಲ್ 1, 2019 ರಂತೆ ಆಸ್ತಿ, ಹೊಣೆಗಾರಿಕೆ ಮತ್ತು ಈಕ್ವಿಟಿ ಮೊತ್ತಗಳನ್ನು ಸೂಕ್ತ ಹೊಂದಾಣಿಕೆಗಳನ್ನು ಮಾಡಿಕೊಳ್ಳಲಾಯಿತು.

ಎಚ್. ಟಿಪ್ಪಣಿ 2.5 (ಬಿ) ಇದರ ಪ್ರಸ್ತಾಪಕ್ಕೆ ಗಮನ ಸೆಳೆಯುತ್ತಾ, ಅದರಲ್ಲಿನ ಕೆಲವು ಭಾಗದ ಭೂಮಿ/ಕಟ್ಟಡಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಗೇಣಿ ನೀಡಲಾಗಿದ್ದು, ಅವುಗಳನ್ನು ಮಾಲಿಕರ ಆಕ್ರಮಿತ ಆಸ್ತಿಯ ಭಾಗದಿಂದ ಬೇರ್ಪಡಿಸಲಾಗದೆಂದು ಹಾಗೂ ಒಟ್ಟು ಮೊತ್ತಕ್ಕೆ ಅಲ್ಪವೆಂದು ಮತ್ತು ತದನುಸಾರವಾಗಿ ಅವುಗಳನ್ನು Ind AS 40 'ಹೂಡಿಕೆ ಆಸ್ತಿ' ಶೀರ್ಷಿಕೆಯ ಅನುಸಾರ 'ಹೂಡಿಕೆಯ ಆಸ್ತಿ' ಎಂದು ಪರಿಗಣಿಸಿರುವುದಿಲ್ಲ. ಗೇಣಿಗೆ ನೀಡಿದ ಭೂಮಿ/ಕಟ್ಟಡಗಳ ಬೇರ್ಪಡಿಸುವಿಕೆಯ ಸ್ಪಷ್ಟವಾದ ಮಾಹಿತಿಯ ಕೊರತೆಯಿಂದಾಗಿ, ನಾವು ಅನ್ವಯವಾಗುವ ಬಹಿರಂಗಪಡಿಸುವಿಕೆಯ ಅವಶ್ಯಕತೆಗಳನ್ನು ಒಳಗೊಂಡಂತೆ ಅಂತಹ ಲೆಕ್ಕಪದ್ಧತಿಯ ಅನುಸರಣೆಯ ಸಮುಚಿತತೆಯ ಬಗ್ಗೆ ಪ್ರತಿಕ್ರಿಯಿಸಲು ಸಾಧ್ಯವಿಲ್ಲವಾಗಿದೆ.

ಐ. ಟಿಪ್ಪಣಿ 1.19–ಗಮನಾರ್ಹ ಲೆಕ್ಕಪತ್ರ ನೀತಿಗಳು ಮತ್ತು ಟಿಪ್ಪಣಿ 37.5 ಕ್ಕೆ ಸಂಬಂಧಿಸಿದಂತೆ, Ind AS 36 'ಆಸ್ತಿಗಳ ದುರ್ಬಲತೆಗೆ ಅನುಗುಣವಾಗಿ ಆಸ್ತಿಗಳ ಯಾವುದೇ ದುರ್ಬಲತೆಯನ್ನು ಪರೀಕ್ಷಿಸಲು ನಡೆಸಿದ ಮೌಲ್ಯಮಾಪನದ ಕುರಿತು ಕಂಪನಿಯು ಯಾವುದೇ ದಾಖಲೆಗಳನ್ನು ಒದಗಿಸಿಲ್ಲ. ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಕಂಡುಹಿಡಿಯಲಾಗಲಿಲ್ಲ.

<u>ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು</u>

ಎ. ಕಂಪನಿಯಲ್ಲಿ ಪ್ರಗತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದಂತೆ, ಯೋಜನೆಯ ನಿರೀಕ್ಷಿತ ಪೂರ್ಣಗೊಳಿಸುವ ದಿನಾಂಕ, ಪೂರ್ಣಗೊಂಡ/ಪೂರ್ಣಗೊಳಿಸಬೇಕಾದ ಚಟುವಟಿಕೆಗಳು, ತಗಲುವ ಅಂದಾಜು ವೆಚ್ಚ ಹಾಗೂ ಮತ್ತಿತರ ಸಂಬಂಧಿಸಿದ ವಿವರಗಳನ್ನು ಟ್ರ್ಯಾಕ್ ಮಾಡಲು ಒಂದು ಸಮಗ್ರ ವ್ಯವಸ್ಥೆ ಇರಲಿಲ್ಲ. ವಿವಿಧ ಯೋಜನೆಗಳನ್ನು 31ನೇ ಮಾರ್ಚ 2020 ಕ್ಕೆ ಹೋಲಿಸಿ ನೋಡಿದಲ್ಲಿ, ವಿವಧ ಕಾರಣಗಳಿಂದ ಪ್ರಗತಿ ಸಾಧಿಸಿಲ್ಲ ಎಂದು ಕಂಪನಿಯಿಂದ ತಿಳಿದು ಬಂದಿದೆ. ಸ್ಪಷ್ಟವಾದ ಡೇಟಾದ ಅನುಪಸ್ಥಿತಿಯಲ್ಲಿ, ಸಕ್ರಿಯವಲ್ಲದ ಯೋಜನೆಗಳ ಸ್ಥಿತಿ/ಮೌಲ್ಯವನ್ನು ಕಂಡುಹಿಡಿಯಲು ನಮಗೆ ಸಾಧ್ಯವಾಗುತ್ತಿಲ್ಲ ಮತ್ತು ಇದರ ಪರಿಣಾಮವಾಗಿ, ದುರ್ಬಲತೆಯ ಹವಣಿಕೆಯ ಪ್ರಮಾಣವನ್ನು, ಯಾವುದಾದರೂ ಇದ್ದರೆ, ಅದನ್ನು ಗುರುತಿಸಿ ನಿರ್ಣಯಿಸಲು ನಮಗೆ

ಸಾಧ್ಯವಾಗುತ್ತಿಲ್ಲ ಮತ್ತು ಲೆಕ್ಕ ಪತ್ರಗಳ ಮೇಲೆ ಅದರ ಪರಿಣಾಮವನ್ನು ತಿಳಿದುಕೊಳ್ಳಲಾಗಲಿಲ್ಲ. ಅಮಾನತುಗೊಳಿಸಿದ / ಪರಿತ್ಯಜಿಸಿದ / ಸಕ್ರಿಯ ಪ್ರಗತಿಯಲ್ಲಿಲ್ಲದ ಯೋಜನೆಗಳ ಸಂಪೂರ್ಣ ಪಟ್ಟಿಯ ಅನುಪಸ್ಥಿತಿಯಲ್ಲಿ ಕಂಪನಿಯು ಸಾಲದ ವೆಚ್ಚಗಳನ್ನು ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಿಸಿರಬಹುದು, ಈ ರೀತಿ ಬಂಡವಾಳೀಕರಿಸಿದ ಸಾಲದ ವೆಚ್ಚಗಳ ಒಟ್ಟು ಪ್ರಮಾಣವನ್ನು ಕಂಡುಹಿಡಿಯಲಾಗುತ್ತಿಲ್ಲ, ಮತ್ತು Ind AS 23– 'ಸಾಲದ ವೆಚ್ಚಗಳು' ಪ್ಯಾರಾ 20 ರ ಪ್ರಕಾರ ಲಾಭ ಅಥವಾ ನಷ್ಟ ಪಟ್ಟಿಯಲ್ಲಿ ಗುರುತಿಸಬೇಕಾಗಿರುತ್ತದೆ. ಆರ್ಥಿಕ ಲೆಕ್ಕ ಪಟ್ಟಿಗಳ ಮೇಲೆ ಅದರ ಪರಿಣಾಮವನ್ನು ಕಂಡುಹಿಡಿಯಲಾಗಲಿಲ್ಲ.

ಬಿ. ಪ್ರಸಕ್ತ ವರ್ಷದಲ್ಲಿ ಬ್ಯಾಂಕ್ ಗ್ಯಾರಂಟಿಗಳ ಮೂಲಕ ಪಡೆದುಕೊಂಡ ಮೊತ್ತ ರೂ.4685.83 ಲಕ್ಷಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಂದ ಕಡಿಮೆಮಾಡಲಾಗಿದೆ, ಆ ಮೊತ್ತವು ಹೆಚ್ಚಾದ ಯೋಜನಾ ವೆಚ್ಚದ ಪರಿಹಾರಧನವೋ ಮತ್ತು ಅಂತಹ ವೆಚ್ಚಕ್ಕೆ ಸಂಬಂಧವಿದೆಯೋ ಎಂದು ವಿಶ್ಲೇಷಣೆ ಮಾಡಲಾಗಿಲ್ಲ, ಅಂತಹ ವೆಚ್ಚಕ್ಕೆ ಸಂಬಂಧ ಇಲ್ಲದಿದ್ದರೆ, ಅ ಮೊತ್ತವನ್ನು ಲಾಭ ಮತ್ತು ನಷ್ಟದ ತಖ್ತೆಯಲ್ಲಿ ಆದಾಯವೆಂದು ಗುರುತಿಸಬೇಕಾಗಿತ್ತು. ಅವಶ್ಯಕ ವಿಶ್ಲೇಷಣೆ ಲಭ್ಯವಾಗದ ಕಾರಣ, ಈ ಬಗ್ಗೆ ಲೆಕ್ಕ ಪತ್ರಗಳ ಪುಸ್ತಕಗಳಲ್ಲಿ ಅದರ ಲೆಕ್ಕೀಕರಣದ ಬಗ್ಗೆ ನಾವು ಯಾವುದೇ ಅಭಿಪ್ರಾಯ ನೀಡಲು ಶಕ್ತರಲ್ಲ.

ಸಿ. ಯೋಜನೆಯ ಸ್ಥಳದಲ್ಲಿ ಉಳಿದಿರುವ ಸಾಮಗ್ರಿಗಳನ್ನು ಯೋಜನಾ ವೆಚ್ಚದಿಂದ ಕಳೆಯಲಾಗಿದೆ, ಅದಕ್ಕೆ ಸಂವಾದಿಯಾಗಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಕೊಡಬೇಕಾದ ಹೊಣೆಗಾರಿಕೆಯಿಂದ ಕಳೆಯಲಾಗುತ್ತಿದೆ, ಇದನ್ನು ಕಂಪನಿಯ ಇಂಜಿನಿಯರಿಂಗ್ ತಂಡವು ತಯಾರಿಸಿದ ಆಂತರಿಕ ದಾಖಲೆಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ. ಕಂಪನಿಯಲ್ಲಿರವು ದಾಖಲೆಗಳಿಂದ ಈ ಸಾಮಗ್ರಿಗಳನ್ನು ಸಂಬಂಧಪಟ್ಟ ಗುತ್ತಿಗೆದಾರರು ಪಡೆದಿದ್ದಾರೆಯೇ, ಸಾಮಗ್ರಿಗಳು ಎಲ್ಲಿ ಇವೆ ಮತ್ತು ಅವುಗಳ ಸ್ಥಿತಿಗತಿಗಳ ಬಗ್ಗೆ ಸ್ಪಷ್ಟತೆಯಿಲ್ಲ. ಸಾಕಷ್ಟು ಮತ್ತು ಸಮುಚಿತವಾದ ಆಡಿಟ್ ಸಾಕ್ಷ್ಯಾಧಾರಗಳ ಅನುಪಸ್ಥಿತಿಯಲ್ಲಿ, ಕಾರ್ಯ ಸ್ಥಳದಲ್ಲಿರುವ ಸಾಮಗ್ರಿಗಳ–ಸರಕಿನ ವಿವರ ಪಟ್ಟಿಯ ಮೌಲ್ಯವನ್ನು, ಗುತ್ತಗೆದಾರರಿಗೆ ಯಾವುದೇ ಅಡ್ವೈಸ್/ಮಾಹಿತಿ ನೀಡದೆ, ಸಂಬಂಧ ಪಟ್ಟ ಗುತ್ತಿಗೆದಾರರ ಖಾತೆಗೆ ಸೆಟ್ ಆಫ್ ಮಾಡಿರುವುದರ ಬಗ್ಗೆ ನಾವು ಯಾವುದೇ ಅಭಿಪ್ರಾಯ ನೀಡಲಾಗುತ್ತಿಲ್ಲ.

<u>ಸರ್ಕಾರಿ ಅನುದಾನಗಳು</u>

ಎ. ಕಂಪನಿಯ ಯೋಜನೆಗಳ ಅವಶ್ಯಕ ಷೆಡ್ಯೂಲ್‌ಗಳನ್ನು, ಪ್ರಸ್ತುತ ಸ್ಥಿತಿ, ಸರ್ಕಾರದಿಂದ ಸ್ವೀಕೃತವಾದ ಪಿ.ಎಸ್.ಡಿ.ಎಫ್. ಅನುದಾನ, ತನ್ನ ಸ್ವಂತ ಕೊಡುಗೆ, ಒಟ್ಟು ಖರ್ಚಿನಲ್ಲಿ ಅಂತಹ ಅನುದಾನಗಳ ಅನುಪಾತ ಮತ್ತು ಇತರೆ ವಿವರಣೆಗಳನ್ನು ತಯಾರಿಸಿಲ್ಲ. ಅಂತಹ ದತ್ತಾಂಶಗಳಿಲ್ಲದೇ ಇರುವಾಗ, ಟಿಪ್ಪಣಿ 18.6 ರಲ್ಲಿ ಘೋಷಿಸಿರುವಂತಹ ಅನುದಾನದ ಬಳಕೆಯ ಪಟ್ಟಿಯಲ್ಲಿನ ತಪ್ಪುಗಳು/ದೋಷ/ಸೇರಿಸದಿರುವಿಕೆಯ ಬಗ್ಗೆ ಆಕ್ಷೇಪಣೆ ಮಾಡಲಾಗುವುದಿಲ್ಲ ಮತ್ತು ಲೆಕ್ಕ ಪತ್ರಗಳ ಮೇಲೆ ಅದರ ಪರಿಣಾಮವನ್ನು ಆಕ್ಷೇಪಿಸಲಾಗುವುದಿಲ್ಲ.

ಬಿ. ಟಿಪ್ಪಣಿ 1.14 ರ ಪ್ರಕಾರ, ಆಸ್ತಿಗಳಿಗೆ ಸಂಬಂಧಿಸಿದ ಅನುದಾನವನ್ನು ಆಸ್ತಿಗಳ ನಿರೀಕ್ಷಿತ ಉಪಯುಕ್ತ ಅವಧಿಯಲ್ಲಿ ವ್ಯವಸ್ಥಿತ ಆಧಾರದ ಮೇಲೆ ಆದಾಯವೆಂದು ಗುರುತಿಸಬೇಕು. ಆದಾಗ್ಯೂ, ಬಂಡವಾಳೀಕರಣದ ಆರಂಭಿಕ ವರ್ಷದ ನಂತರ, ಭೋಗ್ಯ ಮೊತ್ತವನ್ನು ಲಾಭ ಮತ್ತು ನಷ್ಟದ ಪಟ್ಟಿಗೆ ಆದಾಯವಾಗಿ ಆಯಾ ಸ್ವತ್ತುಗಳ ಉಪಯುಕ್ತ ಅವಧಿಯ ಮೇಲೆ ನಿಖರವಾಗಿ ಲೆಕ್ಕಹಾಕಲಾಗಿಲ್ಲ ಆದರೆ ಭೋಗ್ಯಕ್ಕೆ ಏಕರೂಪದ ದರವನ್ನು ಅನ್ವಯಿಸುವ ಮೂಲಕ ಲೆಕ್ಕ ಮಾಡಲಾಗುತ್ತದೆ. ಆರ್ಥಿಕ ಲೆಕ್ಕ ಪಟ್ಟಿಗಳ ಮೇಲೆ ಅದರ ಪರಿಣಾಮವಿದ್ದರೆ ಅದನ್ನು ಕಂಡುಹಿಡಿಯಲಾಗಲಿಲ್ಲ.

ಸಿ. ಟಿಪ್ಪಣಿ 18.4 ರ ಪ್ರಕಾರ ಕಂಪನಿಯು ಪಿ.ಎಸ್.ಡಿ.ಎಫ್ (ಪವರ್ ಸಿಸ್ಟಮ್ ಡೆವೆಲಪ್ಮೆಂಟ್ ಫಂಡ್) ಮತ್ತು ಜಿ.ಇ.ಸಿ (ಗ್ರೀನ್ ಎನರ್ಜಿ ಕಾರಿಡಾರ್) ಅನುದಾನಗಳನ್ನು ರಶೀದಿ/ಪಾವತಿ ಆಧಾರದ ಮೇಲೆ ಲೆಕ್ಕೀಕರಿಸುತ್ತಿದೆ. Ind AS 20–'ಸರ್ಕಾರಿ ಅನುದಾನಕ್ಕಾಗಿ ಲೆಕ್ಕಪತ್ರ ನಿರ್ವಹಣೆ ಮತ್ತು ಸರ್ಕಾರಿ ಸಹಾಯದ ಪ್ರಕಟಗೊಳಿಸುವಿಕೆ' ಯ ಪ್ರಕಾರ, ಘಟಕವು, ಅದಕ್ಕೆ ಸಂಬಂಧಿಸಿದ ಷರತ್ತುಗಳನ್ನು ಅನುಸರಿಸುತ್ತದೆ ಮತ್ತು ಅನುದಾನವನ್ನು ಸ್ವೀಕರಿಸುತ್ತದೆ ಎಂಬ ಸಮಂಜಸವಾದ ಭರವಸೆ ಇರದೇ ಸರ್ಕಾರಿ ಅನುದಾನವನ್ನು ಗುರುತಿಸಲಾಗುವುದಿಲ್ಲ. ಆಡಳಿತವರ್ಗವು ನಿವೇದಿಸಿ / ಖಾತ್ರಿಗೊಳಿಸುವುದೇನೆಂದರೆ, ಆ ಅನುದಾನ ಬಿಡುಗಡೆ / ಪಡೆಯಲು ಬೇಕಾದ ಅವಶ್ಯಕವಾದ

ಷರತ್ತುಗಳನ್ನು ವರದಿಮಾಡುವ ದಿನಾಂಕಕ್ಕೆ ಮೊದಲೇ ನೆರವೇರಿಸಲಾಗಿದೆ ಅಥವಾ ಬಾಕಿ ಉಳಿದಿರುವ ಷರತ್ತುಗಳನ್ನು ಪೂರೈಸಲಾಗುವುದು ಮತ್ತು ಅನುದಾನವನ್ನು ಸ್ವೀಕರಿಸಲಾಗುವುದು ಎಂದು ಸಮಂಜಸವಾದ ಭರವಸೆ ನೀಡುತ್ತಿದೆ. ಮುಂದುವರೆದು, ಮೇಲೆ ತಿಳಿಸಿದ ನಿವೇದನೆ/ಧೃಡೀಕರಣಗಳ ಅನ್ವಯ, ಆಡಳಿತವು ರೂ.5,756/–ಲಕ್ಷಗಳನ್ನು ಸರ್ಕಾರದಿಂದ ಸ್ವೀಕರಿಸುವ ಅನುದಾನವೆಂದು ಗುರುತಿಸಿ ಹಾಗೂ ಕ್ರೆಡಿಟ್ ಮೂಲಕ ಮುಂದೂಡಲ್ಪಟ್ಟ ಅನುದಾನದ ಖಾತೆಗೆ ಗುರುತಿಸಿರಬೇಕು ಮತ್ತು ಅನುದಾನಗಳು ಉದ್ದೇಶಿಸಿರುವ ಸಂಬಂಧಿತ ವೆಚ್ಚಗಳನ್ನು, ವೆಚ್ಚಗಳೆಂದು ಗುರುತಿಸುವ ಅವಧಿಗಳಲ್ಲಿ, ವ್ಯವಸ್ಥಿತ ಆಧಾರದ ಮೇಲೆ ಲಾಭ ಮತ್ತು ನಷ್ಟ ಖಾತೆಗೆ ಹಿಂತೆಗೆದುಕೊಳ್ಳಬೇಕಾಗಿತ್ತು. ಅದರಂತೆ, ರೂ 5,756/–ಲಕ್ಷಗಳನ್ನು ಸರ್ಕಾರದಿಂದ ಪಡೆಯಬಹುದಾದ ಅನುದಾನಗಳು (ಇತರ ಪ್ರಸ್ತುತ ಹಣಕಾಸು ಆಸ್ತಿಗಳು) ಮತ್ತು ಮುಂದೂಡಲ್ಪಟ್ಟ ಅನುದಾನಗಳಲ್ಲಿ (ಇತರ ಚಾಲ್ತಿಯಲ್ಲದ ಹೊಣೆಗಾರಿಕೆಗಳು) ಅದೇ ಮೊತ್ತವನ್ನು ಕಡಿಮೆ ಗೊಳಿಸಿ ಪ್ರಕಟಿಸಲಾಗಿದೆ.

**ಗೇಣಿಗಳು**

ಎ ಕಂಪನಿಯು Ind AS 116–'ಗೇಣಿಗಳು' ರನ್ವಯ ಗೇಣಿದಾರರಾಗಿ ಗೇಣಿ ಕರಾರುಗಳನ್ನು ಮಾಡಿಕೊಂಡಿರುವುದಿಲ್ಲ ಮತ್ತು ಅದರ ಪರಿಣಾಮವಾದ ಗುರತಿಸುವಿಕೆ, ಪ್ರಸ್ತುತಿ, ಅಳತೆ ಮತ್ತು ಪ್ರಕಟಣೆಯ ತತ್ವಗಳನ್ನು ಅಳವಡಿಸಿಕೊಂಡಿಲ್ಲ ಇದು ಟಿಪ್ಪಣಿ 1.3 ರಲ್ಲಿ ಅನುಸರಿಸಿರುವ ಲೆಕ್ಕಪತ್ರ ನೀತಿಗೆ ವ್ಯತಿರಿಕ್ತವಾಗಿದೆ.

ಬಿ. ಅಗತ್ಯವಿರುವ ಗೇಣಿ ಒಪ್ಪಂದಗಳು/ದಾಖಲೆಗಳ ಅನುಪಸ್ಥಿತಿಯಲ್ಲಿ, ಕೆಲವು ವ್ಯಕ್ತಿಗಳಿಗೆ ಗೇಣಿ ಆಧಾರದ ಮೇಲೆ ನೀಡಿರುವ ಭೂಮಿಗೆ ಸಂಬಂಧಿಸಿದಂತೆ ಬಾಡಿಗೆ ಆದಾಯವನ್ನು ಕಂಪನಿಯು ಗುರುತಿಸಿಲ್ಲ. ಈ ರೀತಿ ಬಾಕಿಯಿರುವ ಪ್ರಕರಣಗಳ ಪೂರ್ಣ ಪಟ್ಟಿಯನ್ನು ಕಂಪನಿ ನೀಡಿಲ್ಲ. ಆದ್ದರಿಂದ ಲೆಕ್ಕಪತ್ರಗಳ ಮೇಲೆ ಅದರ ಪರಿಣಾಮವನ್ನು ನಿರ್ಧರಿಸಲು ಸಾಧ್ಯವಾಗಿಲ್ಲ.

**ಆರ್ಥಿಕ ಆಸ್ತಿಗಳು**

**ವ್ಯವಹಾರ ಮತ್ತು ಇತರೆ ಸ್ವೀಕೃತಿಗಳು**

ಎ. ಕಂಪನಿಯು ನಿರ್ದಿಷ್ಟ ಬಿಲ್‌ಗಳ ವಿರುದ್ಧ ಸ್ವೀಕರಿಸಿದ ಪಾವತಿಗಳನ್ನು ಅಂಗೀಕರಿಸುವ ವ್ಯವಸ್ಥೆಯನ್ನು ಹೊಂದಿಲ್ಲ ಹಾಗೂ ಬಿಲ್‌ಗಳನ್ನು ನೀಡಿದ ಮತ್ತು ಸ್ವೀಕರಿಸಿದ ಪಾವತಿಗಳಿಗೆ ಸಂಬಂಧಿಸಿದ ಚಾಲ್ತಿಯಲ್ಲಿರುವ ಖಾತೆಯನ್ನು ಮಾತ್ರ ನಿರ್ವಹಿಸುತ್ತದೆ. ಅದರ ಪರಿಣಾಮವಾಗಿ, ಟಿಪ್ಪಣಿ 7.1 ರಲ್ಲಿ ನಮೂದಿಸಿರುವ ಇತರ ಸಾಲಗಳು ಹಾಗೂ ಆರು ತಿಂಗಳ ಅವಧಿಗೆ ಬಾಕಿ ಇರುವ ಸ್ವೀಕೃತಿಗಳ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗುತ್ತಿಲ್ಲ. ಕಂಪನಿಯು, ವ್ಯವಹಾರ ಮತ್ತು ಇತರೆ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ, ಲೆಕ್ಕಪತ್ರಗಳ ತಖ್ತೆ / ಲೆಕ್ಕ ಪುಸ್ತಕಗಳೊಡನೆ ಸಮನ್ವಯ/ಶಿಲ್ಕುಗಳ ದೃಢೀಕರಣವನ್ನು ಪಡೆದಿರುವುದಿಲ್ಲ. ಇದರಿಂದಾಗಿ, ವಿಳಂಬವಾಗಿ ಪಾವತಿಸುವ ಮೊತ್ತಕ್ಕೆ ಯಾವುದೇ ಸರ್‌ಚಾರ್ಜನ್ನು ಅಥವಾ ಸಕಾಲಿಕ ಪಾವತಿಗಳಿಗೆ ನೀಡಬೇಕಾಗಿರುವ ರಿಯಾಯಿತಿಯನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ (ಟಿಪ್ಪಣಿ 7 & 11 ನ್ನು ಗಮನಿಸಿ).

ಬಿ. ಟಿಪ್ಪಣಿ 1.22ಗೆ ಸಂಬಂಧಿಸಿದಂತೆ, ಕಂಪನಿಯು Ind AS 109 'ಹಣಕಾಸು ಉಪಕರಣಗಳು' ರಲ್ಲಿ ತಿಳಿಸಿರುವ ಕ್ರೆಡಿಟ್ ಲಾಸ್ ಮಾಡೆಲ್ ರಡಿಯಲ್ಲಿರುವ ಆರ್ಥಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ದುರ್ಬಲತೆಯ ಪರೀಕ್ಷೆಯ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಆರ್ಥಿಕ ಲೆಕ್ಕ ಪತ್ರಗಳ ಮೇಲಿನ ಪರಿಣಾಮವನ್ನು ಕಂಡುಹಿಡಿಯಲಾಗಲಿಲ್ಲ.

**ಠೇವಣಿಗಳು, ಸಾಲಗಳು ಮತ್ತು ಮುಂಗಡಗಳು**

ಎ. ಸ್ವೀಕೃತಿಗಳಿಗೆ ಸಂಬಂಧಿಸಿದಂತೆ, ಠೇವಣಿಗಳು, ಸಾಲಗಳು ಮತ್ತು ಮುಂಗಡಗಳ ರೂಪದಲ್ಲಿ ಟಿಪ್ಪಣಿ 4ರ ಕ್ರಮ ಸಂಖ್ಯೆ 1, ಟಿಪ್ಪಣಿ 4ಎ ಇದರ ಕ್ರಮ ಸಂಖ್ಯೆ 1, 5 ರಿಂದ 7 ಮತ್ತು ಟಿಪ್ಪಣಿ ಸಂಖ್ಯೆ 5ರ ಕ್ರಮ ಸಂಖ್ಯೆ 4ರಲ್ಲಿ ವರದಿಮಾಡಿರುವ ಮೊತ್ತಗಳ; ಸ್ಥಿತಿಗತಿಗಳ ಪೂರ್ಣ ವಿವರಗಳು, ಅವುಗಳ ವಯೋಮಾನ, ಬಾಕಿ

ಉಳಿದುಕೊಳ್ಳಲು ಕಾರಣಗಳು, ದೃಢೀಕರಣ/ ಲೆಕ್ಕ ಪುಸ್ತಕಗಳೊಡನೆ ಸಮನ್ವಯ/ ಲೆಕ್ಕಪತ್ರಗಳ ತಖ್ತೆಗಳನ್ನು ನಮಗೆ ಹಾಜರು ಪಡಿಸಲಿಲ್ಲ. ಈ ಪರಿಣಾಮವಾಗಿ, ಅಗತ್ಯವಾದ ವಿವರಗಳ ಅನುಪಸ್ಥಿತಿಯಲ್ಲಿ, ಆ ಮೊತ್ತಗಳ ವಸೂಲಾತಿಯ ಸಾಧ್ಯತೆ ಮತ್ತು ಲೆಕ್ಕ ಪುಸ್ತಕಗಳಲ್ಲಿ ಮಾಡಬೇಕಾದ ಹೆಚ್ಚಿನ ಹವಣಿಕೆಗಳು, ಯಾವುದಾದರೂ ಇದ್ದರೆ, ಇದನ್ನು ನಿರ್ಣಯಿಸುವ ಸ್ಥಿತಿಯಲ್ಲಿ ನಾವು ಇಲ್ಲ.

ಬಿ. ಟಿಪ್ಪಣಿ 4.1 ರಲ್ಲಿ ವಿವರಿಸಿದಂತೆ, ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (PGCIL) ನವೆಂಬರ್ 8, 2019 ರ CERC ಆದೇಶದನ್ವಯ(ಅರ್ಜಿ ಸಂಖ್ಯೆ. 361/TT/2018), ಏಪ್ರಿಲ್ 2018 ರಿಂದ ಮಾರ್ಚ್ 2020 ರವರೆಗಿನ ಅವಧಿಗೆ ಒಟ್ಟು ರೂ.33,99,69,697/– ಮೊತ್ತವನ್ನು ಬೇಡಿಕೆ ಇಟ್ಟಿದೆ. ಕಂಪನಿಯು ಸಿ.ಇ.ಆರ್.ಸಿ ಯಲ್ಲಿ ತಡೆಯಾಜ್ಞೆಗಾಗಿ, ತನ್ನ ಹಿಂದಿನ ಆಜ್ಞೆಯನ್ನು ಪುನರ್ವಿಮರ್ಶಿಸಲು ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿದೆ, ಮತ್ತು ಸಿ.ಇ.ಆರ್.ಸಿ ತೀರ್ಮಾನವನ್ನು ಬದಿಗಿಟ್ಟು, ತನ್ನ ವಿರೋಧ ವ್ಯಕ್ತಪಡಿಸಿವ ಬಾಕಿ ತಗಾದೆ ಮೊತ್ತವನ್ನು (ಪಿ.ಜಿ.ಸಿ.ಐ.ಎಲ್) ಗೆ ಪಾವತಿಸಲು ನಿರ್ಧರಿಸಿದೆ. ಸಿ.ಇ.ಅರ್.ಸಿ ಇನ್ನೂ ಈ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಾಗಿದೆ. ಸಿ.ಇ.ಆರ್.ಸಿ. ಕಂಪನಿಯ ಪರವಾಗಿ ಅರ್ಜಿಯನ್ನು ಇತ್ಯರ್ಥ ಮಾಡಬಹುದಾಗಿದೆ ಎಂಬ ಕಾನೂನಾತ್ಮಕ ಅಭಿಪ್ರಾಯದ ಅನುಪಸ್ಥಿತಿಯಲ್ಲಿ, ಈ ಮೊತ್ತವನ್ನು ವಸೂಲು ಮಾಡುವುದರ ಬಗ್ಗೆ ನಾವು ಸೂಕ್ತ ಆಡಿಟ್ ಸಾಕ್ಷ್ಯಾಧಾರಗಳನ್ನು ಪಡೆದುಕೊಂಡಿಲ್ಲ, ಮತ್ತು ಕಂಪನಿಯು ಆ ಮೊತ್ತವನ್ನು ಆಸ್ತಿಯನ್ನಾಗಿ ಲೆಕ್ಕ ಪತ್ರಗಳಲ್ಲಿ ಅನುಸರಿಸಿರುವ ಲೆಕ್ಕ ವಿಧಾನವನ್ನು ಸಮರ್ಥಿಸಲು ಸಾಧ್ಯವಾಗುತ್ತಿಲ್ಲ.

<u>ಇತರ ಪ್ರಸಕ್ತವಲ್ಲದ ಆಸ್ತಿಗಳು ಮತ್ತು ಪ್ರಸಕ್ತ ಆಸ್ತಿಗಳು</u>

ಎ. ವರದಿಯ ದಿನಾಂಕದಂದು ಮಂಜೂರಾತಿ ಮಾಡದ ಯೋಜನೆಗಳ ಸಮೀಕ್ಷೆ/ಕಾರ್ಯಸಾಧ್ಯತೆಯ ಅಧ್ಯಯನಗಳ ಮೇಲಿನ ಪ್ರಾರಂಭಿಕ ವೆಚ್ಚಗಳನ್ನು ಟಿಪ್ಪಣಿ ಸಂಖ್ಯೆ 5ರ ಕ್ರಮ ಸಂಖ್ಯೆ 1 ರಲ್ಲಿ 'ಇತರ ಪ್ರಸಕ್ತವಲ್ಲದ ಆಸ್ತಿಗಳು' ಎಂದು ಗುರುತಿಸಲ್ಪಟ್ಟಿರುವುದು, ಅದರ ಆರಂಭಿಕ ಗುರುತಿಸುವಿಕೆಯ ಹಂತದಲ್ಲಿ, ಆಸ್ತಿಯಾಗಿ ಗುರುತಿಸುವ ಷರತ್ತುಗಳನ್ನು ಪೂರೈಸುವುದಿಲ್ಲ ಹೀಗಾಗಿ ಈ ವೆಚ್ಚಗಳನ್ನು ಲಾಭ ಮತ್ತು ನಷ್ಟ ಅಥವಾ ಇಕ್ವಿಟಿಯ ಪಟ್ಟಿಯಲ್ಲಿ (ಸಂದರ್ಭದ ಅನುಸಾರ) ತೊಡೆದುಹಾಕಬೇಕಿತ್ತು. ಒಂದು ವೆಚ್ಚವನ್ನು ಸಂಸ್ಥೆಯು ನಿಯಂತ್ರಿಸಲ್ಪಡುವ ಪ್ರಸ್ತುತ ಆರ್ಥಿಕ ಸಂಪನ್ಮೂಲವಾಗಿ ಮತ್ತು ಆರ್ಥಿಕ ಪ್ರಯೋಜನಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದುವ ವರೆಗೆ 'ಆಸ್ತಿ' ಎಂದು ಪರಿಗಣಿಸಲಾಗುವುದಿಲ್ಲ. ಈ ಮೊತ್ತವನ್ನು ಆಸ್ತಿಯೆಂದು ಗುರುತಿಸಲು ಅದರ ಸಂಭಾವ್ಯ ಲಾಭ ತರುವಿಕೆಯನ್ನು ಪ್ರದರ್ಶನ ಮಾಡಿಲ್ಲ.

ಬಿ. ಮಾರ್ಚ್ 31, 2021 ರ ಅಂತ್ಯಕ್ಕೆ ಇರುವ ಅಂತರ–ಘಟಕ ಲೆಕ್ಕಗಳ ಹೊಂದಾಣಿಕೆಯಾಗದ ನಮೂದುಗಳಾದ, ರೂ.51.83 ಲಕ್ಷಗಳ ನಿವ್ವಳ ಹೊಂದಾಣಿಕೆ ಮಾಡದ ಡೆಬಿಟ್ ಬ್ಯಾಲೆನ್ಸ್ ಮತ್ತು ರೂ.3,700.44 ಲಕ್ಷಗಳ ನಿವ್ವಳ ಹೊಂದಾಣಿಕೆ ಮಾಡದ ಕ್ರೆಡಿಟ್ ಮೊತ್ತಗಳು, ಇವುಗಳನ್ನು 'ಇತರ ಚಾಲ್ತಿ ಆಸ್ತಿಗಳು' ಮತ್ತು ಇತರ ಚಾಲ್ತಿ ಹೊಣೆಗಾರಿಕೆಗಳು' ಎಂದು ಟಿಪ್ಪಣಿ 12 ಮತ್ತು 22 ರಲ್ಲಿ ಅನುಕ್ರಮವಾಗಿ ಲೆಕ್ಕಪ್ರಗಳಲ್ಲಿ ತೆಗೆದುಕೊಳ್ಳಲಾಗಿದೆ. ಲೆಕ್ಕಪತ್ರಗಳ ಮೇಲೆ ಈ ಹೊಂದಾಣಿಕೆಯಾಗದ ನಮೂದುಗಳ ಪರಿಣಾಮವನ್ನು ನಿರ್ಣಯಿಸಲು ನಮಗೆ ಸಾಧ್ಯವಾಗುತ್ತಿಲ್ಲ.

<u>ದಾಸ್ತಾನುಗಳು</u>

ಟಿಪ್ಪಣಿ 6 ರ ಕ್ರಮ ಸಂಖ್ಯೆ 1 ರಲ್ಲಿರುವ ರೂ.1,422.89 ಲಕ್ಷಗಳ ರದ್ದಿಗೊಳಿಸಿದ ಮತ್ತು ಬಳಕೆಯಲ್ಲಿಲ್ಲದ ಆಸ್ತಿಗಳನ್ನು ಪುಸ್ತಕ ಮೌಲ್ಯದೊಂದಿಗೆ ದಾಸ್ತಾನಿನಲ್ಲಿ ಸೇರಿಸಿ 'ಮಾರಾಟಕ್ಕಿರುವ ಪ್ರಸಕ್ತವಲ್ಲದ ಆಸ್ತಿಗಳು' ಎಂದು ಬಹಿರಂಗಪಡಿಸಿದೆ ಮತ್ತು Ind AS 105 'ಮಾರಾಟಕ್ಕಿರುವ ಪ್ರಸಕ್ತವಲ್ಲದ ಆಸ್ತಿಗಳು' ಪ್ರಕಾರ, ಮಾರಾಟ/ವಿತರಣೆ ವೆಚ್ಚವನ್ನು ಕಡಿಮೆಗೊಳಿಸಿದ ನ್ಯಾಯೋಚಿತ ಮೌಲ್ಯವನ್ನು ನಿರ್ಣಯಿಸದೆ ವರ್ಗಾವಣೆಯ ಸಮಯದಲ್ಲಿ ಸಂಬಂಧಿಸಿದ ಆಸ್ತಿಯ ಲಿಖಿತ ಮೌಲ್ಯದಲ್ಲಿ ಗುರುತಿಸಲಾಗಿದೆ. ಟಿಪ್ಪಣಿ 1.4ರ ಅನುಗುಣವಾಗಿ, ರದ್ದಿ ಅನುಮೋದನಾ ಸಮಿತಿಯಿಂದ ರದ್ದಿ/ಬಳಕೆಯಲ್ಲಿಲ್ಲದ ಆಸ್ತಿ ಎಂದು ಗುರುತಿಸಲಾದ ವಸ್ತುಗಳ ಮೌಲ್ಯವನ್ನು ದರಗಳ ಪಟ್ಟಿಯ ಪ್ರಕಾರ ನಿವ್ವಳ ವಾಸ್ತವಿಕ ಮೌಲ್ಯದಲ್ಲಿ ('ಎನ್.ಆರ್.ವಿ') ಗುರುತಿಸಬೇಕು ಮತ್ತು ಅದರ ಅನುಪಸ್ಥಿತಿಯಲ್ಲಿ, ಆ ಆಸ್ತಿಗಳ ಮೌಲ್ಯದ 10% ರಷ್ಟು ಮೌಲ್ಯವನ್ನು ಹೊಂದಿರಬೇಕು.

ಪೂರ್ಣ ವಿವರಗಳ ಅನುಪಸ್ಥಿತಿಯಲ್ಲಿ, ನಾವು ಇವುಗಳ ನೈಜತೆಯನ್ನು ನಿರ್ಣಯಿಸಲು ಮತ್ತು Ind AS 105 ಲೆಕ್ಕಪತ್ರ ನೀತಿಯ ಅನುಸರಣೆಯನ್ನು ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಲೆಕ್ಕ ಪತ್ರಗಳ ಮೇಲಿನ ಪ್ರಭಾವವನ್ನು ಕಂಡು ಹಿಡಿಯಲಾಗಲಿಲ್ಲ.

**ಆರ್ಥಿಕ ಮತ್ತು ಇತರ ಹೊಣೆಗಾರಿಕೆಗಳು**

ಎ. ಟಿಪ್ಪಣಿ 15ರ ಕ್ರಮ ಸಂಖ್ಯೆ II, ಟಿಪ್ಪಣಿ 15ಎ– II ಇತರೆ–ಕ್ರಮ ಸಂಖ್ಯೆ 1 ಮತ್ತು 2, ಟಿಪ್ಪಣಿ 20, ಟಿಪ್ಪಣಿ 21 ರ ಕ್ರಮ ಸಂಖ್ಯೆ III ಮತ್ತು IV, ಟಿಪ್ಪಣಿ 22 ಕ್ರಮ ಸಂಖ್ಯೆ 4 ರಿಂದ 7 ಮತ್ತು ಟಿಪ್ಪಣಿ 23 ಕ್ರಮ ಸಂಖ್ಯೆ II(1) ಗಳಲ್ಲಿ ವರದಿ ಮಾಡಲಾದ ಕೆಲವು ಪ್ರಸಕ್ತ/ಪ್ರಸಕ್ತವಲ್ಲದ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ, ಇದರ ಸಂಪೂರ್ಣ ವಿವರಗಳು ಮತ್ತು ಪಾವತಿಸಬೇಕಾದ ಪ್ರತಿ ಮೊತ್ತಕ್ಕೆ ವಯೋಮಾನದ ವಿವರಗಳು, ಬಾಕಿ ಉಳಿಯಲು ಕಾರಣಗಳು, ಸಂಸ್ಥೆ/ವ್ಯಕ್ತಿಗಳು ಅವರಿಗೆ ಸಂಬಂಧಿಸಿದ ಮೊತ್ತಗಳನ್ನು ಹಿಂಪಡೆಯದಿರಲು ಕಾರಣಗಳು, ಖಾತೆಯ/ಸಮನ್ವಯದ ದೃಢೀಕರಣ/ಪಟ್ಟಿಗಳು, ಪರಿಶೋಧನೆಗಾಗಿ ನಮಗೆ ಲಭ್ಯವಾಗಲಿಲ್ಲ. ಹಾಗಾಗಿ ಲೆಕ್ಕ ಪತ್ರಗಳ ಮೇಲೆ ಇವುಗಳ ಪ್ರಭಾವವನ್ನು ಕಂಡುಹಿಡಿಯಲಾಗಲಿಲ್ಲ.

**ಬಿ. Ind AS ಪ್ರಕಾರ ವಾಸ್ತವಿಕ ಮೌಲ್ಯಮಾಪನ**

ಭೋಗ್ಯ ವೆಚ್ಚಗಳನ್ನು ನಿರ್ಧರಿಸುವ ಮತ್ತು ಪಾವತಿಸಬೇಕಾದ/ಸ್ವೀಕರಿಸಬಹುದಾದ ಮೊತ್ತಗಳ ಭೋಗ್ಯ ವೆಚ್ಚ ಮತ್ತು ಒಪ್ಪಂದದ ಮೊತ್ತಗಳ ನಡುವಿನ ವ್ಯತ್ಯಾಸದ ಆದಾಯದ ಭೋಗ್ಯ/ಗುರುತಿಸುವ ಉದ್ದೇಶಗಳಿಗಾಗಿ, ಆರಂಭಿಕ ಗುರುತಿಸುವಿಕೆಯ ದಿನಾಂಕದಿಂದ 12 ತಿಂಗಳ ಅವಧಿಯನ್ನು ಮೀರಿ ಸ್ವೀಕರಿಸಬಹುದಾದ/ಪಾವತಿಸಬಹುದಾದ ಎಲ್ಲಾ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಉದಾಹರಣೆಗಳು: ಕೆಲವು ಉದ್ಯೋಗಿ ಸ್ವೀಕೃತಿಗಳು, ಪಾವತಿಸಬೇಕಾದ ಧಾರಣ ಮೊತ್ತ, ಸ್ವೀಕರಿಸಲಾದ/ಪಾವತಿಸಲಾದ ಭದ್ರತಾ ಠೇವಣಿಗಳು, ಇತ್ಯಾದಿ) ಇವುಗಳನ್ನು ಕಂಪನಿಯು Ind AS 109 'ಹಣಕಾಸು ಉಪಕರಣಗಳ' ನಿಯಮಗಳಲ್ಲಿ ಅಗತ್ಯವಿರುವಂತೆ ಕಂಪನಿಯು ಯಾವುದೇ ವಾಸ್ತವಿಕ ಮೌಲ್ಯಮಾಪನವನ್ನು ಮಾಡಿಸಿಲ್ಲ. ಲೆಕ್ಕ ಪತ್ರಗಳ ಮೇಲೆ ಇವುಗಳ ಪ್ರಭಾವವನ್ನು ಕಂಡುಹಿಡಿಯಲಾಗಲಿಲ್ಲ.

**ಸಿಬ್ಬಂದಿ ಸೌಲಭ್ಯಗಳು:**

**ಎ. ಕವಿಪ್ರನಿನಿ ಮತ್ತು ವಿಸಕಂ ಗಳ ನಿವೃತ್ತಿ ಮತ್ತು ಉಪದಾನ ಟ್ರಸ್ಟ್('ಕೆ.ಇ.ಪಿ.ಜಿ.ಟಿ'):**

i) ಟಿಪ್ಪಣಿ 1.15 (ಬಿ)(ii) ಮತ್ತು ಟಿಪ್ಪಣಿ 23.2 ರಲ್ಲಿ ವಿವರಿಸಿದಂತೆ, ಕಂಪನಿಯು ಮಾರ್ಚ್ 31, 2006 ರಂದು ಅಥವಾ ಮೊದಲು ಸೇರಿಕೊಂಡ ತನ್ನ ಉದ್ಯೋಗಿಗಳ ಪಿಂಚಣಿ ಮತ್ತು ಉಪದಾನದ ಹೊಣೆಗಾರಿಕೆಗೆ, ವಿಸಕಂಗಳು ಮತ್ತು ಪವರ್ ಕಾರ್ಪೊರೇಶನ್ ಆಫ್ ಕರ್ನಾಟಕ ಲಿಮಿಟೆಡ್ (ಪಿ.ಸಿ.ಕೆ.ಎಲ್) ಸೇರಿಸಿಕೊಂಡು, ಕೆ.ಇ.ಪಿ.ಜಿ.ಟಿ. ಕೊಡುಗೆ ನೀಡುತ್ತದೆ. ಎಲ್ಲಾ ಕಂಪನಿಗಳ (ಕವಿಪ್ರನಿನಿ/ವಿಸಕಂ/ಪಿಸಿಕೆಎಲ್) ಉದ್ಯೋಗಿಗಳನ್ನು ಒಂದು ಕಂಪನಿಯಿಂದ ಇನ್ನೊಂದಕ್ಕೆ ವರ್ಗಾಯಿಸಬಹುದು ಅಥವಾ ನಿಯೋಜಿಸಬಹುದು, ಮತ್ತು ಈ ಎಲ್ಲಾ ಕಂಪನಿಗಳಲ್ಲಿನ ಅವರ ಒಟ್ಟು ಸೇವೆಯ ಅವಧಿಯನ್ನು ಅವರ ಅರ್ಹತೆಯ ಸೇವಾವಧಿ ಎಂದು ಪರಿಗಣಿಸಲಾಗುತ್ತದೆ, ಆದ್ದರಿಂದ ಅದರ ಅನುಗುಣವಾದ ಸೌಲಭ್ಯಗಳನ್ನು ಪಡೆಯಲು ಸಿಬ್ಬಂದಿಗಳು ಅರ್ಹರಿರುತ್ತಾರೆ. ಟ್ರಸ್ಟ್‌ನ ನಿಧಿಗಳನ್ನು ಕೂಡಾ ಒಂದು ಕೂಡು ನಿಧಿಯಂತೆ ಪರಿಗಣಿಸಲಾಗುತ್ತದೆ.

ii) ಕೆ.ಇ.ಪಿ.ಜಿ.ಟಿಯು, 31 ನೇ ಮಾರ್ಚ್ 2020 ರ ಅಂತ್ಯಕ್ಕೆ ಕಂಪನಿ, ವಿಸಕಂ ಮತ್ತು ಪಿ.ಸಿ.ಕೆ.ಎಲ್‌ಗಳ ಒಟ್ಟು ಹೊಣೆಗಾರಿಕೆಯ ವಾಸ್ತವಿಕ ಮೌಲ್ಯಮಾಪನವನ್ನು ಕೈಗೊಂಡಿದೆ ಮತ್ತು ಒಟ್ಟು ಅರ್ಹ ವೇತನದ 64% (ಪಿಂಚಣಿಗಾಗಿ) ಮತ್ತು 6.05% (ಗ್ರಾಚ್ಯುಟಿಗಾಗಿ) ಪ್ರತಿಯೊಂದು ಕಂಪನಿಯಿಂದ ಕೊಡುಗೆ ನೀಡಬೇಕೆಂದು ನಿರ್ಧರಿಸಲಾಗಿದೆ ಎಂದು ನಮಗೆ ತಿಳಿದು ಬಂದಿದೆ. ಮೇ 31, 2002 ರಂದು ಅಥವಾ ಮೊದಲು ಸೇವೆಗೆ ಸೇರಿದಂತಹ ಸಿಬ್ಬಂದಿಗಳ ಹೊಣೆಗಾರಿಕೆಯನ್ನು GoK ಭರಿಸುತ್ತದೆ ಮತ್ತು ವಾರ್ಷಿಕವಾಗಿ ಕೊಡಬೇಕಾದ ಕಂಪನಿಯ

ಹೊಣೆಗಾರಿಕೆಯ ಕೊಡುಗೆಯನ್ನು ನಿರ್ಧರಿಸುವಾಗ ಅಂತಹ ಹೊಣೆಗಾರಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿಲ್ಲ ಎಂದು ವ್ಯವಸ್ಥಾಪಕ ವರ್ಗ ನಮಗೆ ತಿಳಿಸಿದೆ. ಕಂಪನಿಯು ಮಾರ್ಚ್ 31, 2019 ರ ವಾಸ್ತವಿಕ ಮೌಲ್ಯಮಾಪನದ ಆಧಾರದ ಮೇಲೆ ಆರ್ಥಿಕ ವರ್ಷ 2019–20 ರ ವ್ಯತ್ಯಾಸದ ವಂತಿಗೆಯ ಜೊತೆಗೆ ಮೇಲೆ ವಿವರಿಸಿದಂತಹ ಕೊಡುಗೆಯನ್ನು ಆ ವರ್ಷದಲ್ಲಿ ಟ್ರಸ್ಟ್‌ಗೆ ನೀಡಿದೆ. ಸೆಪ್ಟೆಂಬರ್ 16, 2016 ರ ಪತ್ರದಲ್ಲಿ GoK, ಒಂದು ಬಾರಿಯ ಕ್ರಮವಾಗಿ, ಆರ್ಥಿಕ ವರ್ಷ 2015–16 ರ ಕಂಪನಿಯ ಸ್ವಂತ ವಂತಿಗೆಗೆ ಹೆಚ್ಚುವರಿಯಾಗಿ GoK ಕೊಡುಗೆಯನ್ನು ಗುರುತಿಸಲು ಮತ್ತು ಆ ವಂತಿಗೆಯನ್ನು ಟ್ರಸ್ಟ್‌ಗೆ ನೀಡಲು ಸಲಹೆ ನೀಡಿತ್ತು. ಈ ನಿಟ್ಟಿನಲ್ಲಿ ಒಟ್ಟು ರೂ.52,779/– ಲಕ್ಷಗಳನ್ನು ಪಾವತಿಸಬೇಕಾದ ಮೊತ್ತ ಎಂದು ಗುರುತಿಸಲಾಗಿದೆ. ಕಂಪನಿ ನೀಡಬೇಕಾದ ಹೊಣೆಗಾರಿಕೆಯನ್ನು ಲೆಕ್ಕಾಚಾರ ಮಾಡುವಾಗ, ಮೌಲ್ಯಮಾಪಕರು, ಅಂತಹ ಕೊರತೆಯನ್ನು ಗಣನೆಗೆ ತೆಗೆದುಕೊಂಡಿದ್ದಾರೆ ಎಂದು ನಾವು ಅರ್ಥಮಾಡಿಕೊಂಡಿದ್ದೇವೆ.

iii) ಕಂಪನಿಯು, ಟಿಪ್ಪಣಿ 1.15 (ಬಿ) (ii) ರಲ್ಲಿ ಅಂತಹ ಯೋಜನೆಯ್ನು 'ಡೀಫೈನ್ಡ್ ಕಾನ್ಟ್ರಿಬ್ಯೂಷನ್ ಪ್ಲಾನ್ (ಡಿ.ಸಿ.ಪಿ)' ಎಂದು ವಿವರಿಸಿದೆ, ಅದರಿಂದಾಗಿ ಕಂಪನಿಯ ಹೊಣೆಗಾರಿಕೆಯನ್ನು ತನ್ನ ವಾರ್ಷಿಕ ಕೊಡುಗೆಗಳಿಗೆ ಸೀಮಿತಗೊಳಿಸುತ್ತದೆ. ಆದಾಗ್ಯೂ, ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಿದ ವಂತಿಗೆಯು, 'ಡೀಫೈನ್ಡ್ ಬೆನೆಫಿಟ್ ಪ್ಲಾನ್ (ಡಿ.ಬಿ.ಪಿ)' ರೀತಿಯಲ್ಲಿದೆ, ಮತ್ತು ಕಂಪನಿಯು, ಯೋಜನೆಯ ಮತ್ತು ಅದರ ಮೇಲೆ ಗಳಿಸಿದ ಕೊಡುಗೆ/ಆದಾಯಗಳ ಆಧಾರದ ಮೇಲೆ ನಿಜವಾದ ಪಾವತಿಗಳ ನಡುವೆ ಬರುವ ಯಾವುದೇ ಕೊರತೆಗಳನ್ನು ಭರಿಸಬೇಕಾಗಿರುತ್ತದೆ.

iv) ಡಿ.ಬಿ.ಪಿ ಆಧಾರದ ಮೇಲೆ ಮಾರ್ಚ್ 31, 2021 ರಂತೆ ವಾಸ್ತವಿಕ ಮೌಲ್ಯಮಾಪನ ವರದಿಯ ಅನುಪಸ್ಥಿತಿಯಲ್ಲಿ ಮತ್ತು ಒಟ್ಟು ವಾಸ್ತವಿಕ ಮೌಲ್ಯಮಾಪನ ಹೊಣೆಗಾರಿಕೆಯಲ್ಲಿ ಕಂಪನಿಯ ಪಾಲಿನ ಮೊತ್ತದ ವಿಂಗಡಣೆಯ ಮಾಹಿತಿ ಇಲ್ಲದಿರುವುದರಿಂದ, ಲಾಭ ಅಥವಾ ನಷ್ಟದ ಪಟ್ಟಿಯಲ್ಲಿ Ind AS 19–'ಉದ್ಯೋಗಿ ಪ್ರಯೋಜನಗಳು' ಪ್ರಕಾರ ಗುರುತಿಸಲಾಗಿದೆಯೇ ಎಂಬುದರ ಬಗ್ಗೆ ಅಭಿಪ್ರಾಯ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ.

**ಬಿ. ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ (NDCPS) ಅಡಿಯಲ್ಲಿ ಒಳಗೊಂಡಿರುವ ಸಿಬ್ಬಂದಿಗಳಿಗೆ ಸಂಬಂಧಿಸಿದ ಪಿಂಚಣಿ ಮತ್ತು ಉಪದಾನ:**

i. ಟಿಪ್ಪಣಿ 23.4 ಕ್ಕೆ ಗಮನವನ್ನು ಉಲ್ಲೇಖಿಸಿದೆ, ಇದರಲ್ಲಿ ಮಾರ್ಚ್ 31, 2021 ರಂತೆ ಪ್ರೊಜೆಕ್ಟೆಡ್ ಯೂನಿಟ್ ಕ್ರೆಡಿಟ್ ವಿಧಾನವನ್ನು ಬಳಸಿಕೊಂಡು ಎಲ್.ಐ.ಸಿ ಒದಗಿಸಿದ ಮೌಲ್ಯಮಾಪನದ ಆಧಾರದ ಮೇಲೆ ಎನ್.ಡಿ.ಸಿ.ಪಿ.ಎಸ್ ಯೋಜನೆಯ ಅಡಿಯಲ್ಲಿ ಬರುವ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ, ಕಂಪನಿಯು ರೂ.17,831.26 ಲಕ್ಷಗಳನ್ನು ಸಂಚಿತ ಉಪದಾನ ಹೊಣೆಗಾರಿಕೆಯನ್ನಾಗಿ ಲೆಕ್ಕೀಕರಿಸಿದೆ. ಆದಾಗ್ಯೂ, ಪ್ರಸ್ತುತ ಸೇವಾ ವೆಚ್ಚಗಳು, ಒಟ್ಟು ಹೊಣೆಗಾರಿಕೆ ಮತ್ತು ಯೋಜನಾ ಸ್ವತ್ತುಗಳ ನ್ಯಾಯಯುತ ಮೌಲ್ಯ ಮತ್ತು ಅವುಗಳ ಸಂಯೋಜನೆಯ ವಿಂಗಡಣೆಯ ಮಾಹಿತಿಯನ್ನು ಎಲ್.ಐ.ಸಿ ಅವರ ಮೌಲ್ಯಮಾಪನ ವರದಿಯಲ್ಲಿ ಒದಗಿಸಿಲ್ಲ. ಮುಂದುವರೆದು, Ind AS 19 'ಸಿಬ್ಬಂದಿ ಸೌಲಭ್ಯಗಳು' ಪ್ರಕಾರ ಮಾಹಿತಿಯನ್ನು ಪ್ರಕಟಗೊಳಿಸಲು ಬೇಕಾದ ದತ್ತಾಂಶವನ್ನು ಒದಗಿಸಲಾಗಿಲ್ಲ. Ind AS 12 'ಆದಾಯ ತೆರಿಗೆಗಳ' ರಡಿಯಲ್ಲಿ ಅನ್ವಯವಾಗುವಂತೆ, ನಿವ್ವಳ ಮುಂದೂಡಲ್ಪಟ್ಟ ತೆರಿಗೆಯ 'ಇತರ ಸಮಗ್ರ ಆದಾಯ' ದಲ್ಲಿ ಗುರುತಿಸಬೇಕಾದ ಭಾಗವನ್ನು ಪ್ರತ್ಯೇಕಿಸದೆಯೇ ವಾಸ್ತವಿಕ ಮೌಲ್ಯಮಾಪನ ಹೊಂದಾಣಿಕೆಗಳನ್ನು ಒಳಗೊಂಡಂತೆ ಸಂಪೂರ್ಣ ಹೊಣೆಗಾರಿಕೆಯನ್ನು ಲಾಭ ಅಥವಾ ನಷ್ಟದ ಪಟ್ಟಿಯಲ್ಲಿ ಗುರುತಿಸಲಾಗಿದೆ. ಮೇಲೆ ತಿಳಿಸಿದ ಲೆಕ್ಕ ಪದ್ದತಿ ಪ್ರಕಾರ ಅಗತ್ಯವಿರುವ ವಿಂಗಡಣೆಯ ಮಾಹಿತಿ ಮತ್ತು ಸಾಕಷ್ಟು ಬಹಿರಂಗಪಡಿಸುವಿಕೆಯ ಮಾಹಿತಿಗಳ ಅನುಪಸ್ಥಿತಿಯಲ್ಲಿ, ಎಲ್ಲಾ ಬಹಿರಂಗಪಡಿಸುವಿಕೆಗಳನ್ನು ಒಳಗೊಂಡಂತೆ ಲೆಕ್ಕ ಪತ್ರಗಳ ಮೇಲಿನ ಪರಿಣಾಮವನ್ನು ಕಂಡುಹಿಡಿಯಲು ನಮಗೆ ಸಾಧ್ಯವಾಗುತ್ತಿಲ್ಲ.

ii. ಟಿಪ್ಪಣಿ 11.2 ಕ್ಕೆ ಗಮನವನ್ನು ಆಹ್ವಾನಿಸಲಾಗಿದೆ, ಎನ್‌ಡಿಸಿಪಿಎಸ್ ಪಿಂಚಣಿ ಯೋಜನೆಯ ಕೊಡುಗೆಗಳಿಗೆ ಸಂಬಂಧಿಸಿದಂತೆ, ಕಂಪನಿಯ ಪುಸ್ತಕಗಳಲ್ಲಿನ ಡೆಬಿಟ್ ಮೊತ್ತ 188.26 ಲಕ್ಷಗಳನ್ನು ಮತ್ತು ಟ್ರಸ್ಟಿನ ಲೆಕ್ಕ ಪುಸ್ತಕಗಳಲ್ಲಿ

ಬಾಕಿ ಉಳಿದಿರುವ ಮೊತ್ತಕ್ಕೆ ಸಮನ್ವಯ ಬಾಕಿ ಇರುತ್ತದೆ, ಇದನ್ನು ಟಿಪ್ಪಣಿ 11 'ಇತರ ಪ್ರಸಕ್ತ ಹಣಕಾಸು ಆಸ್ತಿಗಳು' ಕ್ರಮ ಸಂಖ್ಯೆ 10 ರಲ್ಲಿ ಸೇರಿಸಲಾಗಿದೆ. ಸಮನ್ವಯವನ್ನು ಪೂರ್ಣಗೊಳಿಸಲು ಬಾಕಿಯಿದೆ, ಲಾಭ ಅಥವಾ ನಷ್ಟದ ಹೇಳಿಕೆ ಮತ್ತು 'ಇತರ ಪ್ರಸ್ತುತ ಹಣಕಾಸು ಆಸ್ತಿ' ಯಲ್ಲಿ ಸೇರಿಸಲಾದ ಮೊತ್ತದ ಶುಲ್ಕದ ಕುರಿತು ಕಾಮೆಂಟ್ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ. ಸಮನ್ವಯ ಪ್ರಕ್ರಿಯೆ ಪೂರ್ಣಗೊಳಿಸದೆ ಇರುವುದರಿಂದ, ಲಾಭ ಅಥವಾ ನಷ್ಟದ ಪಟ್ಟಿ ಮತ್ತು 'ಇತರ ಪ್ರಸ್ತುತ ಹಣಕಾಸು ಆಸ್ತಿ' ಯಲ್ಲಿ ಸೇರಿಸಲಾದ ಮೊತ್ತದ ಮೇಲೆ ಬಿರುವ ಪರಿಣಾಮದ ಬಗ್ಗೆ ಅಭಿಪ್ರಾಯ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ.

iii. ಮೇ 4, 2000 ರಂದು ಮಂಡಳಿ ತೆಗೆದುಕೊಂಡ ನಿರ್ಧಾರದಂತೆ, ಎನ್.ಡಿ.ಸಿ.ಪಿ.ಎಸ್ ಯೋಜನೆಯಡಿಯಲ್ಲಿ ಕುಟುಂಬ ಪಿಂಚಣಿ ಪಡೆಯಲು ಆಯ್ಕೆ ಮಾಡುವ ನೌಕರರಿಗಾಗಿ ಒಂದು ಪ್ರತ್ಯೇಕ ಟ್ರಸ್ಟ್ ಅನ್ನು ರಚಿಸಬೇಕಿದೆ ಮತ್ತು ಆ ನಿಧಿಗೆ ನೀಡಿದ ಕೊಡುಗೆಯ ಮೇಲೆ ಪಾವತಿಸಬೇಕಾದ ಯಾವುದೇ ಹೆಚ್ಚಿನ ಕುಟುಂಬ ಪಿಂಚಣಿಯನ್ನು ಕಂಪನಿ ಮತ್ತು ವಿಸಕಂಗಳು ಭರಿಸಬೇಕಾಗುವುದು. ಕಂಪನಿಯು ಅಂತಹ ಹೊಣೆಗಾರಿಕೆಯನ್ನು ವಾಸ್ತವಿಕ ಮೌಲ್ಯಮಾಪನದ ಆಧಾರದ ಮೇಲೆ ಮೌಲ್ಯಮಾಪನ/ಅಂದಾಜು ಮಾಡಿರುವುದಿಲ್ಲ ಹೀಗಾಗಿ ಲೆಕ್ಕ ಪತ್ರಗಳ ಮೇಲೆ ಇದರ ಪರಿಣಾಮವನ್ನು ಕಂಡುಹಿಡಿಯಲು ಸಾಧ್ಯವಾಗುತ್ತಿಲ್ಲ.

**ವಾಸ್ತವಿಕ ಮೌಲ್ಯಮಾಪನದ ಊಹೆಗಳು–ಕೆ.ಇ.ಪಿ.ಜಿ.ಟಿ ಹಾಗೂ ಎನ್.ಡಿ.ಸಿ.ಪಿ.ಎಸ್**

ಕೆ.ಇ.ಪಿ.ಜಿ.ಟಿ ಮತ್ತು ಎನ್.ಡಿ.ಸಿ.ಪಿ.ಎಸ್ ಯೋಜನೆಗಳ ವಾಸ್ತವಿಕ ಮೌಲ್ಯಮಾಪನಕ್ಕಾಗಿ ನೇಮಕಗೊಂಡ ಮೌಲ್ಯಮಾಪಕರುಗಳು, ವಾರ್ಷಿಕ ವೇತನ ಬಡ್ತಿಯ ದರ/ಅಟ್ರೇಶನ್ ದರ, ಇತ್ಯಾದಿ ವಿಷಯಗಳಲ್ಲಿ, ವಿಭಿನ್ನವಾದ ಊಹೆಗಳನ್ನು ಅನುಸರಿಸಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ, ಅಂತಹ ವಿಭಿನ್ನ ಊಹೆಗಳು ಅನುಸರಿಸುವುದು ಕ್ರಮವಾಗಿಲ್ಲ. ಹಾಗಾಗಿ ಈ ಎರಡೂ ಯೋಜನೆಗಳಿಗೆ ಸಂಬಂಧಿಸಿದ ಹೊಣೆಗಾರಿಕೆಗಳ ಮೌಲ್ಯಮಾಪನದ ಮೇಲಿನ ಪರಿಣಾಮವನ್ನು ನಿರ್ಧರಿಸಲು ನಮಗೆ ಸಾಧ್ಯವಾಗಿಲ್ಲ.

**ಸಿ. ಅರ್ಧ ವೇತನ ರಜೆ (ಹೆಚ್.ಪಿ.ಎಲ್) ಹವಣಿಕೆ:**

ಟಿಪ್ಪಣಿ ಸಂಖ್ಯೆ 1.15 ಕ್ಕೆ ತಮ್ಮ ಗಮನವನ್ನು ಆಹ್ವಾನಿಸಲಾಗಿದೆ– ಅರ್ಧ ವೇತನ ರಜೆಯ (ಹೆಚ್.ಪಿ.ಎಲ್) ಹವಣಿಕೆಯನ್ನು ಮಾರ್ಚ್ 31, 2020 ರಿಂದ ಅನ್ವಯಿಸುವಂತೆ ವಾಸ್ತವಿಕ ಮೌಲ್ಯಮಾಪನ ಆಧಾರದ ಮೇಲೆ ಹವಣಿಕೆಯನ್ನು ಗುರುತಿಸಿಲಾಗಿದೆ. ಏಪ್ರಿಲ್ 1, 2019 ರಂತೆ ಯಾವುದೇ ವಾಸ್ತವಿಕ ಮೌಲ್ಯಮಾಪನವನ್ನು ನಡೆಸಿಲ್ಲ ಹಾಗೂ ಹವಣಿಕೆಯನ್ನೂ (ಹಿಂದಿನ ಹೊಣೆಗಾರಿಕೆಗೆ) ಗುರುತಿಸಿಲ್ಲ. ಹಾಗಾಗಿ, ಏಪ್ರಿಲ್ 1, 2019 ರ ಆರಂಭಿಕ ಈಕ್ವಿಟಿ ಮೇಲಿನ ಪರಿಣಾಮವನ್ನು ಮತ್ತು ಹೊಣೆಗಾರಿಕೆಯ ಮೇಲೆ ಅನುಗುಣವಾದ ಪ್ರಭಾವವನ್ನು, ಆ ದಿನಾಂಕದಂತೆ, ಕಂಡುಹಿಡಿಯಲು ಸಾಧ್ಯವಾಗಲಿಲ್ಲ.

**ಡಿ. ಕುಟುಂಬ ಹಿತ ನಿಧಿ:**

ಸಿಬ್ಬಂದಿಗಳ ಕೊಡುಗೆಯ ಕುಟುಂಬ ಹಿತ ನಿಧಿ (ಎಫ್.ಬಿ.ಎಫ್) ಯೋಜನೆ ಸಂಬಂಧಿಸಿದಂತೆ–ಟಿಪ್ಪಣಿ ಸಂಖ್ಯೆ 1.15 (ಇ)(II) ಗೆ ತಮ್ಮ ಗಮನವನ್ನು ಸೆಳೆದಿದೆ. ಮಾರ್ಚ್ 31, 2021 ರಂತೆ ನಡೆಸಲಾದ ವಾಸ್ತವಿಕ ಮೌಲ್ಯಮಾಪನದಲ್ಲಿ ಸೇವೆಯಲ್ಲಿರುವಾಗಲೇ ಮೃತರಾಗಬಹುದಾದ ಸಿಬ್ಬಂದಿಯ ಹೊಣೆಗಾರಿಕೆಯನ್ನು ಪರಿಗಣಿಸಲಾಗಿದೆ ಆದರೆ ನಿವೃತ್ತಿಯ ಸಮಯದಲ್ಲಿ ಸಿಬ್ಬಂದಿಗಳಿಗೆ ಪಾವತಿ ಮಾಡಬೇಕಾದ ಹೊಣೆಗಾರಿಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಈ ಪರಿಣಾಮವಾಗಿ, ಯೋಜನಾ ಆಸ್ತಿಗಳೊಂದಿಗೆ, ನಿವೃತ್ತಿಯ ಸಮಯದಲ್ಲಿ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಹೊಣೆಗಾರಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಬಂದ ಹೊಣೆಗಾರಿಕೆಯನ್ನು ತಪ್ಪಾಗಿ ಹೋಲಿಸಿದೆ ಮತ್ತು ಪ್ರಸಕ್ತ ವರ್ಷದಲ್ಲಿ ಯಾವುದೇ ಹೆಚ್ಚಿನ ಹೊಣೆಗಾರಿಕೆಯನ್ನು ಗುರುತಿಸುವ ಅಗತ್ಯವಿಲ್ಲ ಎಂದು ನಿರ್ಣಯಿಸಿದೆ ಎಂದು ಆಡಳಿತ ವರ್ಗವು ನಮಗೆ ತಿಳಿಸಿದೆ (ಹೊಣೆಗಾರಿಕೆಯು ಯೋಜನೆಯ ಆಸ್ತಿಗಳಿಗಿಂತ ಕಡಿಮೆ ಎಂದು ತಪ್ಪಾಗಿ ಲೆಕ್ಕಹಾಕಲಾಗಿದೆ). ಇದಲ್ಲದೆ, ಸಿಬ್ಬಂದಿ ನಿಧನ ಹೊಂದಿದ ಸಂದರ್ಭದಲ್ಲಿ, ಯೋಜನೆಯ ಅನುಸಾರವಾಗಿ, ಸಿಬ್ಬಂದಿಯ ಕೊಡುಗೆಗೆ ಮೀರಿ ಅವರಿಗೆ ಪಾವತಿಸಿದ ಮೊತ್ತವನ್ನು, ಲೆಕ್ಕ ಪತ್ರಗಳಲ್ಲಿರುವ ಒಟ್ಟಾರೆ ಹೊಣೆಗಾರಿಕೆಗೆ

ಹೊಂದಾಣಿಕೆ ಮಾಡದೇ, ಆ ಮೊತ್ತವನ್ನು ಲಾಭ ಮತ್ತು ನಷ್ಟ ತಖ್ತೆಯಲ್ಲಿ ಗುರುತಿಸಲಾಗಿದೆ. ಕಂಪನಿಯು, ಅಂತಹ ಕೊಡುಗೆಗಳನ್ನು ನಿಶ್ಚಿತ ಠೇವಣಿಗಳಲ್ಲಿ ಜಮಾ ಮಾಡಿದೆ ಮತ್ತು ಅದರ ಮೇಲೆ ಬರುವ ಬಡ್ಡಿಯನ್ನು ಅದೇ ನಿಧಿಗೆ ಜಮಾ ಮಾಡಲಾಗಿದೆ. ಎರಡೂ ಸಂದರ್ಭಗಳನ್ನು ಒಳಗೊಂಡಿರುವ ಸಮಗ್ರ ವಾಸ್ತವಿಕ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಲಾಭ ಅಥವಾ ನಷ್ಟದ ತಖ್ತೆಯಲ್ಲಿ ಸೇರಿಸಲಾದ ಈ ಮೊತ್ತದ ಬಗ್ಗೆ ಮತ್ತು ಅದರ ಪರಿಣಾಮವಾಗಿ ಬರುವ ಹೊಣೆಗಾರಿಕೆಯ ಸೂಕ್ತತೆ ಬಗ್ಗೆ, ಅಭಿಪ್ರಾಯ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ.

**ಶಾಸನ ಬದ್ಧ ಹಣ ರವಾನೆಗಳು**

ಟಿಪ್ಪಣಿ 22.3 ರಲ್ಲಿ ವಿವರಿಸಿದಂತೆ, ಕಂಪನಿಯ ಲೆಕ್ಕ ಪತ್ರಗಳನ್ನು ಸಲ್ಲಿಸಿರುವ ಜಿ.ಎಸ್.ಟಿ. ರಿಟರ್ನ್ಸ್‌ಗಳೊಡನೆ ಸಮನ್ವಯವನ್ನು ಮಾಡಿರದ ಕಾರಣ, ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ.

ಕಂಪನಿಯು ಸಾಮಗ್ರಿಗಳ ಕೊರತೆ ಮತ್ತು ಮತ್ತಿತರ ವಿವಾದಗಳಿಂದ ನೌಕರರಿಂದ ವಸೂಲು ಮಾಡಬೇಕಾಗಿರುವ ಮೊತ್ತ/ ಅರ್ಧದಲ್ಲಿಯೇ ಮುಗಿಸಿದ/ ಕೈಬಿಟ್ಟ ಯೋಜನೆಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಗ್ಯಾರಂಟಿಯನ್ನು ಇನ್ವೋಕ್ ಮಾಡಿ ಗುತ್ತಿಗೆದಾರರಿಂದ ವಸೂಲು ಮಾಡಬೇಕಾಗಿರುವ ಮೊತ್ತ/ ಗುತ್ತಿಗೆದಾರರಿಂದ ಯೋಜನಾ ಸ್ಥಳಗಳಲ್ಲಿ ಬಳಕೆ ಮಾಡದೇ ಇರುವ ಸಾಮಗ್ರಿಗಳ ಮೊತ್ತವನ್ನು ಅಥವಾ ಇತರೆ ಮೊತ್ತವನ್ನು ಗುರುತಿಸದ ಕಾರಣ ಹಾಗೂ ಜಿ.ಎಸ್.ಟಿ ಮೇಲಿನ ಪರಿಣಾಮವನ್ನು ಗುರುತಿಸದ ಕಾರಣ, ಈ ಮೊತ್ತದ ಬಗ್ಗೆ ಮತ್ತು ಅದರ ಪರಿಣಾಮವಾಗಿ ಜಿ.ಎಸ್.ಟಿ ಮೇಲೆ ಉಂಟಾಗುವ ಹೊಣೆಗಾರಿಕೆಯ ಸೂಕ್ತತೆ ಬಗ್ಗೆ, ಗುರುತಿಸಲು ಸಾಧ್ಯವಾಗುತ್ತಿಲ್ಲ.

**ಸಾದಿಲ್ವಾರು ಜವಾಬ್ದಾರಿಗಳು ಮತ್ತು ಬದ್ಧತೆಗಳು:**

ಟಿಪ್ಪಣಿ 37.7 ರಲ್ಲಿ ವಿವರಿಸಿದಂತೆ, ಕಂಪನಿಯು ಸಾದಿಲ್ವಾರು ಜವಾಬ್ದಾರಿಗಳು, ವಚನ ಬದ್ಧತೆಗಳ ಮತ್ತು ಬಂಡವಾಳ ಬದ್ಧತೆಗಳ ಬಗ್ಗೆ ವರದಿ ಮಾಡಿದೆ. ಕಂಪನಿಯ ವಿಭಾಗವಾರು ಸಮಗ್ರ ಮತ್ತು ಪೂರ್ಣ ಪಟ್ಟಿಗಳಿರದ ಕಾರಣ ಮತ್ತು ಸಾದಿಲ್ವಾರು ಹೊಣೆಗಾರಿಕೆಯ ಸಾಧ್ಯತೆಯ ಬಗ್ಗೆ ಹಾಗೂ ವರದಿ ಮಾಡಿರುವ ಮೊತ್ತದ ಪೂರ್ಣ ವಿವರ/ ನಿಖರತೆಯ ಬಗ್ಗೆ ಅವಶ್ಯಕತೆ ಇರುವ ಕಡೆ ಸೂಕ್ತ ಕಾನೂನಿನ ಸಲಹೆ ಇರದ ಕಾರಣ, ಮೊತ್ತದ ಪೂರ್ಣತೆ ಹಾಗೂ ಸೂಕ್ತತೆ ಬಗ್ಗೆ ಗುರುತಿಸಲು ಮತ್ತು ಲೆಕ್ಕ ಪುಸ್ತಕಗಳಲ್ಲಿ ಮಾಡಬೇಕಾದ ಹೆಚ್ಚಿನ ಹವಣಿಕೆಗಳು ಯಾವುದಾದರೂ ಇದ್ದರೆ, ಇದನ್ನು ನಿರ್ಣಯಿಸಲು ಸಾಧ್ಯವಾಗುತ್ತಿಲ್ಲ.

**ವರಮಾನ/ಆದಾಯ:**

ಎ. ಟಿಪ್ಪಣಿ 1.12(ಸಿ) ಕ್ಕೆ ತಮ್ಮ ಗಮನವನ್ನು ಆಹ್ವಾನಿಸಲಾಗಿದೆ–ಸಮಾಲೋಚನೆ ಸೇವೆಗಳ ಆದಾಯ, ಬಿಡುಗಡೆಗೊಳಿಸಿದ ಭೂ ಸಂಬಂಧ ಶುಲ್ಕಗಳು, ತಪಾಸಣಾ ಶುಲ್ಕಗಳು, ಪರೀಕ್ಷಾ ಶುಲ್ಕಗಳು, ಅರ್ಥ್‌ಮ್ಯಾಟ್ ವಿನ್ಯಾಸ ಶುಲ್ಕಗಳು ಮತ್ತು ನಗದು ಆಧಾರದ ಮೇಲೆ ಮಂಟಪ ಕೀಪರ್ ಶುಲ್ಕಗಳನ್ನು ಕಂಪನಿಯು ನಗದು ಆಧಾರದ ಮೇಲೆ ಗುರುತಿಸುತ್ತಿದೆ. ಈ ಲೆಕ್ಕ ಪದ್ದತಿಯು ಕಂಪನಿಗಳ ಕಾಯಿದೆ, 2013 ರ ಕಲಂ 128, Ind AS 1–'ಹಣಕಾಸಿನ ಪಟ್ಟಿಗಳ ಪ್ರಸ್ತುತಿ' ರಲ್ಲಿ ಕಡ್ಡಾಯಗೊಳಿಸಲಾದ ಲೆಕ್ಕಪತ್ರದ ಸಂಚಯ ಮತ್ತು Ind AS 115–'ಗ್ರಾಹಕರೊಡನೆ ಗುತ್ತಿಗೆಯ ಒಪ್ಪಂದದ ಮೂಲಕ ಗಳಿಸಿದ ಆದಾಯ' ಅನುಸಾರವಾಗಿಲ್ಲ. ಇದೇ ತತ್ವವು ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಕಾರ್ಯ ಮತ್ತು ಪಾಲನೆ ಕಾರ್ಯಗಳನ್ನು ಗುತ್ತಿಗೆ ನೀಡಿ ಗಳಿಸಿದ ಆದಾಯಕ್ಕೂ ಸಹ ಅನ್ವಯವಾಗುತ್ತದೆ. ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ.

ಬಿ. ಟಿಪ್ಪಣಿ1.14(ಡಿ) ಕ್ಕೆ ತಮ್ಮ ಗಮನವನ್ನು ಆಹ್ವಾನಿಸಲಾಗಿದೆ–ಮೂರನೇ ವ್ಯಕ್ತಿಗಳಿಂದ ಅಂದರೆ ಗ್ರಾಹಕರಿಂದ ಸ್ವೀಕೃತವಾದ ವಂತಿಕೆಗಳಿಗೆ ಸಂಬಂಧಿಸಿದಂತೆ ಕೆ.ಇ.ಆರ್.ಸಿ. ಇವರ ವಿದ್ಯುತ್ ಸರಬರಾಜು ವಿನಿಮಯದ ಷರತ್ತುಗಳ ನಿಯಮಾವಳಿಗಳ ಪ್ರಕಾರ ಗ್ರಾಹಕರಿಂದ ಸ್ವೀಕೃತವಾದ ವಂತಿಕೆಗಳನ್ನು ನ್ಯಾಯ ಬೆಲೆಗೆ ಗುರುತಿಸಿ ಅವುಗಳನ್ನು ಜಮಾ ನೀಡುವುದನ್ನು 'ಡಿ.ಸಿ.ಡಬ್ಲ್ಯೂ ಮತ್ತು ಎಸ್.ಇ.ಡಬ್ಲ್ಯೂ ಯೋಜನೆಗಳ ಬಂಡವಾಳ ಖರ್ಚುಗಳ ಮುಂದೂಡಿದ ಗುತ್ತಿಗೆಗಳ ವೆಚ್ಚಗಳನ್ನು "ಚಾಲ್ತಿಯಲ್ಲಿ ಇಲ್ಲದ ಹೊಣೆಗಾರಿಕೆಗಳು" ರ ಅಡಿಯಲ್ಲಿ ಮತ್ತು 'ಬಂಡವಾಳ ಆಸ್ತಿಗಳ ಖರ್ಚಿನ' ಬಗ್ಗೆ ಕೊಡುಗೆಗಳನ್ನು 'ಇತರ ಚಾಲ್ತಿಯಲ್ಲಿರುವ ಹೊಣೆಗಳ' ಅಡಿಯಲ್ಲಿ ಗುರುತಿಸಿ, ತದನಂತರದಲ್ಲಿ ಅಸ್ತಿಗಳ ಉಪಯುಕ್ತ ಬಳಕೆಗಳ ಆಧಾರದ

ಮೇಲೆ, ಆದಾಯವನ್ನು ಹಿಂದಕ್ಕೆ ಪಡೆಯಲಾಗಿದೆ. ಈ ರೀತಿ ವರ್ಗಾವಣೆ ಮಾಡಿದ ಜಮೀನಿನ ಬಗ್ಗೆ ಮತ್ತು ಅದು ಗ್ರಾಹಕರ ಕೊಡುಗೆಗಳ ಒಂದು ಅಂಗವಾಗಿರುವಂತ (ನ್ಯಾಯ ಬೆಲೆಯಲ್ಲಿ ಗುರುತಿಸಲ್ಪಟ್ಟಿದ್ದು) ಜಮೀನಿನ ಮೇಲೆ ಇರುವ ಉಪ ಸ್ಥಾವರಗಳ ಭಾಗವನ್ನು, ಸ್ಥಾವರದ ಉಪಯುಕ್ತ ಜೀವಿತಾವಧಿಯ ಆಧಾರದ ಮೇಲೆ, ಈ ಜಮೀನಿನ ಸಮುಚಿತ ಭಾಗವನ್ನು ಬೃಹತ್ ಕಾಮಗಾರಿ ಉತ್ತರ ವಿಭಾಗದ ಚಾಲ್ತಿ ವರ್ಷದ ವಾರ್ಷಿಕ ವರದಿಗಳ ಲಾಭ ಮತ್ತು ನಷ್ಟದ ತಖ್ತೆಯಲ್ಲಿ ಹಿಂಪಡೆಯಲಾಗಿರುವುದಿಲ್ಲ. ಇದು Ind AS 115 – 'ಗ್ರಾಹಕರೊಡನೆ ಗುತ್ತಿಗೆಯ ಒಪ್ಪಂದದ ಮೂಲಕ ಗಳಿಸಿದ ಆದಾಯ' ಕ್ಕೆ ವ್ಯತಿರಿಕ್ತವಾಗಿದೆ. ಅಂತಹ ಜಮೀನಿನ ನ್ಯಾಯ ಬೆಲೆಯ ಸಮುಚಿತ ಭಾಗದ ಜಮೀನು ಇದನ್ನು ಲಾಭ ಮತ್ತು ನಷ್ಟದ ತಃಖ್ತೆ ಗುರುತಿಸದಿರುವಿಕೆಯನ್ನು ಸತತವಾಗಿ ಮಾಡಿರಲಿಲ್ಲ. ಆದರೆ ಅದನ್ನು ಬೃಹತ್ ಕಾಮಗಾರಿ ಉತ್ತರ ವಿಭಾಗಕ್ಕೆ ಸಂಬಂಧಿಸಿದ ವರ್ಷದಲ್ಲಿಯೇ ಮಾಡಲಾಗಿದೆ. ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ.

**ಇತರೆ ವಿಷಯಗಳು:**

ಸಿ. ದಿನಾಂಕ: 01.04.2019 ಕ್ಕೆ ಸ್ವಾಮ್ಯ ಷೇರುಗಳಿಗೆ ಹಿಂದಿನ ಸಾರಭೂತ ತಪ್ಪುಗಳ ಹೊಂದಾಣಿಕೆಗಳನ್ನು ಮಾಡಲು ನೀಡಿರುವ ದತ್ತಾಂಶದಲ್ಲಿ, ಸವಕಳಿಯ ಪ್ರಭಾವ ಮತ್ತು ಮತ್ತಿತರ ಹೊಂದಾಣಿಕೆಗಳಿಂದ ಆಸ್ತಿಯ ಮೌಲ್ಯದ ಬಗ್ಗೆ ಸ್ವಾಮ್ಯಕ್ಕೆ ಮಾಡಬೇಕಾದ ಹೊಂದಾಣಿಕೆಗಳನ್ನು ದಿನಾಂಕ: 31.03.2020 ಕ್ಕೆ ಸ್ವಾಮ್ಯ ಷೇರುಗಳಿಗೆ ಮಾಡಿರುವುದರಿಂದ, ದಿನಾಂಕ: 01.04.2019ಕ್ಕೆ ಉಳಿಸಿಕೊಂಡ ಗಳಿಕೆಗಳ (ರಿಟೈನ್ಡ್ ಅರ್ನಿಂಗ್ಸ್) ಆರಂಭದ ಶಿಲ್ಕು, ರೂ.7,024.47 ಲಕ್ಷಗಳು ಹೆಚ್ಚಾಗಿ ತೋರಿಸಿದಂತಾಗಿದೆ.

ಡಿ. Ind AS 1 – 'ಹಣಕಾಸಿನ ಪಟ್ಟಿಗಳ ಪ್ರಸ್ತುತಿ' ರ ಮತ್ತು Ind AS 7 – ನಗದು ಹರಿವಿನ ಪಟ್ಟಿ 'ಪ್ರಸ್ತುತ ಪಡಿಸುವಾಗ, ಆಸ್ತಿಗಳು, ಸ್ಥಾವರ ಮತ್ತು ಉಪಕರಣಗಳು (ಪಿ.ಪಿ.ಇ) ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ (ಸಿ.ಡಬ್ಲ್ಯೂಐಪಿ) ಸ್ವಾಧೀನ ಮತ್ತು ವಿಲೇವಾರಿಯಲ್ಲಿ, ಸಾಲದಿಂದ ಬರುವ ಒಳಹರಿವು ಮತ್ತು ಮರುಪಾವತಿಗಳನ್ನು ನಿವ್ವಳವಾಗಿ ಮತ್ತು ಪ್ರತ್ಯೇಕವಾಗಿ ತೋರಿಸಲಾಗಿದೆ. ಮುಂದುವರೆದು, ಹೂಡಿಕೆ ಮತ್ತು ಹಣಕಾಸಿನ ಚಟುವಟಿಕೆಗಳಲ್ಲಿ ನೀಡಿರುವ ಬಡ್ಡಿ ಆದಾಯ ರೂ.1,107.40 ಲಕ್ಷಗಳು ಮತ್ತು ಖರ್ಚು ರೂ.59,571.00 ಲಕ್ಷಗಳನ್ನು ಆಯವ್ಯಯ ಪಟ್ಟಿಯ ಹೂಡಿಕೆ ಮತ್ತು ಹಣಕಾಸು ಚಟುವಟಿಕೆಗಳ ಆರಂಭಿಕ ಶಿಲ್ಕು ಮತ್ತು ಮುಕ್ತಾಯದ ಶಿಲ್ಕುಗಳಿಗೆ ಹೊಂದಾಣಿಕೆ ಮಾಡಲಾಗಿರುವುದಿಲ್ಲ. ಹೀಗಾಗಿ ಕಾರ್ಯಚರಣೆ, ಹೂಡಿಕೆ ಮತ್ತು ಹಣಕಾಸಿನ ಚಟುವಟಿಕೆಗಳ ಆದಾಯವನ್ನು ರೂ.2,16,136.45 ಲಕ್ಷಗಳು, ರೂ.2,46,564.32 ಲಕ್ಷಗಳು ಮತ್ತು ರೂ31,333.58 ಲಕ್ಷಗಳು ಕ್ರಮವಾಗಿ ಹಿಂದೆ ವರದಿ ಮಾಡಿದ ಅಂಕಿ ಅಂಶಗಳು ರೂ.2,16,125.47 ಲಕ್ಷಗಳು, ರೂ.2,46,643.73 ಲಕ್ಷಗಳು ಮತ್ತು ರೂ.31,423.97 ಲಕ್ಷಗಳು ಎಂಬುದರ ಬದಲಾಗಿ ಓದಿಕೊಳ್ಳತಕ್ಕದ್ದು.

ಇ. ಟಿಪ್ಪಣಿ ಸಂಖ್ಯೆ 7.2 ರಲ್ಲಿ ಮಾನ್ಯ ಕೆಇಆರ್‌ಸಿ ರವರಲ್ಲಿ ಹೂಡಿರುವ ದಾವೆ ಸಂಖ್ಯೆ: ಒಪಿ.55/2019 ರ ಆದೇಶ ದಿನಾಂಕ: 26.08.2019 ರಲ್ಲಿ ನೀಡಿರುವಂತೆ ಕೆ.ಇ.ಆರ್.ಸಿ ಜಕಾತಿ ವಿನಿಯಮಗಳು, 2006 ರನ್ವಯ ಸಕಾಲದಲ್ಲಿ ಪಾವತಿಸಿದ್ದಕ್ಕಾಗಿ, ಜನವರಿ–2014 ರಿಂದ ಮಾರ್ಚ್–2019 ರವರೆಗಿನ ಅವಧಿಗೆ ಬೆವಿಕಂ ರವರು ಕೇಳಿರುವ ರಿಯಾಯಿತಿ ರೂ.9,317.54 ಲಕ್ಷಗಳು ಮತ್ತು ಜುಲೈ–2015 ರಿಂದ ಜೂನ್–2017 ರ ಅವಧಿಗೆ ಮವಿಸಕಂ ರವರು ಕೇಳಿರುವ ರಿಯಾಯಿತಿ ರೂ.637.94 ಲಕ್ಷಗಳು ಪ್ರಸರಣ ಕರಾರಿನ ಪ್ರಕಾರ ವಿದ್ಯುತ್ ಸರಬರಾಜು ಕಂಪನಿಗಳು ಸಕಾಲದಲ್ಲಿ ಪಾವತಿಸಿರುವುದಕ್ಕೆ ರಿಯಾಯಿತಿ ನೀಡಲಾಗಿರುತ್ತದೆ. ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ.

ಎಫ್. ಟಿಪ್ಪಣಿ 18.1 ಕ್ಕೆ ತಮ್ಮ ಗಮನವನ್ನು ಆಹ್ವಾನಿಸಲಾಗಿದೆ–'ಇತರೆ ಚಾಲ್ತಿಯಲ್ಲಿಲ್ಲದ ಆರ್ಥಿಕ ಜವಾಬ್ದಾರಿಗಳು' ರಡಿಯಲ್ಲಿ ತೋರಿಸಿದ ರೂ.4,239.10 ಲಕ್ಷಗಳು ಮಾನ್ಯ ಕರ್ನಾಟಕ ಸರ್ಕಾರದ ಪುನಃ ಅಧಿಸೂಚನೆಯನ್ವಯ ಹೊಂದಾಣಿಕೆ ಬಾಕಿಯನ್ನು ಅಧಿಸೂಚನೆಯ ನಂತರ ದಿನಾಂಕ: 01.06.2002 ಕ್ಕೆ ಇರುವ ಆಯವ್ಯಯ ಪಟ್ಟಿಯ ಆರಂಭದ ಶಿಲ್ಕುಗಳಿಗೆ ಹೊಂದಾಣಿಕೆಗಳನ್ನು ಮಾಡಲಾಗಿದೆ. ದಿನಾಂಕ: 14.06.2012 ರ ಮಾನ್ಯ ಕರ್ನಾಟಕ ಸರ್ಕಾರದ ಪತ್ರದಲ್ಲಿ, ಮೇಲೆ ತೋರಿಸಿರುವ ಬಾಕಿಯನ್ನು ಸರಿದೂಗಿಸಲು ಪರಿಷ್ಕೃತ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಕಳುಹಿಸಲು ಕಂಪನಿಗೆ ನಿರ್ದೇಶನ ನೀಡಲಾಗಿರುತ್ತದೆ. ದಿನಾಂಕ: 31.03.2021 ರ ಅಂತ್ಯಕ್ಕೆ ಕಂಪನಿಯು ಹೊಂದಾಣಿಕೆಗೆ

ಪ್ರಸ್ತಾವನೆಯನ್ನು ಸಲ್ಲಿಸದಿರುವುದು ಕಂಡುಬಂದಿರುತ್ತದೆ. ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ.

ಜಿ. ಟಿಪ್ಪಣಿ 22 ರ ಕ್ರಮ ಸಂಖ್ಯೆ 4 ರ ಕಡೆಗೆ ಗಮನ ಹರಿಸಲು ಕೋರಿದೆ. ಕಂಪನಿಯು ವಸೂಲು ಮಾಡಿರುವ ದಂಡಗಳ ಬಗ್ಗೆ ನಿರ್ದಿಷ್ಟ ಅವಧಿ/ ದಸ್ತಾವೇಜು/ ವಿವರಗಳನ್ನು ಹಾಗೂ ದಂಡಗಳ ವಯಸ್ಸು/ಕಾಲದ ಬಗ್ಗೆ ಸರಿಯಾದ ವಿವರವನ್ನು ಒದಗಿಸಿರುವುದಿಲ್ಲ. ಕಂಪನಿಯ ಆಚರಣೆ/ರೂಢಿಗಳ ಆಧಾರದ ಮೇಲೆ ಸದರಿ ಮೊತ್ತವನ್ನು ಇತರೆ ಆದಾಯವೆಂದು ಪರಿಗಣಿಸಲು ಅಂಕಿ, ಅಂಶಗಳ, ಪರಿಮಾಣ ಲಭ್ಯವಿಲ್ಲದ ಕಾರಣ, ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ನಿರ್ದಿಷ್ಟಪಡಿಸಿಕೊಳ್ಳಲಾಗುತ್ತಿಲ್ಲ.

ಎಚ್. ವರಮಾನ ಮತ್ತು ಮೂಲದಲ್ಲಿ ತೆರಿಗೆ ಕಡಿತದ ಜಮಾವು (ಟಿ.ಡಿ.ಎಸ್) ಆರ್ಥಿಕ ವರ್ಷ 2020–21 ರ ಫಾರಂ 26 ಎ.ಎಸ್‌ಗಳ ಸಮನ್ವಯವನ್ನು ವರಮಾನಕ್ಕೆ ಮಾಡಿರುವುದಿಲ್ಲ ಮತ್ತು ಮೂಲದಲ್ಲಿ ತೆರಿಗೆ ಕಡಿತದ ಜಮಾವನ್ನು ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ನಿರ್ದಿಷ್ಟಪಡಿಸಿಕೊಳ್ಳಲಾಗುತ್ತಿಲ್ಲ.

ಐ. ಟಿಪ್ಪಣಿ 21.3 ರಲ್ಲಿ ಆರ್ಥಿಕ ವರ್ಷ 2014–15 ರಿಂದ 2018–19 ರವರೆಗಿನ ಅವಧಿಯ (ಮೊತ್ತಗಳನ್ನು ಪ್ರತ್ಯೇಕವಾಗಿ ಗುರುತಿಸಿರುವುದಿಲ್ಲ) ಮೊತ್ತವನ್ನು ಆರ್ಥಿಕ ವರ್ಷ 2020–21 ರಲ್ಲಿ ಪಾವತಿಸಿರುವ ಎಕ್ಸ್–ಗ್ರೇಷಿಯಾವನ್ನು ಮಾನ್ಯ ಕರ್ನಾಟಕ ಸರ್ಕಾರದ ಅನುಮೋದನೆ ಮತ್ತು ಅನುಸಮರ್ಥನೆಗೆ ಒಳಪಡುತ್ತದೆ. ಸದರಿ ಅನುಸಮರ್ಥನೆಯ ಅಲಭ್ಯತೆಯಲ್ಲಿ ಪಾವತಿಸಿರುವ ಮೊತ್ತಗಳ ಬಗ್ಗೆ ಅಭಿಪ್ರಾಯವನ್ನು ನೀಡಲು ಸಾಧ್ಯವಾಗುತ್ತಿಲ್ಲ.

ಜೆ. ಟಿಪ್ಪಣಿ 21.4ರ ಕಡೆಗೆ ಗಮನಹರಿಸಲು ಕೋರಿದೆ. ಮೈಕ್ರೋ, ಸ್ಮಾಲ್ ಮತ್ತು ಮೀಡಿಯಂ ಎಂಟರ್‌ಪ್ರೈಸಸ್ ಕಾಯ್ದೆ 2006 ರಡಿಯಲ್ಲಿ ಕ್ರಯದಾರರಿಗೆ, ಮಾಹಿತಿ ಪ್ರಕಟಣೆಗೆ ಸಂಬಂಧಿಸಿರುವಂತೆ, ಸದರಿ ಕ್ರಯದಾರರ ಗುರುತಿಸುವಿಕೆ ಬಾಕಿಯಿದ್ದು ಮತ್ತು ಅದರ ಬಡ್ಡಿಯ ಬಗ್ಗೆ ಪ್ರಾವಿಷನ್ ಮಾಡದಿರುವ ಬಗ್ಗೆ ಸದರಿ ಕಾಯ್ದೆಯ ಕಲಂ 23 ರಲ್ಲಿ ಉಲ್ಲೇಖಿಸಿದೆ. ಲೆಕ್ಕ ಪತ್ರಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ.

ಕೆ. ಟಿಪ್ಪಣಿ 37.36 (ಎ) ರ ಕಡೆಗೆ ಗಮನ ಹರಿಸಲು ಕೋರಿದೆ. ಕಂಪನಿಯ Ind AS ವಾರ್ಷಿಕ ವರದಿಗಳಲ್ಲಿ ನೀಡಿರುವ ಅಂಕಿಗಳು, ಕಂಪನಿ ಕಾಯಿದೆ 2013 ರ ವಿಭಾಗ 2 ರ ಷೆಡ್ಯೂಲ್ 3 ರ ಪ್ರಕಾರ ಅನುಸರಿಸಬೇಕಾದ, ಅತಿ ಹತ್ತಿರದ ಲಕ್ಷ ಅಥವಾ ಮಿಲಿಯನ್ ಅಥವಾ ಕೋಟಿಗಳ ಅಥವಾ ದಶಮಾಂಶದ ಮೊಬಲಗನ್ನು ಹತ್ತಿರದ ಪೂರ್ಣಾಂಕಕ್ಕೆ (ರೌಂಡ್ ಆಫ್) ಮಾಡಿರುವುದಿಲ್ಲ.

ಮೇಲೆ ವಿವರಿಸಿದ ವಿಷಯಗಳ ಬಗ್ಗೆ, ನಾವು ಸಾಕಷ್ಟು ಸೂಕ್ತ ಆಡಿಟ್ ಸಾಕ್ಷ್ಯಾಧಾರವನ್ನು ಪಡೆಯಲು ಮತ್ತು ಸಂಭಾವ್ಯ ಸಂವಹನ ನಡೆಸಲು ಸಾಧ್ಯವಾಗಿರದ ಕಾರಣ, ಕಂಪನಿಯ Ind AS ವಾರ್ಷಿಕ ವರದಿಗಳ ಮತ್ತು ಹಲವು ಗುರುತಿಸದ ತಪ್ಪಾದ ತಖ್ತೆಗಳಿದ್ದರೆ, ಅವುಗಳ ಸಂಭಾವನೀಯ ವೈಯಕ್ತಿಕ ಮತ್ತು ಸಂಚಿತವಾದ ಪರಿಣಾಮವುಸಾರಭೂತ, ಪೂರ್ಣ ವ್ಯಾಪಿಯಲ್ಲಿರಬಹುದಾಗಿರುತ್ತದೆ ಎಂದು ಅಭಿಪ್ರಾಯದ ನಿರಾಕರಣೆಯ ವರದಿಯಲ್ಲಿ ರೂಪುಗೊಂಡಿರುತ್ತದೆ.

<u>ಪ್ರಮುಖವಾದ ವಿಷಯಗಳು:</u>

ಎ. ಟಿಪ್ಪಣಿ 14.2 ರ ಕಡೆಗೆ ಗಮನಹರಿಸಲು ಕೋರಿದೆ. ವಾರ್ಷಿಕ ವರದಿ ಮತ್ತು ಸ್ವಾಮ್ಯ ಷೇರುಗಳ ಋಣ ಹೊಂದಾಣಿಕೆಯು ಉಳಿಸಿಕೊಂಡ ಗಳಿಕೆಗಳ ಪುನರುಕ್ತಿ ಬದಲಾವಣೆಯಾದ ರೂ.9,770.78 ಲಕ್ಷಗಳನ್ನು 'ನಿವ್ವಳ ಸಂಪತ್ತಿಗೆ ಪ್ರಸ್ತಾಪಿತ ಹೊಂದಾಣಿಕೆಗಳ' ಶೀರ್ಷಿಕೆಯಡಿ ದಿನಾಂಕ: 01.04.2019 ರಂದು ಮಾಡಿರುವ ಬದಲಾವಣೆಯು ಮಾನ್ಯ ಕರ್ನಾಟಕ ಸರ್ಕಾರದ ಆದೇಶ ದಿನಾಂಕ: 31.07.2017 ರ ಆಜ್ಞಾನುಸಾರವಾಗಿದೆ.

ಬಿ. ವಿದ್ಯುತ್ ವಿತರಣಾ ಕಂಪನಿಗಳಿಂದ ತಣ್ಣೀರ್ ಬಾವಿ ಪವರ್ ಕಾರ್ಪೋರೇಷನ್ ಲಿಮಿಟೆಡ್., [ಟಿ.ಬಿ.ಪಿ.ಸಿ.ಎಲ್] ಇದಕ್ಕೆ ನಿಯಂತ್ರಿತ ಆಸ್ತಿ– ಹೆಚ್ಚಿನ ನಿಶ್ಚಿತ ಖರ್ಚು ಕಡೆಗೆ ಬರಬೇಕಾದ ಮೊತ್ತವನ್ನು ವಾರ್ಷಿಕ ವರದಿ ಟಿಪ್ಪಣಿ 4ಎ [ಚಾಲ್ತಿಯಲ್ಲಿರದ ಆರ್ಥಿಕ ಆಸ್ತಿಗಳು] ರಲ್ಲಿ ರೂ.1,64,271.96/–ಲಕ್ಷಗಳು ಮತ್ತು ಮಾನ್ಯ ಕರ್ನಾಟಕ ಸರ್ಕಾರಕ್ಕೆ ಪಾವತಿಸತಕ್ಕ ಮೊತ್ತ ರೂ.1,65,707/–ಲಕ್ಷಗಳನ್ನು ಟಿಪ್ಪಣಿ 15ಎ [ಚಾಲ್ತಿಯಲ್ಲಿರದ ಆರ್ಥಿಕ ಹೊಣೆಗಾರಿಕೆಗಳು] ಇದನ್ನು ಎಫ್.ಎಸ್. ಇದರ

ಮತ್ತಿತರೆ ಒಟ್ಟು ಮೊತ್ತ. ಗೌರವಾನ್ವಿತ ನ್ಯಾಯಪೀಠದ ದಿನಾಂಕ: 05.10.2020 ರ ತೀರ್ಪಿನ ಅನುಸಾರ ಸದರಿ ನಿಯಂತ್ರಿತ ಆಸ್ತಿಯ ಮೊತ್ತವನ್ನು ಸತತವಾಗಿ 5 ವರ್ಷಗಳ ಅವಧಿಯಲ್ಲಿ, ಸಂಬಂಧಪಟ್ಟ ವಿದ್ಯುತ್ ವಿತರಣಾ ಕಂಪನಿಗಳಿಂದ ವಸೂಲಿ ಮಾಡತಕ್ಕದ್ದು. ಮಾನ್ಯ ಕರ್ನಾಟಕ ಸರ್ಕಾರದ ದಿನಾಂಕ: 21.11.2020 ರಲ್ಲಿನ ಆದೇಶದಂತೆ ಹೊಣೆಗಾರಿಕೆಯನ್ನು ವರದಿ ಮಾಡಲಾಗಿರುತ್ತದೆ. ಸದರಿ ವರ್ಷದಲ್ಲಿ ಮಾನ್ಯ ವಿದ್ಯುತ್ ಮೇಲ್ಮನವಿ ನ್ಯಾಯಾಪೀಠ ರವರ ದಿನಾಂಕ: 19.10.2020 ರ ಆದೇಶದನುಸಾರ ಕಂಪನಿಯು ಸ್ವೀಕರಿಸಿರುವ ಮೊತ್ತ ರೂ.1,435.03 ಲಕ್ಷಗಳಷ್ಟು ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿ ಮಾಡಲು ಆದೇಶಿಸಿ, ವಸೂಲಿ ಮಾಡಲಾಗಿರುತ್ತದೆ. ಮೇಲಿನ ಸದರಿ ಆದೇಶಗಳನ್ನು ಅವಲಂಬಿಸಲಾಗಿದೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಲ್ಲ.

ಸಿ. ಟಿಪ್ಪಣಿ 20.3 ರ ಕಡೆಗೆ ಗಮನಹರಿಸಲು ಕೋರಿದೆ. ಅಕೌಂಟೆಂಟ್ ಜನರಲ್ ಕರ್ನಾಟಕ ಇವರು ಆರ್ಥಿಕ ವರ್ಷ 2019–20 ರ ಪೂರಕ ಲೆಕ್ಕ ಪರಿಶೋಧನೆ ನಡೆಸುವಾಗ ನೀಡಿರುವ ಅಭಿಪ್ರಾಯ ಅನುಸಾರವಾಗಿ ವಿದ್ಯುತ್ ಖರೀದಿಯ ಬಗ್ಗೆ ಕೆಲವು ಹಳೆಯ ಮೊತ್ತ ಪಾವತಿಯಾಗಬೇಕಾಗಿದ್ದು. ರೂ.5.76 ಲಕ್ಷದಷ್ಟು ಮೊತ್ತವನ್ನು ಲಾಭ ಮತ್ತು ನಷ್ಟದ ಖಾತೆಗೆ ತೆಗೆದುಕೊಳ್ಳಲಾಗಿದೆ. ಈ ಮೊತ್ತವು ಇನ್ನು ಮುಂದೆ ಪಾವತಿಯಾಗಬೇಕಾಗಿಲ್ಲ ಹಾಗಾಗಿ ಲೆಕ್ಕ ಪತ್ರಗಳಲ್ಲಿ ಹಿಂಪಡೆಯಲಾಗಿದೆ ಎಂದು ಕಂಪನಿಯು ನೀಡಿರುವ ನಿವೇದನೆಗಳನ್ನು ಅವಲಂಬಿಸಿ, ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಲ್ಲ.

ಡಿ. ಟಿಪ್ಪಣಿ 6.2 ರ ಕಡೆಗೆ ಗಮನಹರಿಸಲು ಕೋರಿದೆ. ಕಂಪನಿಯು 3 ವರ್ಷ ಮೀರಿದ ಕೆಲವು ಸರಕುಗಳಾದ ರೂ. 1,308.28 ಲಕ್ಷಗಳನ್ನು ಗುರುತಿಸಿ, ವಿವಿಧ ಘಟಕಗಳಲ್ಲಿ / ಕಾಮಗಾರಿಯ ಸ್ಥಳಗಳಲ್ಲಿ ತಾಂತ್ರಿಕ ಮೌಲ್ಯಮಾಪನ ಮಾಡಿದ ನಂತರ ಸದರಿ ಸರಕುಗಳನ್ನು ಉಪಯೋಗಿಸಬಹುದೆಂದು ಕಂಪನಿಯ ಅಭಿಪ್ರಾಯ ನೀಡಿದೆ.ಈ ಬಗ್ಗೆ ಯಾವುದೇ ಮೊತ್ತವನ್ನು ಮೀಸಲು ಇಡುವ ಅವಶ್ಯಕತೆ ಇಲ್ಲವೆಂದು ಖಾತ್ರಿಗೊಳಿಸಿದೆ. ಕಂಪನಿಯು ನೀಡಿರುವ ನಿವೇದನೆಗಳನ್ನು ಅವಲಂಬಿಸಿ, ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಲ್ಲ.

ಇ. ಟಿಪ್ಪಣಿ 21.1 ರ ಕಡೆಗೆ ಗಮನಹರಿಸಲು ಕೋರಿದೆ. ಪ್ರಸ್ತಾಪಿತ/ ನಿರ್ಮಿತಗೊಳ್ಳದ ನೌಕರರ ಕಲ್ಯಾಣ ಟ್ರಸ್ಟ್‌ಗೆ ರೂ.113.99 ಲಕ್ಷಗಳ ಮೊತ್ತವನ್ನು ವರ್ಗಾಯಿಸಲು ಬಾಕಿ ಇರುವ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಲ್ಲ.

ಎಫ್. ಟಿಪ್ಪಣಿ 25.2 ಮತ್ತು 25.3 ರ ಕಡೆಗೆ ಗಮನಹರಿಸಲು ಕೋರಿದೆ. ಆರ್ಥಿಕ ವರ್ಷ 2017–18, 2018–19 ಮತ್ತು 2019–20 ವರ್ಷಕ್ಕೆ ಪ್ರಸರಣ ವೆಚ್ಚಗಳಿಗೆ ಸಂಬಂಧಿಸಿದಂತೆ (ನಾನ್–ಐ.ಎಸ್.ಟಿ.ಎಸ್ ತಂತಿಗಳು) ಅರ್ಜಿಗಳನ್ನು ಭರಿಸಿದ್ದು, ಸಿ.ಇ.ಅರ್.ಸಿ/ಕೆ.ಇ.ಆರ್.ಸಿ ರವರ ಅನುಮೋದನೆಯ ನಿರೀಕ್ಷಣೆಯಲ್ಲಿರುತ್ತದೆ. ಆರ್ಥಿಕ ವರ್ಷ2019–20 ಮತ್ತು 2020–21 ಗಳ ಐ.ಎಸ್.ಟಿ.ಎಸ್ ತಂತಿಗಳ ಪ್ರಸರಣ ಶುಲ್ಕಗಳು ಸಿ.ಇ.ಅರ್.ಸಿ ರವರ ಅನುಮೋದನೆಯ ನಿರೀಕ್ಷಣೆಯಲ್ಲಿರುತ್ತದೆ. ಕಂಪನಿಯ ಆಡಳಿತ ವರ್ಗದ ನಿವೇದನೆಯಂತೆ ವಿತರಣಾ ವೆಚ್ಚವನ್ನು ಸಮಾನವಾಗಿ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳಿಗೆ ಪಾವತಿ ಮಾಡಲು ತಿಳಿಸಿ, ಸದರಿ ಪಾವತಿಯ ಮೊತ್ತಕ್ಕೆ ಹೊಂದಾಣಿಕೆಯಿಂದ ಆದಾಯದ ಸಮತೋಲನವಾಗುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಹೊಂದಾಣಿಕೆಗಳು ಬಾಕಿ ಇರುವುದಿಲ್ಲವೆಂದು ಅನುಮೋದನೆಯನ್ನು ಕೂಡ ಪಡೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕಂಪನಿಯು ನೀಡಿರುವ ನಿವೇದನೆಗಳನ್ನು ಅವಲಂಬಿಸಿ, ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಲ್ಲ.

**ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿಗಳು**

ಕಂಪನಿಯ(ಲೆಕ್ಕಗಳು) ನಿಯಮಗಳು, 2014 ರ ನಿಯಮ 7 ರೊಂದಿಗೆ ಕಂಪನಿ ಕಾಯ್ದೆ 2013 ರ ಕಲಂ 134(5) ರಲ್ಲಿ ಸೂಚಿಸಿರುವಂತೆ ಭಾರತೀಯ ಲೆಕ್ಕಪತ್ರಗಳ ಮಾನದಂಡಗಳು (Ind AS) ಗಳನ್ವಯ, ಕಂಪನಿಯ ಆರ್ಥಿಕ ಸ್ಥಿತಿಗತಿಗಳ, ಆರ್ಥಿಕ ಕಾರ್ಯಪಾಲನೆಯ ಬಗ್ಗೆ, ಇರತೆ ಸಮಗ್ರ ಆದಾಯವನ್ನೂ ಒಳಗೊಂಡ ಆರ್ಥಿಕ ಸಾಧನೆ, ನಗದು ಸ್ವಾಮ್ಯ ಬದಲಾವಣೆಗಳ ಬಗ್ಗೆ ನೈಜ ಹಾಗೂ ತೃಪ್ತಿಕರ ಮಾಹಿತಿಯುಳ್ಳ ಭಾರತದಲ್ಲಿ ಸಾಮಾನ್ಯವಾಗಿ ಸಮ್ಮತವಾಗಿರುವ ಲೆಕ್ಕಪತ್ರಗಳ ನಿರ್ವಹಣೆಯ ಸಿದ್ಧಾಂತಗಳಿಗೆ ವಾರ್ಷಿಕ ವರದಿಗಳ ಆರ್ಥಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ಕಂಪನಿಯ ನಿರ್ದೇಶಕರ ಮಂಡಳಿಯ ಜವಬ್ದಾರಿಯಾಗಿದೆ. ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಿಸಲು

ಅಧಿನಿಯಮದ ಅವಕಾಶಗಳ ಪ್ರಕಾರ ಅಗತ್ಯ ಪ್ರಮಾಣದಲ್ಲಿ ಲೆಕ್ಕಪತ್ರಗಳ ದಾಖಲಾತೀತ ನಿರ್ವಹಣೆ, ಮೋಸ, ವಂಚನಾತೀತ ಹಾಗೂ ಇತರ ನಿಯಮ ವಿರುದ್ಧವಾದವುಗಳನ್ನು ಪತ್ತೆ ಹಚ್ಚಿ ತಡೆಗಟ್ಟುವುದು, ಯುಕ್ತ ಲೆಕ್ಕಪದ್ಧತಿ ತತ್ವಗಳನ್ನು ಆಯ್ಕೆ ಮಾಡಿ ಅನ್ವಯಿಸುವುದು. ವಿವೇಚನಾತೀತ ಹಾಗೂ ದೂರದೃಷ್ಟಿಯುಳ್ಳ ಅಂದಾಜು ಹಾಗೂ ತೀರ್ಮಾನ ತೆಗೆದುಕೊಳ್ಳುವುದು, ನಿಖರತೆ ಹಾಗೂ ಪರಿಪೂರ್ಣತೆಯ ಲೆಕ್ಕ ಪತ್ರ ದಾಖಲೆಗಳನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿದ್ದ ವಿನ್ಯಾಸ, ಅನುಷ್ಠಾನ ಹಾಗೂ ನೈಜ ಮತ್ತು ತೃಪ್ತಿಕರ ಮಾಹಿತಿಗಳನ್ನು ಬಿಂಬಿಸುವ ಆಂತರಿಕ ಆರ್ಥಿಕ ನಿಯಂತ್ರಣ, ನೈಜ ಹಾಗೂ ನ್ಯಾಯಸಮ್ಮತ ದೃಷ್ಟಿಯನ್ನು ಬೀರುವ ಈ ಭಾರತೀಯ ಲೆಕ್ಕಪದ್ಧತಿಯ ಆರ್ಥಿಕ ನಿರೂಪಣೆಯನ್ನು ಸಿದ್ಧಪಡಿಸಿ, ಅವು ಮೋಸ, ವಂಚನೆ ಅಥವಾ ಭೌತಿಕ ಪರಿಣಾಮ ಬೀರುವಿಕೆಯಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಂಡು, ಆರ್ಥಿಕ ನಿರೂಪಣಾ ಪಟ್ಟಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸುವುದು ಇಂತಹವುಗಳನ್ನು ಒಳಗೊಂಡಿದೆ.

ಆಡಳಿತ ಮಂಡಳಿಯ ಕಂಪನಿಯನ್ನು ದಿವಾಳಿತನಗೊಳಿಸುವುದು ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಉದ್ದೇಶ ಹೊಂದಿರದ ಅಥವಾ ನೈಜ ಪರ್ಯಾಯ ವ್ಯವಸ್ಥೆ ಇಲ್ಲದ ಹೊರತು, ಭಾರತೀಯ ಲೆಕ್ಕತತ್ವ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸುವಲ್ಲಿ, ಕಂಪನಿಯನ್ನು ಮುಂದುವರಿಸುವ ಸಾಮರ್ಥ್ಯವನ್ನು ನಿರ್ಧರಿಸುವುದು, ಅನ್ವಯಿತ ವಿಷಯಗಳು ಹಾಗೂ ಮುಂದುವರಿಸುವ ಸಾಮರ್ಥ್ಯದ ಸಂಬಂಧವಾದ ವಿಷಯಾಂಶಗಳನ್ನು ಬಹಿರಂಗಪಡಿಸುವುದು, ಲೆಕ್ಕೀಕರಣಕ್ಕಾಗಿ ಮುಂದುವರಿಸುವ ಸಾಮರ್ಥ್ಯವನ್ನು ಬಳಕೆ ಮಾಡಿಕೊಳ್ಳುವ ಜವಾಬ್ದಾರಿ ಆಡಳಿತ ಮಂಡಳಿಯದ್ದಾಗಿದೆ.

**<u>ಭಾ.ಲೆ.ಪ ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಲೆಕ್ಕ ಪರಿಶೋಧನೆ ನಡೆಸಲು ಲೆಕ್ಕಪರಿಶೋಧಕರ ಜವಾಬ್ದಾರಿ</u>**

ಲೆಕ್ಕಪರಿಶೋಧನೆ ತತ್ವಗಳನುಸಾರ, ಕಂಪನಿಯ ಭಾ.ಲೆ.ಪ(Ind AS) ತತ್ವ ಆರ್ಥಿಕ ನಿರೂಪಣಾ ಪಟ್ಟಿಗಳ ಪರಿಶೋಧನೆ ನಡೆಸಿ, ಪರಿಶೋಧನಾ ವರದಿ ಸಲ್ಲಿಸುವುದು ನಮ್ಮ ಜವಾಬ್ದಾರಿಯಾಗಿದೆ. ವರದಿಯ ಅಭಿಪ್ರಾಯ ನೀಡಿಕೆ ಭಾಗದಲ್ಲಿ ವಿವರಿಸಿರುವ ಅಭಿಪ್ರಾಯ ನೀಡಿಕೆ ನಿರಾಕರಣೆಗೆ ಆಧಾರವಾದ ಸಾಕಷ್ಟು ಸಾಕ್ಷ್ಯಗಳು ನಮಗೆ ಲಭ್ಯವಾಗದ ಕಾರಣ ಈ ಆರ್ಥಿಕ ನಿರೂಪಣಾ ವರದಿಗಳಿಗೆ ಸಂಬಂಧಿಸಿದ ಪರಿಶೋಧನಾ ಅಭಿಪ್ರಾಯವನ್ನು ನೀಡಲು ಆಗಲಿಲ್ಲ.

ಐ.ಸಿ.ಎ.ಐ (ICAI) ಹೊರಡಿಸಿರುವ ನೀತಿ ಸಂಹಿತೆಗಳ ಅಗತ್ಯತೆಗನುಸಾರ, ಕಂಪನಿಗೆ ಅನ್ವಯಿಸುವ ಕಾನೂನು ಹಾಗೂ ನಿಬಂಧನೆಗಳ ಅಡಿಯಲ್ಲಿ ನಿಗಧಿಪಡಿಸಿರುವ ನೀತಿ ಅಗತ್ಯತೆಗಳನುಸಾರ ನಾವು ಕಂಪನಿಯ ನಿರಾವಲಂಬಿತರು.

**<u>ಇತರ ಕಾನೂನಾತ್ಮಕ ಮತ್ತು ನಿಯಂತ್ರಿತ ಅಗತ್ಯತೆಗಳ ಬಗ್ಗೆ ವರದಿ:</u>**

1) ಕಂಪನಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿ.ಡಿ.ಎ) ಗೆ ಒಟ್ಟಾರೆ ರೂ. 112.11/– ಲಕ್ಷದ ಸಾಲವನ್ನು ಬೆಂಗಳೂರು ಅಭಿವೃದ್ದಿ ಪ್ರಾಧಿಕಾರಕ್ಕೆ ಮಂಜೂರು ಮಾಡಿತ್ತು (ಈ ಬಗ್ಗೆ 31ನೇ ಮಾರ್ಚ್‌ಗೆ ಲೆಕ್ಕ ಪುಸ್ತಕಗಳ ಪ್ರಕಾರ ನಿಂತಿರುವ ಬಾಕಿ ರೂ. 3,633.09 ಲಕ್ಷಗಳು) ಹಿಂದಿನ ಒಂದು ವರ್ಷದಲ್ಲಿ ಇದ್ದಂತೆ, ಕರ್ನಾಟಕ ಸರ್ಕಾರದ ಆಜ್ಞೆಯ ಪ್ರಕಾರ ಈ ಮೊತ್ತವನ್ನು ಆಸ್ತಿಗಳ ಅಡಮಾನ ಮಾಡಿ ಕೊಡಬೇಕಾಗಿತ್ತು ಕಂಪನಿಯ ಪರವಾಗಿ ಬಿ.ಡಿ.ಎ. ಯಾವುದೇ ಸಾಲಕ್ಕೆ ಪೂರಕ ಆಧಾರವನ್ನು ಬಿ.ಡಿ.ಎ ಒದಗಿಸಿರುವುದಿಲ್ಲ ಈ ವಿಷಯವನ್ನು ಕಾಯ್ದೆಯ ಕಲಂ 143(1) ರಡಿಯಲ್ಲಿ ವರದಿ ಮಾಡಲಾಗುತ್ತಿದೆ.

2) ಕೇಂದ್ರ ಸರ್ಕಾರ ನೀಡಿರುವ ಕಂಪನಿಯ (ಆಡಿಟರ್‌ಗಳ ವರದಿಯ) ಆದೇಶ 2016 ರ ಪ್ರಕಾರ, ಕಾಯ್ದೆ ಕಲಂ 143(11) ಅನ್ನು, **<u>"ಅನುಬಂಧ ಎ"</u>** ಪ್ರಕಾರ ಆಜ್ಞೆಯ ಕಂಡಿಕೆ 3 ಮತ್ತು 4 ಯಲ್ಲಿ ವಿಶಿಷ್ಟಪಡಿಸಿದ ವಿಷಯಗಳ ಬಗ್ಗೆ ಒಂದು ತಃಖ್ತೆಯನ್ನು ನೀಡುತ್ತಿದ್ದೇವೆ. ಇದು ನಮ್ಮ ಸ್ವಾಯತ್ತ ಲೆಕ್ಕ ಪರಿಶೋಧಕರ ಅಭಿಪ್ರಾಯದ ನಿರಾಕರಣೆಯ ವರದಿಯ ಸಂಭವನೀಯ ಪರಿಣಾಮಗಳಿಗೊಳಪಟ್ಟು ಮತ್ತು Ind AS ವಾರ್ಷಿಕ ವರದಿಯ ಆಂತರಿಕ ಆರ್ಥಿಕ ನಿಯಂತ್ರಣಗಳ ವರದಿಯಲ್ಲಿ ನೀಡುತ್ತಿದ್ದೇವೆ.

**3) ಕಾಯ್ದೆಯ ಕಲಂ 143(3) ರ ಪ್ರಕಾರ ನಾವು ವರದಿ ಮಾಡುವುದೇನೆಂದರೆ:**

ಎ) ಮೇಲಿನ ನಮ್ಮ ಸ್ವಾಯತ್ತ ಲೆಕ್ಕ ಪರಿಶೋಧಕರ ಅಭಿಪ್ರಾಯದ ನಿರಾಕರಣೆಯ ವರದಿಯ ಸಂಭಾವನೀಯ

ಪರಿಣಾಮಗಳು ಇದರಲ್ಲಿ ವಿವರಿಸಿದಂತೆ ನಮ್ಮ ಉತ್ತಮ ತಿಳುವಳಿಕೆ, ವಿಶ್ವಾಸಕ್ಕೆ ಅನುಸಾರವಾಗಿ ಮತ್ತು ಆಡಿಟ್ ಉದ್ದೇಶಕ್ಕಾಗಿ, ನಾವು ಕೇಳಿರುವ ಬೇಕಾದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದುಕೊಳ್ಳಲಾಗಲಿಲ್ಲ, ಆದರೆ ತಪಾಸಣೆಯ ದೃಷ್ಟಿಯಿಂದ ಇವುಗಳು ಅವಶ್ಯಕವಾಗಿತ್ತು.

ಬಿ) ಅಭಿಪ್ರಾಯದ ಜವಾಬ್ದಾರಿ ತೆಗೆದುಕೊಳ್ಳದ ವಿಭಾಗವನ್ನು ಹೊರತುಪಡಿಸಿ ಈ ಲೆಕ್ಕ ಪುಸ್ತಕಗಳನ್ನು ಪರೀಕ್ಷಿಸಿದಾಗ ಕಾನೂನಿನ ಅನ್ವಯ ಬೇಕಾಗಿರುವ ಎಲ್ಲಾ ಲೆಕ್ಕ ಪುಸ್ತಕಗಳನ್ನು ಕಂಪನಿ ನಿರ್ವಹಿಸಿದೆ ಎಂದು ಕಂಡು ಬಂದಿದೆ.

ಸಿ) ಮೇಲಿನ ನಮ್ಮ ಸ್ವಾಯತ್ತ ಲೆಕ್ಕ ಪರಿಶೋಧಕರ ಅಭಿಪ್ರಾಯದ ನಿರಾಕರಣೆಯ ವರದಿಯ ಸಂಭಾವನೀಯ ಪರಿಣಾಮಗಳು ಇದರಲ್ಲಿ ವಿವರಿಸಿರುವ ಆಯವ್ಯಯ ಪಟ್ಟಿ, ಲಾಭ ಮತ್ತು ನಷ್ಟಗಳ ಖಾತೆ, ಸಮಗ್ರ ಆದಾಯ ಪಟ್ಟಿ, ಸ್ವಾಮ್ಯ ಷೇರಿನ ಬದಲಾವಣೆಗಳ ಪಟ್ಟಿ ಮತ್ತು ನಗದು ಹರಿವಿನ ಪಟ್ಟಿ, ಇವುಗಳೆಲ್ಲವೂ ಸಹ ಲೆಕ್ಕದ ಪುಸ್ತಕಗಳೊಡನೆ ತಾಳೆ ಹೊಂದುತ್ತದೆ.

ಡಿ) ಮೇಲಿನ ನಮ್ಮ ಸ್ವಾಯತ್ತ ಲೆಕ್ಕ ಪರಿಶೋಧಕರ ಅಭಿಪ್ರಾಯದ ನಿರಾಕರಣೆಯ ವರದಿಯ ಸಂಭಾವನೀಯ ಪರಿಣಾಮಗಳು ಇದರಲ್ಲಿ ವಿವರಿಸಿದಂತೆ ಕಂಪನಿ ಕಾಯ್ದೆ (ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು–2013 ರನ್ವಯ ಸಿದ್ಧಪಡಿಸಿರುವ Ind AS ವಾರ್ಷಿಕ ವರದಿಗಳು ಕಂಪನಿ ಕಾಯ್ದೆ (ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು–2015 ರ ಕಲಂ 133 ರಲ್ಲಿ ತಿಳಿಸಿರುವ ತಿದ್ದುಪಡಿಯಂತೆ ತಾಳೆಯಾಗುತ್ತದೆಯೋ ಇಲ್ಲವೋ ಎಂದು ಹೇಳಲು ಸಾಧ್ಯವಾಗುತ್ತಿಲ್ಲ.

ಇ) ಮೇಲಿನ ನಮ್ಮ ಸ್ವಾಯತ್ತ ಲೆಕ್ಕ ಪರಿಶೋಧಕರ ಅಭಿಪ್ರಾಯದ ನಿರಾಕರಣೆಯ ವರದಿಯ ಸಂಭಾವನೀಯ ಪರಿಣಾಮಗಳು ಇದರಲ್ಲಿ ವಿವರಿಸಿದಂತೆ ಕಂಪನಿಯ ಕಾರ್ಯವಿಧಾನದ ಬಗ್ಗೆ ಏನಾದರೂ ಪ್ರತಿಕೂಲ ಪರಿಣಾಮವಿದೆಯೇ ಎಂಬುದನ್ನು ಹೇಳಲು ನಮಗೆ ಸಾಧ್ಯವಾಗುತ್ತಿಲ್ಲ.

ಎಫ್) ಕಂಪನಿ ವ್ಯವಹಾರಗಳ ಮಂತ್ರಾಲಯ ದಿನಾಂಕ: 05.06.2015 ರಂದು ಹೊರಡಿಸಿರುವ ಜಿ.ಎಸ್.ಆರ್–463(ಇ) ಆದೇಶವು ನಿರ್ದೇಶಕರ ಅನರ್ಹತೆ ತಿಳಿಸಿರುವ ಕಂಪನಿಯ ಕಾಯ್ದೆ 2013 ರ ಕಲಂ 164(2) ರ ಉಪಬಂಧಗಳು ಸರ್ಕಾರಿ ಕಂಪನಿಯಾದ್ದರಿಂದ ಈ ಕಂಪನಿಗೆ ಅನ್ವಯವಾಗುವುದಿಲ್ಲ.

ಜಿ) ಸ್ವಾಯತ್ತ ಲೆಕ್ಕ ಪರಿಶೋಧಕರ ಅಭಿಪ್ರಾಯದ ನಿರಾಕರಣೆಯ ವರದಿಯ ಲೆಕ್ಕಪತ್ರಗಳ ನಿರ್ವಹಣೆ/ಕಾಯ್ದಿರಿಸುವಿಕೆ/ಮಾರ್ಪಾಟು ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳು ಕಂಡಿಕೆ 3(ಬಿ) ರಲ್ಲಿ ಮತ್ತು ಅಭಿಪ್ರಾಯ ನಿರಾಕರಣೆಯ ವರದಿಯಲ್ಲಿ ತಿಳಿಸಲಾಗಿರುತ್ತದೆ.

ಎಚ್) ಕಂಪನಿಯ ಆರ್ಥಿಕ ವರದಿಗಳ ಬಗ್ಗೆ ಆಂತರಿಕ ಆರ್ಥಿಕ ನಿಯಂತ್ರಣಗಳ ಯಥೋಚಿತತೆ ಹಾಗೂ ಅಂತಹ ನಿಯಂತ್ರಣಗಳ ಆಚರಣೆಯ ಪರಿಣಾಮಗಳನ್ನು ನಮ್ಮ ಪ್ರತ್ಯೇಕ ವರದಿ **"ಅನುಬಂಧ–ಬಿ"** ರಲ್ಲಿ ನೀಡಲಾಗಿದೆ. ನಮ್ಮ ವರದಿಯು ಕಂಪನಿಯ ಆರ್ಥಿಕ ವರದಿಗಳ ಬಗ್ಗೆ ಆಂತರಿಕ ಆರ್ಥಿಕ ನಿಯಂತ್ರಣಗಳನ್ನು ಯಥೋಚಿತತೆ ಅಂತಹ ನಿಯಂತ್ರಣಗಳ, ಅಭಿಪ್ರಾಯ ನಿರಾಕರಣೆಯ ವರದಿಯಲ್ಲಿ ವಿವರಿಸಿದೆ.

ಐ) ಮೇಲೆ ಹೇಳಿದಂತೆ ವರದಿಯ ನಿರಾಕರಣೆ ಅಭಿಪ್ರಾಯದ ನಿರಾಕಣೆಯ ವರದಿಯ ವಿಷಯಗಳ ಸಂಭಾವನೀಯ ಪರಿಣಾಮಗಳನ್ನು ಹೊರತುಪಡಿಸಿ, ಕಂಪನಿಯ ಕಾಯ್ದೆ (ಆಡಿಟ್ ಮತ್ತು ಆಡಿಟರ್‌ಗಳೂ) ನಿಯಮಗಳು 2014 ರ ತಿದ್ದುಪಡಿ ನಿಯಮ 11 ರನ್ವಯ, ಸ್ವಾಯತ್ತ ಲೆಕ್ಕ ಪಡರಿಶೋಧಕರ ವರದಿಯಲ್ಲಿ ಸೇರ್ಪಡೆಯಾದ ವಿಷಯಗಳನ್ನು ಹೊರತು ಪಡಿಸಿ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ವಿವರಣೆ/ ಮಾಹಿತಿಗಳ ಪ್ರಕಾರ:

i) ಟಿಪ್ಪಣಿ 37.7 ಮತ್ತು 37.8 ರಲ್ಲಿ ಕಂಪನಿಯು ಬಾಕಿ ಇರುವ ನ್ಯಾಯಾಲಯ ಖಟ್ಲೆ/ ವ್ಯಾಜ್ಯಗಳ ಆರ್ಥಿಕ ಸ್ಥಿತಿಗತಿಗಳ ಮೇಲೆ ಅಂದಾಜು ಪರಿಣಾಮವನ್ನು ಎಷ್ಟರ ಮಟ್ಟಿಗೆ ಖಚಿತ ಪಡಿಸಿಕೊಳ್ಳಲಾಯಿತೋ ಅಷ್ಟರ ಮಟ್ಟಿಗೆ ಕಂಪನಿಯು ವರದಿ ಮಾಡಿದೆ.

ii) ಕಂಪನಿಯು ಡಿರೈವೆಟಿವ್ ಕಾಂಟ್ರಾಕ್ಟ್‌ಗಳೂ ಸೇರಿದಂತೆ ಯಾವುದೇ ದೀರ್ಘಕಾಲದ ಕರಾರುಗಳನ್ನು ಹೊಂದಿರುವುದಿಲ್ಲವಾದ್ದರಿಂದ, ಮುಂದಾಗಬಹುದಾದ ನಷ್ಟಗಳು ಮತ್ತು ಅದರನುಸಾರವಾಗಿಯೇ ಅವುಗಳ ಬಗ್ಗೆ ಯಾವುದೇ ಹವಣಿಕೆ ಅವಶ್ಯಕವಿಲ್ಲವೆಂದು ಕಂಪನಿಯು ಪರಿಗಣಿಸಲಾಗಿದೆ.

iii) ಕಂಪನಿಯಿಂದ ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣೆ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತಗಳಿರುವುದಿಲ್ಲ.

ಕಂಪನಿ ಕಾಯ್ದೆ ಕಲಂ 143(5) ರಲ್ಲಿ ಉಲ್ಲೇಖಿಸಿರುವಂತೆ, ನಾವು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ನೀಡಿದ ನಿರ್ದೇಶನಗಳನ್ನು ಪರಿಗಣಿಸಿದ್ದೇವೆ ಮತ್ತು ಅದರ ಮೇಲೆ ತೆಗೆದುಕೊಂಡ ಕ್ರಮಗಳು ಮತ್ತು ಲೆಕ್ಕ ಪತ್ರಗಳ ಮತ್ತು Ind AS ವಾರ್ಷಿಕ ವರದಿಯ ಮೇಲೆ ಇದರ ಪರಿಣಾಮವನ್ನು ಅನುಬಂಧ 'ಸಿ' ರಲ್ಲಿ ನೀಡಲಾಗಿದೆ.

**ಬಿ.ಕೆ.ರಾಮಧ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್,**
**FRN: 002878S/S200021**

ಸಹಿ/–
**ವಾಸುಕಿ.ಹೆಚ್.ಎಸ್.**
**ಪಾಲುಗಾರರು,**
**ಸದಸ್ಯತ್ವ ಸಂಖ್ಯೆ 212013**
**UIDN: 21212013AAAAGA1629**

**ಸ್ಥಳ:** ಬೆಂಗಳೂರು
**ದಿನಾಂಕ:** ಡಿಸೆಂಬರ್ 24, 2021

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ ಎ"

ನಮ್ಮ ಇತರ ಕಾನೂನು ಮತ್ತು ವಿನಿಮಯ/ನಿಯಂತ್ರಿತ ಅಗತ್ಯತೆಗಳು' ವಿಭಾಗದಲ್ಲಿನ ಸಮ ದಿನಾಂಕದ, ಕಂಡಿಕೆ 2 ರ ವರದಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸದಸ್ಯರ ಗಮನ ಸೆಳೆದಂತೆ 31ನೇ ಮಾರ್ಚ್ 2021 ರ ವರ್ಷಾಂತ್ಯಕ್ಕೆ ಭಾರತೀಯ ಲೆಕ್ಕ ಪದ್ದತಿಗಳ ತತ್ವಗಳ ಆರ್ಥಿಕ ನಿರೂಪಣಾ ಪಟ್ಟಿ ಉಲ್ಲೇಖಿಸಿ ಆರ್ಥಿಕ ವರದಿಯ ಸಲ್ಲಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣದ ಬಗೆಗೆ ನಮ್ಮ ಪ್ರತ್ಯೇಕ ವರದಿಯಲ್ಲಿ ತಿಳಿಸಿದಂತೆ, ನಾವು ವರದಿ ಮಾಡುವುದೇನೆಂದರೆ:

### (i) ಸ್ಥಿರಾಸ್ತಿಗಳು (ಅವುಗಳನ್ನು ಆಸ್ತಿ, ಸ್ಥಾವರ ಮತ್ತು ಉಪಕರಣಗಳು ಎಂದು ಉಲ್ಲೇಖಿಸಲಾಗಿದೆ.)

ಎ)ಕಂಪನಿಯು ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ , ಕಂಪನಿಯು ಸ್ಥಿರಾಸ್ತಿಯ ಬಗೆಗೆ ವಿವರಗಳು , ಅದರ ಪರಿಮಾಣ, ಗಾತ್ರ, ಅದರ ಇರುವಿಕೆ, ಸ್ಥಳ ನಿರ್ದೇಶ, ಆಸ್ತಿಯ, ಸ್ಥಾವರಗಳ ಮತ್ತು ಉಪಕರಣಗಳ ಕೋಡಿಂಗ್ ಸಿಸ್ಟಮ್, ಅದರಲ್ಲಿ ಪೂರ್ಣ ಒಡೆತನದ ಭೂಮಿ, ಪಟ್ಟಾ / ಬಾಡಿಗೆಯ ಭೂಮಿ, ಮತ್ತು ಸಹ ಆರ್ಥಿಕ ಪಟ್ಟಿಯ ಟಿಪ್ಪಣಿ 2 ಇದರ ಬಹಳಷ್ಟು ಅಡಿ ಟಿಪ್ಪಣಿಗಳಲ್ಲಿ ವಿವರಿಸಿದಂತೆ, ವಿಭಾಗಗಳಲ್ಲಿನ ಭೂ ದಾಖಲೆಗಳು/ಘಟಕಗಳ ಬಗೆಗೆ ಸಾಕಷ್ಟು ದಾಖಲೆಗಳನ್ನು ನಿರ್ವಹಿಸುತ್ತಿಲ್ಲ ಇವುಗಳನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲ್ಪಡುತ್ತಿರುವ ದಸ್ತಾವೇಜುಗಳೊಡನೆ ಸಮನ್ವಯಗೊಳಿಸಬೇಕಾಗಿದೆ.

ಬಿ) ನಮಗೆ ಕಂಪನಿಯು ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ತನ್ನ ಯಾವುದೇ ಆಸ್ತಿಯನ್ನು ಭೌತಿಕವಾಗಿ ತಪಾಸಣೆ/ತನಿಖೆ ಮಾಡಿಲ್ಲ, ಕೇವಲ ಕೆಲವು ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಹೊರತು ಪಡಿಸಿ ನಾವು ಕಂಡುಕೊಂಡ ಯಾವುದೇ ಭೌತಿಕ ವ್ಯತ್ಯಾಸಗಳು ಅವುಗಳನ್ನು ಸರಿಯಾಗಿ ಲೆಕ್ಕದ ಪುಸ್ತಕದಲ್ಲಿ ನಮೂದಿಸಿ ಲೆಕ್ಕಾಚಾರ ಮಾಡಲು ಆಗಿಲ್ಲ.

ಸಿ) ಕಂಪನಿಯು ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಆರ್ಥಿಕ ಪಟ್ಟಿಯ ಟಿಪ್ಪಣಿ 2.1 ಮತ್ತು 2.2 ಇವುಗಳಿಗೆ ತಮ್ಮ ಗಮನವನ್ನು ಸೆಳೆಯಲಾಗಿದ. ಅದರಲ್ಲಿ ವಿಭಾಗ/ಘಟಕ ಮಟ್ಟದ್ದಲ್ಲಿನ ಭೂ ದಾಖಲೆಗಳು, ಇವುಗಳನ್ನು ಕಂಪನಿಯ ಕಾರ್ಯಾಲಯದಲ್ಲಿನ ದಾಖಲೆ/ಲೆಕ್ಕಪತ್ರಗಳೊಡನೆ ಸಮನ್ವಯ ಮಾಡಲಾಗಲಿಲ್ಲ ಮತ್ತು ಹಾಗಾಗಿ ನಮಗೆ ಸ್ಥಿರಾಸ್ತಿಗಳ ಸ್ವಾಮ್ಯದ ಬಗೆಗಿನ ಪತ್ರಗಳು ಕಂಪನಿಯ ಹೆಸರಿನಲ್ಲಿದೆಯೇ ಎಂದು ಹೇಳಲಾಗುವುದಿಲ್ಲ.

### (ii) ದಾಸ್ತಾನುಗಳು (Inventories)

ಎ) ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಆರ್ಥಿಕ ಪಟ್ಟಿಯ ಟಿಪ್ಪಣಿ 6.1 ರಲ್ಲಿ ವರದಿಯಾದಂತೆ ಅಪ್ರಚಲಿತ/ಬಳಕೆಯಲ್ಲಿಲ್ಲದ್ದವು ಎಂದು ಗುರುತಿಸಲ್ಪಟ್ಟವುಗಳನ್ನು ಹೊರತು ಪಡಿಸಿ ಚಾಲ್ತಿ ವರ್ಷದಲ್ಲಿ ವ್ಯವಸ್ಥಾಪಕ ವರ್ಗದಿಂದ, ಉಚಿತ ಕಾಲಕಾಲಕ್ಕೆ ಸ್ವತ್ತಿನ ವಿವರಣ ಪಟ್ಟಿಯಂತೆ ಭೌತಿಕವಾಗಿ ತಪಾಸಣೆ ಮಾಡಲ್ಪಟ್ಟಿರುತ್ತದೆ.

ಬಿ) ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಭೌತಿಕ ತಪಾಸಣೆಯಲ್ಲಿ ಕಂಡು ಬಂದ ವ್ಯತ್ಯಾಸಗಳನ್ನು , ಕೇವಲ ಕೆಲವು ನಿರ್ದಿಷ್ಟ ಅಪ್ರಚಲಿತ/ಬಳಸಲಾಗದ ಸಾಮಗ್ರಿಗಳನ್ನು ಹೊರತು ಪಡಿಸಿ, ಲೆಕ್ಕ ಪುಸ್ತಕಗಳಲ್ಲಿ ಸರಿಯಾಗಿ ವ್ಯವಹರಿಸಲಾಗಿದೆ.

### (iii) ಸಾಲಗಳು ಮತ್ತು ಮುಂಗಡಗಳು

ನಮ್ಮ ಅಭಿಪ್ರಾಯದ ಪ್ರಕಾರ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಈ ಕಂಪನಿಯು ಇತರ ಕಂಪನಿಗಳಿಗೆ, ಫರ್ಮ್‌ಗಳಿಗೆ, ನಿಯಮಿತ ಹೊಣೆಗಾರಿಕೆಯ ಪಾಲುದಾರಿಕೆ ಅಥವಾ ಕಂಪನಿ ಅಧಿನಿಯಮ 2013 ರ ಕಲಂ 189, ಇವುಗಳಿಗೆ ಯಾವುದೇ ಸಾಲ, ಭದ್ರತೆಯುಳ್ಳ/ ಭದ್ರತೆಯಿಲ್ಲದ ಸಾಲಗಳನ್ನು ನೀಡಿಲ್ಲ. ಹಿಂದಿನ ವರ್ಷದಲ್ಲಿ ಕಂಪನಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿ.ಡಿ.ಎ) ಅದನ್ನು ಕಂಪನಿಯ ಕಾಯಿದೆಯ ಕಲಂ 189 ರ ಪ್ರಕಾರ ಅದನ್ನು ಪಕ್ಷಕಾರ ಎಂದು ಪರಿಗಣಿಸಲಾಗದು ಮತ್ತು ಅದರನುಸಾರವಾಗಿಯೇ, ಆಜ್ಞೆಯ ಕಂಡಿಕೆ(3) ಇದಕ್ಕೆ ಅನ್ವಯವಾಗುವುದಿಲ್ಲ.

## (iv) ಸಾಲಗಳು, ಹೂಡಿಕೆಗಳು ಮತ್ತು ಗ್ಯಾರಂಟಿಗಳು

ನಮ್ಮ ಅಭಿಪ್ರಾಯದ ಪ್ರಕಾರ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯ ಕಾಯಿದೆಯ 2013ರ ಕಲಂ 185 ರಡಿಯಲ್ಲಿ ಈ ಕಂಪನಿಯು ನಿರ್ದೇಶಕರಿಗೆ, ಇತರರಿಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ. ಅಥವಾ 2013 ರ ಕಂಪನಿ ಕಾಯ್ದೆಯ ಕಲಂ 186 ರಡಿಯಲ್ಲಿ ಬರುವ ಸಂಸ್ಥೆಗಳಿಗೆ ಯಾವುದೇ ಸಾಲ, ಹೂಡಿಕೆ, ಗ್ಯಾರಂಟಿ ಮತ್ತು ಭದ್ರತೆ/ಜಾಮೀನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರು ಮಾಡಿರುವ ಸಾಲದ ಮೊತ್ತ ರೂ. 11,211/– ಲಕ್ಷಗಳು, ಅದರಲ್ಲಿ ರೂ. 8,757.38 ಲಕ್ಷಗಳನ್ನು ಹೋದ ವರ್ಷವೇ ವಿತರಿಸಲಾಗಿದೆ ಚಾಲ್ತಿ ವರ್ಷದಲ್ಲಿ ಯಾವುದೇ ಮೊತ್ತವನ್ನು ಸಹ ವಿತರಣೆ ಮಾಡಿಲ್ಲ. ಈ ಬಗೆಗೆ ಕಂಪನಿಯು ಕರ್ನಾಟಕ ಸರ್ಕಾರದ ಪೂರ್ವ ಅನುಮತಿಯನ್ನು ಪಡೆದು ಕೊಂಡಿತ್ತಾದರಿಂದ, ಪತ್ರ ದಿನಾಂಕ ಅಕ್ಟೋಬರ್ 14, 2019 ಆಜ್ಞೆ.(4) ರಡಿಯಲ್ಲಿ ವರದಿ ಮಾಡುವುದರ ಅವಶ್ಯಕತೆಯು, ಎಂ.ಸಿ.ಎ. ಅಧಿಸೂಚನೆ ಎಫ್ ನಂ. 12/2014–ಸಿ ಎಲ್ ವಿ (ಜಿ.ಎಸ್.ಆರ್. 463–ಇ) ದಿನಾಂಕ ಜೂನ್ 5, 2005 ಪ್ರಕಾರ ಅನ್ವಯವಾಗುವುದಿಲ್ಲ.

## (v) ಠೇವಣಿಗಳು

ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಪಡೆದುಕೊಂಡಿಲ್ಲ, ಕಂಪನಿಯ ಅಧಿನಿಯಮ 2013ರ ಕಲಂ 73 ರಿಂದ 76 ಮತ್ತು ಅದರಡಿಯಲ್ಲಿ ರಚಿಸಲ್ಪಟ್ಟ ನಿಯಮಗಳ ಅನುಸಾರವಾಗಿ, ಡೆಪಾಸಿಟ್ ಕಂಟ್ರಿಬ್ಯೂಷನ್ ವರ್ಕ್ಸ್, (ಡಿ.ಸಿ.ಡಬ್ಲು) (ಅದರ ಮೊತ್ತವನ್ನು ಕೊನೆಗಳಿಸಲಾಗದ / ನಿರ್ಧರಿಸಲಾಗದವು) ನವೆಂಬರ್ 30, 2012ರ ನಂತರ ವಸೂಲು ಮಾಡಿದ ನೆಟ್ ವರ್ಕ್ ಅಗ್ಮೆಂಟೇಷನ್ ಚಾರ್ಜಸ್, ಮೊತ್ತ ರೂ. 1,507.69 ಲಕ್ಷಗಳು, ಇದು ಕೆ.ಇ.ಆರ್.ಸಿ. ನಿರ್ದೇಶನಗಳಿಗೆ ವಿರುದ್ಧವಾಗಿದೆ ಅಧಿನಿಯಮ/ಕಾಯಿದೆ/ ನಿಯಮಗಳಿಗನುಸಾರವಾಗಿ ನಿಗದಿತ ಅವಧಿಯಲ್ಲಿ ಹಿಂದಿರುಗಿಸಲಾಗಲಿಲ್ಲ ಮೇಲ್ವಿಚಾರಣ/ ಉಸ್ತುವಾರಿ ಶುಲ್ಕಗಳು 5% ಬದಲು 10% ದರದಲ್ಲಿ ವಸುಲಾತಿ ಮಾಡಿ ಇದು ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ ಇ.ಎನ್. 21 ವಿ.ಎಸ್.ಸಿ 2014 ತಾರೀಖು ಮೇ 22, 2014 ಮತ್ತು ಹಿಂದಿರುಗಿಸಲು ಬಾಕಿ ಇದೆ (ಅದರ ಮೊತ್ತವನ್ನು ಕೊನೆಗಳಿಸಲಾಗದ/ನಿರ್ಧರಿಸಲಾಗದವು) ತದನಂತರದಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇದರ ನಿರ್ದೇಶನಗಳ ಬಗೆಗೆ ನಮಗೆ ಅಭಿಪ್ರಾಯ/ಟೀಕೆ ಮಾಡಲು ಸಾಧ್ಯವಾಗುತ್ತಿಲ್ಲ, ಮತ್ತು ಕಲಂ 73 ರಿಂದ 76 ರ ವರೆಗಿನ ಉಪಬಂಧಗಳ ಬಗೆಗೆ ಆಥವಾ ಕಾಯಿದೆಯ ಇತರ ಯಾವುದೇ ಉಪಬಂಧಗಳ ಬಗೆಗೆ ಮತ್ತು ಅದರಡಿಯಲ್ಲಿ ಮಾಡಿದ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬ ಬಗೆಗೆ ಟೀಕೆ ಮಾಡಲು ಸಾಧ್ಯವಾಗಿಲ್ಲ.

## (vi) ಖರ್ಚು ದಾಖಲೆಗಳು

ವಿದ್ಯುತ್ ಪ್ರಸರಣ ಬಗೆಗಿನ ಖರ್ಚು ದಾಖಲೆಗಳನ್ನು ನಿರ್ವಹಣೆ ಮಾಡುವ ಬಗೆಗೆ ಕೇಂದ್ರ ಸರ್ಕಾರವು ಕಾಯಿದೆಯ ಕಲಂ 148(1) ರಡಿಯಲ್ಲಿ ನಿಗದಿ ಪಡಿಸಿದೆ. ನಮಗೆ ನೀಡಿದ / ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಅಂತಹ ದಾಖಲೆಗಳನ್ನು ಲೆಕ್ಕಪತ್ರಗಳನ್ನು ಆರ್ಥಿಕ ವರ್ಷ 2019–20 ರ ಸಾಲಿಗೆ ಕಾಸ್ಟ್ ಆಡಿಟರ್ ವರದಿಯಲ್ಲಿ ವಿವರಿಸಿದಂತೆ ನಿರ್ವಹಿಸಿದೆ. ಕಂಪನಿಯು ಆರ್ಥಿಕ ವರ್ಷ 2020–21ರ ಖರ್ಚು ದಾಖಲೆಗಳನ್ನು ಕಾಸ್ಟ್ ರೆಕಾರ್ಡ್ಸ್ ಅನ್ನು ಇನ್ನು ನಿರ್ವಹಿಸಿಲ್ಲ.

## (vii) ಶಾಸನ ಬದ್ಧ ಬಾಕಿಗಳು

ಎ. ನಮಗೆ ನೀಡಿದ / ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿರ್ವಿವಾದಿತವಾದ, ತನಗೆ ಅನ್ವಯಿಸುವ ಶಾಸನ ಬದ್ದ ಬಾಕಿ ಮೊತ್ತವನ್ನು, ಅದರಲ್ಲಿ ಭವಿಷ್ಯ ನಿಧಿ, ನೌಕರರ ರಾಜ್ಯ ವಿಮಾ, ವರಮಾನ ತೆರಿಗೆ, ಜಿ.ಎಸ್.ಟಿ, ಕರಗಳು/ಸೆಸ್, ರಾಯಲ್ಟಿ ಮತ್ತಿತರ ಶಾಸನಬದ್ಧ ಬಾಕಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಕಟ್ಟುವುದು/ಜಮಾ/ ನಿಯತವಾಗಿ ಜಮಾ ಮಾಡುತ್ತಿದೆ.

ಯಾವುದೇ ವಿವಾದ ರಹಿತ ಶಾಸನಬದ್ಧ ಬಾಕಿಯು, ಅವು ಸಂದಾಯ ಮಾಡಲು ಅರ್ಹ ದಿನಾಂಕದಿಂದ, ತುಲನ ಪತ್ರದ ದಿನದೊಳಗೆ, ಆರು ತಿಂಗಳ ಕಾಲ/ಮೇಲೆ ಬಾಕಿ ನಿಂತಿರುವುದಿಲ್ಲ, ಇದರಲ್ಲಿ ಸೇವಾ ಶುಲ್ಕ ರೂ. 38.01 ಲಕ್ಷಗಳು ಇದನ್ನು ಹೊರತು ಪಡಿಸಿ (ಎಫ್.ಎಸ್. ಟಿಪ್ಪಣಿ 29.5 ರಲ್ಲಿ ವಿವರಿಸಿದಂತೆ ಮೊತ್ತವನ್ನು ನಿರ್ಧರಿಸಿಲ್ಲ) ಮತ್ತು ಜಿ.ಎಸ್.ಟಿ, ಅವುಗಳನ್ನು ಲೆಕ್ಕ ಪುಸ್ತಕಗಳು ಮತ್ತು ಬ್ಯಾಂಕ್ ಖಾತೆಯೊಡನೆ ಲೆಕ್ಕ ಸಮನ್ವಯ ಆದ ನಂತರ ಮಾಡಲಾಗುವುದು.

ಬಿ. ನಮಗೆ ನೀಡಿದ / ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕೆಳಗೆ ತೋರಿಸಿರುವುದರ ಹೊರತಾಗಿ ಬೇರ್‍ಯಾವುದೇ ವರಮಾನ ತೆರಿಗೆ, ಜಿ.ಎಸ್.ಟಿ ಮತ್ತು ಸೇವಾ ತೆರಿಗೆಗಳು ಯಾವುದೇ ವಿವಾದದ ಕಾರಣದಿಂದ ಜಮಾ ಮಾಡದೇ ಬಾಕಿಯಾಗಿ ಉಳಿದುಕೊಂಡಿಲ್ಲ.

| ಶಾಸನ/ಕಾನೂನಿನ ಹೆಸರು | ಬಾಕಿಯ ಸ್ವಭಾವ | ಮೊತ್ತ ರೂಪಾಯಿಗಳಲ್ಲಿ | ಅವಧಿ | ಯಾವ ನ್ಯಾಯಾಧಿಕರಣದಲ್ಲಿ ವಿವಾದದಕಾರಣ ಬಾಕಿ ಉಳಿದಿದೆ |
|---|---|---|---|---|
| ಸೇವಾ ತೆರಿಗೆಗಳು | ಸೇವಾ ತೆರಿಗೆಗಳು (ವಿ.ಎಸ್.ಎ. ಟಿ. ಶುಲ್ಕಗಳು) | 1,68,568/– | 2011–12 | ಸಿ.ಇ.ಎಸ್.ಟಿ.ಎ.ಟಿ |
| ಸೇವಾ ತೆರಿಗೆಗಳು | ಸೇವಾ ತೆರಿಗೆಗಳು [ಸ್ಥಿರಾಸ್ತಿಯನ್ನು ಬಾಡಿಗೆಗೆ ನೀಡುವುದು] | 1,02,03,581/– | 2007–08 ಯಿಂದ 2009–10 | ಸಿ.ಇ.ಎಸ್.ಟಿ.ಎ.ಟಿ |
| | | 16,28,588/– | ಏಪ್ರಿಲ್2010 ರಿಂದ ಮಾರ್ಚ್2011 | |
| | | 37,70,652/– | ಏಪ್ರಿಲ್2011 ರಿಂದ ಮಾರ್ಚ್2012 | |
| | | 12,30,928/– | ಏಪ್ರಿಲ್2012 ರಿಂದ ಜೂನ್2012 | ಕಮೀಷನರ್ (ಮೇಲ್ಮನವಿ) |
| | | 17,86,173/– | ಜುಲೈ 2012 ರಿಂದ ಸೆಪ್ಟೆಂಬರ್ 2013 | ಕಮೀಷನರ್ (ಮೇಲ್ಮನವಿ) |
| ಸೇವಾ ತೆರಿಗೆಗಳು | ಸೇವಾ ತೆರಿಗೆ (ತಾಂತ್ರಿಕ ತಪಾಸಣೆ ಮತ್ತು ಪ್ರಮಾಣೀಕರಣ ಸಂಬಂಧ/ಸೇವೆಗಳ–ಹೋಗಿ–ಬರುವ ಖರ್ಚುಗಳು. | 3,62,972/– | ಏಪ್ರಿಲ್2010 ಯಿಂದ ಸೆಪ್ಟೆಂಬರ್ 2010 | ಸಿ.ಇ.ಎಸ್.ಟಿ.ಎ.ಟಿ |
| | | 1,94,104/– | ಏಪ್ರಿಲ್2011 ಯಿಂದ ಸೆಪ್ಟೆಂಬರ್ 2012 | |

| | | | | |
|---|---|---|---|---|
| | | 3,75,086/– | ಅಕ್ಟೋಬರ್ 2011 ರಿಂದ ಮಾರ್ಚ್ 2012 | |
| ಸೇವಾ ತೆರಿಗೆಗಳು | ಸೇವಾ ತೆರಿಗೆ [ಠೇವಣಿ, ಧಾರಣ ಹಣ ಮತ್ತು ವಸೂಲು ಮಾಡಿದ ದಂಡ–ಇದರ ಹಿಂದಿರಿಸುವಿಕೆಯ ನಿರ್ಧಾರವನ್ನು ಕಾಯ್ದಿಟ್ಟು, ಮೂರು ವರ್ಷಗಳ ನಂತರ ವರಮಾನಕ್ಕೆ ವರ್ಗಾಯಿಸಲಾಗಿದೆ] | 14,86,38,823/– | ಜುಲೈ 2012 ರಿಂದ ಮಾರ್ಚ್ 2015 | ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ |
| ಸೇವಾ ತೆರಿಗೆಗಳು | | 22,42,646/– | ಏಪ್ರಿಲ್ 2015 ಇಂದ ಮಾರ್ಚ್ 2016 | ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ |
| ಸೇವಾ ತೆರಿಗೆಗಳು | ಸೇವಾ ತೆರಿಗೆಗಳು [ಮೇಲ್ವಿಚಾರಣ ಶುಲ್ಕಗಳು] | 1,96,62,528/– | ಜುಲೈ 2012 ರಿಂದ ಆಗಸ್ಟ್ 2014 | ಸಿ.ಇ.ಎಸ್.ಟಿ.ಎ.ಟಿ. |
| ಸೇವಾ ತೆರಿಗೆಗಳು | ಸೇವಾ ತೆರಿಗೆ/ [ಕರ್ನಾಟಕ ಸರ್ಕಾರಕ್ಕೆ ಪಾವತಿಸಿದ ಖಾತರಿ/ ಗ್ಯಾರಂಟಿ ಕಮೀಷನ್ | 72,344/– | ಏಪ್ರಲ್2012 ರಿಂದ ಮಾರ್ಚ2013 ಮತ್ತು ಜುಲೈ2012 ರಿಂದ ಮಾರ್ಚ್ 2013 | ಸಿ.ಇ.ಎಸ್.ಟಿ.ಎ.ಟಿ. |
| ಕೇಂದ್ರೀಯ ಜಿ.ಎಸ್.ಟಿ. 2017 | ವಿಳಂಬ ಪಾವತಿಯ ಮೇಲೆ ಬಡ್ಡಿ | 6,78,448/– | ಆಗಸ್ಟ್ 17 ರಿಂದ ಡಿಸೆಂಬರ್ 2019 | ಕೇಂದ್ರ ತೆರಿಗೆಗಳ ಅಧೀಕ್ಷಕ/ಸೂಪರಿಟೆಂಡೆಂಟ್/ ಉತ್ತರ ವಿಭಾಗ |

| | | | | |
|---|---|---|---|---|
| ಆದಾಯ ತೆರಿಗೆ ಅಧಿನಿಯಮ 1961 | ತಗಾದೆ ತಳ್ಳಿಹಾಕಿದ ಕಾರಣ ತಗಾದೆ ತಳ್ಳಿಹಾಕಿದ ಕಾರಣ | 48,17,687/– | ಕರ ನಿರ್ಧರಣ ವರ್ಷ 2017 2018 | ಆದಾಯ ತೆರಿಗೆ ಕಮೀಷನರ್, ಮೇಲ್ಮನವಿ, [ಸಿ.ಐ.ಟಿ.(ಮೇ)] |
| ಆದಾಯ ತೆರಿಗೆ ಅಧಿನಿಯಮ 1961 | ಬಂಡವಾಳ/ಸ್ಥಿರಾಸ್ತಿಯ ಮೇಲಿನ ಗಳಿಕೆಯ ತೆರಿಗೆ ವಿನಾಯತಿಯ ನಿರಾಕರಣೆಯಿಂದಾಗಿ, ವರಮಾನ ತೆರಿಗೆ ಬಾಕಿ, | 16,93,190/– | ಕರ ನಿರ್ಧರಣ ವರ್ಷ 2018–19 | ಆದಾಯ ತೆರಿಗೆ ಕಮೀಷನರ್, ಮೇಲ್ಮನವಿ, [ಸಿ.ಐ.ಟಿ.(ಮೇ)] |
| ಆದಾಯ ತೆರಿಗೆ ಅಧಿನಿಯಮ 1961 | ಖರ್ಚು ತಗಾದೆ ತಳ್ಳಿಹಾಕಿದ ಕಾರಣ, ತಗಾದೆ ತಳ್ಳಿಹಾಕಿದ ಕಾರಣ ಒತ್ತಾಯ/ಬೇಡಿಕೆ | 26,840/– | ಕರ ನಿರ್ಧರಣ ವರ್ಷ 2012–13 | ಆದಾಯ ತೆರಿಗೆ ಕಮೀಷನರ್, ಮೇಲ್ಮನವಿ, [ಸಿ.ಐ.ಟಿ.(ಮೇ)] |

(viii) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗೆ ಅನುಸಾರವಾಗಿ, ಸಾಲ ಅಥವಾ ಬ್ಯಾಂಕ್, ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರದಿಂದ ಪಡೆದ ಸಾಲ/ ಮುಂಗಡಗಳ ಪುನ ಕಟ್ಟುವಿಕೆ/ವಾಪಸಾತಿಯಲ್ಲಿ ಕಂಪೆನಿಯು ತಪ್ಪಿತಸ್ತವಾಗಿಲ್ಲ. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಗಳಂತೆ, ಕಂಪನಿಯು ಯಾವುದೇ ಹಣವನ್ನು ಡಿಬೆಂಚರ್‌ಗಳ ಮೂಲಕ ಸಂಗ್ರಹ ಮಾಡಿಲ್ಲ.

(ix) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗೆ ಅನುಸಾರವಾಗಿ, ಕಂಪನಿಯು ಪ್ರಾರಂಭಿಕ ಪಬ್ಲಿಕ್ ಆಫರ್ ಮೂಲಕ ಅಥವಾ ಮುಂದುವರೆದ ಪಬ್ಲಿಕ್ ಆಫರ್ ಅದರಲ್ಲಿ ಋಣ ಲಿಖಿತ ಪತ್ರ ಮೂಲಕ ಕಂಪನಿಯು ಹಣ ಸಂಗ್ರಹ ಮಾಡಿಲ್ಲ. ಬಂಡವಾಳ ವಸ್ತುಗಳ ಖರೀದಿ ಮತ್ತು ದುಡಿಯುವ ಬಂಡವಾಳ ಉದ್ದೇಶಗಳಿಗಾಗಿ ಬ್ಯಾಂಕ್ ಗಳಿಂದ ಪಡೆದ ಅವಧಿ ಸಾಲ, ಸಾಕಷ್ಟು /ಅವಶ್ಯಕವಾದ ದತ್ತಾಂಶ, ಅಂತಹ ಸಂಬಂಧ ಪಟ್ಟ ಸಾಲಗಳ ಬಗ್ಗೆ ವಿವರ ಸಿಗದಿದ್ದ ಕಾರಣ, ಈ ಅವಧಿ ಸಾಲಗಳನ್ನು ಅವರು ಯಾವ ಉದ್ದೇಶಕ್ಕೆ ಪಡೆದುಕೊಳ್ಳಲಾಯಿತೋ ಅದೇ ಉದ್ದೇಶಕ್ಕೆ ಬಳಸಿದಯೇ ಎಂಬುದರ ಬಗೆಗೆ ಅಭಪ್ರಾಯ/ಟೀಕೆ ಮಾಡಲಾಗಲಿಲ್ಲ.

(x) ನಮ್ಮ ಉತ್ತಮ ಪರಿಜ್ಞಾನ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ನಮ್ಮ ಆಡಿಟ್ ಕಾರ್ಯಕ್ರಮದಲ್ಲಿ ಕಂಪನಿಯಿಂದ ಅಥವಾ ಕಂಪನಿಗೆ/ಯು ಯಾವುದೇ ಮೋಸ /ವಂಚನೆ ಅದು ಕಂಪನಿಯ ಅಧಿಕಾರಿಗಳು ಅಥವಾ ನೌಕರರಿಂದ ಆಗಿರುವುದನ್ನು ನಾವು ಗಮನಿಸಿಲ್ಲ, ಕೆಲವು ನಿರ್ದಿಷ್ಟ ನೌಕರರ ವಿರುದ್ಧ ಇಲಾಖೆಯ ವಿಚಾರಣೆಗಳು ಹೊರತು ಪಡಿಸಿದಂತೆ, ಈ ವಿಷಯ/ಖಂಡದ ಬಗೆಗೆ ನಾವು ಅಂತಹ ವರದಿಯಾದ ಪ್ರಕರಣಗಳ ಮೇಲೆ ಕಂಪನಿಯು ನಿರ್ಣಯ ಬಾಕಿಯಿರುವುದರಿಂದ ನಾವು ಈ ಬಗೆಗೆ ಅಭಿಪ್ರಾಯ/ಟೀಕೆ ಮಾಡಲು ಸಾಧ್ಯವಾಗುತ್ತಿಲ್ಲ.

(xi) ಈ ಕಂಪನಿಯು ಒಂದು ಸರ್ಕಾರಿ ಕಂಪನಿಯಾಗಿದ್ದು, ಕಂಪನಿ ಕಾಯಿದೆ 2013 ರ ಕಲಂ 197 ರಿಂದ ವಿನಾಯಿತಿ ಹೊಂದಿದೆ, ವ್ಯವಸ್ಥಾಪಕರ/ನಿರ್ದೇಶಕರ ಸಂಭಾವನೆ/ಸಂಬಳ ಇತ್ಯಾದಿಗಳ ಷರತ್ತುಗಳು ಅದು ಎಂ.ಸಿ.ಎ. ಆಧಿಸೂಚನೆ ಸಂಖ್ಯೆ ಜಿ ಎಸ್ ಆರ್ 463 (ಇ) ದಿನಾಂಕ 05 ನೇ ಜೂನ್ 2015. ತದನುಸಾರವಾಗಿ ಇದರ ಕಂಡಕೆ (11)ಆಜ್ಞೆಯು ಅನ್ವಯವಾಗುವುದಿಲ್ಲ.

(xii) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ಈ ಕಂಪೆನಿಯು ಒಂದು ನಿಧಿ ಕಂಪೆನಿಯಲ್ಲ, ಹಾಗಾಗಿ ಆಜ್ಞೆಯ ಕಂಡಿಕೆ (12) ಅನ್ವಯವಾಗುವುದಿಲ್ಲ.

(xiii) ಈ ಕಂಪನಿಯು ಒಂದು ಸರ್ಕಾರಿ ಕಂಪನಿಯಾಗಿದ್ದು, ಕಂಪನಿ ಕಾಯಿದೆ 2013 ರ ಕಲಂ 177 ಮತ್ತು ಕಲಂ 188 ರಿಂದ ವಿನಾಯಿತಿ ಹೊಂದಿದೆ, ಇದು ಕೆಲವು ಪಕ್ಷಕಾರರೊಡನೆ ವ್ಯಾಪಾರ/ವ್ಯವಹಾರಗಳ ಬಗೆಗೆ, ಅದು ಎಂ.ಸಿ.ಎ. ಅಧಿಸೂಚನೆ ಸಂಖ್ಯೆ ಜಿ ಎಸ್ ಆರ್ 463 (ಇ) ದಿನಾಂಕ 05 ನೇ ಜೂನ್ 2015. ತದನುಸಾರವಾಗಿ ಇದರ ಕಂಡಿಕೆ (13) ಆಜ್ಞೆಯು ಅನ್ವಯವಾಗುವುದಿಲ್ಲ.

(xiv) ನಮಗೆ ನೀಡಿದ / ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ನಾವು ಮಾಡಿದ ದಾಖಲೆಗಳ ಪರೀಕ್ಷೆಯ ಪ್ರಕಾರ, ಪ್ರಸಕ್ತ ವರ್ಷದಲ್ಲಿ ಕಂಪೆನಿಯು ಯಾವುದೇ ಮೊದಲ ಹಕ್ಕು/ಪ್ರಾಶಸ್ತ್ಯ ಷೇರುಗಳ ಹಂಚಿಕೆ ಅಥವಾ ಖಾಸಗಿಯಾಗಿ ಷೇರುಗಳನ್ನು ನೀಡುವುದು ಅಥವಾ ಪೂರ್ಣವಾಗಿ ಅಥವಾ ಭಾಗಶಃ ಕನ್ವರ್ಟಿಬಲ್ / ಪರಿವರ್ತನೀಯ ಡಿಬೆಂಚರ್‌ಗಳು ಅದರಂತೆ /ತದನುಸಾರವಾಗಿ ಇದರ ಕಂಡಿಕೆ (14) ಆಜ್ಞೆಯು ಅನ್ವಯವಾಗುವುದಿಲ್ಲ.

(xv) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ಈ ಕಂಪನಿಯು ಅದರ ನಿರ್ದೇಶಕರೊಡನೆ ಅಥವಾ ಅವರ ಸಂಬಂಧಿಗಳೊಡನೆ ಯಾವುದೇ ನಗದಲ್ಲದ ವ್ಯವಹಾರಗಳನ್ನು ನಡೆಸಿರುವುದಿಲ್ಲ. / ತದನುಸಾರವಾಗಿ ಇದರ ಕಂಡಿಕೆ (15)ಆಜ್ಞೆಯು ಅನ್ವಯವಾಗುವುದಿಲ್ಲ. ಹಾಗಾಗಿ ಕಲಂ 192ರ ಉಪಬಂಧಗಳ ಅನುಸರಣೆ/ ಪಾಲನಯ ಪ್ರಶ್ನೆ ಉದ್ಭವಿಸುವುದಿಲ್ಲ.

(xvi) ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗೆ ಅನುಸಾರವಾಗಿ, ಈ ಕಂಪನಿಯು ಒಂದು 'ನಾನ್ ಬ್ಯಾಂಕಿಂಗ್ / ಬ್ಯಾಂಕ್ ಅಲ್ಲದ ಹಣಕಾಸು ಕಂಪನಿಯಾಗಿರುವುದಿಲ್ಲ, ಹಾಗಾಗಿ ಈ ಕಂಪೆನಿಯು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅಧಿನಿಯಮ 1934 ಕಲಂ45 1ಎ ಅಡಿಯಲ್ಲಿ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ತದನುಸಾರವಾಗಿ ಇದರ ಕಂಡಿಕೆ (16) ಆಜ್ಞೆಯು ಅನ್ವಯವಾಗುವುದಿಲ್ಲ.

**ಬಿ.ಕೆ.ರಾಮಧ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್,**
**FRN: 002878S/S200021**

ಸಹಿ/–
**ವಾಸುಕಿ.ಹೆಚ್.ಎಸ್.**
**ಪಾಲುಗಾರರು,**
**ಸದಸ್ಯತ್ವ ಸಂಖ್ಯೆ 212013**
**UIDN: 21212013AAAAGA1629**

**ಸ್ಥಳ:** ಬೆಂಗಳೂರು
**ದಿನಾಂಕ:** ಡಿಸೆಂಬರ್ 24, 2021

## ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ. ಅನುಬಂಧ 'ಬಿ'

ಸದಸ್ಯರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರಿಗೆ ಅನುಬಂಧ 2(ಎಫ್) ಶೀರ್ಷಿಕೆ 'ಇತರ ಕಾನೂನು ಮತ್ತು ವಿನಿಮಯ/ನಿಯಂತ್ರಿಸುವ ಅವಶ್ಯಕತೆಗಳು' ಬಗೆಗೆ ವರದಿ.

**ಕಂಪನಿ ಕಾಯಿದೆ 2013ರ ಅನುಸೂಚಿ 143ರ ಅನುಸೂಚಿ 3 ರ ಕಲಂ (1) ರ ಅಡಿಯಲ್ಲಿ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವರದಿ.**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕಂಪನಿ) ಇದರ ಅರ್ಥಿಕತೆಯ ವರದಿ ಮಾರ್ಚ್ 31, 2021 ರಲ್ಲಿದ್ದಂತೆ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕ ಪರಿಶೋಧನೆ / ಆಡಿಟ್ ಮಾಡಲು ನಮ್ಮನ್ನು ನೇಮಕ ಮಾಡಲಾಗಿದೆ. ಇದನ್ನು ಆರ್ಥಿಕ ತಖ್ತೆಗಳ ಬಗೆಗೆ ನಮ್ಮ ಆಡಿಟ್‌ನೊಡನೆ ಸಂಯೋಗ/ಸಮುಚ್ಚಯ ಆ ದಿನಾಂಕದ ವರ್ಷಾಂತ್ಯಕ್ಕೆ ಮಾಡತಕ್ಕದ್ದಾಗಿದೆ.

<u>ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವ್ಯವಸ್ಥಾಪಕ ವರ್ಗದ ಜವಾಬ್ದಾರಿ</u>

ಆರ್ಥಿಕ ವರದಿಗಳ ಬಗೆಗಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಸ್ಥಾಪನೆ ಮತ್ತು ನಿರ್ವಹಣೆ, ಇದನ್ನು ಅರ್ಥಿಕ ವರದಿಗಳ ಮೇಲಿನ ಆಂತರಿಕ ನಿಯಂತ್ರಣ, ಸಂಬಂಧ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ರುಗಳ ಸಂಸ್ಥೆಯ (ಐ.ಸಿ.ಎ.ಐ) ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ / ಕಂಪನಿಯು ಸ್ಥಾಪಿಸಿರುವ ವರದಿಮಾಡುವ ಪ್ರಮಾಣಗಳು, ಇದು ಕಂಪನಿಯ ವ್ಯವಸ್ಥಾಪಕ ವರ್ಗದ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳಲ್ಲಿ, ಅದರ ವಿನ್ಯಾಸ, ರಚನೆ, ಅನುಷ್ಠಾನ, ಮತ್ತು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳು, ಅವುಗಳು ಪರಿಣಾಮಕಾರಿಯಾಗಿ ಆಚರಣೆಗೊಳ್ಳುತಿದ್ದವು, ಅದರ ವ್ಯಾಪಾರ ವ್ಯವಹಾರಗಳ ಸಕ್ರಮವಾಗಿ ಮತ್ತು ದಕ್ಷ ರೀತಿಯಲ್ಲಿ ನಡೆಸುವುದು, ಕಂಪನಿಯ ನೀತಿಗಳಿಗೆ ಸ್ಥಿರವಾಗಿ ಅಂಟಿಕೊಳ್ಳುವಿಕೆ, ಇದರ ಆಸ್ತಿಪಾಸ್ತಿಗಳ ಸುಭದ್ರತೆ/ಕಾಪಾಡುವಿಕೆ, ಮೋಸ/ಲೋಪದೋಷಗಳ ಪತ್ತೆ ಹಚ್ಚುವಿಕೆ, ತಡೆಗಟ್ಟುವಿಕೆ/ನಿರೋಧ, ಲೆಕ್ಕೀಕರಣದಲ್ಲಿ ಲೆಕ್ಕಪತ್ರ ದಾಖಲಾತಿಗಳ ನಿಖರತೆ ಮತ್ತು ಪೂರ್ಣತೆ ಮತ್ತು ಕಾಯಿದೆಯಡಿ ಅವಶ್ಯಕವಾದ ಸಕಾಲಕ್ಕೆ ವಿಶ್ವಾಸಾರ್ಹವಾದ ಆರ್ಥಿಕ ಮಾಹಿತಿಯ ತಯಾರಿಕೆ/ ಸಿದ್ಧಪಡಿಸುವಿಕೆಯನ್ನು ಒಳಗೊಂಡಿರುತ್ತದೆ.

<u>ಲೆಕ್ಕಪರಿಶೋಧಕರ ಜವಾಬ್ದಾರಿ</u>

ಮಾರ್ಗದರ್ಶಕ ಟಿಪ್ಪಣಿಗೆ ಅನುಸಾರವಾಗಿ ಮತ್ತು ಲೆಕ್ಕ ಪರಿಶೋಧನೆಯ, ಲೆಕ್ಕ ಪರಿಶೋಧನೆಯ ಮಾನಕಗಳನ್ನು ಅನುಸರಿಸಿ ನಡೆಸಿದ ನಮ್ಮ ಆಡಿಟ್/ಲೆಕ್ಕ ಪರಿಶೋಧನೆಯನ್ನು ಆಧರಿಸಿ ಕಂಪನಿಯ ಆರ್ಥಿಕ ವರದಿಗಳ ಬಗೆಗಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಬಗ್ಗೆ ಅವು ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆಯೋ ಅಷ್ಟರ ಮಟ್ಟಿಗೆ ಆರ್ಥಿಕ ವರದಿಗಳ ಬಗ್ಗೆ, ಇವೆರಡನ್ನು ಸಹ ಐ.ಸಿ.ಎ.ಐ/ಭಾ.ಚಾ.ಅ.ಸಂಸ್ಥೆಯ ಮಾರ್ಗದರ್ಶನಕ್ಕೆ ಅನುಸಾರವಾಗಿದೆ ಎಂಬುದರ ಬಗೆಯೂ ಅಭಿಪ್ರಾಯವನ್ನು ವ್ಯಕ್ತ ಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ಕೆಳಕಂಡ ಅಭಿಪ್ರಾಯ ನಿರಾಕರಣೆಯ ಖಂಡಿಕೆಯಲ್ಲಿ ವಿವರಿಸಿದ ವಿಷಯದಂತೆ, ಕಂಪನಿಯ ಆರ್ಥಿಕ ನಿಯಂತ್ರಣಗಳ ಬಗೆಗೆ ನಮಗೆ ಆಡಿಟ್ ವಿಚಾರದಲ್ಲಿ ನಮ್ಮ ಅಭಿಪ್ರಾಯ ನೀಡಲು ಸಾಕಷ್ಟು ಸಮುಚಿತವಾದ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ,

<u>ಆರ್ಥಿಕ ವರದಿಗಳ ಬಗ್ಗೆ ಆಂತರಿಕ ಆರ್ಥಿಕ ನಿಯಂತ್ರಣಗಳು ಎಂಬುದರ ಅರ್ಥ</u>

ಒಂದು ಕಂಪನಿಯ ಆರ್ಥಿಕ ವರದಿಗಳ ಬಗೆಗೆ ಆಂತರಿಕ ಆರ್ಥಿಕ ನಿಯಂತ್ರಣಗಳು ಎಂಬುದು, ಸಾಮಾನ್ಯವಾಗಿ ಒಪ್ಪಿಕೊಂಡ/ಸರ್ವ ಸಮ್ಮತವಾದ ಲೆಕ್ಕ ತತ್ವಗಳ/ಭಾ.ಲೆ.ಪ.ತತ್ವಗಳ ಮೇಲೆ ಆರ್ಥಿಕ ವರದಿಯ ವಿಶ್ವಾಸಾರ್ಹತೆ ಮತ್ತು

ಆರ್ಥಿಕ ಭಾ.ಲೆ.ಪ.ತತ್ವಗಳ ಆಧಾರದ ಮೇಲೆ ಬಾಹ್ಯ ಉದ್ದೇಶಗಳಿಗಾಗಿ ಉಚಿತವಾದ ಆಶ್ವಾಸನೆ ನೀಡುವಂತಹ ಒಂದು ಪ್ರಕ್ರಿಯೆ. ಒಂದು ಕಂಪನಿಯ ಆರ್ಥಿಕ ವರದಿಗಳ ಬಗೆಗೆ ಆಂತರಿಕ ನಿಯಂತ್ರಣಗಳಲ್ಲಿ ಯಾವ ನೀತಿ ಮತ್ತು ಪ್ರಕ್ರಿಯೆಗಳು, ಅವು 1) ದಾಖಲೆಗಳ ನಿರ್ವಹಣೆ, ಯುಕ್ತ ಮತ್ತು ಉಚಿತ ವಿವರಗಳೊಂದಿಗೆ, ಅವು ನ್ಯಾಯ ಸಮ್ಮತವಾಗಿ ಮತ್ತು ನಿಖರವಾಗಿ ವ್ಯಾಪಾರ ವ್ಯವಹಾರಗಳು, ಕಂಪನಿಯ ಆಸ್ತಿಗಳ ವ್ಯವಸ್ಥೆ, ವಿಲೇವಾರಿ, ಪ್ರತಿಬಿಂಬಿಸುತ್ತದೆ, 2) ಸಾಮಾನ್ಯವಾಗಿ ಒಪ್ಪಿಕೊಂಡ/ಸರ್ವ ಸಮ್ಮತವಾದ ಅಕೌಂಟಿಂಗ್ ಮಾನಕಗಳು, ತತ್ವಗಳಿಗೆ ಅನುಸಾರವಾಗಿ, ಯುಕ್ತ ವಿವರಣೆಯೊಂದಿಗೆ, ಅವುಗಳು ಮುಂದೆ ಆರ್ಥಿಕ ನಿರೂಪಣೆಗಳ/ತಖ್ತೆಯ ಸಿದ್ದಪಡಿಸುವಿಕೆ ಅನುಕೂಲಕರವಾದ ರೀತಿಯಲ್ಲಿ ಅವಶ್ಯಕವಾದಂತೆಯೇ ಸಿದ್ದಪಡಿಸಲು, ಉಚಿತ ಆಶ್ವಾಸನೆಯೊಂದಿಗೆ ಮತ್ತು ಕಂಪನಿಯ ಜಮಾ ಮತ್ತು ಖರ್ಚು ಇವುಗಳನ್ನು ಉನ್ನತ ಆಡಳಿತ /ವ್ಯವಸ್ಥಾಪಕ ವರ್ಗ ಮತ್ತು ಕಂಪನಿಯ ನಿರ್ದೇಶಕರ ಅಧಿಕೃತ ಅನುಮತಿ ಯೊಡನೆಯೇ ಮಾಡಲಾಗುತ್ತಿದೆ, ಮತ್ತು 3) ಕಂಪನಿಯ ಆಸ್ತಿಗಳ ಅನಧಿಕೃತ ಸ್ವಾಧೀನ, ಉಪಯೋಗ, ಬಳಕೆ ಅಥವಾ ವಿಲೇವಾರಿ ಇವುಗಳಿಂದ ಆರ್ಥಿಕ ನಿರೂಪಣಾ ಪಟ್ಟಿ/ತಖ್ತೆಗಳ ಮೇಲೆ ಮುಖ್ಯ/ಸಾರಭೂತ ಪರಿಣಾಮವನ್ನು ಹೊಂದಿರುವುದರ, ಇವುಗಳ ಪ್ರತಿಬಂಧ/ನಿಲ್ಲಿಸುವಿಕೆ ಅಥವಾ ಸಕಾಲದಲ್ಲಿ ಅಂತಹವುಗಳ ಪತ್ತೆ ಮಾಡುವಿಕೆ, ಇವುಗಳ ಬಗೆಗೆ ಯುಕ್ತ ಆಶ್ವಾಸನೆಯನ್ನು ನೀಡುವುದು.

**ಅಭಿಪ್ರಾಯದ ನಿರಾಕರಣೆ**

ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಐ.ಸಿ.ಎ.ಐ. ಚಾರ್ಟರ್ಡ್ ಅಕೌಂಟೆಂಟ್ ರ ಭಾರತೀಯ ಸಂಸ್ಥೆಯು ಹೊರಡಿಸಿದ ಆರ್ಥಿಕ ವರದಿಗಳ ಬಗೆಗೆ ಆಂತರಿಕ ನಿಯಂತ್ರಣಗಳ ಇದರ ಅವಶ್ಯಕವಾದ ಘಟಕ, ಭಾಗ: ಇದರ ಪ್ರಮಾಣಗಳು, ಈ ಬಗೆಗೆ ಕಂಪನಿಯು ಆರ್ಥಿಕ ವರದಿಗಳ ಬಗೆಗೆ ಆಂತರಿಕ ನಿಯಂತ್ರಣಗಳು, ಇದನ್ನು ಆರ್ಥಿಕ ವರದಿಗಳ ಮೇಲಿನ ಆಂತರಿಕ ನಿಯಂತ್ರಣ, ಸಂಬಂಧ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ರುಗಳ ಸಂಸ್ಥೆಯ (ಐ.ಸಿ.ಎ.ಐ) ಹೊರಡಿಸಿರುವ ಮಾರ್ಗದರ್ಶನ ಟಿಪ್ಪಣಿ/ಮಾರ್ಗದರ್ಶಕ ಟಿಪ್ಪಣಿ/ಕಂಪನಿಯು ಸ್ಥಾಪಿಸಿರುವ ವರದಿಮಾಡುವ ಪ್ರಮಾಣಗಳು, ಇದರ ಬಗೆಗೆ ಕಂಪನಿಯ ವ್ಯವಸ್ಥಾಪಕ ವರ್ಗದರು, ಇದನ್ನು ಸ್ಥಾಪನೆ ಮಾಡಿಯೂ ಇಲ್ಲ ಅಥವಾ ಪರೀಕ್ಷೆ ಮಾಡಿಯೂ ಇಲ್ಲ, ಈ ಕಾರಣದಿಂದಾಗಿ, ನಮಗೆ ಸಾಕಷ್ಟು ಸಮುಚಿತ ಆಡಿಟ್ ಸಾಕ್ಷ್ಯವನ್ನು ಆಧರಿಸಿ, ಕಂಪನಿಯು ಸಾಕಷ್ಟು ಆಂತರಿಕ ನಿಯಂತ್ರಣವನ್ನು ತನ್ನ ಆರ್ಥಿಕ ವರದಿಗಳ ಮೇಲೆ ಹೊಂದಿರುವುದೇ ಮತ್ತು ಅಂತಹ ಆಂತರಿಕ ಆರ್ಥಿಕ ನಿಯಂತ್ರಣಗಳು, ಮಾರ್ಚ್ 31, 2021, ಪರಿಣಾಮಕಾರಿಯಾಗಿ ಆಚರಣೆಯಾಗುತ್ತಿದೆಯೇ ಇಲ್ಲವೇ, ಎಂಬುದರ ಬಗೆಗೆ ನಮಗೆ ಸಾಧ್ಯವಾಗಿಲ್ಲ.

ನಾವು ಮೇಲೆ ವರದಿಯಾದ ನಿರಾಕರಣೆಯನ್ನು ಪರಿಶೀಲಿಸಿದ್ದೇವೆ, ಪ್ರತ್ಯೇಕವಾದ / ಸ್ಟಾಂಡ್ ಅಲೋನ್/ ಆರ್ಥಿಕ ನಿರೂಪಣೆಗಳ ಬಗೆಗೆ ಆಡಿಟ್ ವಿಷಯದಲ್ಲಿ ಅವುಗಳ ಸ್ವಭಾವ, ಸಮಯ/ವೇಳೆ ಮತ್ತು ಲೆಕ್ಕ ಪರಿಶೋಧನೆಯ ಪರೀಕ್ಷೆಗಳ ವಿಸ್ತಾರ / ವ್ಯಾಪ್ತಿ, ಇವುಗಳಿಗೆ ನಮ್ಮ ಆಡಿಟ್‌ಗೆ ಅನ್ವಯಿಸಿದ ಮತ್ತು ಸ್ಟಾಂಡ್ ಅಲೋನ್/ ಆರ್ಥಿಕ ನಿರೂಪಣೆಗಳ ಬಗೆಗೆ ಈ ನಿರಾಕರಣೆಯು ನಮ್ಮ ಅಭಿಪ್ರಾಯದ ಮೇಲೆ ಪರಿಣಾಮ ಬೀರುವುದಿಲ್ಲ

**ಬಿ.ಕೆ.ರಾಮಧ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್,**
**FRN: 002878S/S200021**

ಸಹಿ/–
**ವಾಸುಕಿ.ಹೆಚ್.ಎಸ್.**
**ಪಾಲುಗಾರರು,**
**ಸದಸ್ಯತ್ವ ಸಂಖ್ಯೆ 212013**
**UIDN: 21212013AAAAGA1629**

**ಸ್ಥಳ:** ಬೆಂಗಳೂರು
**ದಿನಾಂಕ:** ಡಿಸೆಂಬರ್ 24, 2021

## ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ ಅನುಬಂಧ 'ಸಿ'

ಕಂಡಿಕೆ 3 (ಜೆ)ಯಲ್ಲಿ ಅದೇ ತಾರೀಖಿನ ನಮ್ಮ ವರದಿಗೆ ಪ್ರಸ್ತಾಪಿತವಾದ ಇತರ ಕಾನೂನು ಮತ್ತು ವಿನಿಮಯ/ ನಿಯಂತ್ರಿಸುವ ಅವಶ್ಯಕತೆಗಳು ಬಗೆಗೆ ವರದಿ.

**ಎ. <u>ನಿರ್ದೇಶನಗಳು</u>**

ಅದೇ ದಿನಾಂಕ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ದಿ ಕಂಪನಿ) ಇದರ ಸದಸ್ಯರಿಗೆ ನಮ್ಮ ಅನುಬಂಧದಲ್ಲಿ ಪ್ರಸ್ತಾಪಿಸಿದಂತೆ–ಮಾರ್ಚ್ 31, 2021 ರ ವರ್ಷಾಂತ್ಯಕ್ಕೆ ನಮ್ಮ ವರದಿ, ಕಂಪನಿಗಳ ಕಾಯಿದೆ 2013ರ ಕಲಂ 143(5) ರಡಿಯಲ್ಲಿನ ನಿರ್ದೇಶನಗಳಡಿಯಲ್ಲಿ

| ಕ್ರಮ ಸಂಖ್ಯೆ | ನಿರ್ದೇಶನಗಳು | ನಿಯಂತ್ರಕರು ಮತ್ತು ಮಹಾ ಲೇಖಪಾಲರು, ಇವರ ನಿರ್ದೇಶನಗಳ–ಬಗೆಗೆ ವರದಿ/ ಉತ್ತರಗಳು |
|---|---|---|
| 1 | ಮಾಹಿತಿ ತಂತ್ರಜ್ಞಾನ/ ಐ.ಟಿ. ಮೂಲಕ ತನ್ನ ಎಲ್ಲಾ ಲೆಕ್ಕಪತ್ರ / ವ್ಯವಹಾರಗಳನ್ನು ಸಂಸ್ಕರಿಸಲು ಈ ಕಂಪನಿಯು ವ್ಯವಸ್ಥೆ ಹೊಂದಿದೆಯೇ? ಹೌದು ಎಂದಾದರೆ, ಐ.ಟಿ / ಮಾಹಿತಿ ತಂತ್ರಜ್ಞಾನದ ಹೊರಗೆ ಲೆಕ್ಕಪತ್ರಗಳ / ವ್ಯವಹಾರಗಳ ಸಂಸ್ಕರಣೆ, ಮೇಲೆ ಅದರ ಪರಿಣಾಮಗಳು, ಅದರ ಲೆಕ್ಕಪತ್ರಗಳ ಅಖಂಡತೆ/ನೀತಿ ನಿಷ್ಠತೆ, ಅದರೊಡನೆ ಆರ್ಥಿಕ ಪರಿಣಾಮಗಳೇನಾದರೂ ಇದ್ದರೆ ಅದನ್ನು ತಿಳಿಸಿ. | ಎಲ್ಲಾ ಹಣಕಾಸು/ಲೆಕ್ಕಪತ್ರ ವ್ಯವಹಾರಗಳನ್ನೂ ಸಹ ಮಾಹಿತಿ ತಂತ್ರಜ್ಞಾನ/ ಐ.ಟಿ. ಪದ್ಧತಿಯ ಮೂಲಕ ಸಂಸ್ಕರಿಸಲು ಕಂಪನಿಯಲ್ಲಿ ಯಾವುದೇ ವ್ಯವಸ್ಥೆ ಇರುವುದಿಲ್ಲ. ಈ ಆಡಿಟ್ ವರದಿಯ 'ಅಭಿಪ್ರಾಯ ನಿರಾಕರಣೆಯ ಆಧಾರ ಭಾಗದಲ್ಲಿ, ಕಂಪನಿಯು ಎಲ್ಲಾ / ಲೆಕ್ಕದ / ಪುಸ್ತಕಗಳನ್ನೂ ಸಹ (ರಿಜಿಸ್ಟರ್/ಸಿ.ರಿಜಿಸ್ಟರ್ ಸೇರಿದಂತೆ) ಮತ್ತಿತರ ದಸ್ತಾವೇಜುಗಳನ್ನು ಕೈಬರಹದಲ್ಲಿಯೇ ನಿರ್ವಹಿಸುತ್ತಿದೆ. ಮುಂದುವರೆದು ಕಂಪನಿಯು ಮೈಕ್ರೊಸಾಫ್ಟ್ ಎಕ್ಸಲ್ ಅಪ್ಲಿಕೇಷನ್ ಅನ್ನು– ಗಣಕೀಕರಣ / ಕಂಪ್ಯುಟೇಷನ್ ಮತ್ತು ವರದಿ ಮಾಡುವ ಉದ್ದೇಶಗಳಿಗಾಗಿ, ಅದರಲ್ಲಿ ಸಾಕಷ್ಟು ಅಧಿಕೃತ ದಸ್ತಾವೇಜುಗಳು, ಕಂಪನಿಯು ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಆಧಾರದ ಮೇಲೆ ಬಹಳಷ್ಟು ಪ್ರತ್ಯೇಕ ನಿಲುವಿನ, ಸಾಫ್ಟ್ ವೇರ್ ಗಳನ್ನು ಇವುಗಳನ್ನು ಸಹ ಅವಶ್ಯಕತೆಗಳಿಗನುಸಾರವಾಗಿ, ಅವುಗಳನ್ನು ಇತರ ಲೆಕ್ಕದ ಪುಸ್ತಕಗಳೊಡನೆ ಹೊಂದಾಣಿಕೆ /ನಿಯೋಜನೆ ಮಾಡಿಲ್ಲ, [ಅವುಗಳು ಕೈ ಬರಹದ್ದು ಆಗಿದೆ] ಅತಿ ಹೆಚ್ಚಿನ ಮಟ್ಟದಲ್ಲಿ ಉಪಯೋಗಿಸುತ್ತಿದೆ. ಕಂಪನಿಯು ಸಮಗ್ರವಾದ ಇ.ಆರ್.ಪಿ ಸಿಸ್ಟಮ್ ಅನ್ನು ಹೊಂದಲು ಯೋಜಿಸಿದೆ ಅದಕ್ಕೆ ಡಿ.ಪಿ.ಆರ್ ಅನ್ನು ಈಗಾಗಲೇ ತಯಾರಿಸಲಾಗಿದೆ/ಅನುಮೋದಿಸಲಾಗಿದೆ, ಕಾಮಗಾರಿಯನ್ನು/ಕರಾರು ಮಾಡಿಕೊಂಡು ವಹಿಸಿಕೊಡುವುದು ಮಾತ್ರ ಬಾಕಿ ಉಳಿದಿದೆ ಎಂದು ನಮಗೆ ತಿಳಿದು ಬಂದಿದೆ. |

| | | |
|---|---|---|
| 2 | ಕಂಪನಿಯು ತನ್ನ ಸಾಲವನ್ನು ಹಿಂದಿರುಗಿಸಲು ಸಾಧ್ಯವಾಗದ ಕಾರಣ, ಮನ್ನಾ ಮಾಡುವುದು, ಸಾಲವನ್ನು/ಮುಂಗಡ. ಅದರ ಮೇಲಿನ ಬಡ್ಡಿ, ಹೊಡೆದು ಹಾಕುವುದು, ಸಾಲಗಾರರು ಕಂಪನಿಗೆ ಕೊಡಮಾಡಿದ್ದ, ಅವುಗಳನ್ನು ಹಿಂದಿರುಗಿಸಲು ಕಂಪನಿಯ ಅಸಾಮರ್ಥ್ಯ, ಯಾವುದೇ ಚಾಲ್ತಿಯಲ್ಲಿರುವ ಸಾಲದ ಪುನಃ ರಚನೆ, ಮಾಡಲಾಗಿದೆಯೇ? ಹೌದು ಎಂದಾದರೆ. ಅದರ ಆರ್ಥಿಕ ಪರಿಣಾಮವನ್ನು ತಿಳಿಸಿರಿ. ಅಂಥಹ ಪ್ರಕರಣಗಳನ್ನು ಸರಿಯಾಗಿ ಲೆಕ್ಕ ಮಾಡಲಾಗಿದೆಯೇ / ನಿರ್ವಹಿಸಲಾಗಿದೆಯೇ? (ಅದು ಸರ್ಕಾರಿ ಕಂಪೆನಿಯಾಗಿದ್ದಲ್ಲಿ ಈ ನಿರ್ದೇಶನವು ಸಾಲ ನೀಡಿದ ಶಾಸನಬದ್ಧ ಆಡಿಟರ್‌ರವರಿಗೂ ಅನ್ವಯವಾಗುತ್ತದೆ.) | ವ್ಯವಸ್ಥಾಪಕ ವರ್ಗವು ನೀಡಿದ ಮಾಹಿತಿ ಹಾಗೂ ನಾವು ಮಾಡಿದ ತಪಾಸಣೆಯ ಪ್ರಕಾರ, ಕೋವಿಡ್ ಅವಧಿಯಲ್ಲಿ ಕಂಪನಿಯು ಮಾರ ಟೋರಿಯಮ್ / ಸಾಲ ತೀರಿಕೆಯನ್ನು / ಬಡ್ಡಿಯನ್ನು ಸಹ ಮುಂದೂಡಲು ಕಾನೂನು ಮೇರೆಗೆ ಕೊಟ್ಟ ಅಧಿಕಾರ. ಇದರ ಲಾಭವನ್ನು ಕಂಪನಿಯು ಉಪಯೋಗಿಸಿಕೊಂಡಿರುವ ಹೊರತಾಗಿ, ಅಸಲು ಮತ್ತು ಬಡ್ಡಿಯ ಮರುಪಾವತಿಯ ನಾವು ಯಾವುದೇ ರೀತಿಯ ಸಾಲ ಮುಂಗಡಗಳ– ಸಾಲವನ್ನು ಹಿಂದಿರುಗಿಸಲು ಸಾಧ್ಯವಾಗದ ಕಾರಣ, ಮನ್ನಾ ಮಾಡುವುದು, ಸಾಲವನ್ನು ಅದರ ಮೇಲಿನ ಬಡ್ಡಿ, ಹೊಡೆದು ಹಾಕುವುದು ಪುನಃ ರಚನೆಯ ಪ್ರಕರಣವೂ ಕಂಡಿಲ್ಲ / ಗಮನಕ್ಕೆ ಬಂದಿಲ್ಲ. |
| 3 | ಕೇಂದ್ರ / ರಾಜ್ಯ ಸರ್ಕಾರಗಳಿಂದ ಅಥವಾ ಅವುಗಳ ಏಜೆನ್ಸಿಗಳಿಂದ ಸ್ವೀಕೃತವಾದ (ಅನುದಾನ/ ಸಬ್ಸಿಡಿ. ಇತ್ಯಾದಿ.) ನಿರ್ದಿಷ್ಟ ಯೋಜನೆಗಳಿಗೆ ಮೊತ್ತವನ್ನು ಸರಿಯಾಗಿ ಲೆಕ್ಕ ಇಡಲಾಗಿದೆಯೇ / ನಿರ್ವಹಣೆ ಮಾಡಲಾಗಿದೆಯೇ / ಉಪಯೋಗ / ಬಳಕೆ ಮಾಡಲಾಗಿದೆಯೇ, ಅವುಗಳ ಷರತ್ತುಗಳು ಮತ್ತು ನಿಬಂಧನೆಗಳ ಪ್ರಕಾರ, ನಿಗದಿತ ಉದ್ದೇಶಕ್ಕೆ / ಈ ಬಗೆಗೆ ಮಾರ್ಗಾಂತರ / ಬಳಕೆಯ ಬದಲಾವಣೆ ಇದ್ದರೆ ಅವುಗಳ ಪಟ್ಟಿ ಮಾಡಿರಿ. | ಆರ್ಥಿಕ ಲೆಕ್ಕಪತ್ರಗಳ ಟಿಪ್ಪಣಿ 18.6ಕ್ಕೆ ಗಮನ ಸೆಳೆಯಲಾಗಿದೆ, ವಿವಿಧ ಯೋಜನೆಗಳಿಗೆ ಸ್ವೀಕೃತವಾದ / ಆಗಬೇಕಾದ ಅನುದಾನ/ ಸಬ್ಸಿಡಿಗಳು, ಅವುಗಳಲ್ಲಿ ಸ್ವೀಕೃತವಾದ ಮೊತ್ತದ ವಿವರ/ಬರಬೇಕಾದದ್ದು ಮತ್ತು ಅದರ ಬಳಕೆ/ಉಪಯೋಗವನ್ನು ವಿವರ/ ಒದಗಿಸಲಾಗಿದೆ ಮತ್ತು ವರದಿಯಲ್ಲಿನ ಕಂಡಿಕೆ/ 'ನಿರಾಕರಣೆಯ ಆಧಾರವನ್ನು ನೋಡಿರಿ, ಅದರಲ್ಲಿ ಕಂಪನಿಯು ಯೋಜನೆಗಳ ಅವಶ್ಯಕ ಷೆಡ್ಯೂಲ್‌ಗಳನ್ನು ಕಂಪನಿಯು ತಯಾರಿ ಮಾಡಿಲ್ಲ., ಅವುಗಳ ಸ್ಥಿತಿಗತಿ, ಪಿ.ಎಸ್.ಡಿ.ಎಫ್. ಸ್ವೀಕೃತವಾದ ಸರ್ಕಾರಿ ಅನುದಾನಗಳು, ಅದರಲ್ಲಿ ಕಂಪನಿಯು ಅವಶ್ಯಕವಾದ ಯೋಜನೆಗಳ ಷೆಡ್ಯೂಲ್, ಅದರ ಸ್ಥಿತಿಗತಿ, ಪಿ.ಎಸ್.ಡಿ.ಎಫ್. ಸರ್ಕಾರಿ ಅನುದಾನಗಳು, ಅವುಗಳ ಸ್ವೀಕೃತಿ, ಸ್ವಂತ ವಂತಿಗೆ, ಒಟ್ಟಾರೆ ಖರ್ಚಿನಲ್ಲಿ ಅವುಗಳ ಅನುಪಾತ/ಪ್ರಮಾಣ, ಮತ್ತಿತರ ಸಂಬಂದಪಟ್ಟ ವಿಚಾರಗಳು. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳ ಆಧಾರದ ಮೇಲೆ ಮತ್ತು ಪರೀಕ್ಷಾರ್ಥ ತಪಾಸಣೆ ಆಧಾರದ ಮೇಲೆ, ಅವುಗಳ ಸರಿನೋಡುವಿಕೆ, ಇವುಗಳಿಂದ ಕಂಪನಿಯು ಮಂಜೂರಾದ ಅನುದಾನವನ್ನು ಯಾವ ಉದ್ದೇಶಕ್ಕೆ ನೀಡಲ್ಪಟ್ಟಿತೋ ಅ ವಿಷಯಕ್ಕೆ ಉಪಯೋಗಿಸಿದೆ, ಕೋವಿಡ್ ಅನುದಾನವನ್ನು ಹೊರತು ಪಡಿಸಿ, ಆ ಅನುದಾನವನ್ನು ಅದರ ಸ್ವೀಕೃತಿಯ ಒಂದು ವರ್ಷದ ಅವಧಿಯೊಳಗೆ ಉಪಯೋಗ/ಬಳಕೆ ಮಾಡಲಾಗಲಿಲ್ಲ, ಆರ್ಥಿಕ ಲೆಕ್ಕಪತ್ರಗಳ ಟಿಪ್ಪಣಿ 21.2 (ಡಿ) ಮಂಜೂರಾತಿಯ ಷರತ್ತುಗಳಿಗೆ ಒಳಪಟ್ಟು ಮಾಡಲಾಗಿದೆ. |

**ಬಿ. ಕಂಪನಿ ನಿರ್ದಿಷ್ಟ ಹೆಚ್ಚುವರಿ ನಿರ್ದೇಶನಗಳು**

(ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ/ 'ದಿ ಕಂಪನಿ' ಇದರ ಸದಸ್ಯರುಗಳಿಗೆ ಸಮ ದಿನಾಂಕದ ನಮ್ಮ ವರದಿಯಲ್ಲಿ 31 ನೇ ಮಾರ್ಚ್ 2021 ಕ್ಕೆ ಅಂತ್ಯ ಗೊಂಡ ನಮ್ಮ ವರದಿಯಲ್ಲಿ ಉಲ್ಲೇಖಿಸಿರುವ ಅನುಬಂಧ)

| ಕ್ರಮ ಸಂಖ್ಯೆ | | ನಿರ್ದೇಶನಗಳು | ನಿಯಂತ್ರಕರು ಮತ್ತು ಮಹಾ ಲೇಖಪಾಲರು, ಇವರ ಹೆಚ್ಚುವರಿ ನಿರ್ದೇಶನಗಳು ಬಗೆಗೆ ವರದಿ/ ಉತ್ತರಗಳು |
|---|---|---|---|
| i | | ನಗದು ಮತ್ತು ಬ್ಯಾಂಕ್ ಶಿಲ್ಕುಗಳ ಬಗ್ಗೆ ಕೆಳಗೆ ಕಂಡಂತೆ, ಅವುಗಳನ್ನು ಸರಿ ನೋಡಿ ಮತ್ತು ನಿರ್ದಿಷ್ಟವಾದ ಅನುವರ್ತನೆ / ಅನುಪಾಲನೆಯ ಪ್ರಕರಣಗಳನ್ನು ವರದಿ ಮಾಡಲಾಗುವುದು, ವಿವರಣೆ **ಇಲ್ಲದ ಶಿಲ್ಕು/ಕಾರ್ಯಾಚರಣೆ ಮಾಡದ ಅಮಾನತ್ತಿನಲ್ಲಿರುವ ಶೀರ್ಷಿಕೆಯನ್ನು ಪರಿಶೀಲಿಸುವುದು.** | ನಮ್ಮ ಅಭಿಪ್ರಾಯ/ಜವಾಬು ಕೆಳಗೆ ನಮೂದಿ–ಸಿದಂತೆ ಇರುತ್ತದೆ. |
| | 1 | ಎಲ್ಲಾ ಬ್ಯಾಂಕ್ ಖಾತೆಗಳನ್ನು/ ಎಫ್.ಡಿ/ನಿಶ್ಚಿತ ಠೇವಣಿ, ಇವುಗಳನ್ನು ಬ್ಯಾಂಕ್/ ಸಮುಚಿತ ಆಧಿಕೃತವಾಗಿ / ಅಧಿಕೃತಗೊಳಿಸುವುದು. ಮತ್ತು ಅನುಮೋದನೆಗಳೊಡನೆ ಮೇಲೆ ಹೇಳಿದಂತೆ ಅಧಿಕಾರಗಳ ಪ್ರತ್ಯಾಯೋಜನೆ ಪ್ರಕಾರ ಆರಂಭಿಸಿ / ತೆಗೆಯಲಾಗಿದೆಯೇ? | ಕಂಪನಿಯಿಂದ ನಮಗೆ ದೊರೆತ ಮಾಹಿತಿ ಮತ್ತು ವಿವರಣೆಯಂತೆ ಮತ್ತು ನಮಗೆ ಪ್ರತಿನಿಧಿಸಿದಂತೆ ಈ ವರ್ಷ ಬ್ಯಾಂಕ್ ಖಾತೆ/ನಿಗದಿತ ಠೇವಣಿಯನ್ನು ಕಂಪನಿಯಿಂದ ಹಸ್ತಾಂತರಿಸುವ ಅಧಿಕಾರ ನೀಡಿರುವ ಅನುಮೋದನೆಯಂತಿದೆ. |
| | 2 | ಬಿ.ಆರ್.ಎಸ್. ಬ್ಯಾಂಕ್ ಸಮನ್ವಯ ತಖ್ತೆ ಯನ್ನು ನಿಯಮಿತವಾಗಿ ಕಾಲಕಾಲಕ್ಕೆ ತಯಾರಿಸುವ ಕ್ರಮವುಂಟೇ ಮತ್ತುಅವುಗಳನ್ನು ಆಡಿಟ್ ಪರೀಕ್ಷೆಗಾಗಿ ಹಾಜರು ಪಡಿಸಲಾಗಿದೆಯೇ? | ಮಾಸಿಕ ಸಮನ್ವಯ ತಖ್ತೆ ಪ್ರಕ್ರಿಯೆಯಲ್ಲಿದೆ ಮತ್ತು ಅದನ್ನು ಪರಿಶೀಲನೆಗಾಗಿ ಹಾಜರುಪಡಿಸಲಾಗಿತ್ತು. |
| | 3 | ಮುಖ್ಯ ಲೆಕ್ಕಪತ್ರಗಳ ಮತ್ತು ಎಲ್ಲಾ ಸಹಾಯಕ / ಸಬ್ಸಿಡಿಯರಿ ಬ್ಯಾಂಕ್ ಖಾತೆಗಳ, ಬ್ಯಾಂಕ್ ಖಾತೆ ಸಮನ್ವಯ ಮಾಡಲಾಗಿದೆಯೇ? | ಕಂಪನಿಯು ಮುಖ್ಯ ಲೆಕ್ಕ ಪತ್ರ ಮತ್ತು ತನ್ನ ಎಲ್ಲಾ ಸಹಾಯಕ/ಸಬ್ಸಿಡಿಯರಿ ಬ್ಯಾಂಕ್ ಖಾತೆಗಳ ಲೆಕ್ಕ ಸಮನ್ವಯ ನಿರ್ವಹಣೆ ಮಾಡುತ್ತದೆ. |
| | 4 | ಬ್ಯಾಂಕ್ ಖಾತೆಗಳ ಆಚರಣೆಯ ಅಧಿಕಾರವನ್ನು ಕೇವಲ ಒಬ್ಬ ಹಸ್ತಾಕ್ಷರ ಕರ್ತ/ ಒಬ್ಬರಿಗೆ ನೀಡಲಾಗಿದೆಯೇ ? | ನಮ್ಮ ಪರೀಕ್ಷಾರ್ಥ ತಪಾಸಣೆಯ ಆಧಾರದ ಮೇಲೆ ಒಬ್ಬರೇ ಹಸ್ತಾಕ್ಷರ ಕರ್ತರ ಮೂಲಕ ಆಚರಣೆಯಲ್ಲಿರುವ ಯಾವುದೇ ಬ್ಯಾಂಕ್ ಖಾತೆಯ ಪ್ರಕರಣ ಗಮನಕ್ಕೆ ಬಂದಿಲ್ಲ. |
| | 5 | ಪೂರಾ ಅವಧಿಯ ನಿಶ್ಚಿತ ಠೇವಣಿಯ ಬಡ್ಡಿಯನ್ನು ಲೆಕ್ಕ ಪುಸ್ತಕದಲ್ಲಿ ನಮೂದಿಸಲಾಗಿದೆಯೇ? | ನಮ್ಮ ಪರೀಕ್ಷಾರ್ಥ ತಪಾಸಣೆಯ ಆಧಾರದ ಮೇಲೆ ಪೂರಾ ಅವಧಿಯ ನಿಶ್ಚಿತ ಠೇವಣಿಯ ಬಡ್ಡಿಯನ್ನು ಲೆಕ್ಕ ಪುಸ್ತಕದಲ್ಲಿ ನಮೂದಿ–ಸಲಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. |
| | 6 | ಕಾಲಕಾಲಕ್ಕೆ ನಗದು/ಭೌತಿಕ ಸರಿ ನೋಡುವಿಕೆ ಯನ್ನು ಮಾಡಲಾಗಿದೆಯೇ ? | ನಮ್ಮ ಪರೀಕ್ಷಾರ್ಥ ತಪಾಸಣೆಯ ಆಡಿಟ್ ಆಧಾರದ ಮೇಲೆ ನಗದಿನ ಭೌತಿಕ ಸರಿನೋಡುವಿಕೆಯನ್ನು ದಿನವಹಿ / ನಿತ್ಯವೂ ಮಾಡಲಾಗುತ್ತಿದೆ. |

| | | | |
|---|---|---|---|
| | 7 | ತುಲನ ಪತ್ರದಲ್ಲಿ ತೋರಿಸಿದ ಕೈಯಲ್ಲಿರುವ ನಗದು, ನಗದಿನ ಭೌತಿಕ ತಪಾಸಣೆಯೊಡನೆ ತಾಳೆ ಯಾಗುತ್ತದೆಯೇ? | ನಾವು ನಗದಿನ ಭೌತಿಕ ಸರಿನೋಡುವಿಕೆ ಪ್ರಮಾಣ ಪತ್ರವನ್ನು ಪಡೆದಿದ್ದೇವೆ ಮತ್ತು ಅದರ ಒಟ್ಟು ಮೊತ್ತವು, ತುಲನ ಪತ್ರದಲ್ಲಿ ತೋರಿಸಿದ ಕೈಯಲ್ಲಿರುವ ನಗದು, ಇದರೊಡನೆ ತಾಳೆಯಾಗುತ್ತದೆ. |
| | 8 | ನಿಶ್ಚಿತ ಠೇವಣಿಯ ಎಫ್.ಡಿ. ವಹಿ/ರಿಜಿಸ್ಟರ್, ಅದರಲ್ಲಿನ ಮೊತ್ತಗಳು, ವಾಯಿದೆ ತಾರೀಖುಗಳು, ಬಡ್ಡಿಯದರ ಮತ್ತು ಬಡ್ಡಿಪಾವತಿಯ ತಾರೀಖು ಇವುಗಳನ್ನು ನಮೂದಿಸಿರುವ, ವಹಿನಿರ್ವಹಣೆ ಮಾಡಲಾಗುತ್ತಿದೆಯೇ? | ಕಂಪನಿಯು ನಿಶ್ಚಿತ ಠೇವಣಿಯ ಎಫ್.ಡಿ. ವಹಿ /ರಿಜಿಸ್ಟರ್, ಅದರಲ್ಲಿನ ಮೊತ್ತಗಳು, ವಾಯಿದೆ ತಾರೀಖುಗಳು, ಬಡ್ಡಿಯದರ ಮತ್ತು ಬಡ್ಡಿ ಪಾವತಿಯ ದಿನಾಂಕ ಇವುಗಳನ್ನು ನಮೂದಿಸಿ, ಫ್ಲೆಕ್ಸಿ ಠೇವಣಿ ಖಾತೆಗಳನ್ನು ಹೊರತು ಪಡಿಸಿ, ಉಳಿದಿರುವುದಕ್ಕೆ ನಿರ್ವಹಣೆ ಮಾಡಲಾಗುತ್ತಿದೆ. |
| | 9 | ವಾಯಿದೆಯ ದಿನದಂದು ನಿಶ್ಚಿತ ಠೇವಣಿಯ ಎಫ್.ಡಿ. ಯ ಮೇಲೆಬಡ್ಡಿ ಬರುತ್ತಿದೆಯೇ/ಎಂಬುದರ ಬಗೆಗೆ ಅನುವರ್ತಿ ಅನುಸರಿಸುವ ಕಾರ್ಯವಾಹಿ, ನಡೆಸಲಾಗುತ್ತಿದೆಯೇ? | ಕಂಪನಿಯು ಒದಗಿಸಿದ ವಿವರಣೆಗಳ ಆಧಾರದ ಮೇಲೆ, ವಾಯಿದೆ ದಿನಾಂಕದಂದು ಬರಬೇಕಾದ ಬಡ್ಡಿಯ ಬಗೆಗೆ, ಬ್ಯಾಂಕ್ ಗಳೊಡನೆ ಅನುವರ್ತಿ ಕಾರ್ಯ ನಡೆದಿದೆ, ಆದರೆ, ಸ್ಪಷ್ಟವಾದ ದಸ್ತಾವೇಜು /ದಾಖಲೆಗಳ ಇಲ್ಲದಿರುವುದರಿಂದ, ನಾವು ಅಂತಹ ನಿವೇದನೆಯ ಮೇಲೆ ವಿಶ್ವಾಶವನ್ನಿಟ್ಟಿದ್ದೇವೆ. |
| | 10 | ವಾಯಿದೆ ತಾರೀಖಿನ ನಂತರ ವಿಳಂಬವಿಲ್ಲದೇ ನಿಶ್ಚಿತ ಠೇವಣಿಯ ಎಫ್.ಡಿ.ಯ ಮೊತ್ತವು ವರ್ಗಾವಣೆ ಯನ್ನು ಗಮನಿಸಲು ಅನುವರ್ತಿ ಕಾರ್ಯ ವ್ಯವಸ್ಥೆ ಇದೆಯೇ? | ಕಂಪನಿಯು ವಿವರಿಸಿದಂತೆ ವಾಯಿದೆ ನಂತರ ಎಫ್.ಡಿ / ನಿಶ್ಚಿತ ಠೇವಣಿ ಮೊತ್ತವನ್ನು ವರ್ಗಾಯಿಸಲು ಕೆಲವು ನಿರ್ದಿಷ್ಟ ವಿಳಂಬಗ ಳಾಗಿವೆ, ಆದಾಗ್ಯೂ ಸಹ ಅವುಗಳನ್ನು ಕಂಪನಿ ಯು, ಅನಸರಣೆ/ ಅನುವರ್ತಿ ಕಾರ್ಯ ಮಾಡುತ್ತಿದೆ. ಆದರೆ, ಸ್ಪಷ್ಟವಾದ ದಸ್ತಾವೇಜು /ದಾಖಲೆಗಳ ಇಲ್ಲದಿರುವುದರಿಂದ, ನಾವು ಅಂತಹ ನಿವೇದನೆಯ ಮೇಲೆ ವಿಶ್ವಾಶವ ನ್ನಿಟ್ಟಿದ್ದೇವೆ. |
| | 11 | ಬ್ಯಾಂಕ್‌ಗಳಿಂದ ಖಾತರಿಯನ್ನು ಎಲ್ಲಾ ಖಾತೆಗಳಿಗೂ ಉಳಿತಾಯ/ಎಸ್.ಬಿ/ಚಾಲ್ತಿ/ಕರೆಂಟ್ ಮತ್ತು ಎಫ್.ಡಿ. ಸ್ಥಿರೀಕರಣ ವಿವರಣೆ / ತಖ್ತೆಯನ್ನು ಪಡೆದುಕೊಳ್ಳ ಲಾಗುತ್ತಿದೆಯೇ? | ಎಲ್ಲಾ ಖಾತೆಗಳಿಗೂ ಸಹಕಾಲಕಾಲಕ್ಕೆ ಶಿಲ್ಕುಗಳ ಸ್ಥಿರೀಕರಣ ಪ್ರಮಾಣ ಪತ್ರವನ್ನು ಪಡೆದು ಕೊಳ್ಳುವ ಪದ್ದತಿ ಇರುವುದಿಲ್ಲ. ಕಂಪನಿಯು ಮಾರ್ಚ್ 31, 2021 ಕ್ಕೆ ಶಿಲ್ಕು ಸ್ಥಿರೀಕರಣ ಪತ್ರ ಪಡೆದುಕೊಂಡಿದೆ ಮತ್ತು ಅವುಗಳು, ಕಂಪನಿಯ ಲೆಕ್ಕಪತ್ರಗಳೊಡನೆ ತಾಳೆಯಾಗುತ್ತದೆ. |
| | 12 | ಬ್ಯಾಂಕ್ ಶಿಲ್ಕು ಸ್ಥರೀಕರಣವು ಇವುಗಳು ಎಫ್.ಡಿ. ವಹಿ/ರಿಜಿಸ್ಟರ್ ಇದೊರೊಡನೆ / ಬ್ಯಾಂಕ್ ನೀಡಿದ ಸ್ಥಿರೀಕರಣದೊಂದಿಗೆ ತಾಳೆ ಹೊಂದುತ್ತದೆಯೇ? | ಹೌದು |

| | | | |
|---|---|---|---|
| | 13 | ರಿಜಿಸ್ಟರ್ ಎಫ್.ಡಿ. ನಿಶ್ಚಿತ ಠೇವಣಿ ಮತ್ತು ಎಫ್.ಡಿ ಮೇಲಿನ ಬಡ್ಡಿಯ ಮೇಲಿನ ತಖ್ತೆಗಳು ಬ್ಯಾಂಕ್ ನೀಡಿದ ಸ್ಥಿರೀಕರಣದೊಂದಿಗೆ ತಾಳೆ ಹೊಂದು ತ್ತದೆಯೇ? | ಕಂಪನಿಯು ಮಾರ್ಚ್ 31 2021 ಕ್ಕೆ ಶಿಲ್ಕು ಸ್ಥಿರೀಕರಣ ಪತ್ರ ಪಡೆದುಕೊಂಡಿದೆ ಮತ್ತು ಅವುಗಳು ಕಂಪನಿಯ ಲೆಕ್ಕ ಪತ್ರಗಳೊಡನೆ ತಾಳೆಯಾಗುತ್ತದೆ. |
| | 14 | ಬ್ಯಾಂಕ್ ನಿಂದ ಸ್ವೀಕೃತವಾದ ತಖ್ತೆಗಳನ್ನು ಅಧಿ ಪ್ರಮಾಣಿಸಲಾಗಿದೆಯೇ ಮತ್ತು ಅವುಗಳು ಬ್ಯಾಂಕ್ ನ ಲೆಟರ್ ಹೆಡ್ ನಲ್ಲಿದೆಯೆ? | ಕಂಪನಿಯ ವರ್ಷಾಂತ್ಯಕ್ಕೆ ಬ್ಯಾಂಕ್‌ನ ಶಿಲ್ಕು ಸ್ಥಿರೀಕರಣ ಪಡೆದುಕೊಳ್ಳುವ ಪದ್ಧತಿಯನ್ನು ಹೊಂದಿದೆ ಮತ್ತು ಎಲ್ಲಾ ಶಿಲ್ಕುಗಳನ್ನು ಸ್ಥಿರೀಕರಿಸಲಾಗಿದೆ, ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಮಾತ್ರ, ಅವು ಬ್ಯಾಂಕ್‌ನ ಲೆಟರ್ ಹೆಡ್‌ನಲ್ಲಿ ಸಲ್ಲಿಸಿರುವುದಿಲ್ಲ. |
| | 15 | ಮೇಲಿನ ನೋಡುವಿಕೆಯಲ್ಲಿ ಗಮನಿಸಿದ ವ್ಯತ್ಯಾಸಗಳನ್ನು ಮುಂದಿನ ವರ್ಷಗಳಲ್ಲಿ ಸರಿ ಪಡಿಸಿಕೊಳ್ಳಲಾಗಿದೆಯೇ? | ಅನ್ವಯವಾಗುವುದಿಲ್ಲ, ಏಕೆಂದರೆ ಅಂತಹ ಯಾವುದೇ ವ್ಯತ್ಯಾಸಗಳು ಕಂಡು ಬಂದಿಲ್ಲ. |
| | 16 | ಪರೀಕ್ಷಾರ್ಥ ನೋಡುವಿಕೆಯ ಪ್ರಕರಣಗಳಲ್ಲಿ ಬ್ಯಾಂಕ್‌ಗಳಿಂದ ಬಾಹ್ಯ ಸ್ಥಿರೀಕರಣಗಳನ್ನು ಪಡೆದು ಕೊಳ್ಳಲಾಯಿತೇ. ಹಾಗಿದ್ದಲ್ಲಿ ಅದರ ವಿವರಗಳನ್ನು ಒದಗಿಸಿರಿ. | ಪ್ರಕರಣಗಳಲ್ಲಿ ಬ್ಯಾಂಕ್‌ಗಳಿಂದ ನೇರವಾಗಿ ಶಿಲ್ಕು ಸ್ಥಿರೀಕರಣಗಳನ್ನು ಪಡೆದು ಕೊಂಡಿದ್ದೇವೆ. |
| | 17 | ಮೇಲ್ಕಂಡ ಯಾವುದೇ ಲೋಪ ದೋಷಗಳನ್ನು ಆಂತರಿಕ ಆರ್ಥಿಕ ನಿಯಂತ್ರಣಗಳ ವರದಿಯಲ್ಲಿ ಶಾಸನಬದ್ಧ ಆಡಿಟರ್ ಅವರು ಹೊರತರಲಾಗಿದ್ದು ಉಂಟೇ, ಇಲ್ಲದಿದ್ದರೆ, ಈ ಬಗೆಗೆ ಆಡಿಟ್ ವಿವರಣೆಯನ್ನು ನೀಡಲಾಗಿದೆಯೇ ? | ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯ ಹೊರಡಿಸಿದ ಮಾರ್ಗದರ್ಶನ ಟಿಪ್ಪಣಿ ಯಲ್ಲಿನ ದಾಖಲಿಸಿದ ಆಂತರಿಕ ಆರ್ಥಿಕ ನಿಯಂತ್ರಣಗಳ ಇಲ್ಲದಿರುವಿಕೆಯಲ್ಲಿ, ನಾವು, 'ಅಭಿಪ್ರಾಯ ನಿರಾಕರಣೆಯನ್ನು ಹೊರಡಿಸಿದ್ದೇವೆ. ನಿಮ್ಮ ಗಮನಕ್ಕೆ ನಾವು ತರ ಬಯ ಸುವುದೇನೆಂದರೆ, ಮೇಲಿನ ಯಾವುದೇ ನಿರ್ದೇಶನಗಳು ನಮ್ಮ ಮೇಲಿನ ನಿರಾಕರ–ಣೆಯ ಮೇಲೆ ಪರಿಣಾಮ ಬೀರುವುದಿಲ್ಲ, ಮೇಲೆ ಹೇಳಿದ / ಪ್ರಸ್ತಾಪಿತ ಮಾರ್ಗದರ್ಶನ ಟಿಪ್ಪಣಿಯಲ್ಲಿ ಸಲಹೆ / ಸೂಚನೆ ನೀಡಿದುದನ್ನು ಹೊರತು ಪಡಿಸಿ, ಇನ್ನೆಲ್ಲಿಯೂ ಇಲ್ಲ. |
| ii | | ಕಾಮಗಾರಿಗಳ ಅನುಷ್ಠಾನಗಳ ಉಸ್ತುವಾರಿ ಅದರ ಎದುರು ಬದರಾಗಿ ಮೈಲುಗಲ್ಲುಗಳು ಕರಾರಿನಲ್ಲಿ ಗೊತ್ತುಪಡಿಸಿದಂತೆ, ಅವುಗಳು ಆಸ್ತಿತ್ವದಲ್ಲಿದೆಯೇ ಮತ್ತು ಖರ್ಚು ಹೆಚ್ಚಾಗುವಿಕೆ / ಕೈಬಿಟ್ಟ ಯೋಜನೆಗಳು, ಏನಾದರೂ ಇದ್ದಲ್ಲಿ ವರಮಾನ / ಆದಾಯ / ನಷ್ಟಗಳು, ಆಯಾ ಕರಾರುಗಳಿಂದ, ಇವುಗಳನ್ನು ಸರಿಯಾಗಿ ಪುಸ್ತಕಗಳಲ್ಲಿ ಲೆಕ್ಕ ನಿರ್ವಹಣೆ ಮಾಡಲಾಗಿದೆ. | ಈ ವರದಿಯಲ್ಲಿನ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ನಿರಾಕರಣೆಗೆ ಆಧಾರಗಳು ಖಂಡಿಕೆಗಳಿಗೆ / ಪ್ಯಾರಾಗಳಿಗೆ ಗಮನವನ್ನು ಸೆಳೆಯಾಗಿದೆ. ಅವುಗಳಲ್ಲಿ ಬಹಳಷ್ಟು ನ್ಯೂನತೆಗಳು, ನಿಯಂತ್ರಣ ಸಂಬಂಧಿಸಿದ ವಿವಾದ / ವಿಷಯಗಳು, ಲೆಕ್ಕ ನಿರ್ವಹಣೆ ವಿವಾದಿತ ವಿಷಯಗಳು, ದಸ್ತಾವೇಜು / ದಾಖಲಾತಿ ವಿಷಯಗಳನ್ನು. ಯೋಜನೆಯಗಳ ಅವಧಿ ಪ್ರಸ್ತುತ ವರ್ಷದಲ್ಲಿ ನಿರ್ವಹಿಸಿದ ಈ |

| | | | |
|---|---|---|---|
| | | | ಕೆಳಗೆ ನಮೂದಿಸಲಾಗಿದೆ. ಉಸ್ತುವಾರಿ ಅದರ ಎದುರು ಬದರಾಗಿ ಮೈಲುಗಲ್ಲುಗಳು ಕರಾರಿನಲ್ಲಿ ತಾಂತ್ರಿಕ ತಂಡವು ಗೊತ್ತುಪಡಿಸಿದಂತೆ, ಅವುಗಳು ಪ್ರತಿಯೊಬ್ಬ ಗುತ್ತಗೆದಾರರ ಬಿಲ್ ಅನುಮೋದನೆಯ ಹಂತದಲ್ಲಿಯೂ ಸಹ ಕಂಪನಿಯ ಆಸ್ತಿತ್ವದಲ್ಲಿದೆ. ಕರಾರಿನಲ್ಲಿ ಮೈಲುಗಲ್ಲುಗಳ ಪ್ರಕಾರ ನಿಗದಿತ ಸಮಯ ವಿಳಂಬವಾದುದು ಗಮನಕ್ಕೆ ಬಂದಲ್ಲಿ ಜುಲ್ಮಾನೆಯನ್ನು ವಿಧಿಸಲಾಗುವುದು, ವಸೂಲ್ಮಾಡಲಾಗುವುದು. ಆದಾಗ್ಯೂ ಸಹ ಕರಾರುಗಳನ್ನು ಮುಕ್ತಾಯಗೊಳಿಸುವಲ್ಲಿ ವಿಳಂಬ / ಎಫ್.ಕ್ಯೂ.ವಿ / ಎಫ್.ಪಿ.ವಿ / ಎಸ್.ಇ.ಡಬ್ಲ ಯು ಹಸ್ತಾಂತರ ಮತ್ತು ಡಿ.ಸಿ.ಡಬ್ಲ್ಯು ಯೋಜನೆಗಳು) ಇವುಗಳಲ್ಲಿ. ಖರ್ಚು ಏರಿಕೆಗಳ ಬಗೆಗೆ, ಕೈಬಿಟ್ಟ ಯೋಜನೆಗಳು, ಏನಾದರೂ ಇದ್ದಲ್ಲಿ, ಕರಾರುಗಳಿಂದ ಆದಾಯ / ನಷ್ಟಗಳು, ಇತ್ಯಾದಿ, ಇವುಗಳು ಲಭ್ಯವಿಲ್ಲದ ಕಾರಣ, ಈ ದಿಕ್ಕಿನಲ್ಲಿ ನಮಗೆ ಅಭಿಪ್ರಾಯ / ಟೀಕೆ ಮಾಡಲು ಸಾಧ್ಯವಾಗುತ್ತಿಲ್ಲ. |
| iii | | ವ್ಯಾಪಾರದಲ್ಲಿ ಬರಬೇಕಾದ ಮೊತ್ತ ಮುಂಗಡಗಳು ಮತ್ತು ಇದೇ ರೀತಿಯ ಶಿಲ್ಕುಗಳು. | ವ್ಯಾಪಾರದಲ್ಲಿ ಬರಬೇಕಾದ ಮೊತ್ತ ಮತ್ತು ಅದೇ ರೀತಿಯ ಸ್ವಭಾವದ ಮುಂಗಡಗಳು ಮತ್ತು ಶಿಲ್ಕುಗಳು, ಇವುಗಳ ಬಗೆಗೆ ಶಿಲ್ಕುಗಳ ಸ್ಥಿರೀಕರಣಗಳನ್ನು ಪಡೆದು ಕೊಳ್ಳುವ ಪದ್ದತಿಯೇ ಇಲ್ಲ |
| iv | | ವಿದ್ಯುತ್ ಉತ್ಪಾದನೆ ಕಂಪನಿಯಲ್ಲಿ ಪ್ರಸರಣಕ್ಕೆ ಲಭ್ಯವಿರುವ ವಿದ್ಯುತ್ ಅನ್ನು ಖಾಲಿಮಾಡುವ ವ್ಯವಸ್ಥೆಯು, ಸಮವ್ಯಾಪಕ / ಒಂದೇ ಪ್ರಮಾಣವಾಗಿದೆಯೇ? ಇಲ್ಲದಿದ್ದರೆ, ವಿದ್ಯುತ್ ಉತ್ಪಾದನೆ ಕಂಪನಿಯು ತಗಾದೆ ಮಾಡಿರುವ ನಷ್ಟದ ಬಗೆಗೆ ಅಭಿಪ್ರಾಯ/ಟೀಕೆ ನೀಡಿರಿ. | ಕಂಪನಿಯು ನೀಡಿದ ವಿವರಣೆಗಳಿಗೆ ಅನುಸಾರವಾಗಿ ವಿದ್ಯುತ್ತನ್ನು ಖಾಲಿ ಮಾಡುವ ಬಗೆಗೆ ದತ್ತಾಂಶಗಳನ್ನು ಲೆಕ್ಕಾಚಾರ ಮಾಡಲಾ ಗಿದೆ ಮತ್ತು ವಿದ್ಯುತ್ ಉತ್ಪಾದನೆ ಕಂಪನಿಯಲ್ಲಿ ಪ್ರಸರಣಕ್ಕೆ ಲಭ್ಯವಿರುವ ವಿದ್ಯುತ್ತನ್ನು ಖಾಲಿ ಮಾಡುವ ವ್ಯವಸ್ಥೆಯು, ಸಮವ್ಯಾಪಕ/ ಒಂದೇ ಪ್ರಮಾಣವಾಗಿದೆಯೆಂದು ಸ್ಥಿರೀಕರಿಸಲಾಗಿದೆ. ಕೆಲವು ನಿರ್ದಿಷ್ಟ ವಿದ್ಯುತ್ ಉತ್ಪಾದನಾ ಕಂಪನಿಗಳು, ಈ ಬಗೆಗೆ ತಗಾದೆ ಮಾಡಿವೆ, ಮತ್ತು ಕೆ.ಇ.ಆರ್.ಸಿ. ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು 31 ನೇ ಮಾರ್ಚ್ 2021 ರಂದು ಇದು ಇತ್ಯರ್ಥ / ನಿರ್ಣಯಕ್ಕಾಗಿ ಬಾಕಿ ಉಳಿದಿದೆ. ತಗಾದೆಯ ಬಗ್ಗೆ ತಯಾರಾದ ವಿದ್ಯುತ್ ಉತ್ಪಾದನ ಕಂಪನಿಗಳ ದತ್ತಾಂಶಗಳು |

| | | | |
|---|---|---|---|
| | | | ಪ್ರಾಧಿಕಾರದಲ್ಲಿ ಲಭ್ಯವಿಲ್ಲದೆ, ಇದ್ದ ಕಾರಣ ಈ ದಿಶೆಯಲ್ಲಿ ಅಭಿಪ್ರಾಯ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ. |
| V | | ಪ್ರಸ್ತುತ ವರ್ಷದಲ್ಲಿ ನಿಗದಿತ ಮಟ್ಟಕ್ಕಿಂತಲೂ ಹೆಚ್ಚಿನ ವಿದ್ಯುತ್ ಪ್ರಸರಣ ನಷ್ಟವು ಅನುಭವಿಸಲಾಗಿದೆ, ಮತ್ತು ಅವುಗಳನ್ನು ಸರಿಯಾಗಿ ಲೆಕ್ಕ ಇಡಲಾಗಿದೆಯೇ, ಲೆಕ್ಕ ಪುಸ್ತಕಗಳಲ್ಲಿ ದಾಖಲಿಸಲಾಗಿದೆಯೇ? | ನಮಗೆ ಕಂಪನಿಯು ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಹಾಗೂ ದಿನಾಂಕ 25ನೇ ಮೇ 2021 ರಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಅನುಮೋದಿಸಿದ ಟಿಪ್ಪಣಿಯನ್ನು ಅವಲಂಬಿಸಿ/ ವಿಶ್ವಾಸವಿಟ್ಟು ಮತ್ತು ಲೆಕ್ಕಪತ್ರಗಳ ಟಿಪ್ಪಣಿ 37.14 ಇಲ್ಲಿ ವಿವರಿಸಲಾದಂತೆ ಆರ್ಥಿಕ ವರ್ಷ 2020–21 ರಲ್ಲಿ ವರದಿ ಮಾಡಿದ ವಾಸ್ತವಿಕ ಪ್ರಸರಣ ನಷ್ಟವು 3.039% ಇದು ಕೆ.ಇ.ಆರ್.ಸಿ. ಅನುಮೋದಿಸಿದ ಶ್ರೇಣಿ/ಮಿತಿಯೊಳಗೆ, ಅಂದರೆ ಜಕಾತಿ ಆದೇಶ 2020ರಂತೆ ಇದೆ. |

**ಬಿ.ಕೆ.ರಾಮಧ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್,**
**FRN: 002878S/S200021**

ಸಹಿ/–
**ವಾಸುಕಿ.ಹೆಚ್.ಎಸ್.**
**ಪಾಲುಗಾರರು,**
**ಸದಸ್ಯತ್ವ ಸಂಖ್ಯೆ 212013**
**UIDN: 21212013AAAAGA1629**

**ಸ್ಥಳ:** ಬೆಂಗಳೂರು
**ದಿನಾಂಕ:** ಡಿಸೆಂಬರ್ 24, 2021

**ಅಂಕುಶ್ ಸೇಥಿ**
ಪ್ರಾಯೋಗಿಕವಾಗಿ ಕಂಪನಿ ಕಾರ್ಯದರ್ಶಿ

**ನಮೂನೆ ಸಂಖ್ಯೆ ಎಂ.ಆರ್-3**
**ಸೆಕ್ರೆಟೇರಿಯಲ್ ಆಡಿಟ್ ವರದಿ**
**31ನೇ ಮಾರ್ಚ್, 2021ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ**
**[ಕಂಪನಿ ಕಾಯಿದೆ, 2013 ರ ವಿಭಾಗ 204(1) ಮತ್ತು ಕಂಪನಿಗಳ ನಿಯಮ ಸಂಖ್ಯೆ 9 (ವ್ಯವಸ್ಥಾಪಕ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014]**

ಗೆ,

ಸದಸ್ಯರು,
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಸಿಐಎನ್: ಯು40109ಕೆಎ1999ಎಸ್‌ಜಿಸಿ025521,
ಕಾವೇರಿ ಭವನ, ಕೆ ಜಿ ರಸ್ತೆ,
ಬೆಂಗಳೂರು – 560 009.

ನಾನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಇನ್ನು ಮುಂದೆ 'ಕಂಪನಿ' ಎಂದು ಕರೆಯಲ್ಪಡುತ್ತದೆ) ಅನ್ವಯವಾಗುವ ಶಾಸನಬದ್ಧ ನಿಬಂಧನೆಗಳ ಅನುಸರಣೆ ಮತ್ತು ಉತ್ತಮ ಸಾಂಸ್ಥಿಕ ಅಭ್ಯಾಸಗಳ ಅನುಸರಣೆಯ ಸೆಕ್ರೆಟರಿ ಆಡಿಟ್ ಅನ್ನು **ಮಾರ್ಚ್ 31, 2021**ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ (ಪರಿಶೋಧನಾ ಅವಧಿ) ನಡೆಸಿದ್ದೇನೆ. ಕಾರ್ಪೊರೇಟ್ ನಡವಳಿಕೆಗಳು/ ಶಾಸನಬದ್ಧ ಅನುಸರಣೆಗಳನ್ನು ಮೌಲ್ಯಮಾಪನ ಮಾಡಲು ಮತ್ತು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಮಗೆ ಸಮಂಜಸವಾದ ಆಧಾರವನ್ನು ಒದಗಿಸುವ ರೀತಿಯಲ್ಲಿ ಕಾರ್ಯದರ್ಶಿ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು ಮತ್ತು ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು.

ಕಂಪನಿಯ ಪುಸ್ತಕಗಳು ಮತ್ತು ಪೇಪರ್‌ಗಳು, ಮಿನಿಟ್ಸ್ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿದ ರಿಟರ್ನ್ಸ್ ಮತ್ತು ಕಂಪನಿಯು ನಿರ್ವಹಿಸುವ ಇತರ ದಾಖಲೆಗಳು ನನ್ನ ಪರಿಶೀಲನೆಯ ಆಧಾರದ ಮೇಲೆ ಮತ್ತು ಸೆಕ್ರೆಟೇರಿಯಲ್ ಆಡಿಟ್ ನಡೆಸುವ ಸಮಯದಲ್ಲಿ ಕಂಪನಿ, ಅದರ ಅಧಿಕಾರಿಗಳು, ಏಜೆಂಟ್‌ಗಳು ಮತ್ತು ಅಧಿಕೃತ ಪ್ರತಿನಿಧಿಗಳು ಒದಗಿಸಿದ ಮಾಹಿತಿಯ ಆಧಾರದ ಮೇಲೆ, ನಾನು ಈ ಮೂಲಕ ನನ್ನ ಅಭಿಪ್ರಾಯದಲ್ಲಿ, ಕಂಪನಿಯು 2020 ರ ಮಾರ್ಚ್ 31 ರಂದು ಕೊನೆಗೊಂಡ ಹಣಕಾಸು ವರ್ಷವನ್ನು ಒಳಗೊಂಡ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಇಲ್ಲಿ ಪಟ್ಟಿ ಮಾಡಲಾದ ಶಾಸನಬದ್ಧ ನಿಬಂಧನೆಗಳನ್ನು ಅನುಸರಿಸಿದೆ ಮತ್ತು ಕಂಪನಿಯು ಸರಿಯಾದ ಮಂಡಳಿ–ಪ್ರಕ್ರಿಯೆಗಳು ಮತ್ತು ಅನುಸರಣೆ ಕಾರ್ಯವಿಧಾನವನ್ನು ಹೊಂದಿದೆ ಎಂದು ವರದಿ ಮಾಡಿದೆ. ಇನ್ನು ಮುಂದೆ ಮಾಡಿದ ವರದಿಯ ವಿಧಾನ ಮತ್ತು ಒಳಪಟ್ಟಿರುತ್ತದೆ.

2021ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಂಪನಿಯು ನಿರ್ವಹಿಸಿದ ಪುಸ್ತಕಗಳು ಮತ್ತು ಪೇಪರ್‌ಗಳು, ಮಿನಿಟ್ಸ್ ಪುಸ್ತಕಗಳು, ನಮೂನೆಗಳು ಮತ್ತು ರಿಟರ್ನ್ಸ್ ಸಲ್ಲಿಸಿದ ಇತರ ದಾಖಲೆಗಳನ್ನು ನಾನು ಪರಿಶೀಲಿಸಿದ್ದೇನೆ:

(i) ಕಂಪನಿಗಳ ಅಧಿನಿಯಮ ಕಾಯಿದೆ, 2013 (ಅಧಿನಿಯಮ) ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು.

**ಅಂಕುಶ್ ಸೇಥಿ**

ಪ್ರಾಯೋಗಿಕವಾಗಿ ಕಂಪನಿ ಕಾರ್ಯದರ್ಶಿ

(ii) ಸೆಕ್ಯುರಿಟೀಸ್ ಕಾಂಟ್ರಾಕ್ಟ್ಸ್ (ನಿಯಂತ್ರಣ) ಕಾಯಿದೆ, 1956 (SCRA) ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ಯಾವುದೇ ವರದಿ ಮಾಡಬಹುದಾದ ಈವೆಂಟ್ ಇಲ್ಲದಿರುವುದರಿಂದ ಅನ್ವಯಿಸುವುದಿಲ್ಲ;

(iii) ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 ಮತ್ತು ನಿಯಮಗಳು ಮತ್ತು ನಿಬಂಧನೆಗಳು ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವಾಣಿಜ್ಯ ಸಾಲಗಳ ಮಟ್ಟಿಗೆ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಯಾವುದೇ ವರದಿ ಮಾಡಬಹುದಾದ ಘಟನೆಗಳಿಲ್ಲದ ಕಾರಣ ಅನ್ವಯಿಸುವುದಿಲ್ಲ.

(iv) ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ, 2013.

(v) ಸರಕು ಮತ್ತು ಸೇವೆಗಳ ಕಾಯಿದೆ 2017 ರಿಟರ್ನ್ಸ್ ಸಲ್ಲಿಸುವುದಕ್ಕೆ ಸೀಮಿತವಾಗಿದೆ

(vi) ಆದಾಯ ತೆರಿಗೆ ಕಾಯಿದೆ 1962.

ಕಂಪನಿಗೆ ಅನ್ವಯವಾಗುವ ಇತರ ಅನ್ವಯವಾಗುವ ಕಾಯಿದೆಗಳು, ಕಾನೂನುಗಳು, ನಿಯಮಗಳು, ಮಾರ್ಗಸೂಚಿಗಳ ಅಡಿಯಲ್ಲಿ ಅನುಸರಣೆಯನ್ನು ಖಚಿತ ಪಡಿಸಿಕೊಳ್ಳಲು ಕಂಪನಿಯು ಸ್ಥಾಪಿಸಿದ ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು ನಾನು ಪರಿಶೀಲಿಸಿದ್ದೇನೆ ಮತ್ತು ಈ ಕೆಳಗಿನವುಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ:

1. ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯಿದೆ, 1961
2. ನೀರು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯಿದೆ, 1974
3. ನೀರು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್ ಕಾಯಿದೆ, 1977
4. ಪರಿಸರ (ರಕ್ಷಣೆ) ಕಾಯಿದೆ 1986.
5. ಗ್ರಾಹಕ ಸಂರಕ್ಷಣಾ ಕಾಯಿದೆ, 1986
6. ಕೈಗಾರಿಕಾ ವಿವಾದಗಳ ಕಾಯಿದೆ 1947
7. ಕಾರ್ಖಾನೆಗಳ ಕಾಯಿದೆ, 1948
8. ಹೆರಿಗೆ ಪ್ರಯೋಜನ ಕಾಯಿದೆ
9. ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯಿದೆ 1970–ವಿಷಯವು ಉಪ–ನ್ಯಾಯಲಯದ ಮುಂದೆ ಇದೆ, ಆದ್ದರಿಂದ ನಾವು ಅದರ ಬಗ್ಗೆ ಪ್ರತಿಕ್ರಯಿಸುವುದಕ್ಕೆ ಹಿಂಜರಿಯುತ್ತೇವೆ.
10. ಬೋನಸ್ ಪಾವತಿ ಕಾಯ್ದೆ 1956
11. ವೇತನ ಪಾವತಿ ಕಾಯಿದೆ, 1936

ಕಂಪನಿಗೆ ನಿರ್ದಿಷ್ಟವಾಗಿ ಅನ್ವಯವಾಗುವಂತೆ ನಿರ್ವಹಣೆಯು ಈ ಕೆಳಗಿನ ಕಾನೂನುಗಳನ್ನು ಗುರುತಿಸಿದೆ ಮತ್ತು ದೃಢೀಕರಿಸಿದೆ:

ಎ. ವಿದ್ಯುಚ್ಛಕ್ತಿ ಕಾಯಿದೆ, 2003 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು ಮತ್ತು ನಿರ್ದಿಷ್ಟವಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದೊಂದಿಗೆ (ಕೆಇಆರ್‌ಸಿ) ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಮತ್ತು ನಿಯಂತ್ರಣ ಕಾರ್ಯವಿಧಾನ

ಬಿ. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಮತ್ತು ಮಾರ್ಗಗಳ ನಿರ್ಮಾಣಕ್ಕಾಗಿ ತಾಂತ್ರಿಕ ಮಾನದಂಡಗಳು) ನಿಯಮ 2010.

**ಅಂಕುಶ್ ಸೇಥಿ**

ಪ್ರಾಯೋಗಿಕವಾಗಿ ಕಂಪನಿ ಕಾರ್ಯದರ್ಶಿ

ಸಿ. ಕೇಂದ್ರೀಯ ವಿದ್ಯುತ್ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು 2010

ಡಿ. ಭಾರತೀಯ ವಿದ್ಯುತ್ ಗ್ರಿಡ್ ಕೋಡ್ ನಿಯಮಗಳು 2010

ಇ. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ನಿರ್ಮಾಣ, ಕಾರ್ಯಾಚರಣೆಗಳು ಮತ್ತು ವಿದ್ಯುತ್ ಸ್ಥಾವರಗಳು ಮತ್ತು ಲೈನ್‌ಗಳ ನಿರ್ವಹಣೆಗೆ ಸುರಕ್ಷತೆ ಅಗತ್ಯತೆಗಳು) ನಿಯಮಗಳು 2011

ಎಫ್. ಇಂಧನ ಸಂರಕ್ಷಣೆ ಕಾಯಿದೆ, 2011

ಜಿ. ಕೆಇಆರ್‌ಸಿ (ಸಾಮಾನ್ಯ ಮತ್ತು ನಡಾವಳಿಗಳ ನಡವಳಿಕೆ) ನಿಯಮಗಳು 2000

ಹೆಚ್. ಕೆಇಆರ್‌ಸಿ (ಪರವಾನಗಿ) ನಿಯಮಗಳು 2000

ಐ. ಕೆಇಆರ್‌ಸಿ (ಶುಲ್ಕ) ನಿಯಮಗಳು 2016

ಜೆ. ಕೆಇಆರ್‌ಸಿ (ಸುಂಕ) ನಿಯಮಗಳು 2000

ಕೆ. ಕೆಇಆರ್‌ಸಿ (ವಿದ್ಯುತ್ ಪೂರೈಕೆಗಾಗಿ ವೆಚ್ಚದ ಮರುಪಡೆಯುವಿಕೆ) ನಿಯಮಗಳು 2004

ಎಲ್. ಕೆಇಆರ್‌ಸಿ (ವಿದ್ಯುತ್ ಸರಬರಾಜು) ಕೋಡ್ 2004

ಎಂ. ಕರ್ನಾಟಕ ಎಲೆಕ್ಟ್ರಿಸಿಟಿ ಗ್ರಿಡ್ ಕೋಡ್ 2005

ಎನ್. ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಸೇವಾ ನಿಯಮಗಳು

ಒ. ಅರಣ್ಯ (ಸಂರಕ್ಷಣೆ) ಕಾಯಿದೆ 1980

ಪಿ. 17.06.2006 ರ ಕರ್ನಾಟಕ ರಾಜ್ಯ ರಾಜ್ಯಪತ್ರ ಅಧಿಸೂಚನೆಯಲ್ಲಿ ವಿತರಣಾ ಪರವಾನಗಿದಾರರ ವಿದ್ಯುತ್ ಪೂರೈಕೆಯ ಷರತ್ತುಗಳು

ಕ್ಯೂ. ಕೆಇಆರ್‌ಸಿ ಅಧಿಸೂಚನೆ ಸಂಖ್ಯೆ. ಕೆಇಆರ್‌ಸಿ/ಸಿಒಎಸ್/ಡಿ/07/10 ದಿನಾಂಕ 01.07.2016

ಕೆಳಗಿನವುಗಳ ಅನ್ವಯವಾಗುವ ಷರತ್ತುಗಳ ಅನುಸರಣೆಯನ್ನು ಸಹ ನಾನು ಪರಿಶೀಲಿಸಿದ್ದೇನೆ.

(i) ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ ಹೊರಡಿಸಿದ ನಿರ್ದೇಶಕರ ಮಂಡಳಿ (SS-1) ಮತ್ತು ಸಾಮಾನ್ಯ ಸಭೆಗಳ (ಎಸ್‌ಎಸ್–2) ಸಭೆಗಳಿಗೆ ಸಂಬಂಧಿಸಿದಂತೆ ಕಾರ್ಯದರ್ಶಿ ಮಾನದಂಡಗಳು;

(ii) ಕಂಪನಿಯು ಸ್ಟಾಕ್ ಎಕ್ಸ್ಚೇಂಜ್ ನೊಂದಿಗೆ ನಮೂದಿಸಿದ ಪಟ್ಟಿ ಒಪ್ಪಂದಗಳು–ಕಂಪನಿಯ ಸೆಕ್ಯುರಿಟಿಗಳನ್ನು ಯಾವುದೇ ಸ್ಟಾಕ್ ಎಕ್ಸ್ಚೇಂಜ್‌ನಲ್ಲಿ ಪಟ್ಟಿ ಮಾಡಲಾಗಿಲ್ಲವಾದ್ದರಿಂದ ಅನ್ವಯಿಸುವುದಿಲ್ಲ.

ಪರಿಶೀಲನೆಯ ಅವಧಿಯಲ್ಲಿ, ಕಂಪನಿಯು ಈ ವರದಿಯ ಅನುಬಂಧದಲ್ಲಿ ಒದಗಿಸಿದನ್ನು ಹೊರತುಪಡಿಸಿ, ಮೇಲೆ ತಿಳಿಸಲಾದ ಕಾಯಿದೆ, ನಿಯಮಗಳು, ಮಾರ್ಗಸೂಚಿಗಳು, ಮಾನದಂಡಗಳು ಇತ್ಯಾದಿಗಳ ನಿಬಂಧನೆಗಳನ್ನು ಅನುಸರಿಸಿದೆ.

**ನಾನು ಮುಂದುವರೆದು ವರದಿ ಮಾಡುವುದೇನೆಂದರೆ :**

- ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಮಹಿಳಾ ನಿರ್ದೇಶಕರ ಸರಿಯಾದ ಸಮತೋಲನದೊಂದಿಗೆ ಕಂಪನಿಯ ನಿರ್ದೇಶಕರ ಮಂಡಳಿಯನ್ನು ರಚಿಸಲಾಗಿದೆ.

- ಕಂಪನಿಯು ಈ ಕೆಳಗಿನ ಸಮಿತಿಗಳನ್ನು ರಚಿಸಿದೆ:

**ಅಂಕುಶ್ ಸೇಥಿ**
ಪ್ರಾಯೋಗಿಕವಾಗಿ ಕಂಪನಿ ಕಾರ್ಯದರ್ಶಿ

- ★ ಆಡಿಟ್ ಸಮಿತಿ
- ★ ಸಾಲಗಳ ಉಪ ಸಮಿತಿ
- ★ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿ
- ★ ಸಂಯೋಜಿತ ಕೇಂದ್ರ ಖರೀದಿ ಸಮಿತಿ

- ಆಡಿಟ್ ಅವಧಿಯಲ್ಲಿ ನಡೆದ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿ (ಮತ್ತು ಸಮಿತಿಗಳ ಪರಿಣಾಮವಾಗಿ) ಬದಲಾವಣೆಗಳನ್ನು ಕಾಯಿದೆಯ ನಿಬಂಧನೆಗಳಿಗೆ ಅನುಸಾರವಾಗಿ ಕೈಗೊಳ್ಳಲಾಗಿದೆ;
- ಮಂಡಳಿ ಮತ್ತು ಅದರ ಸಮಿತಿಯ ಎಲ್ಲಾ ನಿರ್ಧಾರಗಳನ್ನು ಅಗತ್ಯ ಬಹುಮತದೊಂದಿಗೆ ಕೈಗೊಳ್ಳಲಾಯಿತು.
- ಎಲ್ಲಾ ಸಭೆ(ಗಳ) ನಡಾವಳಿಗಳನ್ನು ಸರಿಯಾಗಿ ನಿರ್ವಹಿಸಲಾಗಿದೆ.
- ಸಂಸ್ಥೆಯ ರಚನೆಯ ಕಾರಣದಿಂದಾಗಿ; ಮಂಡಳಿಯ ಸಭೆಗಳಿಗೆ ಸಾಕಷ್ಟು ಸೂಚನೆ ನೀಡಲಾಗಿದೆ ಮತ್ತು ಅಗತ್ಯ ಕಾರ್ಯಸೂಚಿ ಪತ್ರಗಳನ್ನು ಮುಂಚಿತವಾಗಿ ಪ್ರಸಾರ ಮಾಡಲಾಗಿದೆ.

**ನಾನು ಮುಂದುವರೆದು ವರದಿ ಮಾಡುವುದೇನೆಂದರೆ :**

ಕಂಪನಿಯು ಸ್ಥಾಪಿಸಿದ ಅನುಸರಣೆ ಕಾರ್ಯವಿಧಾನದ ಪರಿಶೀಲನೆಯ ಆಧಾರದ ಮೇಲೆ, ಕಂಪನಿಯಲ್ಲಿ ಅದರ ಗಾತ್ರ ಮತ್ತು ಕಾರ್ಯಾಚರಣೆಗಳಿಗೆ ಅನುಗುಣವಾಗಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು ಜಾರಿಯಲ್ಲಿವೆ ಎಂದು ನಾನು ಅಭಿಪ್ರಾಯಪಟ್ಟಿದ್ದೇನೆ, ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ಮಾರ್ಗಸೂಚಿಗಳ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಖಚಿತಪಡಿಸಿಕೊಳ್ಳಲು ತಿಳಿಸಿರುತ್ತೇವೆ.

**ನಾನು ಮುಂದುವರೆದು ವರದಿ ಮಾಡುವುದೇನೆಂದರೆ :**

ಲೆಕ್ಕಪರಿಶೋಧನೆಯ ಅವಧಿಯಲ್ಲಿ, ಮೇಲೆ ಉಲ್ಲೇಖಿಸಲಾದ ಕಾನೂನುಗಳು, ನಿಯಮಗಳು, ಮಾರ್ಗಸೂಚಿಗಳು, ಮಾನದಂಡಗಳು ಇತ್ಯಾದಿಗಳ ಅನುಸಾರವಾಗಿ ಕಂಪನಿಯ ವ್ಯವಹಾರಗಳ ಮೇಲೆ ಪ್ರಮುಖವಾದ ಯಾವುದೇ ಘಟನೆಗಳು / ಕ್ರಮಗಳು ಇರಲಿಲ್ಲ.

ಸಹಿ/–
ಅಂಕುಶ್ ಸೇಥಿ,
**ಸದಸ್ಯತ್ವ ಸಂಖ್ಯೆ :** 42050
**ಸಿ.ಪಿ. ನಂ** :15741
**ಯುಡಿಐಎನ್** : ಎಓ42050ಸಿ001959438

**ದಿನಾಂಕ :** 28.12.2021
**ಸ್ಥಳ :** ಬೆಂಗಳೂರು

**ಅಂಕುಶ್ ಸೇಥಿ**

ಪ್ರಾಯೋಗಿಕವಾಗಿ ಕಂಪನಿ ಕಾರ್ಯದರ್ಶಿ

**ಅನುಬಂಧ–ಎ**

ಗೆ,
ಸದಸ್ಯರು,
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಸಿಐಎನ್: ಯು40109ಕೆಎ1999ಎಸ್‌ಜಿಸಿ025521,
ಕಾವೇರಿ ಭವನ, ಕೆ ಜಿ ರಸ್ತೆ,
ಬೆಂಗಳೂರು – 560 009.

ಇದೇ ದಿನಾಂಕದಲ್ಲಿನ ನಮ್ಮ ವರದಿಯನ್ನು ಈ ಪತ್ರದ ಜೊತೆಗೆ ಓದಬೇಕು

1. ಕಂಪನಿಯ ನಿರ್ವಹಣೆಯ ಜವಾಬ್ದಾರಿಯು ಕಾರ್ಯದರ್ಶಿಯ ದಾಖಲೆಯ ಮುಖ್ಯಾಂಶವಾಗಿದೆ. ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಈ ಕಾರ್ಯದರ್ಶಿಯ ದಾಖಲೆಗಳ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ.

2. ಕಾರ್ಯದರ್ಶಿ ದಾಖಲೆಗಳ ನಿಖರತೆಯ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯಲು ನಾನು ಆಡಿಟ್ ಅಭ್ಯಾಸಗಳು ಮತ್ತು ಪ್ರಕ್ರಿಯೆಯನ್ನು ಅನುಸರಿಸಿದ್ದೇನೆ. ಕಾರ್ಯದರ್ಶಿಯ ದಾಖಲೆಗಳಲ್ಲಿ ಪ್ರತಿಫಲಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ಪರೀಕ್ಷಾ ಆಧಾರದ ಮೇಲೆ ಪರಿಶೀಲನೆಯನ್ನು ಮಾಡಲಾಗಿದೆ. ನಾನು ಪ್ರಕ್ರಿಯೆ ಮತ್ತು ಅಭ್ಯಾಸಗಳನ್ನು ಅನುಸರಿಸಿದ್ದೇನೆ ಎಂದು ನಾನು ನಂಬುತ್ತೇನೆ. ನನ್ನ ಅಭಿಪ್ರಾಯಕ್ಕೆ ಸಮಂಜಸವಾದ ಆಧಾರವನ್ನು ಒದಗಿಸಿದ್ದೇನೆ.

3. ನಾನು ಹಣಕಾಸಿನ ದಾಖಲೆಗಳು ಕಂಪನಿಯ ಖಾತೆಗಳ ಪುಸ್ತಕಗಳ ಆದಾಯ ತೆರಿಗೆ ಮತ್ತು ರಿಟರ್ನ್ಸ್ ಮತ್ತು ಜಿ.ಎಸ್.ಟಿ ರಿಟರ್ನ್ಸ್‌ಗಳ ಸರಿಯಾದ ಮತ್ತು ಸೂಕ್ತತೆಯನ್ನು ನಾನು ಪರಿಶೀಲಿಸಿಲ್ಲ.

4. ಅವಶ್ಯಕತೆ ಇದ್ದಲೆಲ್ಲಾ ನಾನು ಕಾನೂನು ನಿಯಮಗಳ ಪಾಲನೆ ಮತ್ತು ಘಟನೆಗಳ ಸಂಭವಿಸುವಿಕೆಯ ಬಗ್ಗೆ ವ್ಯವಸ್ಥಾಪಕ ವರ್ಗದ ನಿವೇದನೆ ಪ್ರತಿನಿಧ್ಯವನ್ನು ಪಡೆದುಕೊಂಡಿದ್ದೇನೆ.

5. ಕಾರ್ಪೋರೇಟ್ ಮತ್ತು ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು ಮಾನದಂಡಗಳ, ನಿಬಂಧನೆಗಳ ಅನುಸರಣೆ ಕಂಪನಿಯ ನಿರ್ವಹಣೆಯ ಜವಾಬ್ದಾರಿಯಾಗಿದೆ. ನಮ್ಮ ಪರೀಕ್ಷೆಯು ಪರೀಕ್ಷಾ ಆಧಾರದ ಮೇಲೆ ಕಾರ್ಯವಿಧಾನದ ಪರಿಶೀಲನೆಗೆ ಸೀಮಿತವಾಗಿತ್ತು.

6. ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿಯು ಕಂಪನಿಯ ಭವಿಷ್ಯದ ಕಾರ್ಯಸಾಧ್ಯತೆಯ ಬಗ್ಗೆ ಅಥವಾ ನಿರ್ವಹಣೆಯು ಕಂಪನಿಯ ವ್ಯವಹಾರಗಳನ್ನು ನಿರ್ವಹಿಸಿದ ಪರಿಣಾಮಕಾರಿತ್ವ ಅಥವಾ ಪರಿಣಾಮಕಾರಿತ್ವದ ಭರವಸೆಯಲ್ಲ.

ಸಹಿ/–
ಅಂಕುಶ್ ಸೇಥಿ,
**ಸದಸ್ಯತ್ವ ಸಂಖ್ಯೆ :** 42050
ಸಿ.ಪಿ. **ನಂ** :15741
**ಯುಡಿಐಎನ್** : ಎಓ42050ಸಿ001959438

**ದಿನಾಂಕ :** 28.12.2021
**ಸ್ಥಳ :** ಬೆಂಗಳೂರು

# ಆಯವ್ಯಯ ಪಟ್ಟಿ 31.03.2021 ರಂದು ಇದ್ದಂತೆ

(ಮೊಬಲಗು ರೂ. ಗಳಲ್ಲಿ)

| ವಿವರಗಳು | ಟಿಪ್ಪಣಿ ಸಂ. | ಲೆಕ್ಕ ಸಂಕೇತ | 31 ಮಾರ್ಚ್–2021 ರಂದು ಇದ್ದಂತೆ | | 31 ಮಾರ್ಚ್–2020 ರಂದು ಇದ್ದಂತೆ | | 01 ಏಪ್ರಿಲ್–2019 ರಂದು ಇದ್ದಂತೆ | |
|---|---|---|---|---|---|---|---|---|
| ಆಸ್ತಿಗಳು | | | | | | | | |
| **ಪ್ರಸಕ್ತವಲ್ಲದ ಆಸ್ತಿಗಳು** | | | | | | | | |
| (ಎ) ಸ್ಥಾವರ ಸ್ವತ್ತು ಮತ್ತು ಸಲಕರಣೆ | 2 | 10,12 &16.2 | 14822 87 92 636 | | 13684 03 50 081 | | 12568 17 23 357 | |
| (ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು | 3 | 14 & 15 | 3514 67 70 121 | | 3181 14 80 329 | | 2832 06 74 246 | |
| (ಸಿ) ಇತರೆ ಅಮೂರ್ತ ಸ್ವತ್ತುಗಳು | 3A | 18 | 58 92 763 | | 83 81 259 | | 1 08 69 755 | |
| (ಡಿ) ಸದ್ಭಾವನೆ | | | | | | | | |
| (ಇ) ಆರ್ಥಿಕ ಸ್ವತ್ತುಗಳು | | | | | | | | |
| (i) ಸ್ಯಾ ೪೪೪ | 4 | 28.935 & 28.936 | 60 04 71 903 | | 111 18 10 650 | | 10 08 82 046 | |
| (ii) ಇತರೆ | 4A | 25 to 27 & 28 | 1782 53 38 353 | | 1751 97 11 886 | | 682 10 27 089 | |
| (ಎಫ್) ಇತರೆ ಪ್ರಸಕ್ತವಲ್ಲದ ಸ್ವತ್ತುಗಳು | 5 | 17,25,26,27,28,28.4 to 28.9 & 31 to 37 | 66 50 23 434 | 20247 22 89 210 | 48 56 29 048 | 18777 73 63 253 | 47 76 51 992 | 16141 28 28 485 |
| **ಪ್ರಸಕ್ತ ಆಸ್ತಿಗಳು** | | | | | | | | |
| (ಎ) ದಾಸ್ತಾನುಗಳು | 6 | 22&16.1 | 84 88 06 267 | | 84 97 85 965 | | 72 93 06 821 | |
| (ಬಿ) ಆರ್ಥಿಕ ಸ್ವತ್ತುಗಳು | | | | | | | | |
| (i) ವ್ಯವಹಾರ ಸ್ವೀಕೃತಿಗಳು | 7 | 23 & 28.1 | 696 71 51 640 | | 1061 75 15 650 | | 676 96 36 611 | |
| (ii) ನಗದು ಮತ್ತು ನಗದಿಗೆ ಸಮಾನವಾದದ್ದು | 8 | 20 & 24 | 75 70 91 013 | | 66 65 19 750 | | 45 03 58 014 | |
| (iii) ಇತರೆ ಬ್ಯಾಂಕ್ ಉಳಿಕೆಗಳು | 9 | 24.8 & 20.2 | 186 78 28 348 | | 138 67 11 060 | | 114 66 98 193 | |
| (iv) ಸಾಲಗಳು | 10 | 25 & 27 | 24 52 51 093 | | 19 89 97 846 | | 4 72 44 772 | |
| (V) ಇತರೆ ಆರ್ಥಿಕ ಆಸ್ತಿಗಳು | 11 | 28 | 274 11 62 930 | | 254 89 21 548 | | 256 83 93 764 | |
| (ಸಿ) ಇತರೆ ಪ್ರಸಕ್ತ ಆಸ್ತಿಗಳು | 12 | 16,28.1 to 28.9 | 5 59 58 053 | 1348 32 49 344 | 4 76 48 096 | 1631 60 99 915 | 6 99 73 910 | 1178 16 12 085 |
| **ಒಟ್ಟು ಆಸ್ತಿಗಳು** | | | | 21595 55 38 554 | | 20409 34 63 168 | | 17319 44 40 570 |
| **ಸ್ವಾಮ್ಯ ಮತ್ತು ಹೊಣೆಗಾರಿಕೆಗಳು** | | | | | | | | |
| **ಸ್ವಾಮ್ಯ** | | | | | | | | |
| (ಎ) ಸ್ವಾಮ್ಯ ಷೇರು ಬಂಡವಾಳ | 13 | 52.301 | 2182 32 25 000 | | 2182 32 25 000 | | 2182 32 25 000 | |
| (ಬಿ) ಇತರೆ ಸ್ವಾಮ್ಯ | 14 | 55 to 58 | 3289 48 40 280 | | 2672 87 04 664 | | 2048 93 85 433 | |
| **ಒಟ್ಟು ಸ್ವಾಮ್ಯ** | | | | 5471 80 65 280 | | 4855 19 29 664 | | 4231 26 10 433 |
| **ಪ್ರಸಕ್ತವಲ್ಲದ ಹೊಣೆಗಾರಿಕೆಗಳು** | | | | | | | | |
| (ಎ) ಆರ್ಥಿಕ ಹೊಣೆಗಾರಿಕೆಗಳು | | | | | | | | |
| (i) ಸಾಲಗಳು | 15 | 51 to 54 | 6862 75 60 369 | | 6010 75 93 499 | | 5258 77 81 522 | |
| (ii) ಇತರ ಹಣಕಾಸಿನ ಹೊಣೆಗಾರಿಕೆಗಳು | 15A | | 2150 30 01 975 | | 2266 80 47 473 | | 769 07 77 912 | |
| (ಬಿ) ಹವಣಿಕೆಗಳು | 16 | 44 | 321 40 62 280 | | 293 98 56 990 | | 226 67 84 131 | |
| (ಸಿ) ಮುಂದೂಡಿದ ತೆರಿಗೆ ಹೊಣೆ (ನಿವ್ವಳ) | 17 | 46.802 | 950 29 76 842 | | 856 58 29 083 | | 954 07 29 139 | |
| (ಡಿ) ಇತರೆ ಪ್ರಸಕ್ತವಲ್ಲದ ಹೊಣೆಗಾರಿಕೆಗಳು | 18 | 42 to 53 | 1318 79 59 752 | 11603 55 61 218 | 1213 96 29 283 | 10642 09 56 328 | 1113 98 91 206 | 8322 59 63 910 |
| **ಪ್ರಸಕ್ತ ಹೊಣೆಗಾರಿಕೆಗಳು** | | | | | | | | |
| (ಎ) ಆರ್ಥಿಕ ಹೊಣೆಗಾರಿಕೆಗಳು | | | | | | | | |
| (i) ಸಾಲಗಳು | 19 | 51 to 54 | 675 00 00 000 | | 800 00 00 000 | | 150 00 20 000 | |
| (ii) ವ್ಯವಹಾರದ ಪಾವತಿಗಳು | | | | | | | | |
| (ಎ) ಎಂಎಸ್ಎಂಇ ಯ ಒಟ್ಟು ಬಾಕಿ | | | - | | - | | | |
| (ಬಿ) ಎಂಎಸ್ಎಂಇ ಹೊರತುಪಡಿಸಿ ಜಮೆಯ ಒಟ್ಟು ಬಾಕಿ | 20 | 41 | 102 25 17 458 | | 384 42 81 877 | | 684 26 61 486 | |
| (iii) ಇತರ ಆರ್ಥಿಕ ಹೊಣೆಗಾರಿಕೆಗಳು | 21 | 46.9 | 2005 84 65 789 | | 2241 38 31 491 | | 2547 69 97 052 | |
| (ಬಿ) ಇತರ ಪ್ರಸಕ್ತ ಹೊಣೆಗಾರಿಕೆಗಳು | 22 | 42 to 46 | 650 32 22 678 | | 537 90 69 812 | | 366 10 98 374 | |
| (ಸಿ) ಹವಣಿಕೆಗಳು | 23 | 42,44,46 | 1086 77 06 131 | | 948 33 93 996 | | 1017 50 89 315 | |
| (ಡಿ) ಪ್ರಸ್ತುತ ಆದಾಯ ತೆರಿಗೆ ಹೊಣೆಗಾರಿಕೆಗಳು (ನಿವ್ವಳ) | 24 | 46.8 | | 4520 19 12 056 | | 4912 05 77 176 | | 4765 58 66 227 |
| **ಒಟ್ಟು ಸ್ವಾಮ್ಯ ಮತ್ತು ಹೊಣೆಗಾರಿಕೆಗಳು** | | | | 21595 55 38 554 | | 20409 34 63 168 | | 17319 44 40 570 |

**ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು** 1-37
ಸಮ ದಿನಾಂಕದ ನಮ್ಮ ವರದಿಯ ಪ್ರಕಾರ ಜತೆಗೂಡಿದ ಟಿಪ್ಪಣಿಗಳು
ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

**ಬಿ. ಕೆ. ರಾಮದ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ, ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್.ಆರ್.ಎನ್ : 002878S/S200021

**ಸಹಿ/–**
**ವಾಸುಕಿ ಹೆಚ್.ಎಸ್**
ಪಾಲುದಾರರು
ಸದಸ್ಯತ್ವ ಸಂಖ್ಯೆ. 212013

**ಸ್ಥಳ: ಬೆಂಗಳೂರು**
**ದಿನಾಂಕ : 24.12.2021**

**ಸಹಿ/–**
**(ಡಾ. ಎನ್. ಮಂಜುಳ)**
ವ್ಯವಸ್ಥಾಪಕ ನಿರ್ದೇಶಕರು
ಡಿ.ಐ.ಎನ್–07508345

**ಸಹಿ/–**
**(ಸಿದ್ಲಿಂಗಪ್ಪ ತೇಲಿ)**
ನಿರ್ದೇಶಕರು (ಹಣಕಾಸು)
ಡಿ.ಐ.ಎನ್–08764080

**ಸಹಿ/–**
**(ಎನ್.ವಿ.ಭುವನೇಶ್ವರಯ್ಯ)**
ಆರ್ಥಿಕ ಸಲಹೆಗಾರರು
(ಲೆ&ಸಂ)

**ಸಹಿ/–**
**(ರಮ್ಯ ಕಣ್ಣನ್)**
ಕಂಪನಿ ಕಾರ್ಯದರ್ಶಿ

## 31.03.2021ರ ವರ್ಷಾಂತ್ಯದ ಲಾಭ ಮತ್ತು ನಷ್ಟ ಖಾತೆ (ಮೊಬಲಗು ರೂ. ಗಳಲ್ಲಿ)

| ವಿವರಗಳು | ಟಿಪ್ಪಣಿ ಸಂಖ್ಯೆ | ಲೆಕ್ಕ ಸಂಕೇತ | ಪ್ರಸ್ತುತ ವರ್ಷ 2020–21 | ಹಿಂದಿನ ವರ್ಷ 2019–20 |
|---|---|---|---|---|
| I ಕಾರ್ಯಾಚರಣೆಗಳಿಂದ ಆದಾಯ (ವಿದ್ಯುತ್ ಪ್ರಸರಣ) | 25 | 61&62 | 3898 51 54 966 | 3571 74 31 243 |
| II ಇತರೆ ಆದಾಯ | 26 | 62 | 169 56 62 365 | 175 29 93 463 |
| **III ಒಟ್ಟು ಆದಾಯ (I + II)** | | | **4068 08 17 331** | **3747 04 24 706** |
| **ವೆಚ್ಚ** | | | | |
| ಎ) ಸಿಬ್ಬಂದಿ ವೆಚ್ಚಗಳು | 27 | 75 | 1164 31 85 714 | 1154 05 36 412 |
| ಬಿ) ರಿಪೇರಿ ಮತ್ತು ನಿರ್ವಹಣೆ | 28 | 74 | 327 84 24 466 | 304 88 36 472 |
| ಸಿ) ಆಡಳಿತ ಮತ್ತು ಇತರ ವೆಚ್ಚಗಳು | 29 | 76 | 124 02 59 055 | 131 60 32 697 |
| ಡಿ) ಹಣಕಾಸು ವೆಚ್ಚ | 30 | 78 | 498 46 14 463 | 458 05 11 679 |
| ಇ) ಸವಕಳಿ ಮತ್ತು ಭೋಗ್ಯ | 31 | 77 | 1054 37 39 870 | 965 76 75 926 |
| ಎಫ್) ಇತರ ವೆಚ್ಚಗಳು | 32 | 77, 79&80 | 34 73 10 389 | 4 39 49 519 |
| **ಒಟ್ಟು ವೆಚ್ಚಗಳು (IV)** | | | **3203 75 33 957** | **3018 75 42 705** |
| ಕೂಡಿಸಿ/(ಕಳೆಯಿರಿ) : ಪೂರ್ವವಧಿಯ ಜಮಾಗಳು (ಶುಲ್ಕಗಳು) (V) | | | | |
| **ಅಸಾಧಾರಣ ಅಂಶಗಳು ಮತ್ತು ತೆರಿಗೆ ಮುಂಚಿನ ಲಾಭ/ನಷ್ಟ (III-IV+V)** | | | **864 32 83 374** | **728 28 82 001** |
| ಕೂಡಿಸಿ/ (ಕಳೆಯಿರಿ): ಅಸಾಧಾರಣ ಅಂಶಗಳು (ಹಿಂಪಡೆಯಲಾದ ಆದಾಯ) | 34 | 62 | | |
| **ಲಾಭ/ನಷ್ಟ ತೆರಿಗೆಯ ಮುಂಚೆ** | | | **864 32 83 374** | **728 28 82 001** |
| ಕಳೆಯಿರಿ: ತೆರಿಗೆ ವೆಚ್ಚ | | | | |
| ಆದಾಯ ತೆರಿಗೆ | 35 | 81.1 | 154 00 00 000 | 131 60 15 054 |
| ಮುಂದೂಡಲ್ಪಟ್ಟ ತೆರಿಗೆ | 36 | 81.201 | 93 71 47 758 | –97 49 00 055 |
| **ಪ್ರಸಕ್ತ ಅವಧಿಯ ಲಾಭ / (ನಷ್ಟ)** | | | **616 61 35 616** | **694 17 67 002** |
| **ಇತರ ಸಮಗ್ರ ಆದಾಯ** | | | | |
| ಎ.1. ಲಾಭ ಅಥವಾ ನಷ್ಟದ ನಂತರ ಮರು ವರ್ಗೀಕರಿಸದ ವಸ್ತುಗಳು | | | – | – |
| ಎ.2. ಮೇಲಿನ ವಸ್ತುಗಳಿಗೆ ಸಂಬಂಧಿಸಿದ ಆದಾಯ ತೆರಿಗೆ | | | – | – |
| ಬಿ.1. ಲಾಭ ಅಥವಾ ನಷ್ಟಕ್ಕೆ ತರುವಾಯ ಮರು ವರ್ಗೀಕರಿಸುವ ವಸ್ತುಗಳು | | | – | – |
| ಬಿ.2. ಮೇಲಿನ ವಸ್ತುಗಳಿಗೆ ಸಂಬಂಧಿಸಿದ ಆದಾಯ ತೆರಿಗೆ | | | – | – |
| **ವರ್ಷದ ಒಟ್ಟು ಇತರೆ ಸಮಗ್ರ ಆದಾಯ / (ನಷ್ಟ) (ತೆರಿಗೆಯ ನಿವ್ವಳ)** | | | – | – |
| **ವರ್ಗದ ಒಟ್ಟು ಸಮಗ್ರ ಆದಾಯ / (ನಷ್ಟ)** | | | **616 61 35 616** | **694 17 67 002** |

| | | |
|---|---|---|
| **ಸ್ವಾಮ್ಯಷೇರಿಗೆ ಗಳಿಕೆಗಳು (ರೂ.ಗಳಲ್ಲಿ)** | | |
| ಸ್ವಾಮ್ಯಷೇರುಗಳ ಮುಖ ಬೆಲೆ: ಐಎನ್ಆರ್ 1,000/– | | |
| ಮೂಲ | 282.55 | 318.09 |
| ಗುಣ ತಗ್ಗಿದ | 282.55 | 318.09 |
| **ಪ್ರತಿ ಸ್ವಾಮ್ಯ ಷೇರಿನ ಗಳಿಕೆಯನ್ನು ಕಂಪ್ಯೂಟಿಂಗ್** | | |
| ಮೂಲ | 2,18,23,225 | 2,18,23,225 |
| ಗುಣ ತಗ್ಗಿದ | 282.55 | 318.09 |

**ಗಮನಾರ್ಹ ಲೆಕ್ಕ ಪತ್ರ ನೀತಿಗಳು ಮತ್ತು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು 1–37**

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
ಬಿ. ಕೆ. ರಾಮದ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ, ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್.ಆರ್.ಎನ್ : 002878S/S200021

ಸಹಿ/–
**ವಾಸುಕಿ ಹೆಚ್.ಎಸ್**
ಪಾಲುದಾರರು
ಸದಸ್ಯತ್ವ ಸಂಖ್ಯೆ : 212013

**ಸ್ಥಳ :** ಬೆಂಗಳೂರು
**ದಿನಾಂಕ :** 24.12.2021

**ಮಂಡಳಿಯ ನಿರ್ದೇಶಕರ ಪರವಾಗಿ**

ಸಹಿ/–
(ಡಾ. ಎನ್. ಮಂಜುಳ)
ವ್ಯವಸ್ಥಾಪಕ ನಿರ್ದೇಶಕರು
ಡಿ.ಐ.ಎನ್–07508345

ಸಹಿ/–
(ಸಿದ್ಲಿಂಗಪ್ಪ ತೇಲಿ)
ನಿರ್ದೇಶಕರು (ಹಣಕಾಸು)
ಡಿ.ಐ.ಎನ್–08764080

ಸಹಿ/–
(ಎನ್.ವಿ. ಭುವನೇಶ್ವರಯ್ಯ)
ಆರ್ಥಿಕ ಸಲಹೆಗಾರರು(ಲೆ&ಸಂ)

ಸಹಿ/–
(ರಮ್ಯ ಕಣ್ಣನ್)
ಕಂಪನಿ ಕಾರ್ಯದರ್ಶಿ

## 31.03.2021 ರ ವರ್ಷಾಂತ್ಯದ ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸದ ತಖ್ತೆ (ಮೊಬಲಗು ರೂ. ಗಳಲ್ಲಿ)

| ವಿವರಗಳು | ಎ. ಸ್ವಾಮ್ಯ ಷೇರು ಬಂಡವಾಳ | ಬಿ. ಇತರೆ ಸ್ವಾಮ್ಯ | | |
|---|---|---|---|---|
| | | ಮೀಸಲು ಮತ್ತು ಹೆಚ್ಚುವರಿ | | ಒಟ್ಟು |
| | | ಬಂಡವಾಳ ಮೀಸಲು | ಉಳಿಸಿದ ಗಳಿಕೆ | |
| ವರದಿ ಅವಧಿಯ ಆರಂಭಿಕ ಶಿಲ್ಕು (01/04/2019) | 2182 32 25 000 | | 2149 87 63 259 | **2149 87 63 259** |
| ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ಇ.ಎನ್ 67 ಪಿ.ಎಸ್.ಆರ್ 2017 ದಿನಾಂಕ 31.07.2017. | | | (97 70 78 513) | **–97 70 78 513** |
| ಸೇರಿಸಿ/(ಕಳೆಯಿರಿ):2019–20 ರ ನಿವ್ವಳ ಹಿಂದಿನ ಅವಧಿಯ ಆದಾಯ/(ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೋಡಿ) | | | –3 22 99 313 | **–3 22 99 313** |
| ಸೇರಿಸಿ/(ಕಳೆಯಿರಿ):2019–20ರ ನಿವ್ವಳ ಹಿಂದಿನ ಅವಧಿಯ ಆದಾಯ/(ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೋಡಿ) | | | | |
| **ಹೊಂದಾಣಿಕೆಯಿಂದ ಆರಂಭಿಕ ಬಾಕಿಯ ವರದಿ ಮಾಡುವ ಅವಧಿಯ ಆರಂಭದಲ್ಲಿ (01/04/2019)** | 2182 32 25 000 | | 2048 93 85 433 | **2048 93 85 433** |
| ಸೇರಿಸಿ: ಉಳಿಸಿಕೊಂಡಿರುವ ಗಳಿಕೆಗಳಿಗೆ ವರ್ಗಾಯಿಸಿರುವ ಮೊತ್ತ (ಲಾಭ / (ನಷ್ಟ) 2019–20ನೇ ಸಾಲಿಗೆ) | – | – | **694 17 67 002** | **694 17 67 002** |
| ಕಳೆಯಿರಿ : ಈಕ್ವಿಟಿಗೆ ಹೊಂದಿಸಲಾದ ನೆಟ್‌ವರ್ತಗೆ ಹೊಂದಾಣಿಕೆಯನ್ನು ಪ್ರಸ್ತಾಪಿಸಿರುವುದು. | | – | | |
| ಸೇರಿಸಿ /(ಕಡಿಮೆ): 2019–20ರ ನಿವ್ವಳ ಪೂರ್ವ ಅವಧಿಯ ಆದಾಯ/(ವೆಚ್ಚಗಳು) (ಟಿಪ್ಪಣಿ ಸಂಖ್ಯೆ 33 ನೊಡಿ) | | | –70 24 47 772 | **–70 24 47 772** |
| **ವರದಿ ಅವಧಿಯ ಆರಂಭದಲ್ಲಿ (01/04/2020) ಮರು–ಹೊಂದಾಣಿಕೆಯಾದ ಆರಂಭಿಕ ಬಾಕಿ** | **2182 32 25 000** | | **2672 87 04 664** | **2672 87 04 664** |
| ಸೇರಿಸಿ:ಉಳಿಸಿಕೊಂಡಿರುವ ಗಳಿಕೆಗಳಿಗೆ ವರ್ಗಾಯಿಸಿರುವ ಮೊತ್ತ (ಲಾಭ / (ನಷ್ಟ) 2020–21 ನೇ ಸಾಲಿನ) | – | – | 616 61 35 616 | **616 61 35 616** |
| ಕಳೆಯಿರಿ : ಈಕ್ವಿಟಿಗೆ ಹೊಂದಿಸಲಾದ ನೆಟ್‌ವರ್ತಗೆ ಹೊಂದಾಣಿಕೆಯನ್ನು ಪ್ರಸ್ತಾಪಿಸಿರುವುದು. | | | | |
| **ವರದಿ ಅವಧಿಯ ಅಂತ್ಯಕ್ಕೆ ಶಿಲ್ಕು (31/03/2021)** | **2182 32 25 000** | | **3289 48 40 280** | **3289 48 40 280** |

**ಗಮನಿಸಿ:** ಕಂಪನಿಯು ಹಿಂದಿನ ವರ್ಷದ ನಿವ್ವಳ ಪೂರ್ವ ಅವಧಿಯ ಅಂಕಿಅಂಶಗಳನ್ನು ಮೀಸಲು ಮತ್ತು ಹೆಚ್ಚುವರಿ (ಉಳಿಸಿಕೊಂಡಿರುವ ಗಳಿಕೆ) ಗೆ ಹೊಂದಿಸಿದೆ (ಟಿಪ್ಪಣಿ ಸಂಖ್ಯೆ 33 ನೋಡಿ)

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ ಜತೆಗೂಡಿದ
ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಬಿ. ಕೆ. ರಾಮದ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ, ಪರವಾಗಿ
ಸನ್ನದಿತ ಲೆಕ್ಕಿಗರು
ಎಫ್.ಆರ್.ಎನ್ : 002878S/S200021

**ಮಂಡಳಿಯ ನಿರ್ದೇಶಕರ ಪರವಾಗಿ**

ಸಹಿ/–
**ವಾಸುಕಿ ಹೆಚ್.ಎಸ್**
ಪಾಲುದಾರರು
ಸದಸ್ಯತ್ವ ಸಂಖ್ಯೆ : 212013

**ಸಹಿ/–**
**(ಡಾ. ಎನ್. ಮಂಜುಳ)**
ವ್ಯವಸ್ಥಾಪಕ ನಿರ್ದೇಶಕರು
ಡಿ.ಐ.ಎನ್–07508345

**ಸಹಿ/–**
**(ಸಿದ್ಲಿಂಗಪ್ಪ ತೇಲಿ)**
ನಿರ್ದೇಶಕರು (ಹಣಕಾಸು)
ಡಿ.ಐ.ಎನ್–08764080

**ಸಹಿ/–**
**(ಎನ್.ವಿ. ಭುವನೇಶ್ವರಯ್ಯ)**
ಆರ್ಥಿಕ ಸಲಹೆಗಾರರು(ಲೆ&ಸಂ)

**ಸಹಿ/–**
**(ರಮ್ಯ ಕಣ್ಣನ್)**
ಕಂಪನಿ ಕಾರ್ಯದರ್ಶಿ

**ಸ್ಥಳ :** ಬೆಂಗಳೂರು
**ದಿನಾಂಕ :** 24.12.2021

## 31 ಮಾರ್ಚ್–2021 ರ ಅಂತ್ಯಕ್ಕೆ ನಗದು ಹರಿವಿನ ಪಟ್ಟಿ

(ಮೊಬಲಗು ರೂ. ಗಳಲ್ಲಿ)

| | | ವಿವರಗಳು | 31 ಮಾರ್ಚ್–2021 ರ ವರ್ಷಾಂತ್ಯಕ್ಕೆ ಇದ್ದಂತೆ | 31 ಮಾರ್ಚ್–2020 ರ ವರ್ಷಾಂತ್ಯಕ್ಕೆ ಇದ್ದಂತೆ |
|---|---|---|---|---|
| I | | ಕಾರ್ಯಾಚರಣೆಯಿಂದ ಬಂದ ನಗದು ಹರಿವು | | |
| | | ತೆರಿಗೆ ಪೂರ್ವ ಲಾಭ/ನಷ್ಟ | 864 32 83 374 | 728 28 82 001 |
| | | ಮುಂದೂಡಲ್ಪಟ್ಟ ನಿಯಂತ್ರಿತ ಆದಾಯಕ್ಕಾಗಿ ಹೊಂದಾಣಿಕೆ | | |
| | | ಹೊಂದಾಣಿಕೆಗಳು | | |
| | i | ಸವಕಳಿ ಮತ್ತು ಋಣಮುಕ್ತತೆ ವೆಚ್ಚ | 1054 37 39 870 | 965 76 75 926 |
| | ii | ಹಿಂದಿನ ವರ್ಷದ ಹೆಚ್ಚುವರಿ ಹವಣಿಗಳನ್ನು ಹಿಂಪಡೆಯುವುದು | –3 34 15 288 | –12 32 69 999 |
| | iii | ಗ್ರಾಹಕರ ಕೊಡುಗೆಯಿಂದ ಬಂದ ಆಸ್ತಿಗಳ ಮೇಲಿನ ಸವಕಳಿ | –931472528 | –100 08 01 481 |
| | iv | ಉಗ್ರಾಣ ಕೊರತೆಗೆ ಹವಣಿಕೆ | –2580174 | –10 82 306 |
| | v | ದಾಸ್ತಾನುಗಳ ಮಾರಾಟದಿಂದ ಬಂದ ಲಾಭ | –306076 | –1 59 23 353 |
| | vi | ನಿರುಪಯುಕ್ತ ಸಾಮಾಗ್ರಿಗಳ ಮಾರಾಟದಿಂದ ಬಂದ ಲಾಭ | | |
| | vii | ಬಿಡುಗಡೆ ಹೊಂದಿದ ಆಸ್ತಿಗಳ ಮಾರಾಟದಿಂದ ಬಂದ ಆದಾಯ | –6 63 09 734 | –2 22 09 450 |
| | viii | ಇತರೆ ಸ್ವೀಕೃತಿಗಳು ತೊಡೆದು ಹಾಕಿರುವುದು & ವಿಶೇಷ ಅಂಶಗಳು | 2 61 32 942 | 1 86 87 778 |
| | ix | ಬಡ್ಡಿಯಿಂದ ಬಂದ ಆದಾಯ | –11 54 31 871 | –1 60 98 015 |
| | x | ಹಿಂದಿನ ಅವಧಿಯ ಹೊಂದಾಣಿಕೆ | | –702 44 77 772 |
| | xi | ಆರ್ಥಿಕ ವೆಚ್ಚಗಳು | 498 46 14 463 | 458 05 11 679 |
| | | **ಕಾರ್ಯನಿರತ ಬಂಡವಾಳದ ಬದಲಾವಣೆಗೆ ಮುಂಚಿನ ಕ್ರಿಯಾತ್ಮಕ ಲಾಭ/ನಷ್ಟ** | **2304 82 54 978** | **1965 79 25 008** |
| | | ಕಾರ್ಯಾಚರಣೆಯಿಂದ ಬದಲಾವಣೆ ಹೊಂದಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳು | | |
| | i | ಸ್ವೀಕೃತಿಗಳಲ್ಲಿನ ಹೆಚ್ಚಳ/ಕಡಿಮೆ | 365 03 64 010 | –384 78 79 039 |
| | ii | ದಾಸ್ತಾನುಗಳಲ್ಲಿನ ಹೆಚ್ಚಳ/ಕಡಿಮೆ | 3 5 59 873 | –11 93 96 838 |
| | iii | ಪ್ರಸಕ್ತ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ | –16 00 68 471 | 612 43 055 |
| | iv | ಪ್ರಸಕ್ತ ಹೊಣೆಗಾರಿಕೆಗಳ/ಹವಣಿಕೆಗಳಲ್ಲಿನ ಹೆಚ್ಚಳ/ಕಡಿಮೆ | –219 76 06 767 | 482 30 19 415 |
| | v | ಪ್ರಸಕ್ತವಲ್ಲದ ಆಸ್ತಿಗಳಲ್ಲಿನ ಹೆಚ್ಚಳ/ಕಡಿಮೆ | 2 63 17 894 | –1171 75 90 457 |
| | vi | ಪ್ರಸಕ್ತವಲ್ಲದ ಬಾಧ್ಯತೆಗಳ/ ಹೊಣೆಗಾರಿಕೆಗಳಲ್ಲಿನ ಹೆಚ್ಚಳ/ಕಡಿಮೆ | 100 64 54 283 | 166 15 51 086 |
| | vii | ಪ್ರಸ್ತುತವಲ್ಲದ ಹಣಕಾಸು ಹೊಣೆಗಾರಿಕೆಗಳಲ್ಲಿ ಹೆಚ್ಚಳ/ಕಡಿಮೆ | –116 50 45 498 | 1497 72 69 560 |
| | vii | ಸಾಲಗಳಲ್ಲಿನ ಹೆಚ್ಚಳ/ಕಡಿಮೆ | –4 62 53 247 | –15 17 53 074 |
| | | **ಕಾರ್ಯಾಚರಣೆಯಿಂದ ಉದ್ಭವಿಸಿದ ನಗದು** | **2416 59 77 055** | **1569 83 49 887** |
| | | ಕೂಡಿಸಿ/ಕಳೆಯಿರಿ: ಪಾವತಿಸಿದ ಆದಾಯ ತೆರಿಗೆ (ಮರುಪಾವತಿಯ ನಿವ್ವಳ) | –197 76 43 065 | 140 49 94 690 |
| | | **ಕಾರ್ಯಾಚರಣೆಯಿಂದ ಬಂದ ನಿವ್ವಳ ಹಣದ ಒಳ ಹರಿವು (ಎ)** | **2218 83 33 990** | **1429 33 55 197** |
| II | | ಹೂಡಿಕೆ ಚಟುವಟಿಕೆಗಳಿಂದ ಹಣದ ಹರಿವು | | |
| | i | ಪಿಪಿಇ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿನ ಬದಲಾವಣೆ | –2429 24 97 417 | –2323 60 35 310 |
| | ii | ಬ್ಯಾಂಕ್ ಠೇವಣಿಗಳಿಂದ (3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳ ನಿವ್ವಳ ಹೆಚ್ಚಳ/ಕಡಿಮೆ) | –48 11 17 288 | –24 00 12 867 |
| | iii | ಬಡ್ಡಿಯಿಂದ ಬಂದ ಆದಾಯ | 11 54 31 871 | 1 60 98 015 |
| | | **ಹೊಡಿಕೆಯ ಚಟುವಟಿಕೆಗಳಿಂದ ನಿವ್ವಳ ಹಣದ ಒಳ ಹರಿವು (ಬಿ)** | **–2465 81 82 834** | **–2345 99 50 161** |

| | | | | |
|---|---|---|---|---|
| **III** | | <u>**ಆರ್ಥಿಕ ಚಟುವಟಿಗಳಿಂದ ಹಣದ ಹರಿವು**</u> | | |
| | i | ಬಂಡವಾಳ ಕಾಮಗಾರಿಗಳಿಗಾಗಿ ಪಡೆದ ದೇಣಿಗೆ ಮತ್ತು ಅನುದಾನ | 124 75 54 003 | 101 20 61 330 |
| | ii | ಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು | 8525 90 75 93 | 752 57 93 421 |
| | iii | ಅಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು | –125 59 40 723 | 649 39 98 556 |
| | iv | ಆರ್ಥಿಕ ಮತ್ತು ಇತರೆ ಖರ್ಚುಗಳು | –595 71 00 766 | –564 90 96 609 |
| | | **ಆರ್ಥಿಕ ಚಟುವಟಿಕೆಗಳಿಂದ ನಿವ್ವಳ ನಗದು ಒಳ ಹರಿವು (ಸಿ)** | **256 04 20 107** | **938 27 56 698** |
| | | **ನಿವ್ವಳ ಬದಲಾವಣೆ ನಗದು ಮತ್ತು ನಗದಿಗೆ ಸರಿಸಮಾನವಾದುದು (ಎ+ಬಿ+ಸಿ)** | **9 05 71 263** | **21 61 61 736** |
| | | ಕೂಡಿರಿ: ಆರಂಭಿಕ ನಗದು ಮತ್ತು ನಗದಿಗೆ ಸರಿಸಮಾನವಾದುದು 01.04.2019 | 66 65 19 750 | 45 03 58 014 |
| | | **31.03.2020 ರಂದು ಇದ್ದಂತೆ ಅಂತಿಮ ನಗದು ಮತ್ತು ನಗದಿಗೆ ಸರಿಸಮಾನವಾದುದು** | **75 70 91 013** | **66 65 19 750** |

ಟಿಪ್ಪಣಿ– 1)ಹಣ ಚಲಾವಣೆ ವಿವರಣೆ ಅನುಬಂಧವನ್ನು "ಪರೋಕ್ಷ ವಿಧಾನದಲ್ಲಿ" ಲೆಕ್ಕ ಪದ್ದತಿ–7 "ಹಣ ಚಲಾವಣೆ ವಿವರಣೆಗಳ" ಪ್ರಕಾರ ಪರೋಕ್ಷ ವಿಧಾನದಲ್ಲಿ ಸಿದ್ದಪಡಿಸಲಾಗಿದೆ.

ಟಿಪ್ಪಣಿ–2) ಕಂಪನಿಯು ಹೊಂದಿರುವ ನಗದು ಮತ್ತು ನಗದು ಸಮನಾದ ಬಾಕಿಗಳು ರೂ. 1,44,03,921/– (ಹಿಂದಿನ ವರ್ಷ: ರೂ. 3,14,371/–) ಪಿಂಚಣಿ ಭದ್ರತಾ ನಿಧಿಗೆ ಮೀಸಲಿಡಲಾಗಿದೆ ಮತ್ತು ರೂ. 21,51,98,945/– (ಹಿಂದಿನ ವರ್ಷ: ರೂ. 20,783/–) ಫ್ಯಾಮಿಲಿ ಬೆನಿಫಿಟ್ ಫಂಡ್‌ಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನತೆಗಳು ಐಎನ್‌ಆರ್ ರೂ. 6,92,23,701/– (ಹಿಂದಿನ ವರ್ಷ : ರೂ. 4,52,23,316/–) ಅಲ್ಪಾವಧಿಯ ಮುಕ್ತ ಪ್ರವೇಶ ಗ್ರಾಹಕರಿಂದ ಯುಐ ಶುಲ್ಕಗಳಿಗೆ ಸಂಗ್ರಹಿಸಲಾಗಿದೆ, ಇದು ಎಸ್ಕಾಂಗೆ ಪಾವತಿಸಬೇಕಾಗುತ್ತದೆ/ ಹೊಂದಿಸಬಹುದಾಗಿದೆ. ನಗದು ಮತ್ತು ನಗದು ಸಮಾನವಾದ ರೂ. 4,39,72,862/– (ಹಿಂದಿನ ವರ್ಷ ರೂ. 2,38,08,666/–) ರಾಜ್ಯ ಆಯೋಗವು ನಿರ್ದಿಷ್ಟ ಪಡಿಸಿದಂತೆ ಉದ್ದೇಶಕ್ಕಾಗಿ ವಿದ್ಯುತ್ ವ್ಯವಸ್ಥೆ ಅಭಿವೃದ್ಧಿ ನಿಧಿಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನವಾದ ರೂ. 8,46,127/– (ಹಿಂದಿನ ವರ್ಷ : ರೂ. 5,17,254/–) ಮತ್ತು ರೂ. 26,29,72,040/– (ಹಿಂದಿನ ವರ್ಷ: ರೂ. 2,731/–) ಕ್ರಮವಾಗಿ ಜಿಇಸಿ ಮತ್ತು ಪಿಎಸ್‌ಡಿಎಫ್ ಅನುದಾನಕ್ಕೆ ಮೀಸಲಿಡಲಾಗಿದೆ.

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ ಜತೆಗೂಡಿದ
ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

**ಬಿ. ಕೆ. ರಾಮದ್ಯಾನಿ ಮತ್ತು ಕಂಪನಿ ಎಲ್.ಎಲ್.ಪಿ, ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್.ಆರ್.ಎನ್ : 002878S/S200021

ಸಹಿ/–
**ವಾಸುಕಿ ಹೆಚ್.ಎಸ್**
ಪಾಲುದಾರರು
**ಸದಸ್ಯತ್ವ ಸಂಖ್ಯೆ.** 212013

**ಸ್ಥಳ:** ಬೆಂಗಳೂರು
**ದಿನಾಂಕ :** 24.12.2021

**ಮಂಡಳಿಯ ನಿರ್ದೇಶಕರ ಪರವಾಗಿ**

| | |
|---|---|
| ಸಹಿ/– | ಸಹಿ/– |
| **(ಡಾ. ಎನ್. ಮಂಜುಳ)** | **(ಸಿದ್ಲಿಂಗಪ್ಪ ತೇಲಿ)** |
| ವ್ಯವಸ್ಥಾಪಕ ನಿರ್ದೇಶಕರು | ನಿರ್ದೇಶಕರು (ಹಣಕಾಸು) |
| ಡಿ.ಐ.ಎನ್–07508345 | ಡಿ.ಐ.ಎನ್–08764080 |
| ಸಹಿ/– | ಸಹಿ/– |
| **(ಎನ್.ವಿ. ಭುವನೇಶ್ವರಯ್ಯ)** | **(ರಮ್ಯ ಕಣ್ಣನ್)** |
| ಆರ್ಥಿಕ ಸಲಹೆಗಾರರು(ಲೆ&ಸಂ) | ಕಂಪನಿ ಕಾರ್ಯದರ್ಶಿ |

## ಟಿಪ್ಪಣಿ:1 ಕಂಪನಿಯ ಅವಲೋಕನ ಮತ್ತು ಗಮನಾರ್ಹ ಲೆಕ್ಕ ಪದ್ಧತಿ ನೀತಿಗಳು

**1.1** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕವಿಪ್ರನಿನಿ/ಕಂಪನಿ ಎಂಬುದು ಸಾರ್ವಜನಿಕ ನಿಯಮಿತ ಕಂಪನಿಯಾಗಿದ್ದು, ಭಾರತದಲ್ಲಿ ನೆಲೆಸಿದೆ ಮತ್ತು ಸಂಘಟಿತವಾಗಿದೆ. ಇದು ಕರ್ನಾಟಕದ ಬೆಂಗಳೂರಿನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ. ಕವಿಪ್ರನಿನಿಯು ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಾಗೂ ಮುಕ್ತ ಪ್ರವೇಶ ಗ್ರಾಹಕರಿಗೆ ಮತ್ತು ಇತರರಿಗೆ ವಿದ್ಯುತ್ ಪ್ರಸರಣ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿದೆ.

### 1.2 ಆರ್ಥಿಕ ಪತ್ರ ಸಿದ್ಧಪಡಿಸುವಿಕೆಗೆ ಆಧಾರಗಳು

ಎ. ಆರ್ಥಿಕ ಪಟ್ಟಿಗಳನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS) ಅನುಗುಣವಾಗಿ, ಐತಿಹಾಸಿಕ ವೆಚ್ಚ Ind-AS ನಿಂದ ಕಡ್ಡಾಯಗೊಳಿಸಿದಂತಹ ನ್ಯಾಯಾಯುತ ಮೌಲ್ಯ ಅನ್ವಯಿಸುವ ಕಡೆ) ದಡಿಯಲ್ಲಿ ಗೋಯಿಂಗ್ ಕನಸರ್ನ್ ತತ್ವವನ್ನು (ಟಿಪ್ಪಣಿ 1.12 (ಎಫ್)ಗೆ (ಒಳಪಟ್ಟಿರುತ್ತದೆ) ಸಂಚಯದ ಆಧಾರದ ಮೇಲೆ ಮತ್ತು ಕಂಪನಿಗಳ ಕಾಯ್ದೆ, 2013ರ(ನಿಬಂಧನೆಗಳು) ಮತ್ತು ವಿದ್ಯುಚ್ಛಕ್ತಿ ಕಾಯ್ದೆ, 2003ರ ಪ್ರಾವಧಾನಗಳ ಸ್ಥೂಲ ಒಪ್ಪಿಗೆಯ ಮೇರೆಗೆ ಸಿದ್ಧಪಡಿಸಲಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ನಿಯಮ 3 ರೊಂದಿಗೆ ಓದಲಾದಂತೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ಮುಂದಿನ ತಿದ್ದುಪಡಿ ನಿಯಮಗಳನ್ನು ಒಳಗೊಂಡಂತೆ ಅಧಿನಿಯಮದ ಪ್ರಕರಣ 133 ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಬಿ. ಹೊಸದಾಗಿ ಹೊರಡಿಸಿದ ಲೆಕ್ಕಪತ್ರ ಮಾನದಂಡವು ಎಲ್ಲಿ ಪ್ರಾರಂಭಿಕವಾಗಿ ಅಳವಡಿಸಿಕೊಳ್ಳಲಾಗಿದೆಯೋ ಅಥವಾ ಇಲ್ಲಿಯವರೆಗೆ ಬಳಕೆಯಲ್ಲಿದ್ದ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಅವಶ್ಯವಿರುವ, ಚಾಲ್ತಿಯಲ್ಲಿರುವ ಲೆಕ್ಕಪತ್ರ ಮಾನದಂಡಗಳನ್ನು ಪರಿಸ್ಕರಿಸಲಾಗಿದೆಯೋ ಅಂತಹ ಸ್ಥಳಗಳನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಭಾರತೀಯ ಲೆಕ್ಕಪತ್ರ ನೀತಿಗಳನ್ನು ಸ್ಥಿರವಾಗಿ ಅನ್ವಯಿಸಲಾಗಿದೆ.

ಸಿ. ನಿಗಮದ ಕಾರ್ಯಾಚರಣೆ ಅವಧಿಯನ್ನು 12 ತಿಂಗಳುಗಳ ಅವಧಿಯದ್ದೆಂದು ಗೊತ್ತುಪಡಿಸಿಕೊಂಡು, ಆಸ್ತಿಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಆಸ್ತಿಗಳೆಂದೂ, ಹೊಣೆಗಾರಿಕೆಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

### 1.3 ಅಂದಾಜು ಪಟ್ಟಿಗಳ ಉಪಯೋಗ

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಆರ್ಥಿಕ ಪಟ್ಟಿಗಳ ಸಿದ್ಧಪಡಿಸುವಿಕೆಗಾಗಿ ಆಡಳಿತ ಮಂಡಳಿಯು ಅಂದಾಜುಪಟ್ಟಿಗಳನ್ನು, ತೀರ್ಪುಗಳನ್ನು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ ಅಂದಾಜುಪಟ್ಟಿಗಳು, ತೀರ್ಪುಗಳು ಮತ್ತು ಊಹೆಗಳು ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಯನ್ನು ಸ್ವತ್ತು ಮತ್ತು ಹೊಣೆಗಾರಿಕೆಗಳ ವರದಿಯಾದ ಪ್ರಮಾಣವನ್ನು, ಆರ್ಥಿಕ ಪಟ್ಟಿಗಳ ದಿನಾಂಕದಂದು ಪ್ರಕಟಗೊಂಡ ಸ್ಥಿರ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳನ್ನು ಆ ಅವಧಿಯಲ್ಲಿ ವರದಿಯಾದ ತೆರಿಗೆಗಳು ಮತ್ತು ವೆಚ್ಚಗಳ ಮೊತ್ತವನ್ನು ಭಾದಿಸುತ್ತವೆ. ಲೆಕ್ಕಪತ್ರ ನೀತಿಗಳ ಅನ್ವಯಸುವಿಕೆಗೆ ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳು ಒಳಗೊಂಡಂತೆ ಕ್ಲಿಷ್ಟ ಲೆಕ್ಕಪತ್ರ ಅಂದಾಜು ಮತ್ತು ಆರ್ಥಿಕ ಪಟ್ಟಿಗಳಲ್ಲಿನ ಊಹೆಗಳ ಬಳಕೆ ಅವಶ್ಯವಾಗಿರುತ್ತದೆ. ಲೆಕ್ಕಪತ್ರ ಅಂದಾಜುಗಳ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಬಹುದು. ನೈಜ ಪರಿಣಾಮಗಳು ಆ ಅಂದಾಜುಗಳಿಗಿಂತ ವಿಭಿನ್ನವಾಗಿರುತ್ತವೆ. ಆಡಳಿತ ಮಂಡಳಿಯು ಅಂದಾಜುಗಳ ಸುತ್ತ ಇರುವ ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದರಿಂದ ಅಂದಾಜುಗಳಲ್ಲಿ ಸಮಂಜಸ ಬದಲಾವಣೆಗಳಾಗುತ್ತಿವೆ. ಬದಲಾವಣೆಗಳನ್ನು ಮಾಡಲಾದ ಅವಧಿಯಲ್ಲಿ ಅಂದಾಜುಗಳಲ್ಲಿನ ಬದಲಾವಣೆಗಳು ಆರ್ಥಿಕ ಪಟ್ಟಿಗಳಲ್ಲಿ ಬಿಂಬಿತವಾಗುತ್ತವೆ ಮತ್ತು ಅವುಗಳ ಪರಿಣಾಮಗಳು ಆರ್ಥಿಕ ಪಟ್ಟಿಗಳಲ್ಲಿ ಟಿಪ್ಪಣಿಗಳಲ್ಲಿ ತಿಳಿಯಪಡಿಸುತ್ತವೆ.

### 1.4 ದಾಸ್ತಾನುಗಳ ಮೌಲ್ಯೀಕರಣ

ಎ. ಟರ್ನ್‌ಕೀ ಕಾಮಾಗಾರಿಗಳಲ್ಲಿ ನಿರ್ದಿಷ್ಟ ಗುರುತುಪಡಿಸುವಿಕೆ ಬೆಲೆ ನಿಗಧಿಕರಣ ವಿಧಾನದಲ್ಲಿ ದಾಸ್ತಾನುಗಳನ್ನು ಮೌಲ್ಯೀಕರಿಸಲಾಗುವುದು.

ಬಿ. ನಿರ್ವಹಣಾ ಉದ್ದೇಶದ ದಾಸ್ತಾನುಗಳನ್ನು ಸರಾಸರಿ ತೂಕದ ಬೆಲೆ ನಿಗಧಿಕರಣ ವಿಧಾನದಲ್ಲಿ ಮೌಲ್ಯೀಕರಿಸಲಾಗುವುದು.

ಸಿ. ಮರು ಉಪಯೋಗಿಸಬಲ್ಲ, ಗುರುತಿಸಿರುವ ದಾಸ್ತಾನುಗಳನ್ನು ನಿರುಪಯುಕ್ತ ಆಸ್ತಿಯೆಂದು ಘೋಷಿಸಿ ಅವುಗಳ ಇಳುವರಿ ಬೆಲೆಯಲ್ಲಿ ಮೌಲ್ಯೀಕರಿಸಬಹುದಾಗಿದೆ.

ಡಿ. ದಾಸ್ತಾನುಗಳ ಮೌಲ್ಯವು ದಾಸ್ತಾನನ್ನು ಪ್ರಸ್ತುತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಇ. ನಿರುಪಯುಕ್ತತೆ ಅನುಮೋದನಾ ಸಮಿತಿಯಿಂದ ನಿರುಪಯುಕ್ತ/ಬಳಕೆಯಲ್ಲಿಲ್ಲದ ಎಂದು ಗುರುತಿಸಿರುವ ದಾಸ್ತಾನುಗಳ ಮೌಲ್ಯವನ್ನು, ನಿಗದಿತ ದರಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ನಿರುಪಯುಕ್ತ ದರದಂತೆ ಹಾಗೂ ಲಭ್ಯವಿಲ್ಲದ ಪ್ರಕರಣಗಳಲ್ಲಿ ಅಂತಹ ದಾಸ್ತಾನಿನ ಮೌಲ್ಯವನ್ನು, ಮೂಲ ಮೌಲ್ಯದ ಶೇಕಡಾ 90ರ ದರದ ಪ್ರಕಾರ ಇಳಿತಗೊಳಿಸಿ, ಉಳಿದ ಶೇಕಡಾ 10ರಷ್ಟನ್ನು ಅವುಗಳನ್ನು ಕಳಚುವವರೆಗೂ ಉಳಿಸಿಕೊಳ್ಳಲಾಗುತ್ತದೆ.

ಎಫ್. ಮೂರು ವರ್ಷಗಳ ಅವಧಿಗೂ ಮೀರಿರುವ ಬಳಕೆಯಲ್ಲಿಲ್ಲದ ಚಲಿಸದ ವಸ್ತು/ಉಪಕರಣಗಳನ್ನು ಮೌಲ್ಯೀಕರಿಸಲು ಯಾವುದೇ ನಿಬಂಧನೆಗಳಿರುವುದಿಲ್ಲ.

ಜಿ. ದಾಸ್ತಾನುಗಳನ್ನು ಕಡಿಮೆ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯದಂತೆ ಮೌಲ್ಯೀಕರಿಸಲಾಗುತ್ತದೆ. ಮೌಲ್ಯವನ್ನು ಸರಾಸರಿ ದರದ ಆಧಾರದಂತೆ ಗೊತ್ತುಪಡಿಸಲಾಗುತ್ತದೆ.

### 1.5 ನಗದು ಹರಿವಿನ ವಿವರಣಾ ಪಟ್ಟಿ

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಲಾಗುತ್ತದೆ, ಆ ಮೂಲಕ ಆ ಅವಧಿಯ ಲಾಭವನ್ನು ನಗದು-ರಹಿತ ಸ್ವರೂಪದ ವ್ಯವಹಾರಗಳ ಪರಿಣಾಮಗಳಿಗೆ, ಯಾವುದೇ ಮುಂದೂಡಲ್ಪಡಬಹುದಾದ ಅಥವಾ ಹಿಂದಿನ ಅವಧಿಯ ಸಂಚಯಗಳು ಅಥವಾ ಮುಂದಿನ ಅವಧಿಯ ಕಾರ್ಯ ಚಟುವಟಿಕೆಗಳ ನಗದು ರಸೀದಿ ಅಥವಾ ಪಾವತಿಗಳ ಮತ್ತು ಆದಾಯದ ಬಾಬ್ತುಗಳು ಅಥವಾ ವೆಚ್ಚಗಳು ನಗದು ಹರಿವಿನ ಹೂಡಿಕೆ ಅಥವಾ ಬಂಡವಾಳ ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಕಂಪನಿಯ ಕಾರ್ಯಚಟುವಟಿಕೆ, ಹೂಡಿಕೆ ಮತ್ತು ಬಂಡವಾಳ ಪೂರೈಕೆಯ ಚಟುವಟಿಕೆಗಳನ್ನು ನಗದು ಹರಿವಿನ ಪಟ್ಟಿಯಲ್ಲಿ ಪ್ರತ್ಯೇಕಿಸಲಾಗಿದೆ.

### 1.6 ಹಿಂದಿನ ಅವಧಿಯ ಬಾಬ್ತುಗಳು:

ಸಾಮಗ್ರಿಗಳ ಪೂರ್ವಾವಧಿಯ ತಪ್ಪುಗಳು/ದೋಷಗಳನ್ನು ಮರು ಪರಿಶೀಲನೆಯಿಂದ ಸರಿಪಡಿಸಲಾಗಿದ್ದು, ತಪ್ಪು ಸಂಭವಿಸಿದ ಅವಧಿಯ/ಅವಧಿಗಳ ಹಿಂದಿನ ಅವಧಿಗಳ ತುಲನಾತ್ಮಕ ಮೊತ್ತಗಳನ್ನು ಪುನಃ ಮಂಡಿಸುವುದು. ಮಂಡಿಸಿದ ಅವಧಿಗಿಂತ ಬಹಳ ಮುಂಚೆ ಒಂದು ವೇಳೆ ತಪ್ಪು ಸಂಭವಿಸಿದ್ದರೆ, ಮಂಡಿಸಿದ ಹಿಂದಿನ ಅವಧಿಯ ಸ್ವತ್ತುಗಳು, ಬಾಧ್ಯತೆಗಳು ಮತ್ತು ಸ್ವಾಮ್ಯಗಳ ಪ್ರಾರಂಭಿಕ ಉಳಿಕೆಗಳನ್ನು ಮಂಡಿಸುವುದು. ಒಟ್ಟು ಸ್ಥಾವರದ ಆಸ್ತಿಗಳ ಮೇಲೆ ಮತ್ತು ಸಲಕರಣೆಗಳ ಮೇಲೆ 1% ಮಿತಿಗಿಂತ ಕೆಳಗಿನ ಪೂರ್ವಾವಧಿಯ ದೋಷಗಳನ್ನು ಕಂಪನಿಗೆ ಪ್ರಸಕ್ತ ವರ್ಷದಲ್ಲಿ ಲೆಕ್ಕಿಕರೀಸಲಾಗಿದೆ.

### 1.7 ಕಾರ್ಯಾಚರಣಾ ವಿಭಾಗಗಳು

IND AS 108ಗೆ ಅನುಗುಣವಾಗಿ, ವಿಭಾಗದ ಮಾಹಿತಿಯನ್ನು ಪ್ರಸ್ತುತಪಡಿಸಲು ಬಳಸುವ ಆಪರೇಟಿಂಗ್ ವಿಭಾಗಗಳನ್ನು

ಕಂಪನಿಯ ನಿರ್ವಹಣೆ ವಿಭಾಗಗಳಿಗೆ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಮತ್ತು ಅವುಗಳ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಬಳಸುವ ಆಂತರಿಕ ವರದಿಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ. ನಿರ್ದೇಶಕರ ಮಂಡಳಿಯು ಒಟ್ಟಾರೆಯಾಗಿ ಕಂಪನಿಯ 'ಮುಖ್ಯ ಕಾರ್ಯಾಚರಣೆಯ ನಿರ್ಧಾರಕರು' ಅಥವಾ 'ಸಿಒಡಿಎಂ' IND AS 108 ರ ಅರ್ಥದಲ್ಲಿದೆ. ಆಂತರಿಕ ವರದಿ ಮಾಡುವ ಉದ್ದೇಶಗಳಿಗಾಗಿ ಬಳಸಲಾಗುವ ಸೂಚಕಗಳು ಸ್ಥಳ ನಿರ್ವಹಣಾ ವಿಭಾಗಗಳಲ್ಲಿ ಹಾಕಲಾದ ಕಾರ್ಯಕ್ಷಮತೆ ಮೌಲ್ಯಮಾಪನ ಕ್ರಮಗಳಿಗೆ ಸಂಬಂಧಿಸಿದಂತೆ ವಿಕಸನಗೊಳ್ಳಬಹುದು.

## 1.8 ಆದಾಯ ತೆರಿಗೆ

ಆದಾಯ ತೆರಿಗೆಯ ವೆಚ್ಚವು ಪ್ರಸ್ತುತ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ.ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳ ಲಾಭದಿಂದ ಕಂಡುಹಿಡಿಯಲಾಗುತ್ತದೆ.

### (i) ಪ್ರಸ್ತುತ ತೆರಿಗೆ

ಪ್ರಸ್ತುತ ತೆರಿಗೆಯು ಅವಧಿ ಮತ್ತು ಹಿಂದಿನ ಅವಧಿಗಳ ಪ್ರಸ್ತುತ ಆದಾಯ ತೆರಿಗೆಯನ್ನು ಪಾವತಿಸಲು ನಿರೀಕ್ಷಿಸಿದ ಅಥವಾ ತೆರಿಗೆ ಪ್ರಾಧಿಕಾರಗಳಿಂದ ವಸೂಲು ಮಾಡಲಾದ ಮೊತ್ತದಿಂದ ಕಂಡು ಹಿಡಿಯಲಾಗುತ್ತದೆ. ಆದಾಯ ತೆರಿಗೆ ವೆಚ್ಚವು ಪ್ರಸ್ತುತ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ. ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳ ಲಾಭದಿಂದ ಕಂಡುಹಿಡಿಯಲಾಗುತ್ತದೆ. ನೇರವಾಗಿ ಗುರುತಿಸಿದ ಬಾಬ್ತುಗಳಲ್ಲಿ ಇತರ ಸಮಗ್ರ ಆದಾಯದಿಂದ ಕಂಡುಹಿಡಿಯಲಾಗುತ್ತದೆ. ಪ್ರಸ್ತುತ ತೆರಿಗೆಯು ಪ್ರಸ್ತುತ ತೆರಿಗೆ ದರಗಳು (ಪ್ರಸ್ತುತ ತೆರಿಗೆಯ ನಿಯಮಗಳು) ಅಥವಾ ವರದಿಯ ದಿನಾಂಕದ ನಂತರದ ನಿಯಮದಿಂದ ನಿರ್ವಹಿಸಲ್ಪಡುತ್ತದೆ. ಪ್ರಸ್ತುತ ತೆರಿಗೆ ಆಸ್ತಿ ಮತ್ತು ಪ್ರಸ್ತುತ ತೆರಿಗೆ ಹೊಣೆಗಳನ್ನು ಹೊಂದಾಣಿಕೆ ಮಾಡಲು ಕಾನೂನಾತ್ಮಕ ಹಕ್ಕಿನಿಂದ ಹೊಂದಾಣಿಕೆ ಮೊತ್ತವನ್ನು ಗುರುತಿಸಿ, ಆಸ್ತಿಯಲ್ಲಿ ಮುರಿದುಕೊಂಡು ಹೊಣೆಗಾರಿಕೆಯನ್ನು ತೀರಿಸಿ, ಹೊಂದಾಣಿಕೆಯನ್ನು ಒಟ್ಟು ಮಾಡಲಾಗುತ್ತದೆ.

### (ii) ಮುಂದೂಡಲ್ಪಟ್ಟ ತೆರಿಗೆ

ಮುಂದೂಡಲ್ಪಟ್ಟ ತೆರಿಗೆಯು ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು, ಸ್ವತ್ತುಗಳೂ ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ನಡುವೆ ಉದ್ಭವಿಸುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ಆರ್ಥಿಕ ತಖ್ತೆಗಳಲ್ಲಿ ಅವುಗಳನ್ನು ತರಲಾದ ಮೊತ್ತಗಳಿಗೆ ಸಂಬಂಧಿಸಿ, ಕಂಡುಹಿಡಿಯಲಾಗುತ್ತದೆ. ಮುಂದೂಡಲ್ಪಟ್ಟ ತೆರಿಗೆಯನ್ನು ಮುಂದಿನ ವರ್ಷಕ್ಕೆ ಕೊಂಡೊಯ್ಯಬಹುದಾದ ತೆರಿಗೆಯ ನಷ್ಟಗಳು ಮತ್ತು ಲಾಭಗಳ ಮೇಲೆ ಕಂಡುಹಿಡಿಯಲಾಗುತ್ತದೆ.

ಮುಂದೂಡಲ್ಪಟ್ಟ ತೆರಿಗೆಯನ್ನು ಈ ಕೆಳಕಂಡ ವಿಷಯಗಳಿಗೆ ಗುರುತಿಸಲಾಗುವುದಿಲ್ಲ.

- ತಾತ್ಕಾಲಿಕ ವ್ಯತ್ಯಾಸಗಳನ್ನು ಆಸ್ತಿ ಮತ್ತು ಹೊಣೆ ಆರಂಭಿಕ ಆಸ್ತಿ ಮತ್ತು ಹೊಣೆಗಳು ಉದ್ಭವದಿಂದ ಉಂಟಾಗುವ ವಹಿವಾಟಿನ ತಾತ್ಕಾಲಿಕ ವ್ಯತ್ಯಾಸವು ವ್ಯಾಪಾರ ಸಂಯೋಜನೆಯೆಂದು ಗುರುತಿಸಲಾಗುವುದಿಲ್ಲ ಹಾಗೂ ಅದರಿಂದ ಲೆಕ್ಕಗಳಾಗಲೀ ಅಥವಾ ತೆರಿಗೆ ಅನ್ವಯವಾಗುವ ಲಾಭ ಮತ್ತು ನಷ್ಟಗಳಿಗೆ ಅನ್ವಯಿಸುವುದಿಲ್ಲ.

- ಅಂಗ ಸಂಸ್ಥೆಗಳು, ಸಹವರ್ತಿಗಳು ಮತ್ತು ಜಂಟಿ ವ್ಯವಸ್ಥೆಗಳಲ್ಲಿನ ಹೂಡಿಕೆಗಳಿಂದ ಉಂಟಾಗುವ ತಾತ್ಕಾಲಿಕ ವ್ಯತ್ಯಾಸಗಳು, ಕಂಪನಿಯು ನಿರ್ವಹಿಸಬಹುದಾದಂತಹ ತಾತ್ಕಾಲಿಕ ವ್ಯತ್ಯಾಸದ ಬದಲಾವಣೆ ಮತ್ತು  ನಿರೀಕ್ಷಿತ ಭವಿಷ್ಯದಲ್ಲಿ ಅದನ್ನು ಹಿಂಪಡೆಯಲಾಗುವುದಿಲ್ಲ.

- ಆರಂಭಿಕ ಗುಡ್‌ವಿಲ್ ಗುರುತಿಸುವ ಸಮಯದಲ್ಲಿ, ಉಂಟಾಗುವ ತಾತ್ಕಾಲಿಕ ವ್ಯತ್ಯಾಸಗಳು.

ಮುಂದೂಡಲ್ಪಟ್ಟ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಅಧಿನಿಯಮಿತಗೊಂಡ ಅಥವಾ ಆಯವ್ಯಯ ಪಟ್ಟಿಯ

ದಿನಾಂಕದಿಂದ ಸ್ವತಂತ್ರವಾಗಿ ಅಧಿನಿಯಮಿತಗೊಂಡ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿಕೊಂಡು ಲೆಕ್ಕಮಾಡಲಾಗುತ್ತದೆ ಮತ್ತು ಇವುಗಳಲ್ಲಿ ಯಾವ ವರ್ಷಗಳಲ್ಲಿ ವಸೂಲಿ ಮಾಡಬೇಕೆಂದು ಅಥವಾ ಇತ್ಯರ್ಥಪಡಿಸಬೇಕೆಂದು ಅಂದುಕೊಳ್ಳಲಾಗಿದೆಯೋ ಆ ವರ್ಷಗಳಲ್ಲಿನ ಕಂದಾಯ ಪಾವತಿಸಬೇಕಾದ ಆದಾಯಕ್ಕೆ ಅನ್ವಯಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಮುಂದೂಡಲ್ಪಟ್ಟ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳ ಮೇಲಿನ ತೆರಿಗೆ ದರಗಳಲ್ಲಿನ ಅಧಿನಿಯಮಿತಿ ಬದಲಾವಣೆಗಳ ಪರಿಣಾಮ ಅಥವಾ ಸ್ವತಂತ್ರ ಅಧಿನಿಯಮಿತಿ ದಿನಾಂಕವನ್ನು ಒಳಗೊಂಡ ಅವಧಿಯಲ್ಲಿನ ಆದಾಯ ಅಥವಾ ವೆಚ್ಚವೆಂದು ಗುರುತಿಸಲಾಗುತ್ತದೆ.

ಭವಿಷ್ಯದಲ್ಲಿ ಲಭ್ಯವಾಗುವ ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತನ್ನು ಎಷ್ಟರಮಟ್ಟಿಗೆ ಕಂಡು ಹಿಡಿಯಲಾಗುತ್ತದೆಯೆಂದರೆ ತೆರಿಗೆ ಕಟ್ಟಬೇಕಾದ ಲಾಭ ಭವಿಷ್ಯದಲ್ಲಿ ದೊರೆಯುವ ಸಂಭವವಿರುತ್ತದೆ. ಇದಕ್ಕೆ ಪ್ರತಿಯಾಗಿ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸಿಕೊಳ್ಳಬಹುದು.

ಮುಂದೂಡಲ್ಪಟ್ಟ ತೆರಿಗೆ ಆಸ್ತಿ ಮತ್ತು ಪ್ರಸ್ತುತ ತೆರಿಗೆ ಹೊಣೆಗಳನ್ನು ಹೊಂದಾಣಿಕೆ ಮಾಡಲು ಕಾನೂನಾತ್ಮಕ ಹಕ್ಕಿನಿಂದ ಹೊಂದಾಣಿಕೆ ಮೊತ್ತವನ್ನು ಗುರುತಿಸಿ, ಆಸ್ತಿಯಲ್ಲಿ ಮುರಿದುಕೊಂಡು ಹೊಣೆಗಾರಿಕೆಯನ್ನು ತೀರಿಸಿ, ಹೊಂದಾಣಿಕೆಯನ್ನು ಒಟ್ಟು ಮಾಡಲಾಗುತ್ತದೆ.

ಕಂಪನಿಯು, ನ್ಯಾಯಯುತವಾಗಿ ಕಂಡುಹಿಡಿಯಲಾದ ಮೊತ್ತಗಳನ್ನು ಪರಿಗಣಿಸುವಲ್ಲಿ ನಿರ್ಬಂಧಿತ ಅಧಿಕಾರವನ್ನು ಹೊಂದಿದ್ದು, ಪ್ರಸ್ತುತ ತೆರಿಗೆ ಸ್ವತ್ತುಗಳು ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳನ್ನು ತುಂಬಿಕೊಡುತ್ತದೆ ಮತ್ತು ಅದನ್ನು ನಿವ್ವಳ ಆಧಾರದಲ್ಲಿ ಇತ್ಯರ್ಥ ಪಡಿಸಲು ಅಥವಾ ಸ್ವತ್ತನ್ನು ನಗದೀಕರಿಸುವುದು ಮತ್ತು ಬಾಧ್ಯತೆಯನ್ನು ಏಕಕಾಲದಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸುತ್ತದೆ.

ಆದಾಯ ತೆರಿಗೆ ಕಾಯ್ದೆ, 1961 ರಡಿ ಪಾವತಿಸಬೇಕಾದ ಕನಿಷ್ಠ ಪರ್ಯಾಯ ತೆರಿಗೆ (ಮಿನಿಮಮ್ ಆಲ್ಟರ್ ನೇಟೀವ್ ತೆರಿಗೆ–ಎಂಎಟಿ) ತೆರಿಗೆ ಏನಾದರೂ ಇದ್ದರೆ, ಸದರಿ ತರಿಗೆ ಪಾವತಿಯು ಕಂಪನಿಯು ಸಾಧಾರಣ ಆದಾಯ ತೆರಿಗೆಯನ್ನು ಅವಧಿಯಲ್ಲಿ ಪಾವತಿಸಿದ್ದರೆ ಹಾಗೂ ಸ್ವತ್ತು ಎಂದು ಪರಿಗಣಿಸಿದರೆ ಮಾತ್ರ ಕನಿಷ್ಠ ಪರ್ಯಾಯ ತೆರಿಗೆಯನ್ನು ಸಾಧಾರಣ ತೆರಿಗೆ ಹೊಣೆಗಾರಿಕೆರೊಂದಿಗೆ ಮುಂದೂಡಲ್ಪಟ್ಟು ಹೊಂದಾಣಿಕೆ ಮಾಡಬಹುದಾಗಿದೆ. ಕನಿಷ್ಠ ಪರ್ಯಾಯ ತೆರಿಗೆ ಜಮೆಯನ್ನು ಆಯ–ವ್ಯಯ ಪಟ್ಟಿಯ ದಿನಾಂಕದಂದು ಆಸ್ತಿಯೆಂದು ಗುರುತಿಸಿ ಮತ್ತು ಪುರಾವೆಗಳಿಲ್ಲದ ಮೊತ್ತವನ್ನು ಮೇಲೆ ತಿಳಿಸಿದ ಮೊತ್ತದಿಂದ ಕಡಿತಗೊಳಿಸುವುದು.

## 1.9 ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)

ಎ. ಕಂಪನಿಯು ಎಲ್ಲಾ ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಿ ಲೆಕ್ಕಹಾಕಲು ವೆಚ್ಚ ಪದ್ಧತಿಯ ಮಾದರಿಯನ್ನು ಅನುಸರಿಸುತ್ತಿದೆ. ಪಿಪಿಇಗಳ ಮೌಲ್ಯೀಕರಣದಲ್ಲಿ ಸಂಚಿತ ಸವಕಳಿ ಹಾಗೂ ದುರ್ಬಲಗೊಂಡಿರುವ ಆಸ್ತಿಗಳನ್ನು ಕಳೆದು ತೋರಿಸಲ್ಪಡುತ್ತದೆ. ಪಿಪಿಇ ಮೌಲ್ಯ ಪರಿಗಣಿಸಲು ಖರೀದಿ ವೆಚ್ಚ ಸಾಲದ ವೆಚ್ಚ ಮತ್ತು ಪಿಪಿಇಯನ್ನು ಆ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಮತ್ತು ನೇರವಾಗಿ ಹೊರಿಸಬಹುದಾದ ವೆಚ್ಚವನ್ನು ಆಡಳಿತ ಮಂಡಳಿಯು ಉದ್ದೇಶಿಸಿರುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಅದರ ಅಗತ್ಯವಾಗಿರುತ್ತದೆ.

ಬಿ. ಕಾಮಗಾರಿ ವೃತ್ತ ಮತ್ತು ಬೃಹತ್ ಕಾಮಗಾರಿ ವಿಭಾಗದ ಸಿಬ್ಬಂದಿ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳು ನೇರವಾಗಿ ಸದರಿ ವಿಭಾಗದಲ್ಲಿ ನಿರ್ವಹಿಸಿದ ಬಂಡವಾಳ ಕಾಮಗಾರಿಗಳಿಗೆ ಸಂಬಂಧಪಟ್ಟಿರುತ್ತದೆ ಹಾಗೂ ಆಸ್ತಿ ಮೌಲ್ಯವನ್ನು ಒಳಗೊಂಡಿರುತ್ತದೆ. ಗುತ್ತಿಗೆದಾರರಿಗೆ ನೀಡಿದ ಕಾಮಗಾರಿಯನ್ನು ನಿಗಧಿತ ಅವಧಿಗಿಂತ ಮುಂಚಿತವಾಗಿ ಪೂರ್ಣಗೊಳಿಸಿದಲ್ಲಿ ಗುತ್ತಿಗೆದಾರರಿಗೆ ನೀಡುವ ಪ್ರೋತ್ಸಾಹ ಧನವನ್ನು ಸದರಿ ಬಂಡವಾಳ ಕಾಮಗಾರಿಯ ವೆಚ್ಚಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ಸಿ. ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ನಿಗಮವು ಅಧೀನ ಪಡಿಸಿಕೊಂಡಿರುವ ಮೂರನೇ ಪಕ್ಷಕಾರರಿಂದ ಒದಗಿಸಲ್ಪಟ್ಟಿರುವ ಆಸ್ತಿಗಳನ್ನು ವಾಸ್ತವಿಕ ಮೌಲ್ಯದ ಅನುಪಸ್ಥಿತಿಯಲ್ಲಿ, ನಿಗಮವು ಅನುಮೋದಿಸಿರುವ ಅಂದಾಜು ಮೌಲ್ಯದ ಪ್ರಕಾರ ಲೆಕ್ಕ ಪುಸ್ತಕಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಡಿ. ಭೂ ವೆಚ್ಚವು ಸ್ವಾಧೀನ ವೆಚ್ಚ (ಹೆಚ್ಚು ಪರಿಹಾರ ಸೇರಿದಂತೆ), ಅರಣ್ಯೀಕರಣಕ್ಕಾಗಿ ಮತ್ತು ಸಾಮಾಜಿಕ ಅರಣ್ಯೀಕರಣಕ್ಕಾಗಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನರು/ ಕುಟುಂಬಗಳಿಗೆ ನೀಡಲಾದ ಪರಿಹಾರವನ್ನು ಒಳಗೊಂಡಿರುತ್ತದೆ.

ಇ. ಆಯವ್ಯಯ ಪಟ್ಟಿಯ ದಿನಾಂಕದಂದು ಬಾಕಿ ಉಳಿದಿರುವ ಪಿಪಿಇಗೆ ಸಂಬಂಧಿಸಿದ ಮುಂಗಡಗಳನ್ನು ಇತರ ಪ್ರಸಕ್ತವಲ್ಲದ ಆಸ್ತಿಗಳಡಿಯಲ್ಲಿ ಬಂಡವಾಳ ಮುಂಗಡಗಳೆಂಬಂತೆ ವರ್ಗೀಕರಿಸಲಾಗುತ್ತದೆ. ಬಳಕೆಗೆ ಸಿದ್ಧವಾಗುವ ಮುಂಚಿನ ಸ್ವತ್ತುಗಳ ಬೆಲೆಯನ್ನು 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ' ಅಡಿಯಲ್ಲಿ ತೋರಿಸಲಾಗುತ್ತದೆ.

ಎಫ್. ಪಿಪಿಇಗೆ ಸಂಬಂಧಿಸಿದ ನಂತರದ ಖರ್ಚುಗಳು ಪಿಪಿಇಗಾಗಿ ಗುರುತಿಸುವಿಕೆ ಮಾನದಂಡಗಳನ್ನು ಪೂರೈಸಿದಾಗ ಮಾತ್ರ ಬಂಡವಾಳೀಕರಿಸಲಾಗುವುದು ಮತ್ತು ಆಸ್ತಿಗಳಿಗೆ ಸಂಬಂಧಿಸಿದ ಭವಿಷ್ಯದ ಆರ್ಥಿಕ ಪ್ರಯೋಜನಗಳು ಕಂಪನಿಗೆ ಹರಿಯುತ್ತವೆ ಮತ್ತು ವಸ್ತುವಿನ ಬೆಲೆಯನ್ನು ವಿಶ್ವಾಸಾರ್ಹವಾಗಿ ಅಳೆಯಬಹುದು.

ಜಿ. ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಉಂಟಾದಾಗ ಅವುಗಳನ್ನು ಲಾಭಗಳು ಮತ್ತು ನಷ್ಟಗಳ ತಖ್ತೆಯಲ್ಲಿ ಅಂಗೀಕರಿಸಲಾಗುತ್ತದೆ.

ಎಚ್. ಪಿಪಿಇಯ ಯಾವುದೇ ಒಂದು ಬಾಬ್ತು ಮತ್ತು ಆರಂಭಿಕವಾಗಿ ಅಂಗೀಕರಿಸಲಾದ ಯಾವುದೇ ಪ್ರಮುಖ ಭಾಗವು ವಿಲೇವಾರಿ ಆಧಾರದ ಮೇಲೆ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೆ, ಅದನ್ನು ಅಂಗೀಕರಿಸುವುದಿಲ್ಲ. ಸ್ವತ್ತನ್ನು ಅಮಾನ್ಯಗೊಳಿಸುವುದರಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೆ ಹುಟ್ಟುವಳಿ ಮತ್ತು ಸ್ವತ್ತಿನ ಸಾಗಣೆ ಮೊತ್ತದ ವ್ಯತ್ಯಾಸವನ್ನು ಲೆಕ್ಕ ಹಾಕಲಾಗುತ್ತದೆ)ವೂ ಸಹ, ಸ್ವತ್ತನ್ನು ಅಂಗೀಕರಿಸದೇ ಇದ್ದಾಗ, ಲಾಭ ಮತ್ತು ನಷ್ಟದ ತಖ್ತೆಯಲ್ಲಿ ಸೇರುತ್ತದೆ.

ಐ. ಆಸ್ತಿಯನ್ನು ನಿರುಪಯುಕ್ತಗೊಳಿಸಲು ತಗಲುವ ವೆಚ್ಚವನ್ನು ಅಂದಾಜು ಅಥವಾ ಬಂಡವಾಳೀಕರಣ ಮಾಡಿರುವುದಿಲ್ಲ.

ಜೆ. ಸರಬರಾಜುದಾರರು ನಗದೀಕರಿಸಿದ ಬ್ಯಾಂಕ್ ಗ್ಯಾರಂಟಿ ಅಥವಾ ದೋಷಪೂರಿತ ಉತ್ಪನ್ನಗಳನ್ನು ಸರಬರಾಜನ್ನು ಆಸ್ತಿಯ ಮೂಲ ವೆಚ್ಚದೊಂದಿಗೆ ಹೊಂದಾಣಿಕೆ ಮಾಡಿಕೊಡಲಾಗುತ್ತದೆ. ಇವುಗಳನ್ನು ನೇರವಾಗಿ ಗುರುತಿಸಲ್ಪಟ್ಟ ಆಸ್ತಿಯ ವೆಚ್ಚವನ್ನು ತಗ್ಗಿಸುವಲ್ಲಿ ಲೆಕ್ಕೀಕರಿಸಲಾಗುದು ಇಲ್ಲವಾದಲ್ಲಿ ಆದಾಯವೆಂದು ಪರಿಗಣಿಸಲಾಗುವುದು.

ಕೆ. ಯೋಜನೆಯ ಅಂಗೀಕಾರದ ಮೊದಲು ಆಸ್ತಿಯನ್ನು ಗುರುತಿಸುವಿಕೆ, ಸಮೀಕ್ಷೆ ಮತ್ತು ಕಾರ್ಯಕ್ಷಮತೆಯ ಅಧ್ಯಯನಕ್ಕೆ ತಗಲುವ ವೆಚ್ಚವನ್ನು ಯೋಜನೆಯು ನಿರಾಕರಣೆಗೊಂಡ ಪ್ರಕರಣಗಳಲ್ಲಿ ಲಾಭ ಮತ್ತು ನಷ್ಟ ತಖ್ತೆಯಲ್ಲಿ ಬಂಡವಾಳವೆಚ್ಚವೆಂದು ಅಂಗೀಕರಿಸಲಾಗುವುದು ಹಾಗೂ ಯೋಜನೆಯು ಅಂಗೀಕೃತಗೊಂಡಲ್ಲಿ ಬಂಡವಾಳ ವೆಚ್ಚವೆಂದು ಪರಿಗಣಿಸಿ ಕಾಮಗಾರಿ ಪ್ರಗತಿಯಲ್ಲಿದೆ ಶೀರ್ಷಿಕೆಯಡಿ ಲೆಕ್ಕೀಕರಿಸಲಾಗುವುದು.

### 1.10 ಹೂಡಿಕೆ ಸ್ವತ್ತುಗಳು

ಧೀರ್ಘಾವಧಿಯ ಬಾಡಿಗೆಗಾಗಿ ಅಥವಾ ಬಂಡವಾಳದ ಏರಿಕೆಗಾಗಿ ಅಥವಾ ಎರಡಕ್ಕೂ ಇರುವ ಆಸ್ತಿಯನ್ನು ಮತ್ತು ಕಂಪನಿಯು ಸ್ವಾಧೀನ ಪಡಿಸಿಕೊಳ್ಳದೇ ಇದ್ದಲ್ಲಿ, ಅದನ್ನು ಹೂಡಿಕೆ ಆಸ್ತಿ ಎಂದು ವರ್ಗೀಕರಿಸಲಾಗಿದೆ. ಹೂಡಿಕೆಯ ಆಸ್ತಿಯನ್ನು ಆರಂಭದಲ್ಲಿ ಅದರ ವೆಚ್ಚದಲ್ಲಿ ಅಳೆಯಲಾಗುತ್ತದೆ, ಇದರಲ್ಲಿ ಸಂಬಂಧಿತ ವಹಿವಾಟು ವೆಚ್ಚಗಳು ಮತ್ತು

ಅನ್ವಯವಾಗುವ ಸಾಲ ವೆಚ್ಚುವು ಸೇರಿವೆ. ನಂತರದ ಖರ್ಚನ್ನು ಆಸ್ತಿಯ ಸಾಗಿಸುವ ಮೊತ್ತಕ್ಕೆ ಬಂಡವಾಳೀಕರಿಸಿದಾಗ ಅದು ಖರ್ಚಿಗೆ ಸಂಬಂಧಿಸಿದ ಭವಿಷ್ಯದ ಆರ್ಥಿಕ ಪ್ರಯೋಜನಗಳು ಕಂಪನಿಗೆ ಹರಿಯುತ್ತದೆ ಮತ್ತು ವಸ್ತುವಿನ ಬೆಲೆಯನ್ನು ವಿಶ್ವಾಸಾರ್ಹವಾಗಿ ಅಳೆಯಬಹುದು.

ಹೂಡಿಕೆಯ ಆಸ್ತಿಯನ್ನು ಗುರುತಿಸಲಾಗದಿದ್ದಾಗ ವಿಲೇವಾರಿ ಮಾಡಿದ ನಂತರ ಅಥವಾ ಹೂಡಿಕೆಯ ಆಸ್ತಿಯನ್ನು ಅದರ ಪ್ರಸ್ತುತ ಬಳಕೆಯಿಂದ ಶಾಶ್ವತವಾಗಿ ಹಿಂತೆಗೆದುಕೊಂಡಾಗ ಮತ್ತು ವಿಲೇವಾರಿಯಿಂದ ಭವಿಷ್ಯದ ಯಾವುದೇ ಆರ್ಥಿಕ ಪ್ರಯೋಜನಗಳನ್ನು ನಿರೀಕ್ಷಿಸಲಾಗುವುದಿಲ್ಲ. ಆಸ್ತಿಯನ್ನು ಗುರುತಿಸದಿದ್ದಾಗ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೇವಾರಿ ಆದಾಯ ಮತ್ತು ಆಸ್ತಿಯ ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸ ಎಂದು ಲೆಕ್ಕಹಾಕಲಾಗುತ್ತದೆ) ಆಸ್ತಿಯನ್ನು ಗುರುತಿಸದ ಅವಧಿಯಲ್ಲಿ ಲಾಭ ಅಥವಾ ನಷ್ಟದಲ್ಲಿ ಸೇರಿಸಲಾಗುತ್ತದೆ. ಉಚಿತ ಹಿಡುವಳಿ ಭೂಮಿಯನ್ನು ಹೊರತುಪಡಿಸಿ ಹೂಡಿಕೆಯ ಗುಣಲಕ್ಷಣಗಳನ್ನು ಅವುಗಳ ಅಂದಾಜು ಉಪಯುಕ್ತ ಜೀವನದ ಮೇಲೆ ನೇರ ರೇಖೆಯು ವಿಧಾನವನ್ನು ಬಳಸಿಕೊಂಡು ಸವಕಳಿ ಮಾಡಲಾಗುತ್ತದೆ.

### 1.11 ಸವಕಳಿ

ಎ. ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗೊತ್ತುಪಡಿಸಿರುವ ಪ್ರಕಾರ ಹಾಗೂ ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ಅಳವಡಿಸಿಕೊಳ್ಳುವ ಪ್ರಕಾರ ಸವಕಳಿಯನ್ನು ನೇರ ಲೆಕ್ಕಾಚಾರದ ಪದ್ಧತಿಯಂತೆ ವಿಧಿಸಲಾಗುತ್ತದೆ. ಸಿಇಆರ್‌ಸಿಯ ಅನುಸಾರ, ಸವಕಳಿ ದರಗಳು ಈ ಕೆಳಗಿನಂತಿದೆ:

| ಕ್ರಮ ಸಂಖ್ಯೆ | ವಿವರಗಳು | ಸವಕಳಿ ದರಗಳು |
|---|---|---|
| 1 | ಕಟ್ಟಡಗಳು ಮತ್ತು ರಸ್ತೆಗಳು | 3.34% |
| 2 | ಆಂತರಿಕ ವೈರಿಂಗ್, ಆಪ್ಟಿಕ್ ಫೈಬರ್, ಸಂವಹನ ಸಾಮಗ್ರಿಗಳು, ಪೀಠೋಪಕರಣಗಳು ಮತ್ತು ಅಳಡಿಕೆಗಳು, ಕ್ಯಾಲ್ಕುಲೇಟರ್‌ಗಳು, ಟೈಪ್‌ರೈಟರ್‌ಗಳು, ನಗದು ನೊಂದಣಿ ಪುಸ್ತಕ, ನಗದು ಪೆಟ್ಟಿಗೆ, ಡ್ಯೂಪ್ಲಿಕರ್‌ಗಳು, ಜೆರಾಕ್ಸ್ ಮತ್ತು ಕಾಪಿಯರ್ ಯಂತ್ರಗಳು | 6.33% |
| 3 | ಟ್ರಕ್‌ಗಳು, ಟೆಂಪೋಗಳು, ಬಸ್‌ಗಳು, ಜೀಪ್‌ಗಳು, ವ್ಯಾನ್‌ಗಳು, ಮೋಟಾರ್ ಕಾರ್‌ಗಳು ಮತ್ತು ಇತರೆ ವಾಹನಗಳು | 9.50% |
| 4 | ಕಂಪ್ಯೂಟರ್‌ಗಳು ಮತ್ತು ಅಂತಹ ಇತರ ಐಟಿ ಸಾಮಗ್ರಿಗಳು | 15.00% |
| 5 | ಮರದ ರಚನೆಗಳಂತಹ ತಾತ್ಕಾಲಿಕ ರಚನೆ | 100.00% |
| 6 | ಮೇಲೆ ಸೇರಿಸಿರದ ಇತರ ಎಲ್ಲಾ ಸ್ವತ್ತುಗಳು | 5.28% |

ಬಿ. ಆಸ್ತಿಗಳ ಮೌಲ್ಯದ ಶೇ.90 ರವರೆಗೆ ದರದಲ್ಲಿ ಸವಕಳಿಯನ್ನು ಸಂಚಿತಪಡಿಸಿಕೊಂಡು, ಉಳಿದ ಶೇ.10ರಷ್ಟನ್ನು ಉಳಿಕೆ ಮೌಲ್ಯವೆಂದು ಉಳಿಸಿಕೊಳ್ಳಲಾಗುತ್ತದೆ.

ಸಿ. 01.04.2007 ರಿಂದ ಸೇರ್ಪಡೆಯಾದ ಆಸ್ತಿಗಳಿಗೆ, ಸೇರ್ಪಡೆಯಾದ ತಿಂಗಳಿನಿಂದಲೇ ಸವಕಳಿಯನ್ನು ಒದಗಿಸಲಾಗಿದೆ. 31.03.2007 ರವರೆಗೆ ಸೇರ್ಪಡೆಯಾದ ಆಸ್ತಿಗಳಿಗೆ, ತದನಂತರದ ವರ್ಷದಿಂದ ಸವಕಳಿಯನ್ನು ಒದಗಿಸಲಾಗಿದೆ.

ಡಿ ವಿಸರ್ಜಿಸಿದ/ಕಳಚಿದ ಆಸ್ತಿಗಳ ಸವಕಳಿಯನ್ನು, ಹಿಂದಿನ ತಿಂಗಳವರೆಗೆ ಒದಗಿಸಲಾಗಿದೆ.

ಈ. ರೂ.500/–ವರೆಗಿನ ಪ್ರತಿಯೊಂದು ಆಸ್ತಿಯ ಸವಕಳಿಯನ್ನು, ಅಂತಹ ಆಸ್ತಿಯನ್ನು ಬಳಕೆಗೆ ತಂದ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗಿದೆ.

ಎಫ್. ಭೋಗ್ಯಾಧಾರಿತ ನಿರ್ಮಿತ ಮೇಲೆ ವಿಧಿಸಲಾದ ಸವಕಳಿ ಈ ಕೆಳಗಿನಂತೆ ಇರುತ್ತದೆ.

(i) ಭೋಗ್ಯಾಧಾರಿತ ಸ್ಥಳಗಳಲ್ಲಿನ ಸಿವಿಲ್ ನಿರ್ಮಾಣ ರಚನೆಗಳನ್ನು ಹೊರತುಪಡಿಸಿದ ಇತರ ಆಸ್ತಿ, ರಚನೆಗಳ ಸವಕಳಿಯನ್ನು, ಭೋಗ್ಯಾಧಾರಿತ ಅವಧಿ ಅಥವಾ ಅಂತಹ ಆಸ್ತಿ, ರಚನೆಗಳ ಬಾಳಿಕೆ ಅವಧಿಯಲ್ಲಿನ ಶೇಕಡಾ 90ರ ಪ್ರಮಾಣದಂತೆ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

(ii) ಸಿವಿಲ್ ನಿರ್ಮಾಣ ರಚನೆಗಳ ಸವಕಳಿಯನ್ನು ಬಾಳಿಕೆ ಅವಧಿಯಲ್ಲಿನ ಶೇಕಡಾ 100 ರ ಪ್ರಮಾಣದಂತೆ ಅಥವಾ ಭೋಗ್ಯಾಧಾರಿತ ಅವಧಿ ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಜಿ. ಬಿಡುಗಡೆಯಾದ ಸ್ವತ್ತುಗಳ ಸವಕಳಿ(ಬಳಕೆಯಲ್ಲಿದ ಸ್ವತ್ತುಗಳು) ಮತ್ತು ರಿಪೇರಿಗಾಗಿ ಬಿಡುಗಡೆ ಮಾಡಲಾದ ಸ್ವತ್ತುಗಳನ್ನು ಟಿಪ್ಪಣಿ 1.11ಎ ಅಡಿಯಲ್ಲಿ ಸೂಚಿಸಲಾದ ದರದಲ್ಲಿ ಆಸ್ವತ್ತುಗಳ ಲಿಖಿತ ಮೌಲ್ಯದ ಮೇಲೆ ಲಿಖಿತ ಮೌಲ್ಯದ ವಿಧಾನದಲ್ಲಿ ವಿಧಿಸಲಾಗುತ್ತದೆ.

ಹೆಚ್. ಠೇವಣಿ ವಂತಿಗೆ ಹಾಗೂ ಗ್ರಾಹಕ ನಿರ್ಮಿತ ಆಸ್ತಿಗಳು, ಅನುದಾನಿತ ಆಸ್ತಿಗಳ ಸವಕಳಿಯನ್ನು, ವಂತಿಗೆ/ಅನುದಾನದ ಮೂಲಕ ಸ್ವಾಧೀನಪಡಿಸಿಕೊಂಡ ಆಸ್ತಿಗಳಿಗೆ ಒದಗಿಸಿದ ಸವಕಳಿಯ ಪ್ರಮಾಣದಂತೆ ಆದಾಯವೆಂದು ಹೊಂದಾಣಿಕೆ ಮಾಡಲಾಗಿದೆ.

ಐ. ವಿಲೇವಾರಿಯ ಬಗೆಗಿನ ಲಾಭ ಮತ್ತು ನಷ್ಟಗಳನ್ನು ಮಾರಾಟ ಹುಟ್ಟುವಳಿಗಳನ್ನು ಸಾಗಣೆ ಮೊತ್ತದೊಂದಿಗೆ ಹೋಲಿಸಿ ಕಂಡುಹಿಡಿಯಲಾಗುವುದು. ಇವುಗಳು ಇತರ ಲಾಭ/ (ನಷ್ಟ)ಗಳೊಳಗೆ ಲಾಭ ಅಥವಾ ನಷ್ಟದಲ್ಲಿ ಸೇರುತ್ತವೆ.

ಜೆ. ಭೋಗ್ಯದಡಿಯಲ್ಲಿ ಪಡೆದುಕೊಂಡಿರುವ ಭೂಮಿಯ ಮೇಲೆ ಭೋಗ್ಯದ ಅವಧಿಗೆ ಹಂಚಿರುವುದು.

**1.12 ಕಂದಾಯ ಮಾನ್ಯತೆ**

ಎ. ಸ್ವಾಮ್ಯ ಹಾಗೂ ಇತರ ತತ್ಸಂಬಂಧ ವಿಷಯಾಂಶಗಳ ಮೇಲೆ ಫಲಿತವಾಗಿರುವ ಅಂದಾಜು ಗಳಿಕೆಯನ್ನು ಆಧರಿಸಿ ಗೊತ್ತುಪಡಿಸಿಕೊಂಡಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ.ಆಯೋಗ), ಕಾಲಕಾಲಕ್ಕೆ ತನ್ನ ಬಹುವಾರ್ಷಿಕ ವಿದ್ಯುತ್ ದರದಲ್ಲಿ ಅಧಿಸೂಚಿಸುವ ವಿದ್ಯುತ್ ದರಗಳಂತೆ ಸಂಚಿತ ಆಧಾರದ ಪ್ರಕಾರ ವಿದ್ಯುತ್ ಪ್ರಸರಣದ ಕಂದಾಯವನ್ನು ಮಾನ್ಯಗೊಳಿಸಲಾಗುತ್ತದೆ.

ಬಿ. ಐ.ಎಸ್.ಟಿ.ಎಸ್ ಮಾರ್ಗಗಳ ವಾರ್ಷಿಕ ಪ್ರಸರಣ ಶುಲ್ಕವನ್ನು (ವೈಟಿಸಿ) ಕಾಲಕಾಲಕ್ಕೆ ಸಿ.ಇ.ಆರ್.ಸಿಆದೇಶದ ಪ್ರಕಾರ ಸಂಚಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ

ಸಿ. ನಗದು ಆಧಾರದಲ್ಲಿ ಲೆಕ್ಕೀಕರಿಸುವ ಪರಿಶೀಲನ ಶುಲ್ಕಗಳು, ಪರೀಕ್ಷ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು, ಠೇವಣಿ ಕೊಡುಗೆ ಕೆಲಸಗಳ ಮೇಲಿನ ಕನ್ಸಲ್ಟೆನ್ಸಿ ಶುಲ್ಕಗಳು, ಉಳಿದಿರುವ ಭೂಮಿಗೆ ಶುಲ್ಕಗಳು, ಕಾರಿಡಾರ್ ಶುಲ್ಕಗಳು ಮತ್ತು ಮಂಡಪ ಕೀಪರ್ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಇತರೆ ಸೇವೆಗಳಿಂದ ಬಂದ ಆದಾಯಗಳನ್ನು ಕಂಪನಿಯು ಪೂರ್ಣಗೊಂಡ ಹಂತದ ಆಧಾರದ ಅನ್ವಯ ಲೆಕ್ಕೀಕರಿಸಲಾಗುತ್ತಿದೆ.

ಡಿ. ಬಡ್ಡಿಯ ಆದಾಯವನ್ನು ಪರಿಣಾಮಕಾರಿ ಬಡ್ಡಿ ದರದ ವಿಧಾನವನ್ನು ಬಳಸಿ ಗುರುತಿಸಲಾಗುತ್ತದೆ.

ಇ. ಸ್ವಯಂ ಕಾರ್ಯನಿರ್ವಹಣ ಕಾಮಗಾರಿಗಳ ಮೇಲಿನ ಮೇಲ್ವಿಚಾರಣಾ ಶುಲ್ಕಗಳನ್ನು ಅಪ್‌ಫ್ರಂಟ್ ಅಧಾರದ ಹಾಗೂ ಆದಾಯವನ್ನು ಪ್ರೋ–ರೇಟ ಅಧಾರದಮೇಲೆ ಗುರುತಿಸಲಾಗುವುದು. ಅದು ಎಷ್ಟು ಸಂಖ್ಯೆಗಳ ಮೇಲ್ವಿಚಾರಣೆಗಳನ್ನು ನಡೆಸಲಾಗುವುದೊ ಅದರ ಅಧಾರದಲ್ಲಿ ಗುರುತಿಸಲಾಗುವುದು.

ಎಫ್. ಬೇಡಿಕೆ ಮಾಡದ ಹೊಣೆಗಾರಿಕೆ ಅಥವಾ ಸಾಮಾಗ್ರಿ ಸರಬರಾಜು ಮಾಡಿರುವುದಕ್ಕೆ "ಸಾಮಾಗ್ರಿ ಸರಬರಾಜು ಹೊಣೆಗಾರಿಕೆ" ಮತ್ತು "ಸಂಡ್ರಿ ಕ್ರೆಡಿಟರ್ಸ್/ಕಂಟ್ರೋಲ್ ಅಕೌಂಟ್ಸ್" ಲೆಕ್ಕಶೀರ್ಷಿಕೆಯಲ್ಲಿನ ಮೊತ್ತವು 10 ವರ್ಷಗಳಿಗೂ ಮೀರಿ ಮುಂದುವರೆದಲ್ಲಿ ಅಂತಹ ಮೊತ್ತವನ್ನು ವಿವಿಧ ಆದಾಯವೆಂದು ಲೆಕ್ಕೀಕರಿಸಲಾಗುವುದು.

ಜಿ. ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ, ಕಂಡು ಹಿಡಿಯಲಾಗುವುದು.

**1.13 ಗುತ್ತಿಗೆಗಳು**

ಒಪ್ಪಂದವು ಒಪ್ಪಂದವೇ ಅಥವಾ ಗುತ್ತಿಗೆ ಹೊಂದಿದೆ ಎಂದು ಕಂಪನಿಯು ಒಪ್ಪಂದದ ಪ್ರಾರಂಭದಲ್ಲಿ ನಿರ್ಣಯಿಸುತ್ತದೆ. ಅಂದರೆ, ಒಪ್ಪಂದವು ನಿಯಂತ್ರಿಸುವ ಹಕ್ಕನ್ನು ಪರಿಗಣನೆಗೆ ಬದಲಾಗಿ ಗುರುತಿಸಲಾದ ಸ್ವತ್ತನ್ನು ಸ್ವಲ್ಪ ಸಮಯದವರೆಗೆ ಬಳಸುವುದನ್ನು ತಿಳಿಸಿದೆ.

**ಗುತ್ತಿಗೆದಾರನಾಗಿ**

ಕಂಪನಿಯು ಎಲ್ಲಾ ಗುತ್ತಿಗೆಗಳಿಗೆ ಒಂದೇ ಗುರುತಿಸುವಿಕೆ ಮತ್ತು ಅಳತೆ ವಿಧಾನವನ್ನು ಅನ್ವಯಿಸುತ್ತದೆ. ಅಲ್ಪಾವಧಿಯ ಗುತ್ತಿಗೆ ಮತ್ತು ಕಡಿಮೆ–ಮೌಲ್ಯದ ಆಸ್ತಿಗಳ ಗುತ್ತಿಗೆಗಳನ್ನು ಹೊರತುಪಡಿಸಿ, ಗುತ್ತಿಗೆ ಪಾವತಿಗಳನ್ನು ಮಾಡಲು ಗುತ್ತಿಗೆ ಭಾದ್ಯತೆಗಳನ್ನು ಮತ್ತು ಆಧಾರವಾಗಿರುವ ಸ್ವತ್ತುಗಳನ್ನು ಬಳಸುವ ಹಕ್ಕನ್ನು ಪ್ರತಿನಿಧಿಸುವ ಹಕ್ಕಿನ ಬಳಕೆಯ ಸ್ವತ್ತುಗಳನ್ನು ಕಂಪನಿ ಗುರುತಿಸುತ್ತದೆ.

**(i) ಬಳಕೆಯ ಹಕ್ಕು ಸ್ವತ್ತುಗಳು**

ಕಂಪನಿಯು ಗುತ್ತಿಗೆಯ ಪ್ರಾರಂಭದ ದಿನಾಂಕದಂದು ಬಳಕೆಯ ಹಕ್ಕಿನ ಸ್ವತ್ತುಗಳನ್ನು ಗುರುತಿಸುತ್ತದೆ (ಅಂದರೆ, ಆಧಾರವಾಗಿರುವ ಆಸ್ತಿಗಳ ಬಳಕೆ ಲಭ್ಯವಿರುವ ದಿನಾಂಕ). ಬಳಕೆಯ ಹಕ್ಕಿನ ಸ್ವತ್ತುಗಳನ್ನು ವೆಚ್ಚದಲ್ಲಿ ಅಳೆಯಲಾಗುತ್ತದೆ, ಸಂಚಿತ ಸವಕಳಿಯನ್ನು ಕಳೆದು ಮತ್ತು ದೌರ್ಬಲ್ಯದ ನಷ್ಟಗಳು ಮತ್ತು ಗುತ್ತಿಗೆ ಬಾಧ್ಯತೆಗಳ ಯಾವುದೇ ಮರುಪರಿಶೀಲನೆಗೆ ಹೊಂದಿಸಲಾಗಿದೆ. ಬಳಕೆಯ ಹಕ್ಕಿನ ಸ್ವತ್ತುಗಳ ವೆಚ್ಚವು ಗುರುತಿಸಲ್ಪಟ್ಟ ಗುತ್ತಿಗೆ ಬಾಧ್ಯತೆಗಳ ಪ್ರಮಾಣವನ್ನು ಒಳಗೊಂಡಿದೆ. ಆರಂಭಿಕ ನೇರ ವೆಚ್ಚಗಳು ಮತ್ತು ಪ್ರಾರಂಭದ ದಿನಾಂಕದಂದು ಅಥವಾ ಮೊದಲು ಮಾಡಿದ ಗುತ್ತಿಗೆ ಪಾವತಿಗಳು ಯಾವುದೇ ಗುತ್ತಿಗೆ ಪ್ರೋತ್ಸಾಹವನ್ನು ಸ್ವೀಕರಿಸುತ್ತವೆ. ಸ್ವತ್ತುಗಳ ಅಂದಾಜು ಉಪಯುಕ್ತ ಜೀವಿತಾವಧಿಯಲ್ಲಿ ಬಳಕೆಯ ಹಕ್ಕು ಸ್ವತ್ತುಗಳನ್ನು ಇಳಿಕೆಯಾದ ಲಿಖಿತ ಮೌಲ್ಯದ ಆಧಾರದ ಮೇಲೆ ಸವಕಳಿ ಮಾಡಲಾಗುತ್ತದೆ. ಬಳಕೆಯ ಹಕ್ಕಿನ ಸ್ವತ್ತುಗಳು ಸಹ ದುರ್ಬಲತೆಗೆ ಒಳಪಟ್ಟಿರುತ್ತದೆ.

**(ii) ಗುತ್ತಿಗೆ ಬಾಧ್ಯತೆಗಳು**

ಗುತ್ತಿಗೆಯ ಪ್ರಾರಂಭದ ದಿನಾಂಕದಲ್ಲಿ ಗುತ್ತಿಗೆ ಅವಧಿಯ ಮೇಲೆ ಮಾಡಬೇಕಾದ ಗುತ್ತಿಗೆ ಪಾವತಿಗಳ ಪ್ರಸ್ತುತ ಮೌಲ್ಯದಲ್ಲಿ ಕಳೆಯುವ ಗುತ್ತಿಗೆ ಬಾಧ್ಯತೆಗಳನ್ನು ಕಂಪನಿ ಗುರಿತಿಸುತ್ತಿದೆ. ಗುತ್ತಿಗೆ ಪಾವತಿಗಳಲ್ಲಿ ಸ್ಥಿರ ಪಾವತಿಗಳು ಸೇರಿವೆ ವಸ್ತು ನಿಷ್ಠೆ ಸ್ಥಿರ ಪಾವತಿಗಳನ್ನು ಒಳಗೊಂಡಂತೆ ಸ್ವೀಕರಿಸುವ ಯಾವುದೇ ಗುತ್ತಿಗೆ ಪ್ರೋತ್ಸಾಹಗಳು ಕಡಿಮೆ ಸೂಚ್ಯಂಕ ಅಥವಾ ದರವನ್ನು ಅವಲಂಭಿಸಿರುವ ವೇರಿಯಬಲ್ ಗುತ್ತಿಗೆ ಪಾವತಿಗಳು ಮತ್ತು ಉಳಿದ ಮೌಲ್ಯ ಖಾತರಿಗಳ ಅಡಿಯಲ್ಲಿ ಪಾವತಿಸಲು ನಿರೀಕ್ಷಿಸಲಾಗಿದೆ. ಗುತ್ತಿಗೆ ಪ್ರಾರಂಭವಾದ ದಿನಾಂಕದಂದು ಕಂಪನಿಯು ತನ್ನ ಹೆಚ್ಚುತ್ತಿರುವ ಸಾಲ ದರವನ್ನು ಬಳಸುತ್ತದೆ ಏಕೆಂದರೆ ಗುತ್ತಿಗೆಯಲ್ಲಿ ಸೂಚಿಸುವ ಬಡ್ಡಿ ದರವನ್ನು ಸುಲಭವಾಗಿ ನಿರ್ಧರಿಸಲಾಗುವುದಿಲ್ಲ.

**(iii) ಕಡಿಮೆ ಮೌಲ್ಯದ ಸ್ವತ್ತುಗಳು ಗುತ್ತಿಗೆ ಮತ್ತು ಅಲ್ಪಾವಧಿಯ ಗುತ್ತಿಗೆ**

ಕಂಪನಿಯು ಅಲ್ಪಾವಧಿಯ ಗುತ್ತಿಗೆ ಮತ್ತು ಕಡಿಮೆ ಮೌಲ್ಯದ ಆಸ್ತಿ ಗುರುತಿಸುವಿಕೆಯನ್ನು ಅನ್ವಯಿಸುತ್ತದೆ. ಅಲ್ಪಾವಧಿಯ

ಗುತ್ತಿಗೆ ಮತ್ತು ಕಡಿಮೆ ಮೌಲ್ಯದ ಆಸ್ತಿಗಳ ಗುತ್ತಿಗೆಗಳ ಮೇಲಿನ ಗುತ್ತಿಗೆ ಪಾವತಿಗಳನ್ನು ಗುತ್ತಿಗೆ ಅವಧಿಯ ಮೇಲೆ ನೇರ–ರೇಖೆಯ ಆಧಾರದ ಮೇಲೆ ಖರ್ಚು ಎಂದು ಗುರುತಿಸಲಾಗುತ್ತದೆ.

**ಗೇಣಿದಾರನಾಗಿ**

ತಪಾಸಣೆಯ ದಿನಾಂಕದಂದು ಗುತ್ತಿಗೆಯನ್ನು ಹಣಕಾಸು ಗುತ್ತಿಗೆ ಅಥವಾ ಆಪರೇಟಿಂಗ್ ಲೀಸ್ ಎಂದು ವರ್ಗೀಕರಿಸಲಾಗಿದೆ. ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಪ್ರತಿಫಲಗಳನ್ನು ಕಂಪನಿಯು ಗಣನೀಯವಾಗಿ ಊಹಿಸುವ ಗುತ್ತಿಗೆಗಳನ್ನು ಹಣಕಾಸು ಗುತ್ತಿಗೆ ಎಂದು ವರ್ಗೀಕರಿಸಲಾಗಿದೆ.

ಕಂಪನಿಯು ಗುತ್ತಿಗೆ ನೀಡುವವರಾಗಿದ್ದಾಗ, ಗುತ್ತಿಗೆ ಪ್ರಾರಂಭವಾದಾಗಿನಿಂದ, ಗುತ್ತಿಗೆ ಆದಾಯವನ್ನು, ನಿರೀಕ್ಷಿತ ಹಣದುಬ್ಬರ ವೆಚ್ಚ ಏರಿಕೆಗಳನ್ನು ಸರಿದೂಗಿಸಲು ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ, ಅಲ್ಲಿಯೇ ಹೆಚ್ಚಳು ರಚನೆಗೊಂಡಿಲ್ಲದ ಹೊರತಾಗಿ, ನೇರ–ರೇಖೆಯ ಆಧಾರದ ಮೇಲೆ ಆದಾಯವೆಂದು ಅಂಗೀಕರಿಸಲಾಗುವುದು.

## 1.14 ಅನುದಾನ ಲೆಕ್ಕೀಕರಣ

ಎ) ಅನುದಾನವನ್ನು ಪರಿಗಣಿಸುವಲ್ಲಿ ಎಲ್ಲಾ ಸಂಯೋಜಿತ ಷರತ್ತುಗಳನ್ನು ಅನುಸರಿಸಲಾಗುತ್ತಿದೆ ಎಂಬ ಯುಕ್ತ ಆಶ್ವಾಸನೆ ಇದ್ದಾಗ ಅನುದಾನವನ್ನು ಪರಿಗಣಿಸಿ ಅಂಗೀಕರಿಸಲಾಗುತ್ತಿದೆ. ಆದಾಯ ಸಂಬಂಧಿಸಿದ ಅನುದಾನವನ್ನು ಉದ್ದೇಶಿಸಲಾಗಿರುವ ಸಂಬಂಧಿತ ವೆಚ್ಚಕ್ಕೆ ಖರ್ಚು ಮಾಡಲಾದ ಅವಧಿಗಳ ವ್ಯವಸ್ಥಿತ ಆಧಾರದ ಅನ್ವಯ ಆದಾಯವೆಂದು ಪರಿಗಣಿಸಿ ಅಂಗೀಕರಿಸಲಾಗಿರುತ್ತದೆ. ಒಂದು ಆಸ್ತಿಗೆ ಸಂಬಂಧಿಸಿದ ಅನುದಾನವನ್ನು ಸಂಬಂಧಿಸಿದ ಆಸ್ತಿಯ ನಿರೀಕ್ಷಿತ ಉಪಯುಕ್ತ ಬಳಕೆಯ ಮೇಲಿನ ಆದಾಯದ ಅವಧಿಯ ಸಮಾನ ಮೊತ್ತಕ್ಕೆ ಪರಿಗಣಿಸಿ ಅಂಗೀಕರಿಸಲಾಗುತ್ತದೆ.

ಬಿ) ತೆರಿಗೆ/ಸಂಯುಕ್ತ ಅನುದಾನಗಳನ್ನು ಅವುಗಳಿಗೆ ಲಗತ್ತಿಸಿದ ಬಾಧ್ಯತೆಗಳನ್ನು ಪೂರೈಸಿದ ಮೇಲೆ ಆದಾಯವೆಂದು ಪರಿಗಣಿಸಬೇಕು ಮತ್ತು ಅದನ್ನು ಸ್ವೀಕರಿಸುವುದು ನಿರ್ದಿಷ್ಟವಾದ ಮೇಲೆ ಆದಾಯವೆಂದು ಪರಿಗಣಿಸುವುದು.

ಸಿ) ವಿತ್ತೀಯವಲ್ಲದ ಸ್ವತ್ತುಗಳಾದ ಭೂಮಿ ಮತ್ತು ಇತರ ಸಂಪನ್ಮೂಲಗಳ ರೂಪದಲ್ಲಿ ಅನುದಾನವನ್ನು ಅತ್ಯಲ್ಪ ಮೌಲ್ಯದಲ್ಲಿ ಗುರುತಿಸಲಾಗುತ್ತದೆ.

ಡಿ) ಕರ್ನಾಟಕ ವಿದ್ಯುತ್ ಆಯೋಗ ನೀಡಿರುವ ವಿದ್ಯುತ್ ಪೂರೈಕೆಯ ಷರತ್ತುಗಳನ್ವಯ ಮೂರನೇ ವ್ಯಕ್ತಿಗಳಿಂದ ಸ್ವೀಕೃತವಾದ ವಂತಿಗೆಗಳಿಂದ ನಿರ್ವಹಿಸಿದ ಕಾಮಗರಿಗಳು/ ಆಸ್ತಿಗಳು ಮತ್ತು ಸದರಿ ಸ್ವತ್ತುಗಳನ್ನು ನ್ಯಾಯೋಚಿತ ಮೊತ್ತ/ ಅಂದಾಜು ಮೊತ್ತಗಳ ಆಧಾರದ ಮೇಲೆ ಗುರುತಿಸಲಾಗಿದೆ. ಗುತ್ತಿಗೆದಾರರು ನೀಡಿರುವ ವಂತಿಗೆಯಟಿಯಲ್ಲಿನ ಬಂಡವಾಳ ಆಸ್ತಿಗಳನ್ನು ಮುಂದೂಡಿದ ಆದಾಯಗಳನ್ನಾಗಿ ಪರಿಗಣಿಸಿ, ಇತರೆ ಪ್ರಸ್ತುವಲ್ಲದ ಹೊಣೆಗಾರಿಕೆಗಳು ಎಂದು ವಿಂಗಡಿಸಲಾಗಿದೆ. ಸದರಿ ಮೊತ್ತವನ್ನು ಆದಾಯದಿಂದ ಸದರಿ ಆಸ್ತಿಯ ಅವಧಿಯ ಆಧಾರದ ಮೇಲೆ ಹಿಂಪಡೆಯಲಾಗುವುದು.

## 1.15 ಉದ್ಯೋಗಿ ಸೌಲಭ್ಯಗಳು

**ಎ. <u>ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳು</u>**

ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳಾದ ವೇತನ, ಕೂಲಿ ಮತ್ತು ಇತರೆ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದಲ್ಲಿನ ಲಾಭ ಮತ್ತು ನಷ್ಟದ ತಖ್ತೆಯಲ್ಲಿ ರಿಯಾಯಿತಿ ನೀಡದ ಮೊತ್ತದ ಆಧಾರದಲ್ಲಿ ವೆಚ್ಚವೆಂದು ಪರಿಗಣಿಸಿ ಅಂಗೀಕರಿಸಲಾಗುತ್ತದೆ. ಸದರಿ ಅಲ್ಪಾವಧಿಯ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದ ಅವಧಿಗೆ ಅಂಗೀಕರಿಸಿ ಸಂಬಂಧಿಸಿದ ಅವಧಿಯ ಲಾಭ ಮತ್ತು ನಷ್ಟ ತಖ್ತೆಯಲ್ಲಿ ಲೆಕ್ಕೀಕರಿಸಲಾಗಿದೆ.

ಬಿ. **ವ್ಯಾಖ್ಯಾನಿಸಲಾದ ಕೊಡುಗೆ ಯೋಜನೆಗಳು**

1) **ನೂತನ ವ್ಯಾಖ್ಯಾನಿತ ಉಪದಾನ ಪಿಂಚಣಿ ಯೋಜನೆ (ಎನ್‌ಡಿಸಿಪಿಎಸ್):**

ದಿನಾಂಕ 01.04.2006ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳು "ನೂತನ ವ್ಯಾಖ್ಯಾನಿತ ಉಪದಾನ ಪಿಂಚಣಿ ಯೋಜನೆ" ಹಾಗೂ ಕಂಪನಿಯು, ಸಂಬಳದ ಮೇಲೆ ಪಾವತಿಸುವ/ಒದಗಿಸುವ ನಿರ್ದಿಷ್ಟ ದರದ ಕೊಡುಗೆಯ ಯೋಜನೆಗೆ ಒಳಪಡುತ್ತಾರೆ.

2) **ಪಿಂಚಣಿ ಮತ್ತು ಉಪದಾನ:**

ಕಂಪನಿಯು "ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್" (ಕೆಇಪಿಜಿಟಿ) ಟ್ರಸ್ಟ್‌ಗೆ ದಿನಾಂಕ 01.04.2006 ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳ ವಂತಿಕೆಯನ್ನು ನೀಡುತ್ತದೆ.

(ಎ) ಸದರಿ ಯೋಜನೆಯಡಿ ದಿನಾಂಕ: 31.05.2002 ರವರೆಗೆ ಮತ್ತು ನಂತರದಲ್ಲಿ ಸಲ್ಲಿಸಿರುವ ಸೇವೆಗೆ ಉಪದಾನದ ಮೊತ್ತವನ್ನು ಪ್ರಮಾಣಾನುಗುಣವಾಗಿ ಮಾನ್ಯ ಕರ್ನಾಟಕ ಸರ್ಕಾರ ಹಾಗೂ ಕಂಪನಿಯ ಮೊತ್ತವನ್ನು ನಿರ್ಧರಿಸಲಾಗುವುದು.

(ಬಿ) 31.03.2006 ರವರೆಗೆ ಸೇವೆಗೆ ಸೇರ್ಪಡೆಗೊಂಡ ನೌಕರರನ್ನು ಒಳಗೊಳ್ಳುವ ವ್ಯಾಖ್ಯಾನಿತ ಕೊಡುಗೆ ಯೋಜನೆ ಪಿಂಚಣಿ ಮತ್ತು ಉಪದಾನ "ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್" (ಕೆಇಪಿಜಿಟಿ) ಸೂಚಿಸಿದಂತೆ ದರಗಳು/ಮೊತ್ತ ಮತ್ತು ವಿಧಾನದ ಆಧಾರದ ಮೇಲೆ ಒದಗಿಸಲಾಗುತ್ತದೆ. ಕಾಲಕಾಲಕ್ಕೆ ಕೆಇಪಿಜಿಟಿಯಿಂದ IND-AS-19ಗೆ ಅನುಗುಣವಾಗಿ ಮಾಡಲಾದ ವಾಸ್ತವಿಕ ಮೌಲ್ಯಮಾಪನ ವರದಿಯ ಆಧಾರದ ಮೇಲೆ ದರಗಳು/ಮೊತ್ತವನ್ನು ತಲುಪಲಾಗುತ್ತದೆ.

ಸಿ. **ವ್ಯಾಖ್ಯಾನಿಸಲಾದ ಲಾಭದ ಯೋಜನೆಗಳು**

1) ನೂತನ ವ್ಯಾಖ್ಯಾನಿತ ಉಪದಾನ ಪಿಂಚಣಿ ಯೋಜನೆ ಉಪದಾನ (ಎನ್‌ಡಿಸಿಪಿಎಸ್):

ದಿನಾಂಕ 01.04.2006 ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳ ಉಪದಾನದ ಮೊತ್ತವನ್ನು, ಎಲ್‌ಐಸಿ ರವರಿಂದ ಪಡೆದ ಮೌಲ್ಯಮಾಪನ ವರದಿಯ ಅನುಸಾರ ಹವಣಿಕೆ ಮಾಡಲಾಗುವುದು.

(ಡಿ) **ಇತರೆ ದೀರ್ಘಾವಧಿ ಉದ್ಯೋಗಿ ಸೌಲಭ್ಯಗಳು :–**

1) **ರಜೆ ನಗದೀಕರಣ ಹಾಗೂ ಅರ್ಧವೇತನ ರಜೆ:**

ಆರ್ಥಿಕ ವರ್ಷದ ಅಂತ್ಯಕ್ಕೆ ನೀಡಲಾದ ರಜೆ ನಗದೀಕರಣ ಹಾಗೂ ಅರ್ಧವೇತನ ರಜೆ ಮೊತ್ತವನ್ನು ವಾಸ್ತವಿಕ ಮೌಲ್ಯೀಕರಣವನ್ನು ಪ್ರೊಜೆಕ್ಟೆಡ್ ಯೂನಿಟ್ ಕ್ರೆಡಿಟ್ ವಿಧಾನದಡಿ ಮೌಲ್ಯಮಾಪನ ಮಾಡಿ ಹವಣಿಕೆಯನ್ನು ಒದಗಿಸಲಾಗಿರುತ್ತದೆ.

ಇ. **ಇತರೆ ನಿವೃತ್ತಿ ಸವಲತ್ತುಗಳು**

I. **ಪಿಂಚಣಿದಾರರ ಭದ್ರತಾ ನಿಧಿ:**

ಕವಿಮಂ ಪಿಂಚಣಿದಾರರ ಕುಟುಂಬ ಹಿತ ನಿಧಿ/ಭದ್ರತಾ ನಿಧಿ ಯೋಜನೆಯು ದಿನಾಂಕ: 08.10.1998 ರಿಂದ ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯಡಿ ಪಿಂಚಣಿದಾರರು/ಕುಟುಂಬ ಪಿಂಚಣಿದಾರರು ಪಿಂಚಣಿ/ಕುಟುಂಬ ಪಿಂಚಣಿಯಿಂದ ರೂ.200/– ಗಳನ್ನು ನಿಧಿಯ ವಂತಿಕೆಯನ್ನಾಗಿ ಸಮರ್ಪಿಸಲಾಗುತ್ತದೆ. ಸದಸ್ಯರ ನಿಧನದ ನಂತರ,

ಸತತವಾಗಿ ಕನಿಷ್ಟ 12 ತಿಂಗಳುಗಳು ವಂತಿಕೆಯ ಪಾವತಿಯ ನಂತರ ಸದಸ್ಯರು ನಿಧನರಾದರೆ, ನಾಮ ನಿರ್ದೇಶಿತರು/ಹಕ್ಕುದಾರರಿಗೆ ರೂ.75,000/– ಗಳ ಒಟ್ಟು ಮೊತ್ತವನ್ನು ನಿಧಿಯಿಂದ ಪಾವತಿಸಲಾಗುವುದು. ಸದರಿ ನಿಧಿಯ ಹೂಡಿಕೆಯಿಂದ ಉದ್ಭವಿಸುವ ಬಡ್ಡಿಯ ಮೊತ್ತವನ್ನು ಕಂಪನಿಯ ಆದಾಯವೆಂದು ಪರಿಗಣಿಸಿ ನಿಧಿಗೆ ವಂತಿಗೆಯನ್ನಾಗಿ ನೀಡಲಾಗುವುದು.

**II. ಕುಟುಂಬ ಹಿತ ನಿಧಿ:**

'ನೌಕರರ ಕುಟುಂಬ ಹಿತ ನಿಧಿ' ಯೋಜನೆಯನ್ನು ದಿನಾಂಕ: 01.07.1978 ರಿಂದ ಜಾರಿಗೆ ಬರುವಂತೆ ಪಂಚಯಿಸಲಾಗಿದೆ. ಪ್ರತಿಯೊಬ್ಬ ನೌಕರನಿಂದ ರೂ.200/– ಗಳನ್ನು ಕಡಿತಗೊಳಿಸಿ, ಈ ನಿಧಿಗೆ ಸಂದಾಯ ಮಾಡಲಾಗುತ್ತದೆ. ನೌಕರನು ಸೇವಾವಧಿಯಲ್ಲಿದ್ದಾಗಲೇ ಮರಣ ಹೊಂದಿದರೆ, ಅವನು ಕನಿಷ್ಠ 12 ತಿಂಗಳುಗಳು ಮಾತ್ರ ರೂ.2,400/– ಹಣವನ್ನು ಸಂದಾಯಮಾಡಿದ್ದರೆ, ಅವನ ನ್ಯಾಯಸಮ್ಮತ ವಾರಸುದಾರರಿಗೆ ರೂ.2,00,000/–ಗಳನ್ನು ನೀಡಲಾಗುತ್ತದೆ. ಯೋಜನೆಯನುಸಾರ, ಕಂಪನಿಯು, ನೌಕರರ ಸಾವು/ನಿವೃತ್ತಿಯಾದ ಪಕ್ಷದಲ್ಲಿ, ಯೋಜನೆಯ ಷರತ್ತುಗಳನುಸಾರವಾಗಿ ಈ ನಿಧಿಗೆ ಕೊಡುಗೆ ನೀಡುತ್ತದೆ. ವಿಮಾ ಕಂತಿನ ಸಂಪಾದನೆಗಳು ಅಥವಾ ನಷ್ಟಗಳನ್ನು ಅವುಗಳು ಕಂಡುಬರುವ ಅವಧಿಯ ಇತರೆ ಸಮಗ್ರ ಆದಾಯದಲ್ಲಿ ಗುರುತಿಸಲಾಗುತ್ತದೆ ಹಾಗೂ ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**1.16 ವಿದೇಶಿ ಕರೆನ್ಸಿಯ ವ್ಯವಹಾರಗಳು**

**ಎ) ಕಾರ್ಯಾತ್ಮಕ ಕರೆನ್ಸಿ**

ಕಂಪನಿಯ ಕಾರ್ಯಾತ್ಮಕ ಕರೆನ್ಸಿಯೆಂದರೆ ಭಾರತೀಯ ರೂಪಾಯಿ, ಈ ಆರ್ಥಿಕ ಪಟ್ಟಿಗಳನ್ನು ಭಾರತೀಯ ರೂಪಾಯಿಗಳಲ್ಲಿ ನೀಡಲಾಗುತ್ತದೆ.

**ಬಿ) ವ್ಯವಹಾರಗಳು ಮತ್ತು ಬದಲಾವಣೆಗಳು**

ವಿದೇಶಿ ಕರೆನ್ಸಿ ವರ್ಗದ ಆರ್ಥಿಕ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಬ್ಯಾಲೆನ್ಸ್ ಶೀಟ್ ದಿನಾಂಕದಲ್ಲಿರುವಂತೆ ಪರಿಣಾಮಕಾರಿಯಾಗಿ ಯುಕ್ತ ಕಾರ್ಯಾ ಪ್ರವೃತ್ತ ಕರೆನ್ಸಿಗೆ ಬದಲಾಯಿಸಲಾಗುವುದು. ಈ ಇಂತಹ ಬದಲಾವಣೆಗಳಿಂದ ದೊರೆಯುವ ಲಾಭಗಳು ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ನಿವ್ವಳ ಲಾಭದಲ್ಲಿ ಸೇರಿಸಲಾಗುವುದು.

ವಿದೇಶಿ ಕರೆನ್ಸಿ ಬದಲಾವಣೆಯಿಂದ ಇತ್ಯರ್ಥಗೊಳಿಸಿದ ವ್ಯವಹಾರಿಕ ಲಾಭ ಅಥವಾ ನಷ್ಟಗಳನ್ನು, ವ್ಯವಹಾರವು ಇತ್ಯರ್ಥವಾದ ಅವಧಿಯಲ್ಲಿನ ನಿವ್ವಳ ಲಾಭವನ್ನು ಕಂಡುಹಿಡಿಯುವುದರಲ್ಲಿ ಪರಿಗಣಿಸಲಾಗುತ್ತದೆ. ಕಂದಾಯ, ವೆಚ್ಚ ಮತ್ತು ವಿದೇಶಿ ಕರೆನ್ಸಿ ವರ್ಗಗಳಲ್ಲಿರುವ ಹಣದ ಹರಿವಿನ ಬಾಬ್ತುಗಳನ್ನು ವ್ಯವಹಾರ ನಡೆಸಿದ ದಿನಾಂಕದಂದು ಜಾರಿಯಲ್ಲಿರುವ ವಿನಿಮಯ ದರವನ್ನು ಉಪಯೋಗಿಸಿಕೊಂಡು ಯುಕ್ತ ಕಾರ್ಯಪ್ರವೃತ್ತ ಕರೆನ್ಸಿಗಳಿಗೆ ಬದಲಾವಣೆ ಮಾಡಬೇಕು.

**1.17 ಸಾಲದ ವೆಚ್ಚಗಳು**

ನಿರ್ಮಿತ/ಅರ್ಜಿತ ಅರ್ಹತಾದಾಯಕ ಆಸ್ತಿಗಳಿಗೆ ಸಂಬಂಧಿಸಿದ ಸಾಲದ ವೆಚ್ಚಗಳನ್ನು, ಅಂತಹ ಆಸ್ತಿಗಳ ಮೌಲ್ಯದ ಭಾಗವೆಂದು ಬಂಡವಾಳೀಕರಿಸಲಾಗುತ್ತದೆ. ಅರ್ಹತಾದಾಯಕ ಆಸ್ತಿ ಎಂದರೆ, ಉದ್ದೇಶಿತ ಬಳಕೆಗಾಗಿ ಸಿದ್ಧವಾಗಲು ಸಾಕಷ್ಟು ಅವಶ್ಯಕ ಅವಧಿಯನ್ನು ತೆಗೆದುಕೊಳ್ಳುವಂತಹದ್ದು. ಸಾಲ ಪಡೆಯುವ ವೆಚ್ಚಗಳೆಂದರೆ ತನ್ನ ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸ್ವತ್ತಿನ ವೆಚ್ಚದ ಭಾಗವಾಗಿ ಬಂಡವಾಳವಾಗುವ ಅರ್ಹದಾಯ ಸ್ವತ್ತಿನ ಆರ್ಜನೆ, ನಿರ್ಮಾಣ, ತಯಾರಿಕೆಗೆ ನೇರವಾಗಿ ಕಾರಣವಾಗುವ ಯೋಗ್ಯವಾದ ವೆಚ್ಚಗಳು, ಕಂಪನಿಯು ಅಂತಹ ಖರ್ಚಿನ ಮೇಲೆ ಉಂಟಾಗುವ ವೆಚ್ಚಕ್ಕೆ ಬಂಡವಾಳೀಕರಣದ

ದರವನ್ನು ಅನ್ವಯಿಸುವುದರ ಮೂಲಕ ಮೂಲಾಧುನೀಕರಣಕ್ಕೆ ಅರ್ಹವಾದ ಸಾಲಪಡೆಯುವ ವೆಚ್ಚದ ಮೊತ್ತವನ್ನು ಕಂಡುಹಿಡಿಯಲಾಗುತ್ತದೆ. ಮೂಲಾಧುನೀಕರಣದ ದರವನ್ನು ಅರ್ಹದಾಯಕ ಸ್ವತ್ತಿನ ಖರೀದಿಗೆ ನಿರ್ದಿಷ್ಟವಾಗಿ ಮಾಡಲಾದ ಸಾಲ ಪಡೆಯುವಿಕೆಯನ್ನು ಹೊರತುಪಡಿಸಿ, ಆ ಅವಧಿಯಲ್ಲಿ ಬಾಕಿಯಿರುವ ಕಂಪನಿಯ ಸಾಲಗಳಿಗೆ ಅನ್ವಯಿಸುಬಹುದಾದ ಸಾಲ ವೆಚ್ಚದ ಅಂದಾಜು ದರವನ್ನು ಆಧರಿಸಿ ಕಂಡುಹಿಡಿಯಲಾಗುವುದು. ಕಂಪನಿಯು ಆ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಸಾಲದ ವೆಚ್ಚದ ಮೊತ್ತವು ಅವಧಿಯಲ್ಲಿ ಉಂಟಾಗುವ ಸಾಲದ ವೆಚ್ಚದ ಮೊತ್ತವನ್ನು ಮೀರಬಾರದು. ಇತರ ಎಲ್ಲಾ ಸಾಲದ ವೆಚ್ಚಗಳನ್ನು, ಅವುಗಳು ಸಂಭವಿಸದ ಅವಧಿಯಲ್ಲಿ ಖರ್ಚು ಮಾಡಲಾಗುವುದು.

**1.18 ಪ್ರತಿ ಷೇರಿನ ಸಂಪಾದನೆ**

**<u>ಪ್ರತೀ ಷೇರಿನ ಮೂಲ ಸಂಪಾದನೆ</u>**

ಪ್ರತೀ ಷೇರಿನ ಮೂಲ ಸಂಪಾದನೆಯನ್ನು ಆರ್ಥಿಕ ವರ್ಷದ ಅವಧಿಯಲ್ಲಿ ಬಾಕಿಯಿರುವ ಸ್ವಾಮ್ಯ ಷೇರುಗಳ ವೇಯಿಟೆಡ್ ಸರಾಸರಿ ಸಂಖ್ಯೆಯಿಂದ ಕಂಪನಿಯ ಸ್ವಾಮ್ಯ ಷೇರುದಾರರಿಗೆ ಆರೋಪಯೋಗ್ಯವಾದ ಲಾಭವನ್ನು ಭಾಗಿಸುವುದರಿಂದ ಲೆಕ್ಕ ಹಾಕಲಾಗುತ್ತದೆ.

**<u>ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆ</u>**

ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆಯು ಎಲ್ಲಾ ಗುಣತಗ್ಗಿದ ಸಾಮರ್ಥ್ಯ ಸ್ವಾಮ್ಯ ಷೇರುಗಳ ಬದಲಾವಣೆಯನ್ನು ಪರಿಭಾವಿಸಿ, ಬಾಕಿಯಿರುವ ಆರ್ಥಿಕ ಸ್ವಾಮ್ಯ ಷೇರುಗಳು ಒಳಗೊಂಡಂತೆ, ಸ್ವಾಮ್ಯ ಷೇರುಗಳ ವೇಹಿಟೆಡ್ ಸರಾಸರಿ ಸಂಖ್ಯೆ ಮತ್ತು ಅನಂತರದ ಆದಾಯದ ಬಡ್ಡಿಯ ತೆರಿಗೆಯ ಪರಿಣಾಮ ಮತ್ತು ಗುಣತಗ್ಗಿದ ಸಾಮರ್ಥಿಕ ಸ್ವಾಮ್ಯ ಷೇರುಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರತೀ ಷೇರಿನ ಮೂಲ ಸಂಪಾದನೆಯ ನಿರ್ಧರಣೆಯಲ್ಲಿ ಉಪಯೋಗಿಸುವ ಸ್ವಾಮ್ಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಲಾಗುತ್ತದೆ.

**1.19 ಪಿ.ಪಿ.ಇ. ಮತ್ತು ಸ್ಪರ್ಶಾತೀತ ಆಸ್ತಿಗಳ ದುರ್ಬಲತೆ:**

ಕಂಪನಿಯ ಸ್ವತ್ತುಗಳನ್ನು ಮುಂದುವರಿಸುವ ಮೊತ್ತದ ಯಾವುದೇ ದುರ್ಬಲತೆಯ ಸೂಚನೆಗಳಿವೆಯೇ ಎಂಬುದನ್ನು ನಿರ್ಧರಿಸಲು ಪ್ರತಿ ಆಯವ್ಯಯ ದಿನಾಂಕದಲ್ಲಿ ಪಿ.ಪಿ.ಇ.ಗಳ ಮತ್ತು ಸ್ಪರ್ಶಾತೀತ ಆಸ್ತಿಗಳನ್ನು ಮುಂದುವರಿಸುವ ಮೌಲ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಯಾವುದೇ ಸೂಚನೆಗಳು ಅಸ್ತಿತ್ವದಲ್ಲಿದ್ದಲ್ಲಿ, ಸ್ವತ್ತುಗಳನ್ನು ಮರುಪಡೆದುಕೊಳ್ಳುವ ಮೊತ್ತವನ್ನು ಅಂದಾಜಿಸಲಾಗಿದೆ. ಆಸ್ತಿಯನ್ನು ಸಾಗಿಸುವ ಮೊತ್ತವು ಮರುಪಡೆದುಕೊಳ್ಳುವ ಮೊತ್ತವನ್ನು ಮೀರಿದ ಸಂದರ್ಭಗಳಲ್ಲಿ ದುರ್ಬಲ ನಷ್ಟವನ್ನು ಗುರುತಿಸಲಾಗುತ್ತದೆ. ಮರುಪಡೆಯಬಹುದಾದ ಮೊತ್ತವು ನಿವ್ವಳ ಮಾರಾಟ ದರ ಮತ್ತು ಅವುಗಳ ಬಳಕೆಯ ಮೌಲ್ಯಕ್ಕಿಂತ ಹೆಚ್ಚಾಗಿದೆ. ಸೂಕ್ತ ರಿಯಾಯಿತಿ ಅಂಶದ ಆಧಾರದ ಮೇಲೆ ಅವುಗಳ ಪ್ರಸ್ತುತ ಮೌಲ್ಯಕ್ಕೆ ಭವಿಷ್ಯದ ನಗದು ಹರಿವುಗಳನ್ನು ರಿಯಾಯಿತಿ ಮಾಡುವ ಮೂಲಕ ಬಳಕೆಯಲ್ಲಿರುವ ಮೌಲ್ಯವನ್ನು ನಿಗದಿ ಮಾಡಲಾಗುತ್ತದೆ. ಹಿಂದಿನ ಲೆಕ್ಕಪತ್ರ ಅವಧಿಗಳಲ್ಲಿ ಒಂದು ಸ್ವತ್ತಿಗಾಗಿ ಗುರುತಿಸಲ್ಪಟ್ಟ ದುರ್ಬಲ ನಷ್ಟವು ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ ಅಥವಾ ಕಡಿಮೆಯಾಗಬಹುದೆಂಬ ಸೂಚನೆಯಿರುವಾಗ, ದುರ್ಬಲ ನಷ್ಟದ ಅಂತಹ ಹಿಮ್ಮುಖವು ಲಾಭ ಮತ್ತು ನಷ್ಟ ತಖ್ತೆಯಲ್ಲಿ ಗುರುತಿಸಲ್ಪಟ್ಟಿದೆ.

**1.20 ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳು:**

(ಎ) ಹಿಂದಿನ ವ್ಯವಹರಣೆಗಳ ನಿಮಿತ್ತ ನಿಗಮವು ಪ್ರಸಕ್ತ ಹೊಣೆಗಾರಿಕೆಗಳನ್ನು ಹೊಂದಿರುವ ಪ್ರಯುಕ್ತ ಆ ನಿಮಿತ್ತವಾಗಿ ಅವಕಾಶವನ್ನು ಸಮ್ಮತಿಸಲಾಗಿದ್ದು, ಅಂತಹ ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಸಂಪನ್ಮೂಲದ ಲಭ್ಯತೆಯು ಅವಶ್ಯವಾಗಿದ್ದು, ಆ ಮಟ್ಟಿಗೆ ಒಂದು ಭರವಸೆಪೂರ್ವಕ ಅಂದಾಜನ್ನು ಒದಗಿಸಬಹುದಾಗಿರುತ್ತದೆ. ಆಸ್ತಿ–ಹೊಣೆ ಪಟ್ಟಿ ದಿನಾಂಕದಂದಿಗೆ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವಾಗುವಂತೆ ಅತ್ಯುತ್ತಮ

ಅಂದಾಜನ್ನು ಆಧರಿಸಿ ಅವಕಾಶವನ್ನು ಗೊತ್ತುಪಡಿಸಲಾಗಿದೆ. ಇವನ್ನು ಪ್ರತಿ ಆಸ್ತಿ–ಹೊಣೆ ಪಟ್ಟಿ ದಿನಾಂಕದಂದು ಪರಿಶೀಲನೆಗೊಳಪಡಿಸಿ, ವ್ಯವಸ್ಥೆಯ ಪ್ರಸಕ್ತ ಅಂದಾಜನ್ನು ಬಿಂಬಿಸಲು ಹೊಂದಾಣಿಕೆ ಮಾಡಲಾಗುತ್ತದೆ.

(ಬಿ) ಸಾದಿಲ್ವಾರು ಹೊಣೆಗಾರಿಕೆಗಳನ್ನು ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಬಿಂಬಿಸಿಲ್ಲ, ಆದರೆ ಟಿಪ್ಪಣಿಗಳಲ್ಲಿ ಬಿಂಬಿಸಲಾಗಿದೆ. ಹಿಂದಿನ ಘಟನೆಗಳಿಂದ ಉಂಟಾದ ಸಂಭವನೀಯ ಬಾಧ್ಯತೆ ಸಾದಿಲ್ವಾರು ಹೊಣೆಗಾರಿಕೆಯಾಗಿದೆ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದು ಗುರುತಿಸಿರುವುದಿಲ್ಲ, ಏಕೆಂದರೆ (1) ಆರ್ಥಿಕ ಪ್ರಯೋಜನಗಳನ್ನು ಹೊಂದುವಂತಹ ಸಂಪನ್ಮೂಲಗಳ ಹೊರಹರಿವು ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಅಗತ್ಯವಿರುತ್ತದೆ ಎಂಬುದು ಸಂಭಾವ್ಯವಲ್ಲ ಅಥವಾ (2) ಹೊಣೆಗಾರಿಕೆಯ ಪ್ರಮಾಣವನ್ನು ಸಾಕಷ್ಟು ವಿಶ್ವಾಸಾರ್ಹತೆಯಿಂದ ಅಳೆಯಲಾಗುವುದಿಲ್ಲ.

(ಸಿ)ಸಾದಿಲ್ವಾರು ಆಸ್ತಿಗಳ ಹಿಂದಿನ ಕಾರ್ಯಕ್ರಮಗಳಿಂದ ಉದ್ಭವಿಸುವ ಒಂದು ಸಂಭವನೀಯ ಆಸ್ತಿ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ಧಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದನ್ನು ಆರ್ಥಿಕ ವಿವರಣಾ ಪಟ್ಟಿಯಲ್ಲಿ ಗುರುತಿಸಿರುವುದಿಲ್ಲ, ಆರ್ಥಿಕ ಪ್ರಯೋಜನಗಳ ಒಳಹರಿವು ಸಾಧ್ಯವಾದಾಗ ಸಾದಿಲ್ವಾರು ಆಸ್ತಿಗಳ ವಿವರಗಳನ್ನು ಟಿಪ್ಪಣಿಗಳಲ್ಲಿ ಬಹಿರಂಗಗೊಳಿಸಲಾಗುತ್ತದೆ.

(ಡಿ)ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳನ್ನು ಹಣಕಾಸು ವಿವರಣಾ ಪಟ್ಟಿಯಲ್ಲಿ ಸೂಕ್ತವಾಗಿ ಬಹಿರಂಗಪಡಿಸಲು/ಗುರುತಿಸಲು ನಿರಂತರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

**1.21 ಸ್ಪರ್ಶಾತೀತ ಆಸ್ತಿಗಳು**

ಸ್ಪರ್ಶಾತೀತ ಆಸ್ತಿಗಳ ವೆಚ್ಚವನ್ನು ಆರಂಭಿಕ ಗುರುತಿಸುವಿಕೆಯ ಮೇಲೆ ಅಳೆಯಲಾಗುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ, ಸ್ಪರ್ಶಾತೀತ ಆಸ್ತಿಗಳನ್ನು ಯಾವುದೇ ಸಂಗ್ರಹವಾದ ಭೋಗ್ಯ ಮತ್ತು ಸಂಗ್ರಹವಾದ ದುರ್ಬಲತೆ ನಷ್ಟಗಳಿಗೆ ಕಡಿಮೆ ವೆಚ್ಚದಲ್ಲಿ ಸಾಗಿಸಲಾಗುತ್ತದೆ. ಅಸ್ತಿತ್ವದಲ್ಲಿರುವ ಆಸ್ತಿಯಲ್ಲಿ ಸಾಕಾರಗೊಂಡ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ಹೆಚ್ಚಿಸಿದಾಗ ಮತ್ತು ಈಗಾಗಲೇ ನಿರೀಕ್ಷಿತ ಪ್ರಮಾಣದಲ್ಲಿ ಭೋಗ್ಯ ಪಡೆದಾಗ ಈಗಾಗಲೇ ಬಂಡವಾಳೀಕರಿಸಿದ ಸ್ಪರ್ಶಾತೀತ ಆಸ್ತಿಗಳ ನಂತರದ ಖರ್ಚು ದೊಡ್ಡದಾಗುತ್ತದೆ.

ಸ್ಪರ್ಶಾತೀತ ಆಸ್ತಿಗಳು ಶೀರ್ಷಿಕೆಯಡಿಯಲ್ಲಿ ಬಂಡವಾಳೀಕರಣಕ್ಕೆ ಅರ್ಹವಾದ ಖರ್ಚು, ಅಂತಹ ಸ್ವತ್ತುಗಳು ಅವುಗಳ ಉದ್ದೇಶಿತ ಬಳಕೆಗೆ ಸಿದ್ಧವಾಗುವವರೆಗೆ "ಅಭಿವೃದ್ಧಿಯ ಅಡಿಯಲ್ಲಿ ಸ್ಪರ್ಶಾತೀತ ಆಸ್ತಿಗಳು" ಎಂದು ಒಯ್ಯಲಾಗುತ್ತದೆ. ಸಂಶೋಧನೆಯ ವೆಚ್ಚವನ್ನು ಅದು ಮಾಡಿದಾಗ ಖರ್ಚು ಎಂದು ಗುರುತಿಸಲಾಗುತ್ತದೆ. IND AS38 'ಸ್ಪರ್ಶಾತೀತ ಆಸ್ತಿಗಳ' ಪ್ರಕಾರ ಅರ್ಹತಾ ಮಾನದಂಡಗಳನ್ನು ಪೂರೈಸಿದರೆ ಅಭಿವೃದ್ಧಿಯ ವೆಚ್ಚವನ್ನು ಸ್ಪರ್ಶಾತೀತ ಆಸ್ತಿ ಎಂದು ಗುರುತಿಸಲಾಗುತ್ತದೆ, ಇಲ್ಲದಿದ್ದರೆ ಅದನ್ನು ಖರ್ಚಾಗಿ ಗುರುತಿಸಲಾಗುತ್ತದೆ.

ಸ್ಪರ್ಶಾತೀತ ಆಸ್ತಿಯ ವಸ್ತುವನ್ನು ವಿಲೇವಾರಿ ಮಾಡಿದ ನಂತರ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದ ಯಾವುದೇ ಆರ್ಥಿಕ ಪ್ರಯೋಜನಗಳನ್ನು ನಿರೀಕ್ಷಿಸದಿದ್ದಾಗ ಗುರುತಿಸಲಾಗುತ್ತದೆ. ಸ್ಪರ್ಶಾತೀತ ಆಸ್ತಿಯ ಗುರುತಿಸುವಿಕೆಯಿಂದ ಉಂಟಾಗುವ ಲಾಭಗಳು ಅಥವಾ ನಷ್ಟಗಳನ್ನು ನಿವ್ವಳ ವಿಲೇವಾರಿ ಆದಾಯ ಮತ್ತು ಆಸ್ತಿಯ ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸವೆಂದು ಅಳೆಯಲಾಗುತ್ತದೆ ಮತ್ತು ಆಸ್ತಿಯನ್ನು ಗುರುತಿಸದಿದ್ದಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುತ್ತದೆ.

ಸ್ಪರ್ಶಾತೀತ ಆಸ್ತಿಯಂತೆ ಬಂಡವಾಳಕರಿಸಿದ ಸಾಫ್ಟ್‌ವೇರ್ ವೆಚ್ಚವನ್ನು ಅಂದಾಜು ಉಪಯುಕ್ತ ಜೀವನದ ಅವಧಿಯಲ್ಲಿ 'ಇಲ್ಲ' ಉಳಿದ ಮೌಲ್ಯದೊಂದಿಗೆ ಮನ್ನಿಸಲಾಗುತ್ತದೆ.

**1.22 ಆರ್ಥಿಕ ಸಾಧನಗಳು:**

ಒಂದು ಆರ್ಥಿಕ ಸಾಧನವು ಒಂದು ಘಟಕದ ಆರ್ಥಿಕ ಆಸ್ತಿಯ ಉಗಮವಾಗಿಸುವ ಒಂದು ಒಪ್ಪಂದ ಮತ್ತು ಆರ್ಥಿಕ ಹೊಣೆಗಾರಿಕೆ ಅಥವಾ ಮತ್ತೊಂದು ಘಟಕದ ಸ್ವಾಮ್ಯ ಸಾಧನವಾಗಿದೆ.

ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಸರಿದೂಗಿಸಲ್ಪಟ್ಟಿವೆ ಮತ್ತು ನಿವ್ವಳ ಮೊತ್ತ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಗುರುತಿಸಲಾದ ಮೊತ್ತವನ್ನು ಸರಿದೂಗಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಸ್ವತ್ತುಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸಲು ಉದ್ದೇಶಿಸಿದೆ.

ಆರ್ಥಿಕ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗೀಕರಣವನ್ನು ಕಂಪನಿಯು ಆರಂಭದಲ್ಲಿ ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಗಳಿಗಾಗಿ ಯಾವುದೇ ಮರುವರ್ಗೀಕರಣವನ್ನು ಮಾಡಲಾಗುವುದಿಲ್ಲ ಇದನ್ನು (ಎಫ್‌ವಿಟಿಒಸಿಐ) ಈ VTOCI ನಲ್ಲಿ ಸ್ವಾಮ್ಯ ಸಾಧನಗಳನ್ನಾಗಿ ವರ್ಗೀಕರಿಸಲಾಗಿದೆ ಮತ್ತು ಆರ್ಥಿಕ ಆಸ್ತಿಗಳು/ಹೊಣೆಗಾರಿಕೆಗಳನ್ನು (ಎಫ್‌ವಿಟಿಪಿಎಲ್) ನಲ್ಲಿ ನಿರ್ದಿಷ್ಟವಾಗಿ ಗೊತ್ತುಪಡಿಸಿದೆ. ಆದಾಗ್ಯೂ, ಇತರ ಆರ್ಥಿಕ ಆಸ್ತಿಗಳನ್ನು ಕಂಪನಿಯ ವ್ಯಾಪಾರಿ ಮಾದರಿಯಲ್ಲಿ ಬದಲಾವಣೆಯಾದ ಸಂದರ್ಭದಲ್ಲಿ ಮರುವರ್ಗೀಕರಿಸಬಹುದಾಗಿದೆ. ಕಂಪನಿಯು ಆರ್ಥಿಕ ಆಸ್ತಿಗಳನ್ನು ಮರುವರ್ಗೀಕರಿಸಿದಾಗ, ಅಂತಹ ಮರುವರ್ಗೀಕರಣಗಳನ್ನು ಮುಂದಿನ ವರದಿ ಅವಧಿಯ ಮೊದಲ ದಿನದಿಂದ ನಿರೀಕ್ಷಿತವಾಗಿ ಮಾಡಲಾಗುತ್ತದೆ. ಕಂಪನಿಯು ಹಿಂದೆ ಗುರುತಿಸಲಾದ ದುರ್ಬಲತೆ ಗಳಿಕೆಗಳು ಅಥವಾ ನಷ್ಟಗಳನ್ನೊಳಗೊಂಡಂತೆ ಯಾವುದೇ ಗಳಿಕೆಗಳು, ನಷ್ಟಗಳನ್ನು ಪುನರಾವರ್ತಿಸುವುದಿಲ್ಲ.

**ಎ. ಆರ್ಥಿಕ ಸ್ವತ್ತುಗಳು/ಆಸ್ತಿಗಳು**

ಆರ್ಥಿಕ ಸ್ವತ್ತುಗಳು ಸ್ವಾಮ್ಯ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗಳು, ವ್ಯಾಪಾರ ಸ್ವೀಕೃತಿಗಳು, ನಗದು ಮತ್ತು ನಗದು ಸಮಾನ ಮತ್ತು ಇತರ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತವೆ.

ಆ ಹಣಕಾಸಿನ ಸ್ವತ್ತುಗಳು ಮತ್ತು ಅದರ ಒಪ್ಪಂದದ ನಗದು ಹರಿವಿನ ಗುಣಲಕ್ಷಣಗಳನ್ನು ನಿರ್ವಹಿಸಲು ವ್ಯವಹಾರ ಮಾದರಿ (ಅಂದರೆ) ವ್ಯವಹಾರಗಳ ಸ್ವಭಾವವನ್ನು ಅವಲಂಬಿಸಿ, ಆರ್ಥಿಕ ಸ್ವತ್ತುಗಳನ್ನು ಮೊದಲಿಗೆ ನ್ಯಾಯೋಚಿತ ಮೌಲ್ಯದಲ್ಲಿ ಅಳೆಯಲಾಗುತ್ತದೆ ಮತ್ತು ತದನಂತರ ಈ ಕೆಳಗಿನವುಗಳಲ್ಲಿ ಅಳತೆ ಮತ್ತು ವರ್ಗೀಕರಣ ಮಾಡಲಾಗುತ್ತದೆ.

ಎ) ಋಣಮುಕ್ತತೆಯ ವೆಚ್ಚ; ಅಥವಾ

ಬಿ) ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ; ಅಥವಾ

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (ಎಫ್‌ವಿಟಿಪಿಎಲ್)

ಮಿತವ್ಯಯದ ವೆಚ್ಚವು ಪ್ರಾರಂಭದಲ್ಲಿ ಗುರುತಿಸಲಾದ ನ್ಯಾಯೋಚಿತ ಮೌಲ್ಯದ ವ್ಯವಹಾರ ವೆಚ್ಚದ ಹೊರೆಯ ಮೊತ್ತವನ್ನು ಹೆಚ್ಚು ಕಡಿಮೆ ಪ್ರತಿನಿಧಿಸುತ್ತದೆ.

ಭೋಗ್ಯ ವೆಚ್ಚವು ಆರಂಭಿಕ ಮಾನ್ಯತೆಯ ಮೇಲೆ ನ್ಯಾಯಯುತ ಮೌಲ್ಯದ ಜೊತೆಗೆ ಅಥಾವ ಕಳೆದ ವಹಿವಾಟು ವೆಚ್ಚದಲ್ಲಿ ಸಾಗಿಸುವ ಮೊತ್ತವನ್ನು ಪ್ರತಿನಿಧಿಸುತ್ತದೆ. ಆ ಪ್ರಕಾರವಾಗಿ, ಆ ಹಣಕಾಸು ಆಸ್ತಿಗಳನ್ನು ಹೊರತುಪಡಿಸಿ ಅದರ ಒಪ್ಪಂದದ ನಿಶ್ಚಿತ ದಿನಾಂಕಗಳಲ್ಲಿ ನಿರ್ದಿಷ್ಟ ನಗದು ಹರಿವು ಹೆಚ್ಚಳವಾಗಿಸುವುದನ್ನು ಹೊರತುಪಡಿಸಿ ಹಣಕಾಸು ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (ಎಫ್‌ವಿಟಿಪಿಎಲ್) ದಲ್ಲಿ ಮಾಪನ ಮಾಡಲಾಗುತ್ತದೆ, ಕೇವಲ ಅಸಲು ಮತ್ತು ಬಡ್ಡಿಯ ಮೇಲಿನ ಪಾವತಿಗಳನ್ನು ಮಾತ್ರ ಪ್ರತಿನಿಧಿಸುವದನ್ನು ವ್ಯವಹಾರದ ಮಾದರಿಯನ್ನು ಅವಲಂಬಿಸಿ ಈ ಕೆಳಗೆ ವಿವರಿಸಿದಂತೆ ಅಳೆಯಲಾಗುತ್ತದೆ.

| ವರ್ಗೀಕರಣ | ವ್ಯವಹಾರ ಮಾದರಿ |
|---|---|
| ಋಣ ಮುಕ್ತತೆಯ ವೆಚ್ಚ | ಕಂಪನಿಯ ಉದ್ದೇಶವು ಒಪ್ಪಂದದ ನಗದು ಹರಿವುಗಳನ್ನು ಅವಧಿ ಮುಕ್ತಾಯ/ ಪರಿಪಕ್ವದ ದಿನಾಂಕದ ವರೆಗೆ ಹಿಡಿದಿಟ್ಟುಕೊಳ್ಳುವುದು ಮತ್ತು ಸಂಗ್ರಹಿಸುವುದು ಆಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕಂಪನಿಯು ತನ್ನ ಒಪ್ಪಂದದ ಪರಿಪಕ್ವತೆಯ ಮುಂಚೆ ಅದರ ನ್ಯಾಯಯುತ ಮೌಲ್ಯ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧನಗಳನ್ನು ಮಾರಾಟ ಮಾಡಲು ಉದ್ದೇಶಿಸುವುದಿಲ್ಲ. |
| ಎಫ್‌ವಿಟಿಓಸಿಐ | ಕಂಪನಿಯ ಉದ್ದೇಶವು ತನ್ನ ಒಪ್ಪಂದದ ನಗದು ಹರಿವುಗಳನ್ನು ಸಂಗ್ರಹಿಸುವುದು ಮತ್ತು ಆರ್ಥಿಕ ಸ್ವತ್ತುಗಳನ್ನು ಮಾರಾಟ ಮಾಡುವುದಾಗಿದೆ. |

ಕಂಪನಿಯು ತನ್ನ ಹಣಕಾಸಿನ ಸ್ವತ್ತುಗಳನ್ನು ಮಾಪನಕ್ಕಾಗಿ ಈ ಕೆಳಗಿನಂತೆ ವರ್ಗೀಕರಿಸುತ್ತದೆ.

| ವರ್ಗೀಕರಣ | ಆರ್ಥಿಕ ಸ್ವತ್ತುಗಳ ಹೆಸರು |
|---|---|
| ಋಣ ಮುಕ್ತತೆಯ ವೆಚ್ಚ | ವ್ಯಾಪಾರ ಸಂದಾಯಗಳು, ಸಾಲಗಳು ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕರಿಸಬಹುದಾದ ಬಡ್ಡಿ, ತುಂಬದ ಆದಾಯ ಮತ್ತು ನಗದು ರೂಪದಲ್ಲಿ ವಸೂಲು ಮಾಡಬಹುದಾದ ಮುಂಗಡಗಳು. |
| ಎಫ್‌ವಿಟಿಓಸಿಐ | ಅಂತಹ ಯಾವುದೇ ವಸ್ತುಗಳು ಇಲ್ಲ |
| ಎಫ್‌ವಿಟಿಪಿಎಲ್ | ಅಂತಹ ಯಾವುದೇ ವಸ್ತುಗಳು ಇಲ್ಲ |

ನಗದು ಹರಿವುಗಳಿಗೆ ಒಪ್ಪಂದದ ಹಕ್ಕುಗಳ ಅವಧಿ ಮೀರಿದಾಗ ಅಥವಾ ಸದರಿ ಸ್ವತ್ತುಗಳನ್ನು ವರ್ಗಾವಣೆ ಮಾಡಿದಾಗ ಆರ್ಥಿಕ ಸ್ವತ್ತುಗಳನ್ನು ಅಮಾನ್ಯ (derecognize) ಗೊಳಿಸಲಾಗಿದೆ (ಅಂದರೆ) ಆರ್ಥಿಕ ವಿವರಣ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮೂರನೆಯ ವ್ಯಕ್ತಿಯೊಂದಿಗೆ ಆರ್ಥಿಕ ಸ್ವತ್ತಿನಿಂದ ಉಂಟಾಗುವ ನಗದು ಹರಿವುಗಳನ್ನು ಸರಿದೂಗಿಸಲು ಸಹ ಕಂಪನಿಯು ಸ್ವತ್ತುಗಳನ್ನು ಅಮಾನ್ಯ (derecognize) ಗೊಳಿಸುತ್ತದೆ ಮತ್ತು ವರ್ಗಾವಣೆಯ ನಂತರ:

ಎ) ಆರ್ಥಿಕ ಸ್ವತ್ತಿನ ಗಮನಾರ್ಹ ಅಪಾಯ ಮತ್ತು ಪ್ರತಿಫಲಗಳು, ಅಥವಾ

ಬಿ) ಆರ್ಥಿಕ ಸ್ವತ್ತಿನ ನಿಯಂತ್ರಣ

ಆದಾಗ್ಯೂ, ಕಂಪನಿಯು ವರ್ಗಾವಣೆಗೊಂಡ ಆರ್ಥಿಕ ಸ್ವತ್ತು ಮತ್ತು ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಅದರ ಮುಂದುವರಿದ ಒಳಗೊಳ್ಳುವಿಕೆಯ ಮಟ್ಟಿಗೆ ಗುರುತಿಸುತ್ತದೆ, ಅವುಗಳನ್ನು ಅವುಗಳ ಹಕ್ಕುಗಳು ಮತ್ತು ಆರ್ಥಿಕ ಸ್ವತ್ತಿನ ಬಾಧ್ಯತೆಗಳ ಆಧಾರದ ಮೇಲೆ ಅಳೆಯಲಾಗುತ್ತದೆ. ಕಂಪನಿಯು ಅಮಾನ್ಯ ಅವಶ್ಯಕತೆಗಳನ್ನು ಭವಿಷ್ಯಾನ್ವಯವಾಗಿ ಅನ್ವಯಿಸಿದೆ.

ಅದರ ಆರ್ಥಿಕ ಸ್ವತ್ತು ಅಥವಾ ಅದರ ಭಾಗಶ:, ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸವನ್ನು ಗುರುತಿಸುವ ದಿನಾಂಕದಂದು ಅಳತೆ ಮಾಡಲಾಗುವುದು ಮತ್ತು ಯಾವುದೇ ಹೊಸ ಸ್ವತ್ತು ಸೇರಿದಂತೆ ಸ್ವೀಕರಿಸಿದ ಮೊತ್ತವು (consideration) ಯಾವುದೇ ಹೊಸ ಹೊಣೆಗಾರಿಕೆಯನ್ನು ಕಡಿಮೆ ಪಡೆಯುತ್ತದೆ ಎಂದು ಪರಿಭಾವಿಸಲಾದುದನ್ನು ಲಾಭ ಮತ್ತು ನಷ್ಟ ವಿವರಣಾ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ.

ದುರ್ಬಲ ಉದ್ದೇಶಗಳಿಗಾಗಿ ಗಮನಾರ್ಹ ಆರ್ಥಿಕ ಸ್ವತ್ತುಗಳನ್ನು ಪ್ರತಿ ವರದಿಯ ದಿನಾಂಕದಂದು ವೈಯಕ್ತಿಕ ಆಧಾರದ

ಮೇಲೆ ಪರೀಕ್ಷಿಸಲಾಗುತ್ತದೆ. ಇತರ ಹಣಕಾಸು ಸ್ವತ್ತುಗಳನ್ನು ಸಾಮೂಹಿಕವಾಗಿ ಗುಂಪಿನಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ, ಅದು ಇದೇ ಕ್ರೆಡಿಟ್ ಅಪಾಯದ ಗುಣಲಕ್ಷಣಗಳನ್ನು ಹಂಚಿಕೊಳ್ಳುತ್ತದೆ. ಈ ಪ್ರಕಾರವಾಗಿ ದುರ್ಬಲಗೊಳಿಸುವ ಪರೀಕ್ಷೆಯನ್ನು ಈ ಕೆಳಗಿನ ಆಧಾರದ ಮೇಲೆ ಪೂರ್ವಾನ್ವಯವಾಗಿ ಮಾಡಲಾಗುತ್ತದೆ.

| ಆರ್ಥಿಕ ಸ್ವತ್ತುಗಳ ಹೆಸರು | ದುರ್ಬಲತೆ ಪರೀಕ್ಷಾ ವಿಧಾನ |
|---|---|
| ವ್ಯಾಪಾರ ಸ್ವೀಕೃತಿಗಳು | ನಿರೀಕ್ಷಿತ ಕ್ರೆಡಿಟ್ ನಷ್ಟ ಮಾದರಿಯನ್ನು ಅನ್ವಯಿಸಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟವು ಭವಿಷ್ಯದ ಆರ್ಥಿಕ ಪರಿಸ್ಥಿತಿಗಳ ಪ್ರಸ್ತುತ ಸ್ಥಿತಿಗತಿ ಮತ್ತು ಮುನ್ಸೂಚನೆಗಳನ್ನು ಪ್ರತಿಬಿಂಭಿಸುವ ಐತಿಹಾಸಿಕ ದರಗಳ ಆಧಾರದ ಮೇಲೆ ಅವಕಾಶವನ್ನು ಬಳಸಿಕೊಳ್ಳುವ ಮೂಲಕ ಸ್ವತ್ತುಗಳ ಜೀವಿತಾವಧಿ ಮೇಲೆ ನಿರೀಕ್ಷಿಸಲಾದ ಕ್ರೆಡಿಟ್ ನಷ್ಟವನ್ನು ಅಂದಾಜಿಸಲಾಗುವುದು. ಅದು ಉದ್ಯಮದ ಸ್ವರೂಪ, ಗ್ರಾಹಕರ ವಿಭಾಗ, ಹಿಂದಿನ ಕಾರಣ ಸ್ಥಿತಿ ಮತ್ತು ನಿರೀಕ್ಷಿತ ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಈ ಸ್ವತ್ತುಗಳಿಂದ ನಿರೀಕ್ಷಿಸಲಾದ ಲಾಭ ನಷ್ಟದ ಅಂದಾಜು ಮಾಡಲಾಗುವುದು. |
| ಇತರೆ ಹಣಕಾಸಿನ ಸ್ವತ್ತುಗಳು | ಸಾಲದ ಅಪಾಯವು ಗಮನಾರ್ಹವಾಗಿ ಹೆಚ್ಚಾಗದೆ ಇದ್ದಲ್ಲಿ, 12 ತಿಂಗಳಿನ ಇಸಿಎಲ್ ಅನ್ನು ಹಾನಿಯ ನಷ್ಟಕ್ಕಾಗಿ ಪೂರೈಸುವುದು. ಅಂಗೀಕಾರದ ಪ್ರಾರಂಭದಿಂದ ಸಾಲದ ಅಪಾಯದಲ್ಲಿ ಗಮನಾರ್ಹ ಬದಲಾವಣೆಯಾದಾಗ ಜೀವಿತಾವಧಿಯ ಪೂರ್ವ ನಿಯೋಜಿತ ಸಂಭವನೀಯತೆ ಆಧಾರದ ಮೇಲೆ ದುರ್ಬಳಕೆಯನ್ನು ಅಳೆಯಲಾಗುವುದು. ಆರಂಭಿಕ ಅಂಗೀಕಾರದಿಂದ ನಗದು ಲಾಭದ ಅಪಾಯದಲ್ಲಿ ಅಲ್ಲಿ ಧೀರ್ಘಕಾಲಿಕವಾಗಿ ಗಮನಾರ್ಹವಾಗಿ ಹೆಚ್ಚಳವಾಗಿರುವುದಿಲ್ಲ, ಒಂದು ವೇಳೆ, ನಂತರದ ಅವಧಿಯಲ್ಲಿ ಅಂತಹ ಪ್ರಕರಣದ ಲಾಭದ ಗುಣಮಟ್ಟದಲ್ಲಿ ಸುಧಾರಿಸುವುದು, ನಂತರ 12 ತಿಂಗಳಿನ ನಿರೀಕ್ಷಿತ ಲಾಭ ನಷ್ಟದ ಆಧಾರದ ಮೇಲೆ ನಷ್ಟದ ಹಾನಿ ಭರ್ತಿಯನ್ನು ಘಟಕವು ಹಿಂದಿರುಗಿಸುತ್ತದೆ. ಆದಾಗ್ಯೂ ಪಾವತಿಯಾಗದ ಆದಾಯವು ವ್ಯಾಪಾರದ ಕರಾರುಗಳಿರುವಂತೆ ಸಂಬಂಧದಲ್ಲಿ ನಷ್ಟದ ಪರೀಕ್ಷಾ ವಿಧಾನವನ್ನು ಬಳಸಿರುವುದು. |

**ಬಿ) ನಗದು ಮತ್ತು ತತ್ಸಮಾನಗಳು:**

ನಗದು ಹರಿವಿನ ಲೆಕ್ಕವಿವರಣೆಯಲ್ಲಿ ಮಂಡಿಸುವುದರ ಉದ್ದೇಶಕ್ಕಾಗಿ, ನಗದು ಮತ್ತು ತತ್ಸಮಾನಗಳನ್ನೊಳಗೊಂಡು ಕೈಯಲ್ಲಿರುವ ನಗದು, ಬ್ಯಾಂಕಿನಲ್ಲಿ ಠೇವಣಿ ಇಡಲಾದ ನಗದಿನೊಂದಿಗೆ ಹಣಕಾಸು ಸಂಸ್ಥೆಗಳು ಆಹ್ವಾನಿಸುವ ಇತರೆ ಅಲ್ಪಾವಧಿ ಠೇವಣಿಗಳು, ಹೆಚ್ಚಿನ ಚಾಲ್ತಿ ಹೂಡಿಕೆಗಳೊಂದಿಗೆ ಮೂರು ತಿಂಗಳಿನ ಮೂಲ ಮುಕ್ತಾಯ ಅವಧಿ ಅಥವಾ ಅದಕ್ಕೂ ಕಡಿಮೆ ಇರುವುದನ್ನು ನಗದು ಹಣವಾಗಿ ಪರಿವರ್ತಿಸುವುದು ಮತ್ತು ಮೌಲ್ಯದಲ್ಲಿನ ಬದಲಾವಣೆಗಳ ಗಮನಾರ್ಹವಲ್ಲದ ಅಪಾಯಕ್ಕೊಳಪಟ್ಟಿರುತ್ತವೆ.

**ಸಿ) ವ್ಯವಹಾರದ ಸ್ವೀಕೃತಿಗಳು:**

ವ್ಯವಹಾರ ಸ್ವೀಕೃತಿಯನ್ನು ಮೂಲತ ನ್ಯಾಯಯುತ ಬೆಲೆಯಲ್ಲಿ ಪರಿಗಣಿಸಲಾಗುತ್ತಿದ್ದು ತರುವಾಯ, ವ್ಯವಹಾರ ಸ್ವೀಕೃತಿಯನ್ನು ಪರಿಗಣಿಸುವಾಗ ತಗ್ಗಿದ ಬೆಲೆಯನ್ನು ಪರಿಣಾಮಕಾರಿ ಬಡ್ಡಿ ವಿಧಾನದನ್ವಯ, ದುರ್ಬಲತೆಯ ಅವಕಾಶಗಳನ್ನು ಕಡಿಮೆಗೊಳಿಸಿ ಬಿಂಬಿಸಲಾಗುವುದು.

**1.23 ಆರ್ಥಿಕ ಹೊಣೆಗಾರಿಕೆಗಳು:**

ಹಣಕಾಸಿನ ಹೊಣೆಗಾರಿಕೆಗಳು ಸಾಲಗಳು, ವ್ಯಾಪಾರ ಪಾವತಿಸಬೇಕಾದವುಗಳು ಮತ್ತು ಇತರ ಹಣಕಾಸಿನ

| ಮಾಪನಾ ಆಧಾರ | ಆರ್ಥಿಕ ಹೊಣೆಗಾರಿಕೆಗಳ ಹೆಸರು |
|---|---|
| ಋಣಮುಕ್ತತೆಯ ವೆಚ್ಚ | ಸಾಲಗಳು, ವ್ಯಾಪಾರ ಪಾವತಿ, ಬಡ್ಡಿ ಸಂಗ್ರಹ, ಭದ್ರತಾ ಠೇವಣಿ ಮತ್ತು ಇತರ ಹಣಕಾಸಿನ ಹೊಣೆಗಾರಿಕೆಗಳು ವ್ಯಾಪಾರಕ್ಕಾಗಿ ಅಲ್ಲ. |
| (ಎಫ್‌ವಿಟಿಪಿಎಲ್) | ಅಂತಹ ಯಾವುದೇ ವಸ್ತುಗಳು ಇಲ್ಲ |

# ಟಿಪ್ಪಣಿ 2 : ಆಸ್ತಿ ಸ್ಥಾವರ ಮತ್ತು ಉಪಕರಣ

(ಮೊಬಲಗು ರೂ.ಗಳಲ್ಲಿ)

| | | ಒಟ್ಟು ಆಸ್ತಿ | | | | | ಸವಕಳಿ | | | | | ನಿವ್ವಳ ಆಸ್ತಿ | |
|---|---|---|---|---|---|---|---|---|---|---|---|---|---|
| ವಿವರಗಳು | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2020 ರಂದು ಇದ್ದಂತೆ | ಸೇರ್ಪಡೆ | ಕಡಿತ / ಹೊಂದಾಣಿಕೆ | 31ನೇ ಮಾರ್ಚ್ 2021 ರಂದು ಇದ್ದಂತೆ | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2020 | ಸೇರ್ಪಡೆ | ಹಿಂದಿನ ಅವಧಿಯ ಹೊಂದಾಣಿಕೆ 2021 | ಕಡಿತ / ಹೊಂದಾಣಿಕೆ | 31ನೇ ಮಾರ್ಚ್ 2021 ರಂದು ಇದ್ದಂತೆ | 31ನೇ ಮಾರ್ಚ್ 2020 ರಂದು ಇದ್ದಂತೆ | 31ನೇ ಮಾರ್ಚ್ 2021 ರಂದು ಇದ್ದಂತೆ |
| ಭೂಮಿ ಮತ್ತು ಹಕ್ಕು | 10.1 | 376 48 12 220 | 72 61 67 838 | -55 24 34 262 | 393 85 45 796 | 12.1 | | | | | | 376 48 12 220 | 393 85 45 796 |
| ಗುತ್ತಿಗೆಯ ಅಡಿಯಲ್ಲಿ ಭೂಮಿ | 10.102 & 10.103 | 11 58 15 228 | | 60 46 70 746 | 72 04 85 974 | 12.102 | | 62 83 561 | | | 62 83 561 | 11 58 15 228 | 71 42 02 413 |
| ಕಟ್ಟಡಗಳು | 10.2 | 743 12 36 477 | 75 21 47 645 | 2 17 76 688 | 820 51 60 811 | 12.2 | 2 31 81 15 109 | 24 60 78 738 | | - 7 20 911 | 2 56 34 72 936 | 511 31 21 368 | 564 16 87 875 |
| ಹೈಡ್ರಾಲೆಕ್ಸ್ ವರ್ಕ್ಸ್ | 10.3 | 116 88 93 850 | 18 47 16 297 | 79 97 327 | 136 16 07 474 | 12.3 | 37 29 55 609 | 6 43 15 400 | | - 1 20 036 | 43 71 50 973 | 79 59 38 240 | 92 44 56 501 |
| ಇತರೆ ಸಿವಿಲ್ ಕಾಮಗಾರಿಗಳು | 10.4 | 208 57 33 713 | 60 62 38 865 | 72 94 463 | 269 92 67 041 | 12.4 | 35 44 98 124 | 9 91 94 743 | | 8 39 525 | 45 45 32 392 | 173 12 35 589 | 224 47 34 649 |
| ಸ್ಥಾವರ ಮತ್ತು ಯಂತ್ರೋ-ಪಕರಣಗಳು | 10.5 | 10466 57 06 188 | 1163 61 78 323 | -121 44 20 002 | 11508 74 64 507 | 12.5 | 44 86 35 48 833 | 5 03 14 17 596 | | - 68 17 95 128 | 49 21 31 71 301 | 5980 21 57 355 | 6587 42 93 206 |
| ಮಾರ್ಗಗಳು ಮತ್ತು ಕೇಬಲ್ ಜಾಲ | 10.6 | 10160 17 02 983 | 855 22 01 912 | -25 51 85 374 | 10989 87 19 522 | 12.6 | 36 87 38 33 272 | 5 03 65 22 799 | | - 15 91 94 869 | 41 75 11 61 202 | 6472 78 69 711 | 6814 75 58 320 |
| ವಾಹನಗಳು | 10.7 | 27 36 34 791 | | - 19 05 135 | 27 17 29 656 | 12.7 | 7 34 84 759 | 2 27 66 031 | | - 17 16 078 | 9 45 34 712 | 20 01 50 032 | 17 71 94 944 |
| ಪೀಠೋಪಕರಣಗಳು | 10.8 | 23 54 18 661 | 4 04 32 510 | - 17 52 958 | 27 40 98 213 | 12.8 | 11 20 07 557 | 1 47 34 994 | | - 16 92 521 | 12 50 50 030 | 12 34 11 104 | 14 90 48 183 |
| ಕಛೇರಿ ಸಲಕರಣೆಗಳು | 10.9 | 4 23 79 858 | 28 02 927 | - 43 37 670 | 4 08 45 115 | 12.9 | 1 79 59 633 | 21 56 364 | | - 27 03 543 | 1 74 12 454 | 2 44 20 225 | 2 34 32 661 |
| **ಒಟ್ಟು** | | **22138 53 33 969** | **2250 08 86 317** | **-138 82 96 177** | **24249 79 24 109** | | **8498 64 02 896** | **1052 34 70 226** | | **-84 71 03 561** | **9466 27 69 561** | **13639 89 31 072** | **14783 51 54 548** |
| **ಹಿಂದಿನ ವರ್ಷ** | | **19531 59 40 986** | **2128 11 99 912** | **-40 13 87 933** | **21619 57 52 966** | | **7548 04 82 097** | **951 15 78 523** | **-19 42 97 524** | **-29 13 58 219** | **8450 64 04 877** | **11983 54 58 889** | **13168 93 48 089** |

(ಮೊಬಲಗು ರೂ.ಗಳಲ್ಲಿ)

| | | ಒಟ್ಟು ಆಸ್ತಿ | | | | | ಸವಕಳಿ | | | | | | | ನಿವ್ವಳ ಆಸ್ತಿ | |
|---|---|---|---|---|---|---|---|---|---|---|---|---|---|---|---|
| ವಿವರಗಳು | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2020 ರಂದು ಇದ್ದಂತೆ | ಸೇರ್ಪಡೆ | ಕಡಿತ / ಹೊಂದಾಣಿಕೆ | 31ನೇ ಮಾರ್ಚ್ 2021 ರಂದು ಇದ್ದಂತೆ | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2020 | ಹಿಂದಿನ ಅವಧಿಯ ಹೊಂದಾಣಿಕೆ 2019 | 01 ನೇ ಏಪ್ರಿಲ್ 2019 ರಂದು ಇದ್ದಂತೆ | ಸೇರ್ಪಡೆ | ಹಿಂದಿನ ಅವಧಿಯ ಹೊಂದಾಣಿಕೆ 2020 | ಕಡಿತ/ಹೊಂದಾಣಿಕೆ | 31 ನೇ ಮಾರ್ಚ್ 2020 ರಂದು ಇದ್ದಂತೆ | 31 ನೇ ಮಾರ್ಚ್ 2019 ರಂದು ಇದ್ದಂತೆ | 31 ನೇ ಮಾರ್ಚ್ 2020 ರಂದು ಇದ್ದಂತೆ |
| ಭೂಮಿ ಮತ್ತು ಹಕ್ಕು | 10.1 | 350 23 72 939 | 25 52 67 805 | 71 71 476 | 376 48 12 220 | 12.1 | | | | | | | | 350 23 72 939 | 376 48 12 220 |
| ಗುತ್ತಿಗೆಯ ಅಡಿಯಲ್ಲಿ ಭೂಮಿ | 10.102 & 10.103 | 12 04 02 111 | 49 47 027 | - 95 33 910 | 11 58 15 228 | | - 7 58 109 | | - 7 58 109 | | | 7 58 109 | | 12 11 60 220 | 11 58 15 228 |
| ಕಟ್ಟಡಗಳು | 10.2 | 677 88 11 013 | 60 71 43 818 | 4 52 81 646 | 743 12 36 477 | 12.2 | 2 07 45 41 389 | | 207 45 41 389 | 22 08 73 503 | 87 25 838 | 1 39 74 379 | 231 81 15 109 | 470 42 69 624 | 511 31 21 368 |
| ಹೈಡ್ರಾಲೆಕ್ಸ್ ವರ್ಕ್ಸ್ | 10.3 | 104 13 45 593 | 12 66 87 085 | 8 61 171 | 116 88 93 850 | 12.3 | 32 04 69 878 | | 32 04 69 878 | 5 44 06 624 | 10 90 707 | - 30 11 600 | 37 29 55 609 | 72 08 75 715 | 79 59 38 240 |
| ಇತರೆ ಸಿವಿಲ್ ಕಾಮಗಾರಿಗಳು | 10.4 | 173 82 02 647 | 33 82 78 673 | 92 52 393 | 208 57 33 713 | 12.4 | 27 63 56 181 | | 27 63 56 181 | 7 04 60 911 | 76 37 036 | 43 996 | 35 44 98 124 | 146 18 46 466 | 173 12 35 589 |
| ಸ್ಥಾವರ ಮತ್ತು ಯಂತ್ರೋ-ಪಕರಣಗಳು | 10.5 | 9550 14 11 777 | 916 17 67 165 | 25 27 245 | 10466 57 06 188 | 12.5 | 40 48 17 60 667 | | 4048 17 60 667 | 4 53 14 97 700 | 26 23 49 153 | -41 20 58 687 | 4486 35 48 833 | 5501 96 51 110 | 5980 21 57 355 |
| ಮಾರ್ಗಗಳು ಮತ್ತು ಕೇಬಲ್ ಜಾಲ | 10.6 | 9127 43 99 668 | 1076 08 24 317 | -43 35 21 002 | 10160 17 02 983 | 12.6 | 32 13 95 18 327 | | 3213 95 18 327 | 4 59 70 45 079 | 19 99 75 196 | -6 27 05 330 | 3687 38 33 272 | 5913 48 81 341 | 6472 78 69 711 |
| ವಾಹನಗಳು | 10.7 | 27 27 27 348 | 34 49 534 | - 25 42 091 | 27 36 34 791 | 12.7 | 5 27 89 361 | | 5 27 89 361 | 2 29 83 284 | - 5 | - 22 87 881 | 7 34 84 759 | 21 99 37 987 | 20 01 50 032 |
| ಪೀಠೋಪಕರಣಗಳು | 10.8 | 23 69 11 655 | 1 70 92 919 | -1 85 85 913 | 23 54 18 661 | 12.8 | 11 85 88 830 | | 11 85 88 830 | 1 21 87 644 | 2 22 629 | -1 89 91 546 | 11 20 07 557 | 11 83 22 825 | 12 34 11 104 |
| ಕಛೇರಿ ಸಲಕರಣೆಗಳು | 10.9 | 3 89 37 237 | 57 41 569 | - 22 98 948 | 4 23 79 858 | 12.9 | 1 72 15 573 | | 1 72 15 573 | 21 23 778 | - 2 535 | - 13 77 183 | 1 79 59 633 | 2 17 21 664 | 2 44 20 225 |
| **ಒಟ್ಟು** | | **20050 55 21 988** | **2128 11 99 912** | **-40 13 87 933** | **22138 53 33 969** | | **7548 04 82 097** | | **7548 04 82 097** | **951 15 78 523** | **47 99 98 019** | **-48 56 55 743** | **8498 64 02 896** | **12502 50 39 891** | **13639 89 31 072** |
| **ಹಿಂದಿನ ವರ್ಷ** | | **15004 27 22 044** | **2325 82 18 393** | **-43 45 63 367** | **17286 63 77 070** | | **6010 89 98 511** | | | **732 39 28 315** | | **-30 29 28 703** | **6712 99 98 123** | **8993 37 23 533** | **10573 63 78 947** |

**ಟಿಪ್ಪಣಿ 2.1 – ಭೂಮಿ ದಾಖಲೆಗಳ ಸಮನ್ವಯ:**

ಕಂಪನಿಯು ಲೆಕ್ಕಘಟಕಗಳು ನಿರ್ವಹಿಸುತ್ತಿರುವ ಭೂದಾಖಲಾತಿ ಪತ್ರಗಳನ್ನು ಹಣಕಾಸಿನ ಹೇಳಿಕೆಗಳೊಂದಿಗೆ (ಗುತ್ತಿಗೆ ಭೂಮಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಲಭ್ಯವಿರುವ ಭೂಮಿಯ ಪರಿಮಾಣಾತ್ಮಕ ಮಾಹಿತಿಯನ್ನು ಒಳಗೊಂಡಂತೆ) ಸಮನ್ವಯಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

**ಟಿಪ್ಪಣಿ 2.2 – ಭೂಮಿ ಮತ್ತು ಹಕ್ಕು ದಾಖಲೆ ಪತ್ರ:**

ಎ) ನಿಗಮವು ಒಟ್ಟು 8335 ಎಕರೆ 100.70 ಗುಂಟೆ 1488 ಆವರಣಗಳನ್ನು ಆಸ್ತಿಕರಣಗೊಳಿಸಿದೆ, (198 ಎಕರೆ ಅರಣ್ಯ ಇಲಾಖೆಯಿಂದ ಗುತ್ತಿಗೆ ಪಡೆದ ಭೂಮಿ, 902 ಎಕರೆ 30.67 ಗುಂಟೆ ಸರ್ಕಾರಿ ಜಮೀನು ಮತ್ತು 36 ಎಕರೆ 37.40 ಗುಂಟೆ ಖಾಸಗಿ ಜಮೀನುಗಳನ್ನು ಒಳಪಡಿಸಲಾಗಿದೆ) ಮತ್ತು ಇದರಲ್ಲಿ 86.46 ಎಕರೆ 684.09 ಗುಂಟೆ ಕವಿಪ್ರನಿನಿಗೆ ಉಡುಗೊರೆಯಾಗಿ ಬಂದಿರುವುದು ಒಳಗೊಂಡಿದೆ. (ಹಿಂದಿನ ವರ್ಷ: 1405 ಆವರಣದ 8070 ಎಕರೆ 30.84 ಗುಂಟೆ (198 ಎಕರೆ 0.0 ಗುಂಟೆ ಅರಣ್ಯ ಇಲಾಖೆಯಿಂದ ಗುತ್ತಿಗೆ ಪಡೆದ ಭೂಮಿ, 857 ಎಕರೆ 23.63 ಗುಂಟೆ ಸರ್ಕಾರಿ ಜಮೀನು ಮತ್ತು 36 ಎಕರೆ 1.40 ಗುಂಟೆ ಖಾಸಗಿ ಜಮೀನುಗಳನ್ನು ಒಳಪಡಿಸಲಾಗಿದೆ) ಮತ್ತು ಕವಿಪ್ರನಿನಿ ಗೆ ಉಡುಗೊರೆಯಾಗಿ 86.46 ಎಕರೆ 684.09 ಗುಂಟೆ ಭೂಮಿಯನ್ನು ಒಳಗೊಂಡಿದೆ.

1) ಹಕ್ಕು ಪತ್ರವನ್ನು ಒಳಗೊಂಡಂತೆ ಭೂ ದಾಖಲೆಗಳನ್ನು ನವೀಕರಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

2) 1405 ಆವರಣಗಳಲ್ಲಿ 826 ಆವರಣಗಳಿಗೆ ಸಂಬಂಧಿಸಿದ ಸಂಪೂರ್ಣ ದಾಖಲಾತಿಗಳು ಲಭ್ಯವಿದೆ. (ಹಿಂದಿನ ವರ್ಷ : 1365 ಆವರಣಗಳಲ್ಲಿ 826 ಆವರಣಗಳಿಗೆ ಸಂಪೂರ್ಣ ದಾಖಲೆ ಲಭ್ಯವಿದೆ) ನಿಗಮವು ಸಂಬಂಧಿಸಿದ ಕಂದಾಯ ಇಲಾಖೆಯವರೊಂದಿಗೆ ಸಂಪರ್ಕದಲ್ಲಿದ್ದು ಕಂಪನಿಯ ಪರವಾಗಿ, ಒಳಿದ ಆವರಣಗಳಿಗೆ ದಾಖಲಾತಿಗಳನ್ನು ಪೂರ್ಣಗೊಳಿಸುವ ಪ್ರಕ್ರಿಯೆಯೂ ಜಾರಿಯಲ್ಲಿರುತ್ತದೆ.

3) 8070 ಎಕರೆಗಳಲ್ಲಿ 30.84 ಗುಂಟೆ ಭೂಮಿಯಲ್ಲಿ 152.42 ಎಕರೆ 409.63 ಗುಂಟೆ (ಹಿಂದಿನ ವರ್ಷ: 7896 ಎಕರೆ 64.60 ಗುಂಟೆ, 189.42 ಎಕರೆ 387.35 ಗುಂಟೆ) ಭೂಮಿಯನ್ನು ಇತರರು ಆಕ್ರಮಿಸಿಕೊಂಡಿರುತ್ತಾರೆ. ಭೂಮಿಯನ್ನು ಮರು ಸ್ವಾಧೀನಪಡಿಸಿಕೊಳ್ಳಲು ಕಾನೂನು ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಬಿ) ಭೂಮಿ ಮತ್ತು ಹಕ್ಕುಗಳು ಸಂಬಂಧಿತ ಪಕ್ಷಗಳು ಸೇರಿದಂತೆ ವಿವಿಧ ಘಟಕಗಳಿಗೆ ಆಪರೇಟಿಂಗ್ ಲೀಸ್‌ನಲ್ಲಿ ನೀಡಲಾದ ಕೆಲವು ಭೂಮಿಯನ್ನು ಒಳಗೊಂಡಿರುತ್ತದೆ.

ಸಿ) ಕಂಪನಿಯು ರಾಜ್ಯದ್ಯಂತ ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ನಿರ್ಮಾಣಕ್ಕಾಗಿ ಕರ್ನಾಟಕ ಸರ್ಕಾರದಿಂದ (GoK) ವಿವಿಧ ಭೂಮಿಯನ್ನು ಪಡೆದುಕೊಂಡಿದೆ. ಕರ್ನಾಟಕ ಸರ್ಕಾರ ಕಂಪನಿಗೆ ಹಕ್ಕು ಪತ್ರಗಳ ಬದಲಿಗೆ ಸ್ವಾಧೀನ ಪ್ರಮಾಣಪತ್ರವನ್ನು ನೀಡಿದೆ.

ಡಿ) ರೂ. 6,67,00,000/– ಗೆ ಜಮೀನನ್ನು ಕೆಐಎಡಿಬಿಯಿಂದ ಗುತ್ತಿಗೆ ಮತ್ತು ಕ್ರಯದ ಒಪ್ಪಂದದ ಮೇರೆಗೆ ದಿನಾಂಕ: 13.10.2011 ರ ಪ್ರಕಾರ ನೀಡಲಾಗಿದೆ. ಗುತ್ತಿಗೆಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರಗುತ್ತಿಗೆ ಅವಧಿಯ ಮುಗಿಯುವ ವೇಳೆಗೆ ಕವಿಪ್ರನಿನಿಯ ಹೆಸರಿಗೆ ನೋಂದಾಯಿಸಬೇಕಾಗುತ್ತದೆ. (ಅಂತಿಮ ಪರಿಗಣನೆಯ ನಿರ್ಣಯ ಬಾಕಿಯಿದೆ)

ಇ) ಗುತ್ತಿಗೆ ಅಡಿಯಲ್ಲಿ ಇರುವ 252.23 ಎಕರೆ ಭೂಮಿಯನ್ನು ರೂ.537970746/– ಗಳನ್ನು ಪಾವತಿಸಿ ಕೆಐಎಡಿಬಿ ಯಿಂದ ದಿ: 03.03.2017 ರಂದು ಗುತ್ತಿಗೆ ಕರಾರು ಒಪ್ಪಂದದ ಮೇರೆಗೆ 99 ವರ್ಷಗಳ ಗುತ್ತಿಗೆ ಅವಧಿಗೆ ಸ್ವಾಧೀನ ಪಡಿಸಕೊಳ್ಳಲಾಗಿತ್ತು. ಕರ್ನಾಟಕ ಸರ್ಕಾರದ ಅಧಿಸೂಚನೆ ದಿ: 09.03.2017 CI 15 SPQ 2017 ರಪ್ರಕಾರ, ಅಸ್ತಿತ್ವದಲ್ಲಿರುವ 99 ವರ್ಷಗಳ ಲೀಸ್‌ಅನ್ನು "ಲೀಸ್‌ಕಮ್ ಸೇಲ್ ಅವಧಿಯನ್ನು ಕನಿಷ್ಠ ಎರಡು ವರ್ಷಗಳವರೆಗೆ ನಿಗದಿಪಡಿಸಲಾಗಿದೆ ಮತ್ತು ಮಾರಾಟ ಪತ್ರವನ್ನು ಅನುಷ್ಠಾನದ ನಂತರ ಕಾರ್ಯಗತಗೊಳಿಸಲಾಗುತ್ತದೆ". ಎಂದು ಆದೇಶವನ್ನು ಹೊರಡಿಸಿದೆ. ಯೋಜನೆ ಮತ್ತು ಭೂಮಿಯ ತೃಪ್ತಿದಾಯಕ ಬಳಕೆ ಕೆಐಎಡಿಬಿ ಜೊತೆಗಿನ ಮೂಲ ಗುತ್ತಿಗೆ ಒಪ್ಪಂದಕ್ಕೆ ತಿದ್ದುಪಡಿ ಮಾಡಲು ಮುಂದಿನ ಕ್ರಮವನ್ನು ಪರಿಶೀಲಿಸುವ ಪ್ರಕ್ರಿಯೆಯಲ್ಲಿ ನಿರ್ವಹಣೆಯಲ್ಲಿದೆ. ಮಾರಟ ಪತ್ರವನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಹೆಚ್ಚಿನ ಹೊಂದಾಣಿಕೆಯನ್ನು

ಕೈಗೊಳ್ಳಲಾಗುತ್ತದೆ.

ಎಫ್) ಕರ್ನಾಟಕ ಸರ್ಕಾರವು ಕವಿಪ್ರನಿನಿಗೆ ವಿದ್ಯುತ್ ಉಪಕೇಂದ್ರದ ನಿರ್ಮಾಣಕ್ಕಾಗಿ, ರಿಯಾಯಿತಿ ದರದಲ್ಲಿ/ಉಚಿತದರದಲ್ಲಿ ಭೂಮಿಯನ್ನು ನೀಡಲಾಗಿದ್ದು, ದಿನಾಂಕ 20 ಸಪ್ಟೆಂಬರ್ 2018 ರ ಕಂಪನಿ (ಭಾರತೀಯ ಲೆಕ್ಕಪತ್ರ ಮಾನದಂಡ)ಯ ಎರಡನೇ ತಿದ್ದುಪಡಿ ನಿಯಮ, 2018 ಎಂಸಿಎ ಅಧಿಸೂಚನೆ ಪ್ರಕರ ಇದನ್ನು ನ್ಯಾಯಯುತ ಮೌಲ್ಯದಲ್ಲಿ ಲೆಕ್ಕೀಕರಿಸಲಾಗುವುದಿಲ್ಲ. ಕವಿಪ್ರನಿನಿಯು ಹಲವು ಪ್ರಕರಣಗಳಲ್ಲಿ ನಾಮಮಾತ್ರ/ನ್ಯಾಯಯುತ ಮೌಲ್ಯದಲ್ಲಿ ಗುರುತಿಸಲ್ಪಟ್ಟ ಭೂಮಿಯನ್ನುಇತರರಿಂದ ಉಚಿತವಾಗಿ ಪಡೆದಿರುತ್ತದೆ.

ಜಿ) ಬಳ್ಳಾರಿಯಲ್ಲಿ 9.62 ಎಕರೆ ಮೊತ್ತ ರೂ. 1,81,97,477/– ಯಷ್ಟು ಭೂಮಿಯು ಕವಿಪ್ರನಿನಿಯ ಸ್ವಾಧೀನದಲ್ಲಿದ್ದು, ಸದರಿ ಭೂಮಿಯ ಹಕ್ಕು ಪತ್ರವು ಇನ್ನೂ ಕವಿಪ್ರನಿನಿಗೆ ವರ್ಗಾಹಿಸುವ ಪ್ರಕ್ರಿಯೆಯು ಬಾಕಿಯಿದೆ.

ಎಚ್) ಕಂಪನಿಯು 110 (31ನೇ ಮಾರ್ಚ್2020 : 111 ಪ್ರಕರಣಗಳು) ಪ್ರಕರಣಗಳಲ್ಲಿ 325 ಎಕರೆ 1252.09 ಗುಂಟೆ (31ನೇ ಮಾರ್ಚ್ 2020: 327.16 ಎಕರೆ 1230.09 ಗುಂಟೆ) ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದ್ದು, ಕಂಪನಿಯು ಸದರಿ ಪ್ರಕರಣಗಳಿಗೆ ಒಪ್ಪಂದಕ್ಕೆ ಸಹಿ ಹಾಕುವ ಪ್ರಕ್ರಿಯೆ ಹಂತದಲ್ಲಿದೆ. ಕಂಪನಿಯು ಅಂತಹ ಭೂಮಿಯನ್ನು ಗುರುತಿಸುವ ಪ್ರಕ್ರಿಯೆಯಲ್ಲಿದೆ ಮತ್ತು ಗುತ್ತಿಗೆ ಒಪ್ಪಂದಗಳನ್ನು ನಮೂದಿಸಿದ ನಂತರ ಹೊಂದಾಣಿಕೆ ನಮೂದನ್ನು ಸಹ ಮಾಡಲಾಗುವುದು.

ಐ) ಕಂಪನಿಯು 18 (31ನೇ ಮಾರ್ಚ್2020 : 15 ಪ್ರಕರಣಗಳು) ಪ್ರಕರಣಗಳಲ್ಲಿ ಗುತ್ತಿಗೆಗೆ ಆಧಾರದಲ್ಲಿ ನೀಡಲಾಗಿರುವ 01 ಎಕರೆ 938.37 ಗುಂಟೆ (31ನೇ ಮಾರ್ಚ್ 2020: 0.741 ಎಕರೆ 174.37 ಗುಂಟೆ) ಭೂಮಿಯನ್ನು ಒಪ್ಪಂದಕ್ಕೆ ಸಹಿ ಹಾಕುವ ಪ್ರಕ್ರಿಯೆ ಹಂತದಲ್ಲಿದೆ. ಕಂಪನಿಯು ಅಂತಹ ಭೂಮಿಯನ್ನು ಗುರುತಿಸುವ ಪ್ರಕ್ರಿಯೆಯಲ್ಲಿದೆ ಮತ್ತು ಗುತ್ತಿಗೆ ಒಪ್ಪಂದಗಳನ್ನು ನಮೂದಿಸಿದ ನಂತರ ಹೊಂದಾಣಿಕೆ ನಮೂದನ್ನು ಸಹ ಮಾಡಲಾಗುವುದು.

ಜೆ) ಸ್ವತಂತ್ರ ವಿದ್ಯುತ್ ಉತ್ಪಾದಕರು ಮತ್ತು ಇತರ ಗ್ರಾಹಕರು ಟರ್ಮಿನಲ್ ಬೇ ಗಳ ನಿರ್ಮಾಣ, ಸ್ಥಾವರಗಳು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಸ್ವಯಂ ಕಾರ್ಯನಿರ್ವಹಣೆ ಆಧಾರದ ಮೇಲೆ ನಿರ್ಮಿಸುತ್ತಿದ್ದಾರೆ ಮತ್ತು ಸ್ವತ್ತುಗಳನ್ನು ಕೆಪಿಟಿಸಿಎಲ್‌ಗೆ ಹಸ್ತಾಂತರಿಸುತ್ತಿದ್ದಾರೆ. ಅಂತಹ ಸ್ವಯಂ–ಕಾರ್ಯನಿರ್ವಹಣೆಯ ಕಾರ್ಯಗಳಿಗೆ ಸಂಬಂಧಿಸಿದ ಭೂಮಿಯನ್ನು ಸ್ವಾಧಿನ ಪಡಿಸಿಕೊಳ್ಳುವುದು ಕೆಪಿಟಿಸಿಎಲ್ ಮತ್ತು ಕವಿಪ್ರನಿನಿ ಪರವಾಗಿ ಶೀರ್ಷಿಕೆ ಪತ್ರದ ವರ್ಗಾವಣೆ ಪ್ರಗತಿಯಲ್ಲಿದೆ. ಕಂಪನಿಗೆ ಭೂಮಿಯನ್ನು ಹಸ್ತಾಂತರಿಸಿದ ನಂತರ ಹೊಂದಾಣಿಕೆ ನಮೂದನ್ನು ಪಾಸ್ ಮಾಡಲಾಗುವುದು.

**ಟಿಪ್ಪಣಿ 2.3–ಭೂಮಿ ಮತ್ತು ಕಟ್ಟಡಗಳು:**

ಕವಿಪ್ರನಿನಿಯು ವಿಭಜಿಸುವ ಸಮಯದಲ್ಲಿ ಭೂಮಿ ಮತ್ತು ಕಟ್ಟಡಗಳು (ಪವರ್ ಹೌಸ್‌ಗಳನ್ನು ಒಳಗೊಂಡಂತೆ ಆದರೆ ಸ್ಥಾಪನೆಗಳನ್ನು ಹೊರತುಪಡಿಸಿ) ಕರ್ನಾಟಕ ಸರ್ಕಾರವು ನೀಡಿದ ಬ್ಯಾಲನ್ಸ್ ಶೀಟ್ ಪುನರ್‌ರಚಾನ ಕಾರ್ಯಕ್ರಮದ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ. ನಿಗಮದ ಹೆಸರಿಗೆ ಕೆಲವು ಆಸ್ತಿಗಳ ರೂ.41,03,69,016/– (ಹಿಂದಿನ ವರ್ಷರೂ 41,03,,69,016) ವರ್ಗಾವಣೆಗಾಗಿ ಕೈಗೊಳ್ಳಬೇಕಾದ ಪ್ರಕ್ರಿಯೆಯು ಬಾಕಿ ಇರುತ್ತದೆ.

ಕೆಲವು ಪ್ರಕರಣಗಳಲ್ಲಿ ಎಸ್ಕಾಂಗಳ ಅಸ್ತಿತ್ವದಲ್ಲಿರುವ 33 ಕೆವಿ ಕೇಂದ್ರಗಳನ್ನು 66ಕೆವಿ ಮತ್ತು ಇತರ ಹೆಚ್ಚಿನ ಸಾಮರ್ಥ್ಯದ ಕೇಂದ್ರಗಳಿಗೆ ಹೆಚ್ಚಿಸಲಾಗುತ್ತಿದೆ ಮತ್ತು ಕವಿಪ್ರನಿನಿಯು ಸ್ವಾಧೀನ ಪಡಿಸಿಕೊಳ್ಳುತ್ತಿದೆ. ಕೆಲವು ಪ್ರಕರಣಗಳಲ್ಲಿ ಭೂ ಗುತ್ತಿಗೆ ಒಪ್ಪಂದವನ್ನು ಎಸ್ಕಾಂಗಳೊಂದಿಗೆ ಇನ್ನೂ ಕಾರ್ಯಗತಗೊಳಿಸಬೇಕಾಗಿದೆ ಹಾಗೂ ಗುತ್ತಿಗೆ ಬಾಡಿಗೆಯನ್ನು ಎಸ್ಕಾಂಗಳಿಗೆ ಪವತಿಸಬೇಕಾಗಿದೆ. ಅಂತಹ ದಸ್ತಾವೇಜನ್ನು ಪೂರ್ಣಗೊಳಿಸಿದ ನಂತರ ಅಗತ್ಯ ಹೊಂದಾಣಿಕೆಗಳನ್ನು ಕೈಗೊಳ್ಳಲಾಗುವುದು.

**ಟಿಪ್ಪಣಿ 2.3 ಎ–ಗುತ್ತಿಗೆಯಅಡಿಯಲ್ಲಿ ಭೂಮಿ:**

ಕಂಪನಿಯು ಆಪರೇಟಿಂಗ್ ಲೀಸ್‌ನಲ್ಲಿ ತೆಗೆದುಕೊಂಡ ಸ್ವತ್ತುಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿದೆ ಅದನ್ನೂ ಪೂರ್ಣಗೊಳಿಸಿದ ನಂತರ ಕಂಪನಿಯು Ind AS 116 ರಲ್ಲಿ

ನಿರ್ದಿಷ್ಟಪಡಿಸಿದಂತೆ ಬಳಕೆಯ ಆಸ್ತಿಯ ಹಕ್ಕಿನ ಖಾತೆಗೆ ಲೆಕ್ಕ ನಮೂದು ಮಾಡಲಾಗುವುದು.

**ಟಿಪ್ಪಣಿ 2.4–ಸ್ಥಾವರ ಮತ್ತು ಯಂತ್ರೋಪಕರಣಗಳು:**

ಎ) ಸ್ಥಾವರ ಮತ್ತು ಯಂತ್ರೋಪಕರಣಗಳ ಮೊತ್ತದಲ್ಲಿ ರೂ.47,01,29,660/–ಗಳನ್ನು ಐಡಿಬಿಐ ನಿಂದ ಗುತ್ತಿಗೆ ಆಧಾರದಲ್ಲಿ ಪಡೆದ ಆಸ್ತಿಗಳನ್ನು ಹೊರತುಪಡಿಸಿ ಐಡಿಬಿಐ ನ ದಿನಾಂಕ 29.03.1996ರ ಒಪ್ಪಂದದ ಗುತ್ತಿಗೆ ಅವಧಿಯು ಮುಗಿಯುತ್ತಿದ್ದಂತೆ ಗುತ್ತಿಗೆ ಒಪ್ಪಂದವನ್ನು ಮುಕ್ತಾಯಗೊಳಿಸುವುದಕ್ಕಾಗಿ ಮತ್ತು ಆಸ್ತಿಗಳ ಮರು ಸ್ವಾಧೀನತೆಗಾಗಿ ಸಮಾಲೋಚನೆಗಳು ಮುಂದುವರೆದಿವೆ. ಗುತ್ತಿಗೆದಾರನು ಆಸ್ತಿಗಳ ಮೇಲಿನ ಹಕ್ಕನು ವರ್ಗಾಯಿಸಲು ರೂ.1,12,50,000/–(ಎಸ್ಕಾಂಗಳ ಸ್ವಾಧೀನದಲ್ಲಿರುವ ರೂ.59,60,000/– ಮೌಲ್ಯದ ಆಸ್ತಿಗಳನ್ನು ಒಳಗೊಂಡಂತೆ) ಮೊತ್ತವನ್ನು ಕೇಳಿದ್ದಾರೆ, ನಿಗಮವು ಈ ಪ್ರಸ್ತಾವನೆಗೆ ಇನ್ನು ಒಪ್ಪಿಗೆ ನೀಡಿರುವುದಿಲ್ಲ. ಮೌಲ್ಯ ಇತ್ಯರ್ಥವಾದ ನಂತರ ದಿನಾಂಕ 31.12.2003 ರಿಂದ ಪ್ರಾಥಮಿಕ ಹಂತದ ಗುತ್ತಿಗೆ ಅವಧಿಯು ಮುಗಿದ ದಿನದಿಂದ ಬಂಡವಾಳೀಕರಣ ಮತ್ತು ಸವಕಳಿಗೆ ಸಂಬಂಧಪಟ್ಟಂತೆ ಸೂಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಕಂಪನಿಯ ಸದರಿ ಆಸ್ತಿಗಳ ಸದ್ಯದ ಮೌಲ್ಯವನ್ನು ಮೌಲ್ಯಧಾರಿತ ವರದಿಗಾರರಿಂದ ಪಡೆದುಕೊಂಡಿರುವುದಿಲ್ಲ.

ಬಿ) ಸ್ಥಾವರ ಮತ್ತು ಯಂತ್ರೋಪಕರಣಗಳು ಒಪ್ಪಂದದ ಅವಧಿಯ ನಂತರ ಕಂಪನಿಯು ಉಳಿಸಿಕೊಂಡಿರುವ ಐಎನ್‌ಜಿ ವೈಶ್ಯ ಬ್ಯಾಂಕ್‌ನಿಂದ (ಈಗ ಕೋಟಕ್ ಮಹೀಂದ್ರಾ ಬಿ) ಮಾರಾಟ ಮಾಡಿದ ಮತ್ತು ಗುತ್ತಿಗೆ ಪಡೆದ ಆಸ್ತಿಗಳ ವೆಚ್ಚವನ್ನು ಒಳಗೊಂಡಿಲ್ಲ, ಏಕೆಂದರೆ ಸ್ವತ್ತುಗಳು ಅವುಗಳ ಉಳಿಕೆ ಮೌಲ್ಯವನ್ನು ತಲುಪಿದೆ ಮತ್ತು ಹಿಂದಿನ ಕೆಇಬಿ ಅವಧಿಗೆ ಸಂಬಂಧಿಸಿದೆ ಮತ್ತು ಅಂತಹ ಸ್ವತ್ತುಗಳ ನಿಖರವಾದ ಸ್ಥಳವನ್ನು ಗುರುತಿಸಲಾಗುವುದಿಲ್ಲ.

ಸಿ) ಎನ್‌ಜೆವೈ ಯೋಜನೆಯಡಿಯಲ್ಲಿ ಕವಿಪ್ರನಿನಿ ಯ ವಿವಿಧ ಸ್ಟೇಷನ್‌ಗಳಲ್ಲಿ ಅಳವಡಿಸಲಾಗಿರುವ ಹೆಚ್ಚುವರಿ ಸ್ವಿಚ್‌ಗೇರ್ ಗಳು ಮತ್ತು ಇತರ ಸಲಕರಣೆಗಳನ್ನು ಒಳಗೊಂಡಿದೆ.

ಡಿ) ಜಂಟಿ ದಾಸ್ತಾನು ಪೂರ್ಣಗೊಂಡ ನಂತರ ಸ್ವಯಂ ನಿರ್ವಹಣೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು ಕಾರ್ಯಾರಂಭ ಮಾಡಲಾಗಿದೆ.

ಇ) ಈ ವರ್ಷದಲ್ಲಿ ಕಾರ್ಯರಂಭಿಸಿದ ಕೆಲವು ನಿರ್ದಿಷ್ಟ ಯೋಜನೆಗಳಿಗೆ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟೋರೇಟ್ ರವರಿಂದ ಅನುಮೋದನೆ ಪಡೆಯುವ ಪ್ರಕ್ರಿಯೆಯನ್ನು ಕಂಪನಿಯು ಆರಂಭಿಸಿದೆ.

ಎಫ್) ಸಾಮಾನ್ಯವಾಗಿ, ಅಂತಿಮ ಅನುಮೋದಿತ ವಿನ್ಯಾಸದ ಪ್ರಕಾರ ಡಿಡಬ್ಲ್ಯೂಎ (DWA) ಪ್ರಕಾರ ಮೂಲ ವಿನ್ಯಾಸವನ್ನು ಬದಲಾಯಿಸಲಾಗುವುದಿಲ್ಲ, ಇದು ಹೆಚ್ಚಿನ ಪ್ರಮಾಣದಲ್ಲಿ ವಿತರಣೆ ಮತ್ತು ಗುತ್ತಿಗೆದಾರರಿಗೆ ಹೆಚ್ಚಿನ ಪಾವತಿಗಳನ್ನು ಮಾಡುತ್ತದೆ. ಇದು ಹೆಚ್ಚುವರಿ ಸವಕಳಿಯೊಂದಿಗೆ ಹೆಚ್ಚುವರಿ ವರ್ಗೀಕರಣ/ ಬಂಡವಾಳೀಕರಣ ಮತ್ತು ಸಿಡಬ್ಲ್ಯುಐಪಿಗೆ ಕಾರಣವಾಗುತ್ತದೆ/ಆದಾಗ್ಯೂ, ಅಂತಿಮ ಪ್ರಮಾಣ ಬದಲಾವಣೆಯ ಮಸೂದೆಯಲ್ಲಿ ಇದನ್ನು ಗುತ್ತಿಗೆದಾರರಿಂದ ಮರು ಪಡೆಯಲಾಗುತ್ತಿದೆ ಮತ್ತು ತರುವಾಯ ಎಲ್ಲಾ ಖಾತೆಯ ಮುಖ್ಯಸ್ಥರಿಗೆ ಅಗತ್ಯವಾದ ತಿದ್ದುಪಡಿ ನಮೂದುಗಳನ್ನು ಸಿ ರಿಜಿಸ್ಟರ್ ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ.

ಜಿ) ITB ಯ ಷರತ್ತು ಸಂಖ್ಯೆ 15.1, 111 ರ ಪ್ರಕಾರ, IEEMA ಪ್ರಕಾರ ನಿರ್ಮಾಣದ ಭಾಗದ ಬೆಲೆ ಬದಲಾವಣೆಯನ್ನು ಪಾವತಿಸಲಾಗುತ್ತಿದೆ. ವಿವರವಾದ ಸುತ್ತೋಲೆ ವೈಡ್ ಸಂಖ್ಯೆ ಕೆಪಿಟಿಸಿಎಲ್/ಬಿ8/ 2344/09–10(10) ದಿನಾಂಕ 08.02.2019 ಮತ್ತು ಕೆಪಿಟಿಸಿಎಲ್/ಬಿ8/2344/09–10(11) ದಿನಾಂಕ: 15.07.2011 ವಿವಿಧ ನಿರ್ಮಾಣಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಬೆಲೆ ಬದಲಾವಣೆಯ ಪ್ರವೇಶವನ್ನು ಸ್ಪಷ್ಟಪಡಿಸುವ ಮೂಲಕ ಹೊರಡಿಸಲಾಗಿದೆ.

ಎಚ್) ಕಂಪನಿಯು ಕೆಲವು ಸ್ವಿಚ್ ಗೇರ್ ಪ್ಯಾನೆಲ್‌ಗಳನ್ನು ಬಂಡವಾಳೀಕರಣ ಮಾಡಲಾಗಿದೆ, ಅದಕ್ಕೆಐಪಿಡಿಎಸ್ ಮತ್ತು ಡಿಡಿಯುಜಿಜೆವೈ ಯೋಜನೆಯಡಿಯಲ್ಲಿ ಬೆಸ್ಕಾಂಯಿಂದ ಮರುಪಡೆಯಲಾಗುತ್ತದೆ. ಮೊತ್ತವು ಸ್ವೀಕೃತವಾದ ಮೇಲೆ ಕಂಪನಿಯು ಅದನ್ನು ಅನುದಾನವೆಂದು ಪರಿಗಣಿಸುತ್ತದೆ.

ಐ) ಕೆಲವು ನಿರ್ದಿಷ್ಟ ಆಸ್ತಿಗಳನ್ನು ಚಾಲ್ತಿಯಲ್ಲಿರುವ ಮತ್ತು ಚಾಲ್ತಿಯಲ್ಲಿಲ್ಲದ ಸಾಲಗಳಿಗೆ ಭದ್ರತೆಯಾಗಿ ನೀಡಲಾಗಿದೆ.

**ಟಿಪ್ಪಣಿ 2.5–ಸ್ಥಾವರ ಮತ್ತು ಯಂತ್ರೋಪಕರಣಗಳು (ಪಿ.ಪಿ.ಇ) ರಿಜಿಸ್ಟರ್ :**

ಎ) ಹಣಕಾಸು ಹೇಳಿಕೆಗಳಲ್ಲಿ ಹೇಳಲಾದ ಆಸ್ತಿಗಳ ಸಮಗ್ರ ವೆಚ್ಚಕ್ಕೆ ಸ್ಥಿರ ಆಸ್ತಿ ದಾಖಲೆಗಳನ್ನು ಸಮನ್ವಯಗೊಳಿಸುವ ಪ್ರಕ್ರಿಯೆಯನ್ನುಆರಂಭಿಸಲು ಆಡಳಿತ ಮಂಡಳಿಯು ಪರಿಗಣಿಸುತ್ತಿದೆ.

**ಎ) ಪಿಪಿಇಗಳಿಗೆ ಓವರ್‌ಹೆಡ್ ಹಂಚಿಕೆ:**

1) ಪಿಪಿಇಗೆ ಹಾಕುವ ಸಿಬ್ಬಂದಿ ವೆಚ್ಚ ಮತ್ತು ಬಡ್ಡಿ ವೆಚ್ಚವನ್ನು ಆಸ್ತಿ ಆಧಾರಿತ ಮೇಲೆ ಹಂಚಿಕೆ ಮಾಡಲಾಗುವುದು. ಪಿಪಿಇಗೆ ಹಾಕಬೇಕಾಗಿದ್ದ ಕಾರ್ಯಚರಣೆಯ ವೆಚ್ಚವನ್ನು ಪ್ರಾಯೋಗಿಕ ಕಾರ್ಯಚರಣೆ ಮತ್ತು ಅಂತರ್ಗತ ಸ್ವರೂಪದಿಂದಾಗಿ ಪ್ರತ್ಯೇಕ ಆಸ್ತಿ/ ಉಪಕರಣ ಆಧಾರಿತ ಮೇಲೆ 2017–18 ರಿಂದ ಹಂಚಿಕೆಯನ್ನು ಮಾಡಲಾಗಿರುತ್ತದೆ.

2) 31.03.2019 ರವರೆಗೆ ಸಂಗ್ರಹಿಸಿದ ಸ್ವಯಂ ಸಿಬ್ಬಂದಿ ವೆಚ್ಚವನ್ನು ಬಂಡವಾಳೀಕರಿಸಿದ ಮೇಲ್ವಿಚಾರಣೆಯ ನಿವ್ವಳ ವೆಚ್ಚ ದಿನಾಂಕ: 01.04.2019 ರಂತೆ ಮೇಲ್ವಿಚಾರಣೆಯ ಶಿಲ್ಕುಗಳನ್ನು ಸ್ವಯಂ ನಿರ್ವಹಣೆಯ ಕೆಲಸಗಳು ಪೂರ್ಣಗೊಂಡ ಮೇಲ್ವಿಚಾರಣೆಯ ಶೇಕಡವಾರು ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಮತ್ತು ಅಂತಹ ಮೇಲ್ವಿಚಾರಣ ಶುಲ್ಕಗಳನ್ನು ಸಿಬ್ಬಂದಿ ವೆಚ್ಚದಿಂದ ಕಡಿತಗೊಳಿಸಲಾಗುತ್ತದೆ.

**ಬಿ) ಆಸ್ತಿಹೂಡಿಕೆ :**

ಕಂಪನಿಯು ಕೆಲವು ನಿರ್ದಿಷ್ಟ ಜಮೀನು ಕಟ್ಟಡಗಳನ್ನು ಎಸ್ಕಾಂಗಳಿಗೆ ಗುತ್ತಿಗೆ ನೀಡಲಾಗಿದೆ ಇದನ್ನು ಮಾಲಿಕರ ಸ್ವಂತ ಉಪಯೋಗದ ಆಸ್ತಿಯಿಂದ ಬೇರ್ಪಡಿಸಲಾಗದವು ಮತ್ತು ಮೇಲೆ ಹೇಳಿದ ಆಸ್ತಿಗಳ ಅನುಪಾತ/ಪ್ರಮಾಣಕ್ಕೆ ಅತಿ ಕಡಿಮೆಯಾಗಿದೆ/ಅತ್ಯಲ್ಪವಾಗಿದೆ. ಆದ್ದರಿಂದ ಕಂಪನಿಯು ಇದನ್ನು Ind AS–40 ರ ಪ್ರಕಾರ ಹೂಡಿಕೆ ಆಸ್ತಿ ಎಂದು ಪರಿಗಣಿಸಿಲ್ಲ.

## ಟಿಪ್ಪಣಿ–2.6 ಮರುಸ್ಥಾಪಿಸಿದ ಬಾಕಿಗಳು 2019–20

| | | ಒಟ್ಟು ಆಸ್ತಿ | | | | | | | | | | | |
|---|---|---|---|---|---|---|---|---|---|---|---|---|---|
| ವಿವರಗಳು | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2019 ರಂದು ಇದ್ದಂತೆ | 2021 ರ ಸೇರ್ಪಡೆ ಪೂರ್ವ ಅವಧಿಯ ಹೊಂದಾಣಿಕೆ | 2021 ರಕಡಿತ ಪೂರ್ವ ಅವಧಿಯ ಹೊಂದಾಣಿಕೆ | 2020 ರ ಸೇರ್ಪಡೆ ಪೂರ್ವ ಅವಧಿಯ ಹೊಂದಾಣಿಕೆ | 2020ರ ಕಡಿತ ಪೂರ್ವ ಅವಧಿಯ ಹೊಂದಾಣಿಕೆ | 01 ನೇ ಎಪ್ರಿಲ್ 2019 ರಂತೆ (ಮರುಸ್ಥಾಪಿಸಿದಂತೆ) | 2020ರ ಸೇರ್ಪಡೆ | 2020ರ ಹಿಂದಿನ ಅವಧಿಯ ಹೊಂದಾಣಿಕೆ | 2020ರ ಪರಿಷ್ಕೃತ ಸೇರ್ಪಡೆಗಳು (ಮರುಸ್ಥಾಪಿ –ಸಲಾಗಿದೆ) | 2020ರ ಕಡಿತಗಳು/ ಹೊಂದಾಣಿಕೆಗಳು | 2020 ರ ಹಿಂದಿನ ಅವಧಿಯ ಹೊಂದಾಣಿಕೆ | 2020ರ ಪರಿಷ್ಕೃತ ಕಡಿತಗಳು/ ಹೊಂದಾಣಿಕೆಗಳು (ಮರುಸ್ಥಾಪಿ ಸಲಾಗಿದೆ) |
| ಭೂಮಿ ಮತ್ತು ಹಕ್ಕು | 10.1 | 350 23 72 939 | | | | | 350 23 72 939 | 25 52 67 805 | | 25 52 67 805 | 71 71 476 | | 71 71 476 |
| ಗುತ್ತಿಗೆಯ ಅಡಿಯಲ್ಲಿ ಭೂಮಿ | 10.102 & 10.103 | 12 04 02 111 | | | | | 12 04 02 111 | 49 47 027 | | 49 47 027 | - 95 33 910 | | - 95 33 910 |
| ಕಟ್ಟಡಗಳು | 10.2 | 658 39 30 221 | 19 48 80 792 | | | | 677 88 11 013 | 65 24 33 536 | 4 52 89 718 | 60 71 43 818 | 4 52 81 646 | | 4 52 81 646 |
| ಹೈಡ್ರಾಲಿಕ್ಸ್ ವರ್ಕ್ಸ್ | 10.3 | 100 18 29 391 | 3 95 16 202 | | | | 104 13 45 593 | 13 56 03 607 | 89 16 522 | 12 66 87 085 | 8 61 171 | | 8 61 171 |
| ಇತರೆ ಸಿವಿಲ್ ಕಾಮಗಾರಿಗಳು | 10.4 | 155 16 14 313 | 18 65 88 334 | | | | 173 82 02 647 | 38 42 69 221 | 4 59 90 548 | 33 82 78 673 | 92 52 393 | | 92 52 393 |
| ಸ್ಥಾವರ ಮತ್ತು ಯಂತ್ರೋ –ಪಕರಣಗಳು | 10.5 | 9243 43 99 470 | 306 70 12 307 | | | | 9550 14 11 777 | 1127 80 93 802 | 211 63 26 637 | 916 17 67 165 | 25 27 245 | | 25 27 245 |
| ಮಾರ್ಗಗಳು ಮತ್ತು ಕೇಬಲ್ ಜಾಲ | 10.6 | 8957 58 96 627 | 169 85 03 041 | | | | 9127 43 99 668 | 1222 53 46 360 | 146 45 22 043 | 1076 08 24 317 | -43 35 21 002 | | -43 35 21 002 |
| ವಾಹನಗಳು | 10.7 | 27 27 27 348 | | | | | 27 27 27 348 | 34 49 534 | | 34 49 534 | - 25 42 091 | | - 25 42 091 |
| ಪೀಠೋಪಕರಣಗಳು | 10.8 | 23 38 31 329 | 30 80 326 | | | | 23 69 11 655 | 1 86 60 410 | 15 67 491 | 1 70 92 919 | -1 85 85 913 | | -1 85 85 913 |
| ಕಛೇರಿ ಸಲಕರಣೆಗಳು | 10.9 | 3 89 37 237 | | | | | 3 89 37 237 | 57 41 569 | | 57 41 569 | - 22 98 948 | | - 22 98 948 |
| ಆಂತರಿಕ ಬಳಕೆಗಾಗಿ ತಂತ್ರಾಂಶ | 18 | | | | | | | | | | | | |
| **TOTAL** | | **19531 59 40 986** | **518 95 81 002** | | | | **20050 55 21 988** | **2496 38 12 871** | **368 26 12 959** | **2128 11 99 912** | **-40 13 87 933** | | **-40 13 87 933** |

| ಮರುಸ್ಥಾಪಿಸಿದ ಬಾಕಿಗಳು 2020–21 | | | | | | | |
|---|---|---|---|---|---|---|---|
| ವಿವರಗಳು | ಲೆಕ್ಕ ಸಂಕೇತ | 2021 ಕ್ಕೆ ಸೇರ್ಪಡೆ | 2021 ರ ಹಿಂದಿನ ಅವಧಿಯ ಹೊಂದಾಣಿಕೆ | 2021 ರ ಪರಿಷ್ಕೃತ ಸೇರ್ಪಡೆಗಳು | 2021 ರ ಕಡಿತಗಳು / ಹೊಂದಾಣಿಕೆಗಳು | 2021 ರ ಹಿಂದಿನ ಹೊಂದಾಣಿಕೆಗಳು | 2021 ರ ಪರಿಷ್ಕೃತ ಕಡಿತಗಳು/ಹೊಂದಾಣಿಕೆಗಳು (ಮರುಸ್ಥಾಪಿಸಲಾಗಿದೆ) |
| ಭೂಮಿ ಮತ್ತು ಹಕ್ಕು | 10.1 | 72 61 67 838 | | 72 61 67 838 | 5 22 36 484 | | 5 22 36 484 |
| ಗುತ್ತಿಗೆಯ ಅಡಿಯಲ್ಲಿ ಭೂಮಿ | 10.102 & 10.103 | | | | - 62 83 561 | | - 62 83 561 |
| ಕಟ್ಟಡಗಳು | 10.2 | 94 70 28 438 | 19 48 80 792 | 75 21 47 645 | 2 17 76 688 | | 2 17 76 688 |
| ಹೈಡ್ರಾಲೆಕ್ಸ್ ವರ್ಕ್ಸ್ | 10.3 | 22 42 32 500 | 3 95 16 202 | 18 47 16 297 | 79 97 327 | | 79 97 327 |
| ಇತರೆ ಸಿವಿಲ್ ಕಾಮಗಾರಿಗಳು | 10.4 | 79 28 27 198 | 18 65 88 334 | 60 62 38 865 | 72 94 463 | | 72 94 463 |
| ಸ್ಥಾವರ ಮತ್ತು ಯಂತ್ರೋಪಕರಣಗಳು | 10.5 | 1470 31 90 630 | 306 70 12 307 | 1163 61 78 323 | -121 44 20 002 | | -121 44 20 002 |
| ಮಾರ್ಗಗಳು ಮತ್ತು ಕೇಬಲ್ ಜಾಲ | 10.6 | 1025 07 04 953 | 169 85 03 041 | 855 22 01 912 | -25 51 85 374 | | -25 51 85 374 |
| ವಾಹನಗಳು | 10.7 | | | | - 19 05 135 | | - 19 05 135 |
| ಪೀಠೋಪಕರಣಗಳು | 10.8 | 4 35 12 836 | 30 80 326 | 4 04 32 510 | - 17 52 958 | | - 17 52 958 |
| ಕಛೇರಿ ಸಲಕರಣೆಗಳು | 10.9 | 28 02 927 | | 28 02 927 | - 43 37 670 | | - 43 37 670 |
| ಆಂತರಿಕ ಬಳಕೆಗಾಗಿ ತಂತ್ರಾಂಶ | 18.101 | | | | | | |
| **ಒಟ್ಟು** | | **2769 04 67 320** | **518 95 81 002** | **2250 08 86 317** | **-139 45 79 738** | | **-139 45 79 738** |

## ಟಿಪ್ಪಣಿ–2ಎ ಆಸ್ತಿ, ಸ್ಥಾವರ ಮತ್ತು ಉಪಕರಣಗಳು

| ಆಸ್ತಿ ಗುಂಪು | ಲೆಕ್ಕ ಸಂಕೇತ | 01.04.2019 ರಂತೆ ಇಳಿತಗೊಂಡ ಆರಂಭಿಕ ಮೌಲ್ಯ | ಏರಿಕೆ ಅಥವಾ ಇಳಿಕೆ | ಸವಕಳಿ | 31.03.2020 ರಂತೆ ಇಳಿತಗೊಂಡ ಅಂತಿಮ ಮೌಲ್ಯ | | | | |
|---|---|---|---|---|---|---|---|---|---|
| ಬಳಕೆಗೆ ಸಿದ್ಧವಿರುವ /ಬಿಡುಗಡೆ ಮತ್ತು ಮರು ಉಪಯೋಗಿಸಲ್ಪಡುವ ಆಸ್ತಿಗಳ ಡಬ್ಲ್ಯೂಡಿವಿ | **16.2** | 31 97 53 992 | -11 60 33 812 | 81 22 317 | 19 55 97 863 | 1 51 81 080 | 98 43 638 | | 20 09 35 305 |
| ಗುತ್ತಿಗೆದಾರರುಗಳಿಗೆ/ ಸರಬರಾಜುದಾರರಿಗೆ ರಿಪೇರಿಗಾಗಿ ನೀಡಲಾದ ಪರಿವರ್ತಕಗಳು | **26.604** | 30 80 67 727 | -4 74 37 525 | 1 93 57 080 | 24 12 73 122 | 2 47 65 849 | 1 26 71 940 | 6 73 22 839 | 18 60 44 192 |
| ರಿಪೇರಿಗಳಿಗೆ ಸಿಬ್ಬಂದಿಗೆ ನೀಡಲಾದ ಪರಿವರ್ತಕಗಳು / ಮಾಪನಗಳು | **27.210** | 28 86 17 47 | -23 93 40 05 | 379718 | 45 48 024 | 22 10 226 | 99 659 | | 66 58 591 |
| | | **65 66 83 466** | **-18 74 05 342** | **2 78 59 115** | **44 14 19 009** | **4 21 57 155** | **2 26 15 237** | **6 73 22 839** | **39 36 38 088** |

**ಟಿಪ್ಪಣಿ 2ಎ.1**

ಎ) ಇಳಿತಗೊಂಡ ಮೌಲ್ಯ ಒಟ್ಟು ರೂ 39,51,37,262/– 31ನೇ ಮಾರ್ಚ್ 2020 ರಂದು ರೂ. 44,14,19,009/–, 1ನೇ ಏಪ್ರಿಲ್ 2019 ರಂದುರೂ. 65,66,83,466/–) ಸ್ಟ್ಯಾಂಡ್ ಬೈ ಆಸ್ತಿಗಳು/ಬಿಡುಗಡೆಯಾದ ಮತ್ತು ಪುನಃ ಬಳಸಬಹುದಾದ ಆಸ್ತಿಗಳ/ಆಸ್ತಿಗಳು ದುರಸ್ತಿಗಾಗಿ ನೀಡಿರುವ ಪುನಃ ಬಳಸಬಹುದಾದ ಆಸ್ತಿಗಳೆಂದು ಮೇಲೆ ತೋರಿಸಲಾಗಿದೆ ಮತ್ತು ಇಳಿತಗೊಂಡ ಮೌಲ್ಯದ ವಿಧಾನದಲ್ಲಿ ನಿರ್ಧರಿಸಿರುವ ದರಗಳ ಅನ್ವಯ ಸವಕಳಿಯನ್ನು ಮಾಡಲಾಗಿದೆ.

ಬಿ) ಅಂತಹ ಆಸ್ತಿಗಳನ್ನು ಕ್ರಮಬದ್ಧಗೊಳಿಸಿ ಮತ್ತು ಪಿಪಿಇಗೆ ಪುನಃ ತಂದ ಮೇಲೆ ಇಳಿತಗೊಂಡ ಮೌಲ್ಯನನ್ನೇ ಪರಿಗಣಿಸಿ ನೇರ ಸಾಲಿನ ವಿಧಾನದಲ್ಲಿ ಸವಕಳಿಯನ್ನು ಪುನಃ ಸ್ಥಾಪಿಸಿದ ದಿನಾಂಕದಿಂದ ಪರಿಗಣಿಸಲಾಗುವುದು. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು/ಸ್ಥಾವರ ಮತ್ತು ಉಪಕರಣಗಳಿಗೆ ವರ್ಗಾಯಿಸಲಾಗುತ್ತದೆ. ಇದು ಹೊಸ ಸ್ವತ್ತು ಮತ್ತು ನಿಗದಿತ ದರಗಳ ಆಧಾರದ ಮೇಲೆ ಬರುವ ಪರಿಷ್ಕೃತ ವೆಚ್ಚದ ಮೇಲೆ ಎಸ್‌ಎಲ್ ಎಂ ನಲ್ಲಿ ಸವಕಳಿಯನ್ನು ಸೂಚಿಸುತ್ತದೆ.

ಸಿ) INR 18,75,43,366/– (31ನೇ ಮಾರ್ಚ್ 2020 ಕ್ಕೆ ರೂ 24,12,73,122/–) ರಿಪೇರಿಗಾಗಿ ವಿವಿಧ ಸಂಸ್ಥೆಗಳಿಗೆ ನೀಡಲಾದ 133 (31ನೇ ಮಾರ್ಚ್ 2020 122) ಪರಿವರ್ತಕಗಳನ್ನು ಪ್ರತಿನಿಧಿಸುತ್ತದೆ

| ವಿವರಗಳು | **2019** | **2020** | **2021** |
|---|---|---|---|
| ಟಿಪ್ಪಣಿ ಸಂಖ್ಯೆ 2 | 12502 50 39 891 | 13639 89 31 072 | 14783 51 54 548 |
| ಟಿಪ್ಪಣಿ ಸಂಖ್ಯೆ 2ಎ | 65 66 83 466 | 44 14 19 009 | 39 36 38 088 |
| ಒಟ್ಟು | **12568 17 23 357** | **13684 03 50 081** | **14822 87 92 636** |

## ಟಿಪ್ಪಣಿ : 3 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ (ಮೊಬಲಗು ರೂ.ಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2021 ರಂದು ಇದ್ದಂತೆ | | 31 ಮಾರ್ಚ್ 2020 ರಂದು ಇದ್ದಂತೆ | | 1 ಏಪ್ರಿಲ್ 2019 ರಂದು ಇದ್ದಂತೆ | |
|---|---|---|---|---|---|---|---|---|
| 1 | ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು (ಗಮನಿಸಿ ಟಿಪ್ಪಣಿ 3.4, 3.5 (ಅ) & 3.6) | 14 | 2256 61 36 292 | | 2093 00 14 165 | | 1648 04 17 731 | |
| 2 | ಬಂಡವಾಳ ಕಾಮಗಾರಿಗೆ ಸಂಬಂಧಿಸಿದ ಸಮಗ್ರ ಗುತ್ತಿಗೆದಾರರ ನಿಯಂತ್ರಣ ಲೆಕ್ಕ (ಗಮನಿಸಿ ಟಿಪ್ಪಣಿ 3.5 (ಬ)) | 26.605 | 1236 26 91 992 | | 1021 87 15 597 | | 1076 90 88 848 | |
| 3 | ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು – ಎನ್.ಸಿ.ಇ.ಎಫ್& ಪಿ.ಎಸ್.ಡಿ.ಎಫ್ ನಿಂದ ಅನುದಾನವಾಗಿ ಕೊಡುಗೆ | 47.322, 47.323, 47.325 & 47.326 | 59 50 54 218 | | 48 72 46 976 | | 141 89 91 538 | |
| | ಕಳೆಯಿರಿ: ನಿರ್ಣಯ ಬಾಕಿಯಿರುವ ಬಂಡವಾಳ ಕಾಮಗಾರಿಗಳಿಗೆ ಸಂಬಂಧಿಸಿದ ಬ್ಯಾಂಕ್ ಖಾತ್ರಿ ನಗದೀಕರಣ ಹೊಂದಾಣಿಕೆ (3.9 ಅನ್ನು ಗಮನಿಸಿ) | 56.202 | –46 85 83 477 | | –43 64 74 023 | | –43 69 07 159 | |
| | **ಉಪ ಮೊತ್ತ** | | | **3505 52 99 025** | | **3119 95 02 715** | | **2823 15 90 958** |
| 4 | ಠೇವಣಿ ಕೊಡುಗೆ ಕೆಲಸಗಳು – ಪ್ರಗತಿಯಲ್ಲಿರುವ ಕಾಮಗಾರಿಗಳು | 47.503 | | 9 14 71 096 | | 61 19 77 614 | | 8 90 83 288 |
| | **ಮೊತ್ತ** | | | **3514 67 70 121** | | **3181 14 80 329** | | **2832 06 74 246** |

ಟಿಪ್ಪಣಿ 3.1: ಪ್ರಗತಿಯಲ್ಲಿರುವ ಸ್ವಯಂ ನಿರ್ವಹಣ ಕಾಮಗಾರಿಗಳು ಬಂಡವಾಳ ಕಾಮಗಾರಿಗಳಲ್ಲಿ ಒಳಗೊಂಡಿರುವುದಿಲ್ಲ. ಸ್ವಯಂ ನಿರ್ವಹಣ ಕಾಮಗಾರಿಗಳು ಜಂಟಿ ಸಾಮಾಗ್ರಿಗಳ ವಿವರಗಳೊಂದಿಗೆ ಕವಿಪ್ರನಿನಿಗೆ ಹಸ್ತಾಂತರಿಸಿದ ನಂತರ ಸದರಿ ಕಾಮಗಾರಿಗಳನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳಾಗಿ ಪರಿಗಣಿಸಲಾಗುವುದು.

ಟಿಪ್ಪಣಿ. 3.2 : ಸಂಬಂಧಪಟ್ಟ ಕಾಮಗಾರಿಗಳಿಂದ ಆಸ್ತಿ ಕಮೀಷನ್ ಪ್ರಮಾಣ ಪತ್ರವನ್ನು ಪಡೆದ ಮೇಲೆ ಪಿಪಿಇಯಿಂದ ಸಿಡಬ್ಲ್ಯೂಐಪಿ ಬಂಡವಾಳೀಕರಣವನ್ನು ಮಾಡಲಾಗುವುದು.

ಟಿಪ್ಪಣಿ 3.3: ವರ್ಷದ ಕೊನೆಯಲ್ಲಿ ಬಂಡವಾಳ ವೆಚ್ಚವನ್ನು ಪರಿಗಣಿಸುವಲ್ಲಿ ಗುತ್ತಿಗೆದಾರರಿಂದ ಪೂರ್ಣಗೊಂಡ ಕಾಮಗಾರಿಗಳಿಗೆ ಮಾತ್ರ ಪಡೆದ ಬಿಲ್ಲುಗಳನ್ನು ಪರಿಗಣಿಸಿ ಲೆಕ್ಕೀಕರಿಸಲಾಗುವುದು.

ಟಿಪ್ಪಣಿ 3.4: ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೊತ್ತದಲ್ಲಿ ರೂ.1,97,33,484/–ಕಾಮಗಾರಿಗಳಿಗೆ ನೀಡಿರುವ ಸಾಮಾಗ್ರಿಗಳು ಹಾಗೂ ಇನ್ನು ಉಪಯೋಗಿಸದೆ ಇರುವ ಸಾಮಾಗ್ರಿಗಳನ್ನು ಒಳಗೊಂಡಿರುತ್ತದೆ. (31ನೇ ಮಾರ್ಚ್ 2020 ರಲ್ಲಿ ರೂ.71,90,886/–, 1ನೇ ಏಪ್ರಿಲ್ 2019 ರಲ್ಲಿ ರೂ.5,38,30,297/–)

ಟಿಪ್ಪಣಿ 3.5: ಬಂಡವಾಳ ಕಾಮಗಾರಿಯಲ್ಲಿ (ಎ) ಪಿ.ಎಸ್.ಡಿ.ಎಫ್ ಕಾಮಗಾರಿಗೆ ಸಂಬಂಧಿಸಿದ ಮೊತ್ತ ರೂ.4,13,71,999/– (31ನೇ ಮಾರ್ಚ್ 2020 ರಲ್ಲಿ ರೂ.3,13,83,663/–, 1ನೇ ಏಪ್ರಿಲ್ 2019 ರಲ್ಲಿ ರೂ.5,74,39,877/–) ಮತ್ತು ರೂ.108,81,15,724/– ಎನ್.ಸಿ.ಇ.ಎಫ್ ಕಾಮಗಾರಿಗಳಿಗೆ ಸಂಬಂಧಿಸಿರುತ್ತದೆ. (31ನೇ ಮಾರ್ಚ್ 2020 ರಲ್ಲಿ

ರೂ.68,11,72,132/–, 1ನೇ ಏಪ್ರಿಲ್ 2019 ರಲ್ಲಿ ರೂ.210,96,37,424/–)

(ಬಿ) ಬಂಡವಾಳ ಕಾಮಗಾರಿಗಳ ವಿಷಯದಲ್ಲಿ ಸಮಗ್ರ ಕಾಮಗಾರಿ ಗುತ್ತಿಗೆದಾರರ ನಿಯಂತ್ರಣ ಲೆಕ್ಕ ಖಾತೆಯಲ್ಲಿ ಪಿ.ಎಸ್.ಡಿ.ಎಫ್ ಕಾಮಗಾರಿಗೆ ಸಂಬಂಧಿಸಿದಂತೆ ರೂ.14,54,03,324/–(31ನೇ ಮಾರ್ಚ್ 2020 ರಲ್ಲಿ ರೂ.31,21,77,063/–, 1ನೇ ಏಪ್ರಿಲ್ 2019 ರಲ್ಲಿ ರೂ.67,55,29,361/–) ನ್ನು ಒಳಗೊಂಡಿದೆ.(ಕವಿಪ್ರನಿನಿ ಭಾಗವನ್ನು ಒಳಗೊಂಡಂತೆ) ಮತ್ತು ಎನ್.ಸಿ.ಇ.ಎಫ್ ಕಾಮಗಾರಿಗೆ ಸಂಬಂಧಿಸಿದಂತೆ ರೂ.89,02,26,874/–/ (31ನೇ ಮಾರ್ಚ್ 2020 ರಲ್ಲಿ ರೂ.127,93,35,011/–, 1ನೇ ಏಪ್ರಿಲ್ 2019 ರಲ್ಲಿ ರೂ.88,14,05,250/–) ನ್ನು ಒಳಗೊಂಡಿದೆ.(ಕವಿಪ್ರನಿನಿ ಭಾಗವನ್ನು ಒಳಗೊಂಡಂತೆ)

ಟಿಪ್ಪಣಿ –3.6: ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಹೆಚ್ಚುವರಿ ಸ್ವಿಚ್ ಗೇರುಗಳನ್ನು ಮತ್ತು ನಿರಂತರ ಜ್ಯೋತಿ ಯೋಜನೆ ಯಡಿಯಲ್ಲಿ ಕವಿಪ್ರನಿನಿಯ ಉಪಕೇಂದ್ರಗಳಿಗೆ ನೀಡಲಾಗಿರುವ ಇತರೆ ಉಪಕರಣಗಳನ್ನು ಒಳಗೊಂಡಿದ್ದು, ಸದರಿ ಉಪಕರಣಗಳ ಮೊತ್ತಗಳನ್ನು ಖಚಿತಪಡಿಸಿಕೊಂಡು ಎಸ್ಕಾಂಗಳಿಂದ ವಸೂಲಾತಿ ಮಾಡಲಾಗಿರುತ್ತದೆ.

ಟಿಪ್ಪಣಿ–3.7:ಮರ/ಬೆಳೆ/ಭೂಮಿಯ ಪರಿಹಾರಗಳನ್ನು ನಗದು ಆಧಾರದ ಮೇಲೆ ಲೆಕ್ಕೀಕರಿಸಲಾಗಿರುತ್ತದೆ.

ಟಿಪ್ಪಣಿ–3.8:ಪಿ.ಪಿ.ಇ ಯ ಟಿಪ್ಪಣಿ ಸಂಖ್ಯೆ 2.4(ಇ),(ಎಫ್) ಮತ್ತು (ಜಿ) ನ್ನು ಗಮನಿಸಿ.

ಟಿಪ್ಪಣಿ–3.9:ಕಂಪನಿಯು ದಿನಾಂಕ 31.03.2018 ರವರೆಗೆ ಗುತ್ತಿಗೆದಾರರು ಒದಗಿಸಿದ ಬ್ಯಾಂಕ್ ಗ್ಯಾರಂಟಿಗಳನ್ನು ನಗಧೀಕರಿಸಿ ಬಂಡವಾಳೀಕರಣದ ಸಮಯದಲ್ಲಿ ಕೆಲಸದ ವೆಚ್ಚಕ್ಕೆ ಇದನ್ನು ಹೊಂದಾಣಿಕೆ ಮಾಡಲಾಗುತ್ತಿತ್ತು. ಕಂಪನಿಯು 2019–20ನೇ ಸಾಲಿನಲ್ಲಿ ಸೂಕ್ತವಾದ ಲೆಕ್ಕಪತ್ರ ನೀತಿಯನ್ನು ಅಳವಡಿಸಿಕೊಂಡಿದೆ.

**ಟಿಪ್ಪಣಿ 3A: ಇತರೆ ಸ್ಪರ್ಶಾತೀತ ಆಸ್ತಿಗಳು** **(ಮೊಬಲಗು ರೂ.ಗಳಲ್ಲಿ)**

| ವಿವರಗಳು | ಟಿಪ್ಪಣಿ ಸಂಖ್ಯೆ | ಲೆಕ್ಕ ಸಂಕೇತ | 31 ಮಾರ್ಚ್ 2021 ರಂದು ಇದ್ದಂತೆ | | 31 ಮಾರ್ಚ್ 2020 ರಂದು ಇದ್ದಂತೆ | | 1 ಏಪ್ರಿಲ್ 2019 ರಂದು ಇದ್ದಂತೆ | |
|---|---|---|---|---|---|---|---|---|
| 1 | ಆಂತರಿಕ ಬಳಕೆಗಾಗಿ ನಿರ್ಮಿಸಿದ ತಂತ್ರಾಂಶ | 18 | | 1 49 08 288 | | 1 49 08 288 | | 1 49 08 288 |
| | ಕಳಿಯಿರಿ: ಸಂಚಿತ ಭೋಗ್ಯ (ಟಿಪ್ಪಣಿ 31) | | | –90 15 525 | | – 65 27 029 | | – 40 38 533 |
| | **ಮೊತ್ತ** | | | **58 92 763** | | **83 81 259** | | **1 08 69 755** |

**ಟಿಪ್ಪಣಿ 4: ಸಾಲಗಳು–ಪ್ರಸಕ್ತವಲ್ಲದ ಆರ್ಥಿಕ ಆಸ್ತಿಗಳು** **(ಮೊಬಲಗು ರೂ.ಗಳಲ್ಲಿ)**

| ಕ್ರ ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2021 ರಂದು ಇದ್ದಂತೆ | | 31 ಮಾರ್ಚ್ 2020 ರಂದು ಇದ್ದಂತೆ | | 1 ಏಪ್ರಿಲ್ 2019ರಂದು ಇದ್ದಂತೆ | |
|---|---|---|---|---|---|---|---|---|
| 1 | ಸುರಕ್ಷಿತವಲ್ಲದ (ಉತ್ತಮವಾದುದೆಂದು ಮಾನ್ಯ ಮಾಡಿದ್ದು) : | | | | | | | |
| | ಅ) ಇತರರಲ್ಲಿರುವ ಠೇವಣಿಗಳು | 28.935 | 11 73 41 634 | | 6 02 39 828 | | | 9 85 48 400 |
| | ಆ) ವಿವಾದದ ಅಡಿಯಲ್ಲಿ ಪಾವತಿಸಿದ ಮೊತ್ತ (ಪಿ.ಜಿ.ಸಿ.ಐ.ಎಲ್) (ಟಿಪ್ಪಣಿ 4.1ನ್ನು ಗಮನಿಸಿ) | 28.935 | 33 99 69 697 | 45 73 11 331 | 33 99 69 697 | 40 02 09 525 | | |
| 2 | ಕವಿಪ್ರನಿನಿಯ ಸ್ಥಾವರಗಳಿಗೆ ವಿದ್ಯುತ್ ಸರಬರಾಜನ್ನು ಒದಗಿಸಲು ಎಸ್ಕಾಂಗಳಲ್ಲಿ ಮಾಡಿರುವಂತಹ ಭದ್ರತಾ ಠೇವಣಿ | 28.936, 28.937 | | 40 71 425 | | 40 27 935 | | 23 33 646 |
| 3 | ಬಿಡಿಎಗೆ ನಿಗಮದ ಸಾಲ(ಟಿಪ್ಪಣಿ ಸಂಖ್ಯೆ 4.4 ನೋಡಿ) – ಸಂಬಂಧಿಸಿದ ವ್ಯಕ್ತಿಗಳು | 27.301 | 36 33 09 147 | | 87 57 38 190 | | | |
| | ಕಳೆಯಿರಿ : ಪ್ರಸ್ತುತ ಭಾಗ (ಟಿಪ್ಪಣಿ ಸಂಖ್ಯೆ 10 ನೋಡಿ) | | –22 42 20 000 | 13 90 89 147 | –16 81 65 000 | 70 75 73 190 | | |
| | **ಮೊತ್ತ** | | | **60 04 71 903** | | **1 11 18 10 650** | | **10 08 82 046** |

ಟಿಪ್ಪಣಿ–4.1: 400 ಕೆ.ವಿ ನೆಲಮಂಗಲ–ಹೂಡಿ ಲೈನ್, ಯಲಹಂಕ ಸ್ಟೇಷನ್ ಮತ್ತು 220 ಕೆ.ವಿ ಬೇಸ್‌ಗಳಿಗೆ ಒಳಗೊಂಡಿರುವ ಸ್ವತ್ತುಗಳ ಪ್ರಸರಣ ದರಗಳನ್ನು ಡಿ.ಒ.ಸಿ.ಒ ರಿಂದ ದಿನಾಂಕ: 31.03.2019 ರವರೆಗೆ ನಿರ್ಧರಿಸುವಲ್ಲಿ, ಕವಿಪ್ರನಿನಿ ವ್ಯಾಪ್ತಿಯಲ್ಲಿರುವ ಸ್ವತ್ತುಗಳನ್ನು ನಿಯೋಜಿಸದ ಕಾರಣ ಮೆ॥ ಪಿ.ಜಿ.ಸಿ.ಐ.ಎಲ್, ದಾವೆ ಸಂಖ್ಯೆ: 361/ಟಿಟಿ/2018 ರವರು ಸಿಇಆರ್‌ಸಿ ರವರ ದಿನಾಂಕ: 08.11.2019 ರಲ್ಲಿ ಮನವಿ ದಾಖಲಿಸಿದ್ದು, ಡೌನ್ ಸ್ಟ್ರೀಮ್ ಟ್ರಾನ್ಸ್‌ಮಿಷನ್ ಸಿಸ್ಟಮ್‌ನ ಕಾರ್ಯ ಕೊನೆಗೊಳ್ಳುವವರೆಗೂ ಪ್ರಸರಣ ಶುಲ್ಕವನ್ನು ಕವಿಪ್ರನಿನಿ ಭರಿಸತಕ್ಕದ್ದು ಎಂದು ಆದೇಶ ಹೊರಡಿಸಿದ್ದು, ಸದರಿ ಆದೇಶದ ಆಧಾರದ ಮೇಲೆ, ಮೆ॥ ಪಿ.ಜಿ.ಸಿ.ಐ.ಎಲ್ ದ್ವಿಪಕ್ಷಿಯ ಬಿಲ್ಲಿಂಗ್ ಮೂಲಕ ಕವಿಪ್ರನಿನಿಯಿಂದ ದಿನಾಂಕ: 01.04.2018 ರಿಂದ ತನ್ನ ಸ್ವತ್ತುಗಳಿಗೆ ಮಾಸಿಕ ಪ್ರಸರಣ ಶುಲ್ಕವನ್ನು ಕ್ಲೇಮ್ ಮಾಡಲಾಗುತ್ತಿದೆ. ಸಿಇಆರ್‌ಸಿ ಆದೇಶದ ಮೇರೆಗೆ ಏಪ್ರಿಲ್–2018 ರಿಂದ ಮಾರ್ಚ್–2020 ರವರೆಗಿನ ಅವಧಿಗೆ ಸಂಬಂಧಿಸಿದಂತೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೆ॥ ಪಿ.ಜಿ.ಸಿ.ಐ.ಎಲ್ ಮೊತ್ತ ರೂ.33,99,69,697/– ಗಳ ಬೇಡಿಕೆ ಇಟ್ಟಿದೆ. ಕವಿಪ್ರನಿನಿಯು ಸದರಿ ಆದೇಶಕ್ಕೆ ತಡೆ ನೀಡಲು ಮತ್ತು ಅದರ ಹಿಂದಿನ ಆದೇಶವನ್ನು ಪರಿಶೀಲಿಸಲು ಆಯೋಗಕ್ಕೆ ಮರು ಪರಿಶೀಲನಾ ಮನವಿ ಅಥವಾ ಅರ್ಜಿಯನ್ನು ಸಲ್ಲಿಸಿದೆ. ಆಯೋಗದ ತೀರ್ಮಾನವು ಬಾಕಿ ಉಳಿದಿದ್ದು, ಪ್ರತಿಭಟನೆಯ ಅಡಿಯಲ್ಲಿ ಮೆ॥ ಪಿ.ಜಿ.ಸಿ.ಐ.ಎಲ್ ಬೇಡಿಕೆಯ ಬಾಕಿಯನ್ನು ಪಾವತಿಸಲು ಕವಿಪ್ರನಿನಿ ನಿರ್ಧರಿಸಿದೆ. ಈ ವಿಷಯದಲ್ಲಿ, ಕವಿಪ್ರನಿನಿ ಸಿಇಆರ್‌ಸಿ ದಾವೆ ಸಂಖ್ಯೆ: 36/ಟಿಟಿ/2018 ರಲ್ಲಿ ದಿನಾಂಕ: 08.11.2019 ರ ಆದೇಶದಿಂದ ಭಾದಿತರಾಗಿ ಸಿಇಆರ್‌ಸಿ ಮುಂದೆ ಪರಿಶೀಲನಾ ಅರ್ಜಿ ಸಂಖ್ಯೆ:5/ಆರ್‌ಪಿ/2021 ನ್ನು ಸಲ್ಲಿಸಿದೆ. ಸಿಇಆರ್‌ಸಿ ಇನ್ನು ಈ ವಿಷಯವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿದೆ.

ಟಿಪ್ಪಣಿ–4.2: ದಿನಾಂಕ:12.11.2019 ರಂದು ನಡೆದ 118ನೇ ನಿರ್ದೇಶಕರ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದ ಪ್ರಕಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕಿನ ಒಂದು ವರ್ಷದ ಎಂಸಿಎಲ್‌ಆರ್ ಗೆ ಲಿಂಕ್ ಮಾಡಲಾದ ದರದಲ್ಲಿ ಕಾರ್ಪೊರೇಟ್ ಸಾಲವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿ.ಡಿ.ಎ) ರೂ.112,11,00,000/– ಗಳನ್ನು ಮಂಜೂರು ಮಾಡಲಾಗಿದೆ (ಡಿಸೆಂಬರ್–2020 ರವರೆಗೆ 8.25% ಮತ್ತು ಮಾರ್ಚ್–2021 ರವರೆಗೆ 7.25% ದರದಲ್ಲಿ). ದಿನಾಂಕ: 31.03.2021 ರಲ್ಲಿ ಬಿಡುಗಡೆಯಾದ ಒಟ್ಟು ಸಾಲ ಮೊತ್ತ ರೂ.87,57,38,190/– ಗಳಿರುತ್ತದೆ. ನಿಷೇದದ ಅವಧಿಯು ಆರು ತಿಂಗಳುಗಳಾಗಿರುತ್ತದೆ ಮತ್ತು ದಿನಾಂಕ: 31.08.2020 ರಿಂದ ಅಸಲು ಮೊತ್ತವನ್ನು ಇಪ್ಪತ್ತು ಸಮಾನ

ತ್ರೈಮಾಸಿಕ ಕಂತುಗಳಲ್ಲಿ ಮರು ಪಾವತಿಸುವುದು. ನಿಯಮಾನುಸಾರ ಅಡಮಾನ ಪತ್ರವನ್ನು ಪಡೆಯುವ ಪ್ರಕ್ರಿಯೆ ಪೂರ್ಣಗೊಳಿಸುವಿಕೆಯು ಬಾಕಿ ಪ್ರಕರಣ ಇರುತ್ತದೆ. ಇದನ್ನು ಅಸುರಕ್ಷಿತ ಎಂದು ವರ್ಗೀಕರಿಸಲಾಗಿದೆ. ಅದಾಗ್ಯೂ, ಆರ್ಥಿಕ ವರ್ಷ 2021–22 ಅವಧಿಯಲ್ಲಿ ಬಿ.ಡಿ.ಎ ಸಾಲ ಮೊತ್ತವನ್ನು ಸಂಪೂರ್ಣವಾಗಿ ಮರುಪಾವತಿಸಿದೆ.

**ಟಿಪ್ಪಣಿ: 4ಎ: ಇತರೆ ಪ್ರಸಕ್ತವಲ್ಲದ ಆರ್ಥಿಕ ಆಸ್ತಿಗಳು** **(ಮೊಬಲಗು ರೂ.ಗಳಲ್ಲಿ)**

| ಕ್ರ ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2021 ರಂದು ಇದ್ದಂತೆ | | 31 ಮಾರ್ಚ್ 2020 ರಂದು ಇದ್ದಂತೆ | | 1 ಏಪ್ರಿಲ್ 2019 ರಂದು ಇದ್ದಂತೆ | |
|---|---|---|---|---|---|---|---|---|
| 1 | ವಿ.ಸ.ಕಂಗಳಿಂದ ಟಿಬಿಪಿಸಿಎಲ್‌ಗೆ ಸ್ವೀಕೃತಿಯಾಗಬೇಕಾಗಿರುವ ವಿದ್ಯುತ್ ಖರೀದಿ ವೆಚ್ಚ (ಟಿಪ್ಪಣಿ ಸಂಖ್ಯೆ: 4ಎ.5 ಮತ್ತು 18.9 ನ್ನು ಗಮನಿಸಿ)<br>ಸಿಬ್ಬಂದಿಗೆ ಮುಂಗಡ–ಬಡ್ಡಿ ಸಹಿತ (ಸುರಕ್ಷಿತ ಉತ್ತಮವಾದುದೆಂದು | 23.150, 28.968 ಯಿಂದ 28.973<br>27.101 | | 1642 71 96 515 | | 1657 07 00 000 | | 543 84 00 000 |
| 2 | ಮಾನ್ಯ ಮಾಡಿದ್ದು) (ಟಿಪ್ಪಣಿ ಸಂಖ್ಯೆ: 10 ನ್ನು ಗಮನಿಸಿ) | ಯಿಂದ 27.106 | | 3 09 226 | | 3 06 190 | | 3 16 990 |
| 3 | 2011–12 ಮತ್ತು 2014–15ನೇ ಸಾಲಿನ ಆದಾಯ ತೆರಿಗೆ ಇಲಾಖೆಯಿಂದ ಪಡೆಯಬಹುದಾದ ಆದಾಯ ತೆರಿಗೆ ಮರುಪಾವತಿ | 28.819 | | 3 06 30 657 | | 3 06 30 657 | | 3 06 30 657 |
| 4 | ಮುಂಗಡ ವರಮಾನ ತೆರಿಗೆ ಪಾವತಿ,ಇತರೆ ತೆರಿಗೆ ಪಾವತಿ,ಮೂಲದಲ್ಲಿ ತೆರಿಗೆ ಕಡಿತ.ಇತರೆ ತೆರಿಗೆ ಪಾವತಿ (ನಿವ್ವಳ ಹವಣಿಕೆ) (ಟಿಪ್ಪಣಿ. 4ಎ.1 ಗಮನಿಸಿ) | 27.4 & 28.821 | | 129 11 27 543 | | 84 84 93 826 | | 123 99 56 076 |
| 5 | ನೌಕರರಿಂದ ವಸೂಲಾಗಬೇಕಾದ ಮೊತ್ತ (ಟಿಪ್ಪಣಿ. 4ಎ.2 & 4ಎ.3 ನ್ನು ಗಮನಿಸಿ) | 28.4 | | 1 49 96 140 | | 1 51 26 638 | | 2 42 50 878 |
| 6 | ಬಂಡವಾಳ ಆಸ್ತಿಗಳ ನಷ್ಟ/ ಹಾನಿಯಾದ ಹಕ್ಕು ಕೋರಿಕೆಗಳು | 28.740 | | 12 74 692 | | 12 74 693 | | 1 50 864 |
| 7 | ಇತರೆ ಸ್ವೀಕೃತಿಗಳು (ಟಿಪ್ಪಣಿ. 4ಎ.4, ನ್ನು ಗಮನಿಸಿ) | 28.8 & 28.9 | | 9 27 36 494 | | 7 61 62 879 | | 11 03 04 620 |
| | ಕಳೆಯಿರಿ : ಕೆಟ್ಟ ಮತ್ತು ಅನುಮಾನಾಸ್ಪದ ಸಾಲಗಳಿಗೆ ಹವಣಿಕೆ – ಇತರೆ (ಟಿಪ್ಪಣಿ. 4ಎ.4,&4ಎ.6, ನ್ನು ಗಮನಿಸಿ) | | | –3 29 32 914 | | –2 29 82 997 | | –2 29 82 997 |
| | **ಒಟ್ಟು ಮೊತ್ತ** | | | **1782 53 38 353** | | **1751 97 11 886** | | **682 10 27 089** |

ಟಿಪ್ಪಣಿ–4ಎ.1: ರೂ.4,54,06,442/– (ಹಿಂದಿನ ವರ್ಷ ರೂ.4,54,06,442/–) ಗಳನ್ನು ಆದಾಯ ತೆರಿಗೆ ಇಲಾಖೆಗೆ ಪ್ರತಿರೋಧವಾಗಿ ಪಾವತಿಸಿದ್ದು ಸದರಿ ಮೊತ್ತವು ವಿಳಂಬವಾಗಿ ಪಾವತಿಸಿದ ವಿದ್ಯುತ್ ಖರೀದಿಗೆ ಸಂಬಂಧಿಸಿದ ಬಡ್ಡಿಯ ಹವಣಿಕೆಯ ಮೇಲೆ ಆದಾಯ ತೆರಿಗೆ ಕಡಿತಗೊಳಿಸಿದಕ್ಕೆ ಸಂಬಂಧಿಸಿದ್ದು, ಮೌಲ್ಯಮಾಪನ ವರ್ಷ 2004–05, 2005–06 ಮತ್ತು 2006–07 ನೇ ಸಾಲಿಗೆ ಸಂಬಂಧಿಸಿರುತ್ತದೆ. ಸದರಿ ಮೊತ್ತವು ಮುಂಗಡ ಆದಾಯ ತೆರಿಗೆಯಲ್ಲಿ ಸೇರಿರುತ್ತದೆ.

